
ಶನಿವಾರ, ಅಕ್ಟೋಬರ್ 28, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 298 | ಪುಟ 26

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಹಸಿಕಾಳುಗಳಿಂದ
ಮೈದುಂಬಿಕೊಳ್ಳುವ ಹೊಲಗಳಲ್ಲೀಗ,
ಭೂತಾಯಿಗೆ ಪೂಜೆ ಸಲ್ಲಿಸುವ
ಸಂಭ್ರಮ. ಮಾಡಿದದುಗೆಯನೆಲ್ಲ
ಮಡಕೆಗೆ ತುಂಬಿಕೊಂಡು,
ಭೂಮ್ತಾಯಿಗೆ ಉಣಿಸುವ ಸಡಗರ
ಸೀಗಿ ಹುಣ್ಣಿಮೆಯದು

ಚರ್ಚೆ ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಣೆ

ಹುಲಿ ಉಗುರು: ಮುಂದುವರಿದ 'ಬೇಟೆ' 8

ಹಮಾಸ್‌ನ ಐವರು ಕಮಾಂಡರ್‌ಗಳ ಹತ್ಯೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,783 ▲	19,047 ▲	₹62,950 (ಬೆಂಗಳೂರು) ▲	₹73,400 (ಬೆಂಗಳೂರು) ▼	83.25

ಎಂಟು ಜನರಿಗೆ ವಾಲ್ಮೀಕಿ ಪ್ರಶಸ್ತಿ

ಬೆಂಗಳೂರು: ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ (ಅ.28) ನಡೆಯುವ ವಾಲ್ಮೀಕಿ ಜಯಂತಿ ಸಮಾರಂಭದಲ್ಲಿ ಒಡಿಶಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್.ವೈ. ಹನುಮಂತಪ್ಪ ಸೇರಿದಂತೆ ಎಂಟು ಮಂದಿಗೆ 'ರಾಜ್ಯಮಟ್ಟದ ವಾಲ್ಮೀಕಿ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ತಿಳಿಸಿದರು. 8

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮೋದಿ ವಿರುದ್ಧ ಸಿ.ಎಂ ಆಕ್ರೋಶ • ಸ್ವಾಭಿಮಾನಿ ಕನ್ನಡಿಗರ ಪ್ರಶ್ನೆ – ಆಂದೋಲನ

'ಅನಾದರ' ವಿರುದ್ಧ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಿಗೆ 'ಕರ್ನಾಟಕ'ವೆಂದು ನಾಮಕರಣ ಮಾಡಿ 50ನೇ ವರ್ಷಾಚರಣೆಯ ಸಂಭ್ರಮದ ಹೊತ್ತಿನಲ್ಲಿ, 'ಸ್ವಾಭಿಮಾನಿ_ ಕನ್ನಡಿಗರ ಪ್ರಶ್ನೆ' ಎಂಬ ಹ್ಯಾಷ್ ಟ್ಯಾಗ್‌ನಡಿ 'ಎಕ್ಸ್'ನಲ್ಲಿ ಅಭಿಯಾನ ಆರಂಭಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

'ಕೇಂದ್ರದ @BJP4India ಸರ್ಕಾರ ಕರ್ನಾಟಕದ ಮೇಲೆ ಸೇಡು ತೀರಿಸಿಕೊಳ್ಳುತ್ತಿದೆಯೇ? ಪ್ರಧಾನಿ @narendramodi ಅವರೇ, ಇದು ಆರೂವರೆ ಕೋಟಿ #ಸ್ವಾಭಿಮಾನಿ_ಕನ್ನಡಿಗರಪ್ರಶ್ನೆ #AnswerMadiModi' ಎಂದು ತಮ್ಮ ಅಧಿಕೃತ 'ಎಕ್ಸ್' ಖಾತೆಯಲ್ಲಿ ಪ್ರಶ್ನೆ ಎತ್ತಿದ್ದಾರೆ. ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ ಎಂದು ಬಿಂಬಿಸುವ ಇಂಗ್ಲಿಷ್ ಮತ್ತು ಕನ್ನಡ ಭಾಷೆಯ ಪ್ರತ್ಯೇಕ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ಆರೋಪಗಳ ವಾಗ್ದಾಳಿಗೆ ಸಿದ್ದರಾಮಯ್ಯ ರೂಪಿಸಿರುವ ಪ್ರತಿತಂತ್ರ ಇದಾಗಿದೆ.

8ನೇ ಪುಟ ನೋಡಿ

ಸಿದ್ದರಾಮಯ್ಯ ಕಿಡಿ ನುಡಿ

- ರಾಜ್ಯದ 216 ತಾಲ್ಲೂಕುಗಳು ಭೀಕರ ಬರದಿಂದ ಕಂಗೆಟ್ಟಿವೆ. ಈವರೆಗೆ ಕೇಂದ್ರದಿಂದ ನಯಾಪೈಸೆ ಪರಿಹಾರದ ಹಣ ಬಿಡುಗಡೆ ಆಗಿಲ್ಲ. 'ಪ್ರಧಾನಿ ಮೋದಿ ಅವರೇ ಜಗತ್ತಿನ ಕಷ್ಟಕ್ಕೆಲ್ಲ, ದುಃಖಕ್ಕೆಲ್ಲ ಮಿಡಿಯುವ ನಿಮ್ಮ ವಿಶಾಲ ಹೃದಯ ಕನ್ನಡಿಗರ ಬಗ್ಗೆ ಇಷ್ಟೊಂದು ಕಟುವಾಗಿರುವುದು ಏಕೆ?'
- ಬರಗಾಲದಿಂದಾಗಿ ಸುಮಾರು ₹33,770 ಕೋಟಿ ನಷ್ಟ ಆಗಿದೆ. ₹17,901 ಕೋಟಿ ಪರಿಹಾರ ಕೇಳಿದ್ದೇವೆ. ಯಾವುದೇ ಪ್ರತಿಕ್ರಿಯೆ ಬಂದಿಲ್ಲ. 2017ರ ಬರದ ಸಂದರ್ಭದಲ್ಲೂ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸಿತ್ತು. ಆಗ ₹30 ಸಾವಿರ ಕೋಟಿ ನಷ್ಟ ಆಗಿತ್ತು. ಕೇಂದ್ರದಿಂದ ಸಿಕ್ಕಿದ ಪರಿಹಾರ ₹1,435 ಕೋಟಿ. ಮಹಾರಾಷ್ಟ್ರಕ್ಕೆ ₹8195 ಕೋಟಿ, ಗುಜರಾತ್‌ಗೆ ₹3,894 ಕೋಟಿ, ರಾಜಸ್ಥಾನಕ್ಕೆ ₹2,153 ಕೋಟಿ ಪರಿಹಾರ ನೀಡಿತ್ತು.
- ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾಗಿರುವ ಅನುದಾನ, ತೆರಿಗೆಯಲ್ಲಿ ಪಾಲು, ಜಿಎಸ್‌ಟಿ ಪರಿಹಾರ ಪೂರ್ಣ ಪ್ರಮಾಣದಲ್ಲಿ ಬಂದಿಲ್ಲ. ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಹುದ್ದೆಗಳು ಮತ್ತು ಐಬಿಪಿಎಸ್ ನೇಮಕಾತಿಗಳಲ್ಲಿ ಕನ್ನಡದಲ್ಲಿ ಪರೀಕ್ಷೆ ಎದುರಿಸಲು ಅವಕಾಶ ನೀಡದೇ ಲಕ್ಷಾಂತರ ಯುವ ಕನ್ನಡಿಗರಿಗೆ ಅನ್ಯಾಯ ಮಾಡಲಾಗುತ್ತಿದೆ.
- ಕನ್ನಡಿಗರ ಮೇಲೆ ಹಿಂದಿ ಹೇರಿಕೆ ಮಾಡಲು ಪ್ರಯತ್ನಿಸಿ ಕನ್ನಡಿಗರ ಸ್ವಾಭಿಮಾನವನ್ನು ಕೆಣಕಲಾಗುತ್ತಿದೆ. ನಾಡಿನ ರೈತರ ಜೀವನಾಧಾರವಾಗಿರುವ ಕಾವೇರಿ, ಮಹದಾಯಿ, ಕೃಷ್ಣಾ, ಭದ್ರಾ ಮೇಲ್ದಂಡೆ ಮೊದಲಾದ ನದಿಗಳ ನೀರಾವರಿ ಯೋಜನೆಗಳಿಗೆ ಬೆಂಬಲ ನೀಡದೇ ಅನ್ನದಾತನನ್ನು ಸಂಕಷ್ಟಕ್ಕೆ ನೂಕಲಾಗಿದೆ.
- ಕನ್ನಡಿಗರೇ ಬೆವರು-ರಕ್ತ ಸುರಿಸಿ ಕಟ್ಟಿ ಬೆಳೆಸಿದ ಕರ್ನಾಟಕದ ಹೆಮ್ಮೆಯ ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೊದಲಾದ ಲಾಭದಲ್ಲಿದ್ದ ಬ್ಯಾಂಕುಗಳನ್ನು ನಷ್ಟದಲ್ಲಿದ್ದ ಬ್ಯಾಂಕುಗಳ ಜೊತೆ ವಿಲೀನ ಮಾಡಿ ಕನ್ನಡಿಗರಿಗೆ ದ್ರೋಹ ಎಸಗಲಾಗಿದೆ.



'ಕನ್ನಡ ಧ್ವಜಕ್ಕೆ ಒಪ್ಪಿಗೆ ನೀಡದ ಕೇಂದ್ರ'

'ರಾಜ್ಯದಲ್ಲಿ ಪ್ರತ್ಯೇಕ ಧ್ವಜ ಹೊಂದುವ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಸಿಕ್ಕಿಲ್ಲ. ಈ ಕಾರಣದಿಂದ ಈ ಬಾರಿಯ ರಾಜ್ಯೋತ್ಸವದಲ್ಲಿ ಕನ್ನಡ ಧ್ವಜ ಹಾರಿಸುವುದಿಲ್ಲ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

'ಹಳದಿ ಮತ್ತು ಕೆಂಪು ಬಣ್ಣಗಳನ್ನು ಒಳಗೊಂಡ ಕನ್ನಡ ಧ್ವಜ ಅಳವಡಿಸಿಕೊಳ್ಳುವ ಕುರಿತ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದೆ ಬಾಕಿ ಇದೆ. ಒಪ್ಪಿಗೆ ನೀಡುವಂತೆ ಕೇಂದ್ರಕ್ಕೆ ಮತ್ತೆ ಪತ್ರ ಬರೆಯಲಾಗುವುದು' ಎಂದು ಅವರು ಹೇಳಿದರು.

20 ಶಾಸಕರಿಗೆ ನಿಗಮ, ಮಂಡಳಿ ಅಧ್ಯಕ್ಷ ಪಟ್ಟ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಪೂರಕವಾಗಿ ಪಕ್ಷ ಸಂಘಟನೆಗೆ ಅನುಕೂಲವಾಗುವಂತೆ ಸುಮಾರು 20 ಶಾಸಕರಿಗೆ ಆಯಕಟ್ಟಿನ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಮ್ಮತಕ್ಕೆ ಬಂದಿದ್ದಾರೆ.

ನಿಗಮ, ಮಂಡಳಿಗಳ ನಾಮ ನಿರ್ದೇಶನಕ್ಕೆ ಸಂಬಂಧಿಸಿದಂತೆ ಇಬ್ಬರೂ ಶುಕ್ರವಾರ ನಾಲ್ಕು ಗಂಟೆ ಚರ್ಚೆ ನಡೆಸಿದ್ದಾರೆ. ಸಚಿವ ಸ್ಥಾನದ ಆಕಾಂಕ್ಷಿಗಳಾಗಿದ್ದ 15 ರಿಂದ 20 ಶಾಸಕರಿಗೆ ಆಯಕಟ್ಟಿನ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡಿ ಸಮಾಧಾನಪಡಿಸಲು ನಿರ್ಧರಿಸಲಾಗಿದೆ. ವಾರದೊಳಗೆ ಆದೇಶವನ್ನೂ ಹೊರಡಿಸುವ ತೀರ್ಮಾನಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ಪರಮೇಶ್ವರ, ಎಚ್‌.ಕೆ. ಜತೆ ರಹಸ್ಯ ಸಭೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಅವರೊಂದಿಗೆ ರಹಸ್ಯ ಸಭೆ ನಡೆಸಿದರು. ತಮ್ಮ ಗೃಹ ಕಚೇರಿ ಕೃಷ್ಣಾಕ್ಕೆ ಎಚ್‌.ಕೆ. ಪಾಟೀಲ ಅವರನ್ನು ಶುಕ್ರವಾರ ಸಂಜೆ ಕರೆಸಿಕೊಂಡ ಸಿದ್ದರಾಮಯ್ಯ, ಅವರೊಂದಿಗೂ ಕೆಲಕಾಲ ಚರ್ಚೆ ನಡೆಸಿದರು. ಬಳಿಕ ಪರಮೇಶ್ವರ ಅವರ ಮನೆಗೆ ಭೇಟಿ ನೀಡಿದರು. ಒಂದು ಗಂಟೆಗೂ ಹೆಚ್ಚು ಕಾಲ ಗೋಪ್ಯವಾಗಿ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಸಚಿವ ಸತೀಶ ಜಾರಕಿಹೊಳಿ ಇದ್ದರು. ಇದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಕೇಂದ್ರದಿಂದ ₹25ಕ್ಕೆ ಕೆ.ಜಿ ಈರುಳ್ಳಿ

ನವದೆಹಲಿ (ಪಿಟಿಐ): ದೇಶದಾದ್ಯಂತ ಈರುಳ್ಳಿ ದರ ಏರಿಕೆ ಕಾಣುತ್ತಿದೆ. ಜನರಿಗೆ ಹೊರೆ ಆಗುವುದನ್ನು ತಪ್ಪಿಸಲು ತನ್ನ ಬಳಿ ಇರುವ ಹೆಚ್ಚುವರಿ ದಾಸ್ತಾನಿನಿಂದ ಕೆ.ಜಿ ಈರುಳ್ಳಿಗೆ ₹25ರಂತೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.



ಯಾವ ರಾಜ್ಯಗಳಲ್ಲಿ ಈರುಳ್ಳಿ ದರ ಭಾರಿ ಏರಿಕೆ ಕಂಡಿದೆಯೋ ಅಲ್ಲೆಲ್ಲಾ ಕೇಂದ್ರದ ಬಳಿ ಇರುವ ಹೆಚ್ಚುವರಿ ದಾಸ್ತಾನನ್ನು ಮಾರಾಟ ಮಾಡಲಾಗುವುದು. ಎನ್‌ಸಿಸಿಎಫ್ ಮತ್ತು ನಾಫೆಡ್ ಮೂಲಕ ರಿಯಾಯಿತಿ ದರದಲ್ಲಿ ರಿಟೇಲ್ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುವುದು ಎಂದು ಗ್ರಾಹಕರ ವ್ಯವಹಾರಗಳ ಸಚಿವಾಲಯವು ಶುಕ್ರವಾರ ತಿಳಿಸಿದೆ.

ದೇಶದಾದ್ಯಂತ ಈರುಳ್ಳಿಯ ರಿಟೇಲ್ ದರವು ಕೆ.ಜಿಗೆ ಸರಾಸರಿ ₹47ಕ್ಕೆ ತಲುಪಿದೆ. ಕಳೆದ ವರ್ಷ ಕೆ.ಜಿಗೆ ₹30 ಇತ್ತು. ಇದಕ್ಕೆ ಹೋಲಿಸಿದರೆ ಶೇ 57ರಷ್ಟು ಹೆಚ್ಚಾಗಿದೆ ಎಂದು ಸಚಿವಾಲಯ ಹೇಳಿದೆ. ದೆಹಲಿಯಲ್ಲಿ ಶುಕ್ರವಾರ ಕೆ.ಜಿಗೆ ₹40ರಂತೆ ಮಾರಾಟ ಆಗಿದೆ. ಕಳೆದ ವರ್ಷ ಕೆ.ಜಿಗೆ ₹30 ಇತ್ತು.

ಶತಕ ಬಾರಿಸುವುದೇ ಈರುಳ್ಳಿ ದರ? 12

ಕವಿ ಅಸಾದುಲ್ಲಾ ಬೇಗ್‌ಗೆ ‘ಸಾಹಿತ್ಯ ಕಲ್ಪತರು’ ಪ್ರಶಸ್ತಿ

ತಿಪಟೂರು: ತಿಪಟೂರಿನ ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘ ನೀಡುವ 2023ರ ‘ಸಾಹಿತ್ಯ ಕಲ್ಪತರು’ ರಾಜ್ಯಮಟ್ಟದ ಸಾಹಿತ್ಯ ಪ್ರಶಸ್ತಿಗೆ ಕನ್ನಡ ಶಾಯರಿಗಳ ಕವಿ ‘ಅಸಾದುಲ್ಲಾ ಬೇಗ್’ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಪ್ರಶಸ್ತಿ ₹10 ಸಾವಿರ ಮತ್ತು ಫಲಕವನ್ನು ಒಳಗೊಂಡಿದೆ. ನವೆಂಬರ್ 18ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ.

13 ವರ್ಷಗಳ ಬಳಿಕ ಸರ್ಕಾರಿ ಜಮೀನಿನ ಸರ್ವೆ ನಡೆಸಿ ವಶಕ್ಕೆ ಪಡೆಯಲು ತೀರ್ಮಾನ

193 ಎಕರೆ ಸ್ವಾಧೀನ: ಹೊಸ ಭರವಸೆ

• ಆದಿತ್ಯ ಕೆ.ಎ.

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಕಾಮಗಾರಿ ಆರಂಭಗೊಂಡು 13 ವರ್ಷಗಳ ಬಳಿಕ ಸರ್ಕಾರಿ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಪ್ರಕರಣವು ಸುಖ್ಯಾಂತ ಕಾಣುವ ನಿರೀಕ್ಷೆಯಿದೆ. ಸರ್ವೆ ನಡೆಸಿ ಸರ್ಕಾರಿ ಜಮೀನು ಸ್ವಾಧೀನ ಪ್ರಕ್ರಿಯೆ ಆರಂಭಿಸಲು ಬಿಡಿಎ ನಿರ್ಧರಿಸಿದ್ದು, ನಿವೇಶನ ಖರೀದಿದಾರರಲ್ಲಿ ಹೊಸ ಭರವಸೆ ಮೂಡಿದೆ.

ಬೆಂಗಳೂರು ಸುತ್ತಮುತ್ತ ಖಾಸಗಿಯವರು ಹಲವು ಸೌಲಭ್ಯವುಳ್ಳ ಬಡಾವಣೆ ನಿರ್ಮಿಸಿ ಮಾರಾಟ ಮಾಡುತ್ತಿದ್ದಾರೆ. ಆ ನಿವೇಶನಗಳಿಗೂ ಬೇಡಿಕೆ ಇದೆ. ಆದರೆ, ಬಿಡಿಎ ನಿರ್ಮಿಸಿದ್ದ ಬಡಾವಣೆಯಲ್ಲೇ ನಿವೇಶನ ಖರೀದಿಸಿದ್ದವರು ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಸಂಕಟ ಪಡುವಂತಾಗಿದೆ. ಅರೆಬರೆ ಕಾಮಗಾರಿಯಿಂದ ಇಡೀ ಬಡಾವಣೆ ಸೊರಗಿದೆ; ಸಮಸ್ಯೆ ಸುಳಿಯಲ್ಲಿ ಸಿಲುಕಿದೆ. ಜತೆಗೆ, ಭೂಮಿ ಕಳೆದುಕೊಂಡಿರುವ ರೈತರಿಗೂ ಪರಿಹಾರ ಲಭಿಸಿಲ್ಲ.

2010ರಲ್ಲಿ ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಮುಂದಾಗಿತ್ತು. ಇದಕ್ಕಾಗಿ 4,043 ಎಕರೆ ಜಮೀನು ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿತ್ತು. ಗುರುತಿಸಿದ್ದ ಸ್ಥಳದ ಅಲ್ಲಲ್ಲಿ ಇದ್ದ ಸರ್ಕಾರಿ ಜಮೀನನ್ನು ಇದುವರೆಗೂ ಸ್ವಾಧೀನ ಪಡಿಸಿಕೊಳ್ಳಲು ಸಾಧ್ಯವಾಗದೇ ಸಮಗ್ರ ಬಡಾವಣೆ ನಿರ್ಮಾಣ ಸಾಧ್ಯವಾಗಿರಲಿಲ್ಲ. ಬಿಡಿಎ ಹಾಗೂ ಸರ್ಕಾರದ ನಡುವೆ ಪತ್ರ ವ್ಯವಹಾರ ನಡೆದಿದ್ದರೂ ಸಮಸ್ಯೆ ಇತ್ಯರ್ಥ ಕಂಡಿರಲಿಲ್ಲ.



ಕೆಂಪೇಗೌಡ ಬಡಾವಣೆಯಲ್ಲಿ ಇರುವ ಸರ್ಕಾರಿ ಜಮೀನು (ಗುರುತು ಹಾಕಿರುವುದು)

> **193 ಎಕರೆ ಜತೆಗೆ 1,300 ಎಕರೆ ಭೂಸ್ವಾದಿನವೂ ಜಟಿಲವಾಗಿದೆ. ನಿವೇಶನ ಖರೀದಿಸಿ ಮನೆ ಕಟ್ಟುತ್ತಿರುವವರಿಗೆ ನೀರು, ಒಳಚರಂಡಿ, ವಿದ್ಯುತ್ ಸಂಪರ್ಕ ದುಸ್ತರವಾಗಿದೆ. ಆಯುಕ್ತರು ವಾರಕ್ಕೆ ಎರಡು ಬಾರಿಯಾದರೂ ಭೂಸ್ವಾಧೀನ ಪ್ರಗತಿ ಪರಿಶೀಲನೆ ನಡೆಸಬೇಕು**
> **ಸೂರ್ಯಕಿರಣ್,** ವಕ್ತಾರ, ಕೆಂಪೇಗೌಡ ಮುಕ್ತ ವೇದಿಕೆ

ಬಿಡಿಎ ಆಯುಕ್ತರ ಸೂಚನೆ ಮೇರೆಗೆ ಬಿಡಿಎ ಸರ್ವೆ ವಿಭಾಗದ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆದಿದೆ. ಸರ್ಕಾರಿ ಭೂಮಿಯನ್ನು ಲೇಔಟ್ ನಿರ್ಮಾಣಕ್ಕೆ ಬಳಸಿಕೊಳ್ಳಲು ಹೆಜ್ಜೆ ಇಡಲಾಗಿದೆ. ಜಮೀನಿನ ಮಾರುಕಟ್ಟೆ ದರ ಇನ್ನಷ್ಟೇ ನಿರ್ಧಾರ ಆಗಬೇಕಿದೆ (ಸರ್ಕಾರಕ್ಕೆ ಪಾವತಿಸುವ ಹಣ) ಎಂದು ಮೂಲಗಳು ತಿಳಿಸಿವೆ.

ಸರ್ಕಾರಿ ಜಮೀನು ಹಸ್ತಾಂತರವಾಗದೇ ಬಡಾವಣೆ ಹಲವು ಭಾಗಕ್ಕೆ ಮೂಲಸೌಕರ್ಯ ಒದಗಿಸಲು ಸಾಧ್ಯವಾಗಿರಲಿಲ್ಲ. ಬೆಂಗಳೂರು ಉತ್ತರ ತಾಲ್ಲೂಕಿನ ನಾಲ್ಕು ಗ್ರಾಮಗಳಾದ ಸೀಗೆಹಳ್ಳಿ, ಕನ್ನಲ್ಲಿ, ಕೊಡಿಗೇಹಳ್ಳಿ, ಮಂಗನಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ 8 ಗ್ರಾಮಗಳಾದ ಕೊಮ್ಮಘಟ್ಟ, ಭೀಮನಕುಪ್ಪೆ, ರಾಮಸಾಗರ ಸೂಲಿಕೆರೆ, ಕೆಂಚನಪುರ, ರಾಮಸಂದ್ರ, ಕೊಮ್ಮಘಟ್ಟ ಕೃಷ್ಣಸಾಗರ, ಚಲ್ಲಘಟ್ಟ ಗ್ರಾಮಗಳಲ್ಲಿ 4,043 ಎಕರೆ 27 ಗುಂಟೆಯಲ್ಲಿ ಬಡಾವಣೆ ಕಾಮಗಾರಿ ಕುಂಟುತ್ತಾ ಸಾಗುತ್ತಿದೆ. ಈಗ ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿರುವ 193 ಎಕರೆ ಸರ್ಕಾರಿ ಜಮೀನು ಭೀಮನಕುಪ್ಪೆ, ಚಲ್ಲಘಟ್ಟ, ರಾಮಸಂದ್ರ ಭಾಗದಲ್ಲಿದೆ. ಈ ಭೂಮಿ ಹಸ್ತಾಂತರವಾದರೆ ಕಾಮಗಾರಿ ಸ್ವಲ್ಪ ಚುರುಕು ಪಡೆಯಲಿದೆ ಎಂದು ನಿವೇಶನದಾರರು ಹೇಳುತ್ತಾರೆ.

ಬಿಡಿಎ ಅಥವಾ ಕಂದಾಯ ಇಲಾಖೆ ನಡುವೆ ಸಮನ್ವಯತೆ ಕೊರತೆಯಿಂದ ಯೋಜನೆ ಕೈಗೆತ್ತಿಕೊಂಡು 13 ವರ್ಷವಾದರೂ ಸರ್ಕಾರಿ ಭೂಮಿ ಪಡೆಯಲು ಸಾಧ್ಯವಾಗಿರಲಿಲ್ಲ ಎಂದು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಮುಖಂಡರು ಆರೋಪಿಸುತ್ತಾರೆ.

ಪ್ರಯೋಜನ ಏನು?

- ವಿವಿಧ ಬ್ಲಾಕ್‌ಗಳ ನಡುವೆ ನೀರು, ಒಳ ಚರಂಡಿ, ವಿದ್ಯುತ್ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವ ಕಾಮಗಾರಿಯಲ್ಲಿ ನಿರಂತರತೆ ಕಾಯ್ದುಕೊಳ್ಳಲು ಸಾಧ್ಯವಿದೆ.
- ಒಂದು ಬ್ಲಾಕ್‌ನಿಂದ ಇನ್ನೊಂದು ಬ್ಲಾಕ್‌ಗೆ ಮುಖ್ಯರಸ್ತೆ, ಆಂತರಿಕ ರಸ್ತೆಗಳ ಸಂಪರ್ಕ ಸಾಧ್ಯವಾಗಲಿದೆ.
- ಮತ್ತಷ್ಟು ನಿವೇಶನ ಅಭಿವೃದ್ಧಿಪಡಿಸಿ ಹಂಚಿಕೆ ಮಾಡಬಹುದು.
- ಬಾಕಿಯಿರುವ ರಾಜಕಾಲುವೆ ಕಾಮಗಾರಿ ತ್ವರಿತಗೊಳ್ಳಲಿದೆ.
- ಮೂಲ ಯೋಜನೆಯಂತೆ ಕೆಲವು ಪ್ರದೇಶಗಳಲ್ಲಿ ಉದ್ಯಾನ, ಸಿ.ಎ ನಿವೇಶನಗಳನ್ನು ನಿರ್ಮಾಣ ಮಾಡಲು ಸಾಧ್ಯ.
- ವಿದ್ಯುತ್ ಉಪ ಕೇಂದ್ರ ಸ್ಥಾಪಿಸಲು ಈ ಭೂಮಿಯನ್ನು ಬಳಸಿಕೊಳ್ಳಬಹುದಾಗಿದೆ.

ದೀಪಾವಳಿ ಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಘು ಉದ್ಯೋಗ ಭಾರತಿ ಕರ್ನಾಟಕ, ಐಎಂಎಸ್ ಪ್ರತಿಷ್ಠಾನ ಮತ್ತು ಮಿಲೆಟ್ಸ್‌ಕಾರ್ಟ್ ಆಶ್ರಯದಲ್ಲಿ ಬೆಂಗಳೂರಿನ ಡಿವಿಜಿ ರಸ್ತೆಯಲ್ಲಿರುವ ಅಬಲಾಶ್ರಮದಲ್ಲಿ ಅ.28 ಹಾಗೂ 29ರಂದು ದೀಪಾವಳಿ ಮೇಳ ಆಯೋಜನೆಗೊಂಡಿದೆ. ಎರಡೂ ದಿನ ಬೆಳಿಗ್ಗೆ 11ರಿಂದ ರಾತ್ರಿ 8ರವರೆಗೆ ಮೇಳ ನಡೆಯಲಿದೆ.

ದೀಪಾವಳಿ ಹಬ್ಬಕ್ಕೆ ಅಗತ್ಯವಿರುವ ವಸ್ತುಗಳ ಖರೀದಿಯ ಜತೆಗೆ ಆಹಾರ ಮೇಳವೂ ಆಯೋಜನೆಗೊಂಡಿದೆ. ಇದರಲ್ಲಿ ಸಾಂಪ್ರದಾಯಿಕ ಆರೋಗ್ಯಯುಕ್ತ ಆಹಾರ, ಕುರ್ತಿಗಳು, ಮಕ್ಕಳ ಉಡುಪು, ಕರಕುಶಲ ಆಭರಣಗಳು, ಗಿಡಮೂಲಿಕೆಯುಕ್ತ ಸಾಬೂನುಗಳು ಹಾಗೂ ಪ್ರಸಾಧನ ಸಾಮಗ್ರಿ, ಸಾಂಪ್ರದಾಯಿಕ ಜೂಟ್ ಚೀಲಗಳು, ಟೆರ್ರಾಕೋಟಾ ಆಭರಣ, ಸೆಗಣಿ ಹಾಗೂ ಇತರ ನೈಸರ್ಗಿಕ ವಸ್ತುಗಳಿಂದ ಸಿದ್ಧಗೊಂಡ ಹಣತೆಗಳು, ದೀಪಾವಳಿ ಸಿಹಿ, ಉಡುಗೊರೆ ಹೀಗೆ ಇನ್ನೂ ಹಲವು ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಆಯೋಜಿಸಲಾಗಿದೆ.

ಅರ್ಚಕರ–ಆಗಮಿಕರ,ಉಪಾಧಿವಂತರ ಒಕ್ಕೂಟದಿಂದ ಸಮಾವೇಶ

‘ಅರ್ಚಕರ ಬೇಡಿಕೆ ಈಡೇರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ–ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಸುವರ್ಣ ಮಹೋತ್ಸವದ ಅಂಗವಾಗಿ ಮತ್ತು ಅರ್ಚಕರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ 2024ರ ಫೆ.7ಕ್ಕೆ ಬೆಂಗಳೂರು ಪುರಭವನದಲ್ಲಿ ರಾಜ್ಯಮಟ್ಟದ ಬೃಹತ್ ಸಮಾವೇಶ ನಡೆಸಲು ಒಕ್ಕೂಟ ನಿರ್ಧರಿಸಿದೆ.

ಅರ್ಚಕರ–ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ರಾಜ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ನಡೆಯಲಿರುವ ಈ ಸಮಾವೇಶದಲ್ಲಿ ಮುಖ್ಯಮಂತ್ರಿ, ಕೇಂದ್ರ ಸಚಿವರು, ಮುಜರಾಯಿ ಸಚಿವರು ಸಹಿತ ಗಣ್ಯರು ಭಾಗವಹಿಸಲಿದ್ದಾರೆ ಎಂದು ಒಕ್ಕೂಟದ ಪ್ರಧಾನ ಸಲಹೆಗಾರ ರಾಧಾಕೃಷ್ಣ ಕೆ.ಇ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ರಾಜ್ಯದಲ್ಲಿ 1.86 ಲಕ್ಷ ದೇವಸ್ಥಾನಗಳಿವೆ. ಅದರಲ್ಲಿ ಸುಮಾರು 38 ಸಾವಿರ ದೇವಸ್ಥಾನಗಳು ಮುಜರಾಯಿ ಇಲಾಖೆಯ ಅಡಿಯಲ್ಲಿವೆ. ಎಲ್ಲ ದೇವಸ್ಥಾನಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಶೌಚಾಲಯ, ಸ್ನಾನಗೃಹ ನಿರ್ಮಿಸಬೇಕು. ಚಪ್ಪಲಿ ಸ್ಟ್ಯಾಂಡ್, ಹಣ್ಣು, ತೆಂಗಿನಕಾಯಿ, ಹೂವು ಅಂಗಡಿಗಳನ್ನು ವ್ಯವಸ್ಥಿತವಾಗಿ ಮಾಡಬೇಕು. ‘ಸಿ’ ವರ್ಗದ ದೇವಸ್ಥಾನಗಳ ಅರ್ಚಕರು ಮತ್ತು ಪರಿಚಾರಕರಿಗೆ ವಿಮೆ, ಸೇವಾ ಭದ್ರತೆ, ಪಿಂಚಣಿ, ಆರೋಗ್ಯ ಕಾರ್ಡ್, ವಸತಿ ಒದಗಿಸಬೇಕು ಎಂಬುದು ನಮ್ಮ ಬೇಡಿಕೆ’ ಎಂದು ತಿಳಿಸಿದರು.

‘ಎಲ್ಲ ದೇವಸ್ಥಾನಗಳಲ್ಲಿ ಶಿಸ್ತು ಸಮಿತಿ ರಚಿಸಬೇಕು. ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ₹ 5,000 ಇರುವ ತಸ್ತೀಕ್ ಅನ್ನು ₹ 10 ಸಾವಿರಕ್ಕೆ ಏರಿಸಬೇಕು. ಅರ್ಚಕರಿಗೆ ತರಬೇತಿ ನೀಡಬೇಕು. ರಾಜ್ಯದಲ್ಲಿ ಒಂದೇ ಭುವನೇಶ್ವರಿ ದೇವಸ್ಥಾನ ಇದ್ದು, ಎಲ್ಲ ಕಡೆ ಸ್ಥಾಪನೆ ಮಾಡಬೇಕು. ‘ಬಿ’ ಮತ್ತು ‘ಸಿ’ ವರ್ಗದ ದೇವಾಲಯಗಳಿಗೆ ವಿದ್ಯುತ್ ಉಚಿತವಾಗಿ ಒದಗಿಸಬೇಕು. ಅರ್ಚಕರ ನಿವೃತ್ತಿಯನ್ನು ರದ್ದು ಮಾಡಬೇಕು. ದೇವಸ್ಥಾನಗಳನ್ನು 11 ವರ್ಷಗಳಿಗೆ ಒಮ್ಮೆ ಪುನರುಜ್ಜೀವನ ಮಾಡಬೇಕು. ಪರಿಸ್ಥಿತಿಗೆ ತಕ್ಕಂತೆ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಅರ್ಚಕರಿಗೆ ಮತ್ತು ಸಿಬ್ಬಂದಿಗೆ ಪೊಲೀಸ್ ರಕ್ಷಣೆ ನೀಡಬೇಕು ಎಂಬುದು ನಮ್ಮ ಒತ್ತಾಯ’ ಎಂದು ಹೇಳಿದರು.

ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್, ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್ ಮಾತನಾಡಿದರು.

ಸುದ್ದಿ 2 ನಿಮಿಷ

ಸುವರ್ಣ ಪುರಸ್ಕಾರಕ್ಕೆ ನಾಲ್ವರು ಆಯ್ಕೆ

ಬೆಂಗಳೂರು: ‘ಕರ್ನಾಟಕ’ ನಾಮಕರಣದ ಸುವರ್ಣ ಸಂಭ್ರಮದ ಪ್ರಯುಕ್ತ ಕನ್ನಡ ಜನಶಕ್ತಿ ಕೇಂದ್ರವು ನಾಲ್ವರು ಗಡಿನಾಡ ಕನ್ನಡ ಪರ ಹೋರಾಟಗಾರರನ್ನು ಸುವರ್ಣ ಪುರಸ್ಕಾರಕ್ಕೆ ಆಯ್ಕೆ ಮಾಡಿದೆ.

ಬೆಳಗಾವಿಯ ಅಶೋಕ ಚಂದರಗಿ, ಕೋಲಾರದ ಅ.ಕೃ. ಸೋಮಶೇಖರ್, ಚಾಮರಾಜನಗರದ ಚಾ.ರಂ. ಶ್ರೀನಿವಾಸಗೌಡ ಹಾಗೂ ಬೀದರ್‌ನ ಬಸವ ಕಲ್ಯಾಣದ ಶರಣಪ್ಪ ಗುದುಲೇಗಾಂವ್ ಅವರು ಸುವರ್ಣ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

ನ.6ರಂದು ಸಂಜೆ 5 ಗಂಟೆಗೆ ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ ಸುವರ್ಣ ಪುರಸ್ಕಾರ ಸಮಾರಂಭ ನಡೆಯಲಿದ್ದು, ಲೇಖಕ ಸತೀಶ್ ಕುಲಕರ್ಣಿ ಅವರು ಸಮಾರಂಭ ಉದ್ಘಾಟಿಸುತ್ತಾರೆ. ಪ್ರಾಧ್ಯಾಪಕ ರಾಜಪ್ಪ ದಳವಾಯಿ ಅವರು ಶಾಂತವೇರಿ ಗೋಪಾಲಗೌಡ ವಿಶೇಷ ಸಂಚಿಕೆ ಬಿಡುಗಡೆ ಮಾಡುತ್ತಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಪಿ.ಎಂ.ವಿಶ್ವಕರ್ಮ ಯೋಜನೆ ನೋಂದಣಿಗೆ ಚಾಲನೆ



ಬೆಂಗಳೂರು: ಕೇಂದ್ರ ಸರ್ಕಾರದ ಪಿ.ಎಂ.ವಿಶ್ವಕರ್ಮ ಯೋಜನೆಗಳಿಗೆ ಅರ್ಹ ಫಲಾನುಭವಿಗಳ ನೋಂದಣಿ ಕಾರ್ಯಕ್ಕೆ ಬಿಜೆಪಿ ಯುವ ಮುಖಂಡ ಅರುಣ್ ಸೋಮಣ್ಣ ಚಾಲನೆ ನೀಡಿದರು.

ಮಡಿವಾಳ, ಚಮ್ಮಾರ, ಕುಂಬಾರ, ನೇಕಾರರು, ಅಕ್ಕಸಾಲಿಗರು, ಗಾರೆ ಕೆಲಸದವರು, ಬಡಗಿ ಸೇರಿದಂತೆ ವಿವಿಧ ಕಾರ್ಮಿಕರನ್ನು ಪಿ.ಎಂ.ವಿಶ್ವಕರ್ಮ ಯೋಜನೆಯಡಿ ನೋಂದಣಿಗೆ ಅವಕಾಶ ನೀಡಲಾಗಿದೆ.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ನಾಗರಭಾವಿ ಮುಖ್ಯರಸ್ತೆಯಲ್ಲಿ ಪ್ರಗತಿ ಮಹಿಳಾ ಸಮಾಜ ಸೇವಾ ಸಂಘ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥ ಗೌಡ, ಪ್ರಗತಿ ಮಹಿಳಾ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ರತ್ನಂ ಇದ್ದರು. ಪಿ.ಎಂ.ವಿಶ್ವಕರ್ಮ ಯೋಜನೆಗೆ ಹೆಸರು ನೋಂದಾಯಿಸಿದವರಿಗೆ ನೋಂದಣಿ ಪತ್ರ ವಿತರಿಸಲಾಯಿತು.



‘ಸವಿತಾ ಸಮಾಜಕ್ಕೆ ಪ್ರತ್ಯೇಕ ಮೀಸಲಾತಿ ಒದಗಿಸಿ’

ಬೆಂಗಳೂರು: ‘ಸವಿತಾ ಸಮಾಜದವರು ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದಾರೆ. ಆದ್ದರಿಂದ ಸಮಾಜಕ್ಕೆ ಪ್ರತ್ಯೇಕ ಮೀಸಲಾತಿ ಅಥವಾ ಪ್ರವರ್ಗ–1ಕ್ಕೆ ಸೇರಿಸಲು ಕ್ರಮವಹಿಸಬೇಕು’ ಎಂದು ಕರ್ನಾಟಕ ಸವಿತಾ ಕ್ಷೌರಿಕರ ಹಿತರಕ್ಷಣಾ ವೇದಿಕೆ ಸರ್ಕಾರಕ್ಕೆ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ಸಿ. ಕೃಷ್ಣಮೂರ್ತಿ, ‘ಸಮಾಜದ ಜಾತಿ ನಿಂದನಾ ಪದವನ್ನು ಹಲವಾರು ವರ್ಷಗಳಿಂದ ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು ಹಾಗೂ ಸಾರ್ವಜನಿಕರು ಬಳಸುತ್ತಿದ್ದಾರೆ. ಇದರಿಂದ ಸಮಾಜದವರು ಅತೀವ ನೋವು, ಅವಮಾನದಿಂದ ಮಾನಸಿಕವಾಗಿ ಕುಗ್ಗಿದ್ದಾರೆ. ಆದ್ದರಿಂದ ಜಾತಿ ನಿಂದನಾ ಪದವನ್ನು ಉಪಯೋಗಿಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು, ಉಗ್ರ ಶಿಕ್ಷೆ ನೀಡಬೇಕು’ ಎಂದು ಒತ್ತಾಯಿಸಿದರು.

ಇಂದು ‘ಭೂಮಿಕಾ ಕ್ಲಬ್’ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ



ಪ್ರಿಯಾಂಕಾ ಉಪೇಂದ್ರ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಮಹಿಳೆಯರಿಗಾಗಿ ಸ್ಥಾಪಿಸಿರುವ ‘ಭೂಮಿಕಾ ಕ್ಲಬ್’ ವೇದಿಕೆಯು ಶನಿವಾರ ಮಧ್ಯಾಹ್ನ 2.30ಕ್ಕೆ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 11ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಇದನ್ನು ಮಣಿಪಾಲ್ ಆಸ್ಪತ್ರೆಗಳ ಸಮೂಹವು ಪ್ರಸ್ತುತಪಡಿಸುತ್ತಿದ್ದು, ಚಲನಚಿತ್ರ ನಟಿ ಪ್ರಿಯಾಂಕಾ ಉಪೇಂದ್ರ ಉದ್ಘಾಟಿಸಲಿದ್ದಾರೆ. ಈ ಆವೃತ್ತಿಯು ಮುಂಬರುವ ಹಬ್ಬಗಳ ಬಗ್ಗೆ ಕೇಂದ್ರೀಕೃತವಾಗಿದೆ. ದೀಪಾವಳಿ ಅಲಂಕಾರದ ಬಗ್ಗೆ ಕಾರ್ಯಾಗಾರ ನಡೆಯಲಿದ್ದು, ಇದನ್ನು ಜತಿಂದರ್ ಸೈನಿ ನಡೆಸಿಕೊಡಲಿದ್ದಾರೆ. ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಎರಡು ವಿಚಾರಸಂಕಿರಣಗಳೂ ನಡೆಯಲಿವೆ. ಮಿಲ್ಲರ್ಸ್ ರಸ್ತೆಯ ಮಣಿಪಾಲ್ ಆಸ್ಪತ್ರೆಯ ಹೃದ್ರೋಗ ವಿಭಾಗದ ಸಲಹೆಗಾರ ಡಾ. ಸುನೀಲ್ ದ್ವಿವೇದಿ ‘ಮಹಿಳೆಯರ ಹೃದಯ ಆರೋಗ್ಯ’ದ ಬಗ್ಗೆ, ವರ್ತೂರು ರಸ್ತೆಯ ಮಣಿಪಾಲ್ ಆಸ್ಪತ್ರೆಯ ಪೌಷ್ಟಿಕ ಆಹಾರ ತಜ್ಞೆ ವಾಣಿ ಕೃಷ್ಣ ಅವರು ‘ಹಬ್ಬದ ಋತುವಿನಲ್ಲಿ ಉತ್ತಮ ಆಹಾರ ಪದ್ಧತಿ’ ಬಗ್ಗೆ ಮಾತನಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಹೆಸರು ನೋಂದಾಯಿಸಿದವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಎಂದು ಪ್ರಕಟಣೆ ತಿಳಿಸಿದೆ.

ನೋಂದಣಿಗೆ: https://bit.ly/bhumikaclub october

ಭೂಮಿಕಾ ಕ್ಲಬ್ presented by manipal hospitals LIFE'S ON

ನೋಂದಣಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ತೆಲಂಗಾಣಕ್ಕೆ ಕೇಯ್ನ್ಸ್ ಟೆಕ್ನಾಲಜೀಸ್ ರಾಜ್ಯದ ಲೋಪ ಇಲ್ಲ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಯ್ನ್ಸ್ ಟೆಕ್ನಾಲಜೀಸ್ ಇಂಡಿಯಾ ಮೈಸೂರಿನಲ್ಲಿ ಸ್ಥಾಪಿಸಬೇಕಿದ್ದ ಸೆಮಿಕಂಡಕ್ಟರ್ ಘಟಕವನ್ನು ತೆಲಂಗಾಣದಲ್ಲಿ ಆರಂಭಿಸುತ್ತಿರುವುದಕ್ಕೆ ರಾಜ್ಯ ಸರ್ಕಾರದ ಲೋಪ ಕಾರಣವಲ್ಲ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

‘ಔಟ್ ಸೋರ್ಸ್ಡ್ ಸೆಮಿಕಂಡಕ್ಟರ್ ಅಸೆಂಬ್ಲಿ ಆ್ಯಂಡ್ ಟೆಸ್ಟ್’ (ಒಎಸ್‌ಎಟಿ) ಘಟಕದ ನಿರ್ಮಾಣ ಕಾರ್ಯವನ್ನು ತೆಲಂಗಾಣದಲ್ಲಿ ಆರಂಭಿಸಲಾಗಿದೆ. ಕರ್ನಾಟಕದ ವಿಳಂಬ ಧೋರಣೆ ಇದಕ್ಕೆ ಕಾರಣ ಎಂದು ಉದ್ಯಮಿ ಮೋಹನ್ ದಾಸ್ ಪೈ ಅವರು ‘ಎಕ್ಸ್’ನಲ್ಲಿ ಹಾಕಿರುವ ಹೇಳಿಕೆ ಸತ್ಯಕ್ಕೆ ದೂರ ಎಂದು ಹೇಳಿದರು.

‘₹500 ಕೋಟಿಗಿಂತ ಹೆಚ್ಚಿನ ಮೊತ್ತದ ಉದ್ದಿಮೆ ಸ್ಥಾಪನೆಗೆ ಮುಖ್ಯಮಂತ್ರಿ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯ ಅನುಮೋದನೆ ಅಗತ್ಯ. ಆದರೂ, ವಿಳಂಬ ತಪ್ಪಿಸಲು ಅನುಮೋದನೆಗೆ ಮೊದಲೇ ಆದೇಶ ನೀಡಿದ್ದೆವು. ಅಮೆರಿಕ ಪ್ರವಾಸದ ಸಮಯದಲ್ಲೂ ಸಂಪರ್ಕದಲ್ಲಿದ್ದೆವು. ಕಂಪನಿ ನಿರ್ಧಾರಕ್ಕೆ ಬೇರೆಯದೇ ಕಾರಣ ಇರಬಹುದು. ಹೆಚ್ಚಿನ ವಿನಾಯಿತಿ ಬೇಕಿದ್ದರೆ ಮುಕ್ತವಾಗಿ ಚರ್ಚಿಸಬಹುದಿತ್ತು’ ಎಂದು ಹೇಳಿದರು.

‘ಮೋಹನ್ ದಾಸ್ ಪೈ ಅವರಿಗೆ ಬಹುಶಃ ಈ ಬೆಳವಣಿಗೆಗಳ ಬಗ್ಗೆ ಮಾಹಿತಿ ಇಲ್ಲದೇ ಇರಬಹುದು. ನಮ್ಮ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಆಯುಕ್ತರು ಅವರಿಗೆ ವಿವರ ನೀಡಲಿದ್ದಾರೆ. ರಾಜ್ಯವು ಹೂಡಿಕೆ ಸೆಳೆಯುವುದರಲ್ಲಿ ಮುಂಚೂಣಿಯಲ್ಲೇ ಇದೆ. ಸದ್ಯದಲ್ಲೇ ₹25 ಸಾವಿರ ಕೋಟಿ ಹೂಡಿಕೆಯಾಗಲಿದೆ’ ಎಂದರು.

ಶಿಕ್ಷಕರ ನೇಮಕಾತಿ: 22 ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿ ವಿಚಾರಣೆ

ಸರ್ಕಾರಕ್ಕೆ ಕೆಎಟಿ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ನೇಮಕಾತಿಯಲ್ಲಿ ಕೆಲವು ಅಭ್ಯರ್ಥಿಗಳ ತಂದೆಯ ಆದಾಯ ಪ್ರಮಾಣ ಪತ್ರ ಪರಿಗಣಿಸದೇ ಇರುವುದನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ (ಕೆಎಟಿ) ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಬೆಂಗಳೂರಿನ ಬಿಳೇಕಹಳ್ಳಿ ಚೈತ್ರಾ ಸೇರಿದಂತೆ ಒಟ್ಟು 22 ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಂಗ ಸದಸ್ಯ ನಾರಾಯಣ ಮತ್ತು ಆಡಳಿತ ಸದಸ್ಯ ಎಸ್.ಶಿವಸ್ವೈಲಂ ಅವರಿದ್ದ ಪೀಠವು ಪ್ರತಿವಾದಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ಅಂತಿಮ ವಿಚಾರಣೆಯನ್ನು ನವೆಂಬರ್ 6ಕ್ಕೆ ನಿಗದಿಪಡಿಸಿದೆ. 'ನೇಮಕಾತಿ ನಡೆದರೆ ಅದು ಈ ಅರ್ಜಿಯ ಅಂತಿಮ ತೀರ್ಪಿಗೆ ಒಳಪಡುತ್ತದೆ' ಎಂದು ಆದೇಶಿಸಿದೆ. ಅರ್ಜಿದಾರರ ಪರ ಕೆ.ಸತೀಶ್ ಭಟ್ ವಾದ ಮಂಡಿಸಿದರು.

ಇದೇ 12ರಂದು ಹೈಕೋರ್ಟ್ ನೇಮಕಾತಿಗೆ ಹಸಿರು ನಿಶಾನೆ ತೋರಿತ್ತು. 'ಅಭ್ಯರ್ಥಿಗಳು ತಮ್ಮ ತಂದೆಯ ಆದಾಯ ಪ್ರಮಾಣ ಪತ್ರದ ಕುರಿತಾದ ತಕರಾರನ್ನು ಕೆಎಟಿ ಮುಂದೆ ಮಂಡಿಸಿ ಪರಿಹಾರ ಪಡೆದುಕೊಳ್ಳಬಹುದು' ಎಂದು ಆದೇಶಿಸಿತ್ತು.

ಕೋರಿಕೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇದೇ 19ರಂದು ಕೌನ್ಸೆಲಿಂಗ್‌ಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ್ದು, ಅದರಲ್ಲಿ ಅರ್ಜಿದಾರರ ಹೆಸರನ್ನು ಸೇರ್ಪಡೆ ಮಾಡುವಂತೆ ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಮಧ್ಯಂತರ ಕೋರಿಕೆ ಸಲ್ಲಿಸಿದ್ದಾರೆ.

ಪೊಲೀಸ್ ಇಲಾಖೆ ಕ್ರಮ ಪುರಸ್ಕರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಚಾರಣೆಗೆ ಬಾಕಿ ಇರುವ ಕ್ರಿಮಿನಲ್ ಪ್ರಕರಣದ ಮಾಹಿತಿ ಮುಚ್ಚಿಟ್ಟು ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಯ ಸಂಭಾವ್ಯ ಪಟ್ಟಿಗೆ ಆಯ್ಕೆಯಾಗಿದ್ದ ಅಭ್ಯರ್ಥಿಯೊಬ್ಬರ ಹೆಸರನ್ನು ಕೈಬಿಟ್ಟ ಪೊಲೀಸ್ ಇಲಾಖೆಯ ಕ್ರಮವನ್ನು ಹೈಕೋರ್ಟ್ ಪುರಸ್ಕರಿಸಿದೆ.

ಪೊಲೀಸ್ ಇಲಾಖೆಯ ಕ್ರಮವನ್ನು ಪ್ರಶ್ನಿಸಿ ಬೀದರ್ ಜಿಲ್ಲೆಯ ಎಕ್ಲೂರು ವಾಡಿ ನಿವಾಸಿ ನಾರಾಯಣ ಜಾಮದಾರ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಪಿ.ಎಂ. ನವಾಜ್ ಮತ್ತು ಕೆ. ರಾಜೇಶ್ ರೈ ಅವರಿದ್ದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

'ಅರ್ಜಿದಾರ ಅಭ್ಯರ್ಥಿಯು ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಈ ಸಂಬಂಧ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯೂ ಸಲ್ಲಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸುವುದಿಲ್ಲ. ಅವರ ನಂತರ ಮೆರಿಟ್ ಹೊಂದಿದ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸಲಾಗುವುದು ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು 2015ರ ಡಿಸೆಂಬರ್ 4ರಂದು ಅಧಿಸೂಚನೆ



ಹೊರಡಿಸಿದ್ದರು. ಹೀಗಾಗಿ, ಅರ್ಜಿದಾರರ ಹೆಸರನ್ನು ಆಯ್ಕೆ ಪಟ್ಟಿಯಿಂದ

ಕೈಬಿಟ್ಟಿರುವ ಪೊಲೀಸ್ ಇಲಾಖೆಯ ಕ್ರಮ ಸೂಕ್ತವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಅಕ್ರಮ ಕೂಟ, ದರೋಡೆ, ಹಲ್ಲೆ, ಕೊಲೆ ಯತ್ನ ಮತ್ತು ಜೀವ ಬೆದರಿಕೆ ಆರೋಪಗಳಡಿ ಅರ್ಜಿದಾರ ಅಭ್ಯರ್ಥಿಯ ವಿರುದ್ಧ 2018ರಲ್ಲಿ ದೂರು ದಾಖಲಾಗಿತ್ತು. ಈ ಪ್ರಕರಣದಿಂದ ಅರ್ಜಿದಾರ ಖುಲಾಸೆಯಾಗಿದ್ದರೂ ಅರ್ಜಿ ಸಲ್ಲಿಸಿದ್ದ ಸಮಯದಲ್ಲಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ಬಾಕಿಯಿತ್ತು. ಅವರು ಈ ಮಾಹಿತಿಯನ್ನು ನೇಮಕಾತಿ ಕೋರಿ ಸಲ್ಲಿಸಿದ್ದ ಅರ್ಜಿಯಲ್ಲಿ ಬಹಿರಂಗಪಡಿಸಿರಲಿಲ್ಲ.

ನ್ಯಾ. ನರೇಂದರ್ ವರ್ಗಾವಣೆಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದರ್ ಅವರ ವರ್ಗಾವಣೆಯನ್ನು ಯಾಕೆ ಮಾಡಲಾಯಿತು ಎಂಬುದರ ಬಗ್ಗೆ ಕೊಲಿಜಿಯಂ ಉತ್ತರ ನೀಡಿಲ್ಲ' ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನ್ಯಾಯಮೂರ್ತಿ ಜಿ.ನರೇಂದರ್ ಆಂಧ್ರಪ್ರದೇಶ ಹೈಕೋರ್ಟ್‌ಗೆ ವರ್ಗಾವಣೆಗೊಂಡಿರುವ ಹಿನ್ನೆಲೆಯಲ್ಲಿ ಶುಕ್ರವಾರ ಹೈಕೋರ್ಟ್ ವಕೀಲರ ಸಂಘದ ವತಿಯಿಂದ ಬೀಳ್ಕೊಡುಗೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ವಿವೇಕ್ ಸುಬ್ಬಾರೆಡ್ಡಿ, ನರೇಂದರ್ ಅವರ ವರ್ಗಾವಣೆ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಇವರ ಮಾತಿಗೆ ದನಿಗೂಡಿಸಿದ



ಬೆಂಗಳೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಜಿ.ನರೇಂದರ್ ಅವರನ್ನು ಸನ್ಮಾನಿಸಿ, ಬೀಳ್ಕೊಡುಗೆ ನೀಡಲಾಯಿತು.

ಹಿರಿಯ ವಕೀಲ ರವಿವರ್ಮ ಕುಮಾರ್, 'ಕೊಲಿಜಿಯಂ ದಲಿತರನ್ನು ಮತ್ತು ಹಿಂದುಳಿದವರನ್ನೇ ಇಂತಹ ವರ್ಗಾವಣೆಗೆ ಗುರಿ ಮಾಡಿಕೊಂಡಿದೆ. ಈ ನಡೆಯನ್ನು ಬಲವಾಗಿ ಖಂಡಿಸುತ್ತೇನೆ' ಎಂದರು.

'ನರೇಂದರ್ ಹಿಂದುಳಿದ ವರ್ಗಕ್ಕೆ ಸೇರಿದವರು. ಪ್ರಾಮಾಣಿಕತೆ ಮತ್ತು ಪಾರದರ್ಶಕ ಆಡಳಿತಕ್ಕೆ ಹೆಸರಾಗಿದ್ದವರು. ಇಂತಹವರಿಗೆ ಪದೋನ್ನತಿ ನೀಡಿ ವರ್ಗಾವಣೆ ಮಾಡಿದ್ದರೆ ಸಂತೋಷ ಆಗುತ್ತಿತ್ತು. ಆದರೆ, ಸಾಮಾಜಿಕ ನ್ಯಾಯಕ್ಕೆ ಹೆಸರಾದ ಈ ನಾಡಲ್ಲಿ ಅವರಿಗೆ ಶಿಕ್ಷೆಯ ವರ್ಗಾವಣೆ ಮಾಡುವ ಮೂಲಕ ಅನ್ಯಾಯ ಎಸಗಲಾಗಿದೆ. ವರ್ಗಾವಣೆ ವಿಷಯದಲ್ಲಿ ಕೊಲಿಜಿಯಂಗೆ ಇರುವ ಮಾನದಂಡ, ನಿಯಮಗಳು ಏನು ಎಂಬುದೇ ತಿಳಿಯದಾಗಿದೆ. ಇದೊಂದು ಗಂಭೀರ ವಿಚಾರ' ಎಂದರು.

'ನರೇಂದರ್ ಸಮರ್ಥ ಮತ್ತು ಉತ್ತಮ ಗುಣದ ನ್ಯಾಯಮೂರ್ತಿ. ಅವರೇನು ಮಾಡಿದ್ದರು ಎಂದು ಈ ವರ್ಗಾವಣೆ ಮಾಡಲಾಗಿದೆ? ಯಾರು ಈ ಪ್ರಶ್ನೆ ಕೇಳಬೇಕು. ಯಾರಿಗೆ ಇದರ ಹೊಣೆಗಾರಿಕೆ ಇದೆ? ಇದೆಲ್ಲಾ ಬುದ್ಧಿವಂತಿಕೆಯಿಂದ ಯೋಜಿಸಿದ ಸೂತ್ರ. ಪರಿಶಿಷ್ಟ ಜಾತಿಗೆ ಸೇರಿದ್ದ ನ್ಯಾಯಮೂರ್ತಿ ಪಿ.ಬಿ.ಭಜಂತ್ರಿ ಅವರನ್ನೂ ಇದೇ ರೀತಿ ವರ್ಗಾವಣೆ ಮಾಡಲಾಯಿತು. ಇದನ್ನೆಲ್ಲಾ ಎಲ್ಲಿಯವರೆಗೆ ಸಹಿಸಿಕೊಳ್ಳಬೇಕು' ಎಂದು ಪ್ರಶ್ನಿಸಿದರು.

ನ. 4ರಿಂದ ಎಂಎಸ್‌ಸಿ 7ನೇ ಸಮ್ಮೇಳನ

ಬೆಂಗಳೂರು: ಮೆಡಿಕಲ್ ಸರ್ವಿಸ್ ಸೆಂಟರ್‌ನ (ಎಂಎಸ್‌ಸಿ) 7ನೇ ಅಖಿಲ ಭಾರತೀಯ ಸಮ್ಮೇಳನವನ್ನು ನ.4 ಮತ್ತು ನ.5ರಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಬಿಎಂಸಿಆರ್‌ಐ) ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸೆಂಟರ್‌ನ ರಾಜ್ಯ ಘಟಕದ ಉಪಾಧ್ಯಕ್ಷ ಡಾ.ಕೆ.ಎಸ್. ಗಂಗಾಧರ್, 'ಸಮ್ಮೇಳನವನ್ನು ಗುಲ್ಬರ್ಗ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಎಂ.ವಿ. ನಾಡಕರ್ಣಿ ಉದ್ಘಾಟಿಸುತ್ತಾರೆ. ಮುಖ್ಯ ಅತಿಥಿಗಳಾಗಿ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ. ಎನ್. ಮಂಜುನಾಥ್, ಬಿಎಂಸಿಆರ್‌ಐ ಡೀನ್ ಡಾ. ರಮೇಶ್ ಕೃಷ್ಣ ಭಾಗವಹಿಸುತ್ತಾರೆ. ವಿವಿಧ ರಾಜ್ಯಗಳ ವೈದ್ಯಕೀಯ ತಜ್ಞರು ಸಮ್ಮೇಳನದಲ್ಲಿ ಪಾಲ್ಗೊಳ್ಳುತ್ತಾರೆ' ಎಂದು ಹೇಳಿದರು.

'ಸಾರ್ವತ್ರಿಕ ಆರೋಗ್ಯ ವಿಮೆ, ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಒದಗಿಸುವಿಕೆ, ಸಾರ್ವಜನಿಕ ಆರೋಗ್ಯ ಬಲಪಡಿಸುವಿಕೆ, ಉಚಿತ ಅಥವಾ ಕೈಗೆಟಕುವ ಶುಲ್ಕದಡಿ ವೈದ್ಯಕೀಯ ಶಿಕ್ಷಣ ಸೇರಿ ವಿವಿಧ ವಿಷಯಗಳ ಚರ್ಚೆ ನಡೆಸಲಾಗುತ್ತದೆ' ಎಂದರು.

'ಗೃಹಲಕ್ಷ್ಮಿ'ಯರಿಗೆ ಟೋಪಿ: ಬಿಜೆಪಿ

ಬೆಂಗಳೂರು: 'ಗೃಹಲಕ್ಷ್ಮಿ' ಯೋಜನೆ ಹೆಸರಲ್ಲಿ ಸಿದ್ದರಾಮಯ್ಯ ಸರ್ಕಾರ ಮಹಿಳೆಯರಿಗೆ ಟೋಪಿ ಹಾಕಿದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಒಂದೇ ಒಂದು ರೂಪಾಯಿ ಮಹಿಳೆಯರಿಗೆ ಬಿಡುಗಡೆ ಮಾಡಿಲ್ಲ ಎಂದು ಬಿಜೆಪಿ ಹೇಳಿದೆ.

ಪ್ರತಿ ತಿಂಗಳು ಮನೆ ಯಜಮಾನಿಯ ಬ್ಯಾಂಕ್ ಖಾತೆಗೆ ₹2,000 ಹಾಕುತ್ತೇವೆ ಎಂದು ಭರವಸೆ ಕೊಟ್ಟು ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಈಗ ರಾಜ್ಯದ ಮಹಿಳೆಯರನ್ನು ವಂಚಿಸಿದೆ ಎಂದು ಬಿಜೆಪಿ 'ಎಕ್ಸ್' ಮೂಲಕ ಕಿಡಿ ಕಾರಿದೆ.

ಈ ಯೋಜನೆಯ ಚಾಲನೆಗೆ ರಾಹುಲ್‌ಗಾಂಧಿಯನ್ನು ಕರೆಸಿ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಅಬ್ಬರಿಸಿ ಬೊಬ್ಬಿರಿದು ಭಾಷಣ ಮಾಡಿದ್ದು, ಕೇವಲ ಬೂಟಾಟಿಕೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ ಎಂದು ಬಿಜೆಪಿ ಹೇಳಿದೆ.

ಕಂದಾಯ ಇಲಾಖೆಯಲ್ಲಿ ಬಡ್ತಿ ಪಡೆದಿರುವ ಅಧಿಕಾರಿಗಳಿಂದ 'ಕಲೆಕ್ಷನ್' ಆಗಿಲ್ಲ ಎಂಬ ಕಾರಣಕ್ಕೆ ಅವರಿಗೆ ಹುದ್ದೆ ನೀಡದೇ ಸಿದ್ದರಾಮಯ್ಯ ಸರ್ಕಾರ ಅರಾಜಕತೆ ಸೃಷ್ಟಿಸಿದೆ ಎಂದು ಬಿಜೆಪಿ ಆರೋಪಿಸಿದೆ.

ಮುನೀಶ್ ಮೌದ್ಗಿಲ್ ಬಿಬಿಎಂಪಿ ವಿಶೇಷ ಆಯುಕ್ತ

ಬೆಂಗಳೂರು: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯದರ್ಶಿ ಮುನೀಶ್ ಮೌದ್ಗಿಲ್ ಅವರನ್ನು ಬಿಬಿಎಂಪಿ ವಿಶೇಷ ಆಯುಕ್ತರ (ಕಂದಾಯ) ಹುದ್ದೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಐಎಎಸ್ ಅಧಿಕಾರಿಗಳಾದ ವಿನೋತ್ ಪ್ರಿಯಾ. ಆರ್ ಅವರನ್ನು ಬಿಬಿಎಂಪಿ ವಲಯ ಆಯುಕ್ತ (ದಕ್ಷಿಣ) ಹುದ್ದೆಗೆ, ಸ್ನೇಹಲ್. ಆರ್ ಅವರನ್ನು ಬಿಬಿಎಂಪಿ ವಲಯ ಆಯುಕ್ತ(ಪೂರ್ವ) ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಶ್ರೀವಿದ್ಯಾ ಪಿ.ಐ ಅವರನ್ನು ರಾಷ್ಟ್ರೀಯ ಜೀವನೋಪಾಯ ಮಿಷನ್‌ನ ನಿರ್ದೇಶಕ ಹುದ್ದೆಗೆ ವರ್ಗಾಯಿಸಲಾಗಿದೆ. ಈ ಹುದ್ದೆಯನ್ನು ನಿರ್ವಹಿಸುತ್ತಿದ್ದ ರಾಗಪ್ರಿಯಾ. ಆರ್ ಅವರನ್ನು ಉದ್ಯೋಗ ಮತ್ತು ತರಬೇತಿ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಜ್ಯೋತಿ.ಕೆ ಅವರನ್ನು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯಮಾಪನ ಮಂಡಳಿ ಅಧ್ಯಕ್ಷರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಮೊಬೈಲ್ ಕದ್ದು ಮಾರುತ್ತಿದ್ದ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಆನೇಕಲ್: ಕಳವು ಮಾಡಿದ ಮೊಬೈಲ್ ಮಾರಾಟ ಮಾಡುತ್ತಿದ್ದ ನಾಲ್ವರನ್ನು ಗುರುವಾರ ಬಂಧಿಸಿರುವ ಬನ್ನೇರುಘಟ್ಟ ಪೊಲೀಸರು ಅವರಿಂದ ನೂರಕ್ಕೂ ಹೆಚ್ಚು ಕಂಪನಿಗಳ 1,037 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರಿನ ಮೊಹಮ್ಮದ್ ಮಾಮದ್ ಪಾಷಾ, ಮೊಹಮದ್ ಉಮರ್, ಐಯಾನ್, ಮೊಹಮದ್ ಸಲೀಂ ಬಂಧಿತ ಆರೋಪಿಗಳು.

ಬನ್ನೇರುಘಟ್ಟದ ಎಎಂಸಿ ಕಾಲೇಜು ಬಳಿ ಆರೋಪಿಗಳು ಕದ್ದ ಮೊಬೈಲ್‌ಗಳನ್ನು ಮಾರಾಟ ಮಾಡುತ್ತಿರುವ ಕುರಿತು ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಪೊಲೀಸರು ಅವರನ್ನು ವಶಕ್ಕೆ ಪಡೆದು ವಿಚಾರ ನಡೆಸಿದರು. ಈ ವೇಳೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಮೆಜೆಸ್ಟಿಕ್, ಶಿವಾಜಿನಗರ, ಎಂ.ಜಿ.ರೋಡ್ ಮತ್ತಿತರ ಜನಸಂದಣಿಯ ಸ್ಥಳಗಳಲ್ಲಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಮೊಬೈಲ್ ಕದಿಯುತ್ತಿದ್ದ ಕಳ್ಳರ ಗುಂಪು ಆರೋಪಿ ಮಹಮದ್ ಮಾಮದ್ ಪಾಷಾನಿಗೆ ನೀಡುತ್ತಿತ್ತು.

ಎಂ.ಎಸ್.ಎಲ್ ಟೆಕ್ನೊ ಸಲ್ಯೂಷನ್ಸ್ ಮಳಿಗೆಯಲ್ಲಿ ನಡೆದಿದ್ದ ಅಕ್ರಮ

ನಕಲಿ ಗುರುತಿನ ಚೀಟಿ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಟಿ. ನಗರ ಬಳಿಯ ಕನಕನಗರದ ಸುಲ್ತಾನ್ ಪಾಳ್ಯ ಮುಖ್ಯ-ರಸ್ತೆಯಲ್ಲಿರುವ ಎಂ.ಎಸ್.ಎಲ್ ಟೆಕ್ನೊ ಸಲ್ಯೂಷನ್ಸ್ ಮಳಿಗೆಯಲ್ಲಿ ಪತ್ತೆಯಾಗಿದ್ದ ಮತದಾರರ 53 ಗುರುತಿನ ಚೀಟಿಗಳು ನಕಲಿ ಎಂಬುದಾಗಿ ಗೊತ್ತಾಗಿದ್ದು, ಮಳಿಗೆ ಮಾಲೀಕ ಮೌನೇಶ್ ಕುಮಾರ್ ಸೇರಿ ಮೂವರನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಿಸಿಬಿ ಪೊಲೀಸರು ನೀಡಿದ್ದ ದೂರು ಆಧರಿಸಿ ಅ. 19ರಂದು ಎಫ್‌ಐಆರ್ ದಾಖಲಿಸಿಕೊಂಡು ಮಳಿಗೆ ಮೇಲೆ ದಾಳಿ ಮಾಡಲಾಗಿತ್ತು. ಗುರುತಿನ ಚೀಟಿಗಳು, ಆಧಾರ್ ಹಾಗೂ ಇತರೆ ದಾಖಲೆಗಳನ್ನು ಜಪ್ತಿ ಮಾಡಲಾಗಿತ್ತು. ಮೌನೇಶ್‌ಕುಮಾರ್, ಕೃತ್ಯಕ್ಕೆ ಸಹಕರಿಸು-ತ್ತಿದ್ದ ಭಗತ್ ಹಾಗೂ ರಾಘವೇಂದ್ರನನ್ನು ವಿಚಾರಣೆ ನಡೆಸಿ ಬಿಟ್ಟು ಕಳುಹಿಸಲಾ-ಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಳಿಗೆಯಲ್ಲಿ ಸಿಕ್ಕಿದ್ದ ಮತದಾರರ ಗುರುತಿನ ಚೀಟಿಗಳ ನೈಜತೆ ಪರಿಶೀಲನೆಗಾಗಿ ಚುನಾವಣಾ

ಅಪರಾಧ ಸುದ್ದಿ

ಆಯೋಗಕ್ಕೆ ಪತ್ರ ಬರೆಲಾಗಿತ್ತು. ಇದೀಗ ವರದಿ ಬಂದಿದ್ದು, 53 ಗುರುತಿನ ಚೀಟಿಗಳು ನಕಲಿ ಎಂಬುದು ಗೊತ್ತಾಗಿದೆ. ಹೀಗಾಗಿ, ಮೌನೇಶ್‌ಕುಮಾರ್, ಭಗತ್ ಹಾಗೂ ರಾಘವೇಂದ್ರನನ್ನು ಬಂಧಿಸಲಾಗಿದೆ. ಸದ್ಯ ಮೂವರು ನ್ಯಾಯಾಂಗ ಬಂಧನ-ದಲ್ಲಿದ್ದಾರೆ' ಎಂದು ತಿಳಿಸಿವೆ.

ಗುರುತಿನ ಚೀಟಿ ಮಾರಾಟ: 'ಆರೋಪಿಗಳು ಹೊರ ರಾಜ್ಯ ಹಾಗೂ ಜಿಲ್ಲೆಗಳ ಹಲವರಿಂದ ಹಣ ಪಡೆದು ಮತದಾರರ ನಕಲಿ ಗುರುತಿನ ಚೀಟಿಗಳನ್ನು ತಯಾರಿಸಿ ಕೊಡುತ್ತಿದ್ದರು. ಇವನ್ನು ಬಳಸಿಕೊಂಡು ಹಲವರು, ಸರ್ಕಾರಿ ಸೌಲಭ್ಯ ಪಡೆಯುತ್ತಿದ್ದರು. ಕಂಪನಿಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳು-ತ್ತಿದ್ದರು. ಕೆಲವರು, ವೇಶ್ಯಾವಾಟಿಕೆ ದಂಧೆಯಲ್ಲೂ ತೊಡಗಿದ್ದರು' ಎಂದು ಮೂಲಗಳು ತಿಳಿಸಿವೆ.

'ಅಸಲಿ ಮತದಾರರ ಗುರುತಿನ ಚೀಟಿಗಳನ್ನು ಆರೋಪಿಗಳು ಕಂಪ್ಯೂ-ಟರ್‌ನಲ್ಲಿ ಸ್ಕ್ಯಾನ್ ಮಾಡಿಟ್ಟುಕೊಂಡಿ-ದ್ದರು. ಯಾರಾದರೂ ಗುರುತಿನ ಚೀಟಿ ಕೇಳಿದರೆ, ಫೋಟೊಶಾಪ್ ಮೂಲಕ ಬದಲಾವಣೆ ಮಾಡಿ ನಕಲಿ ಚೀಟಿ ನೀಡುತ್ತಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಹಲವರಿಗೆ ನೋಟಿಸ್: 'ಮತದಾರರ ನಕಲಿ ಗುರುತಿನ ಚೀಟಿಗಳಲ್ಲಿರುವ ಹೆಸರು ಹಾಗೂ ವಿಳಾಸಗಳ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ನಕಲಿ ಗುರುತಿನ ಚೀಟಿ ಪಡೆದಿದ್ದ ಕೆಲವರಿಗೆ ನೋಟಿಸ್ ನೀಡಲಾಗಿದ್ದು, ಅವರ ವಿಚಾರಣೆ ನಡೆಸಬೇಕಿದೆ' ಎಂದು ಹೇಳಿವೆ.

ಆಧಾರ್ ಅನುಮತಿ: 'ಆಧಾರ್ ನೋಂದಣಿ ಹಾಗೂ ತಿದ್ದುಪಡಿಗಾಗಿ ಆರೋಪಿಗಳು ಅನುಮತಿ ಪಡೆದಿರುವುದಾಗಿ ಗೊತ್ತಾಗಿದೆ. ಮಳಿಗೆಯಲ್ಲಿ ಸಿಕ್ಕಿರುವ ಆಧಾರ್‌ಗಳನ್ನು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರಕ್ಕೆ (ಯುಐಡಿಎಐ) ಪತ್ರ ಬರೆಯಲಾಗಿದೆ. ಅದಕ್ಕೆ ಪ್ರತಿಕ್ರಿಯೆ ಬರಬೇಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

₹ 5 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ; 10 ಮಂದಿ ಬಂಧನ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ 10 ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಇವರಿಂದ ₹ 5.04 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಡ್ರಗ್ಸ್ ಸಾಗಣೆ ಹಾಗೂ ಮಾರಾಟಕ್ಕೆ ಸಂಬಂಧಪಟ್ಟಂತೆ 10 ಮಂದಿಯನ್ನು ಬಂಧಿಸಲಾಗಿದೆ. ಇದರಲ್ಲಿ 9 ವಿದೇಶಿಯರು ಇದ್ದಾರೆ. 3 ಕೆ.ಜಿ 806 ಗ್ರಾಂ ಎಂಡಿಎಂಎ, 50 ಗ್ರಾಂ ಕೊಕೇನ್, 25 ಎಕ್ಸ್‌ಟೆಸಿ ಮಾತ್ರೆಗಳು, 50 ಎಲ್‌ಎಸ್‌ಡಿ ಕಾಗದ ಚೂರುಗಳು, 5 ಕೆ.ಜಿ 100 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಕಾಡುಗೋಡಿ, ಕೆ.ಆರ್.ಪುರ, ಸೋಲದೇವನಹಳ್ಳಿ, ಎಚ್‌ಎಸ್‌ಆರ್ ಲೇಔಟ್, ವೈಟ್‌ಫೀಲ್ಡ್, ಬಾಣಸವಾಡಿ ಹಾಗೂ ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು' ಎಂದು ತಿಳಿಸಿವೆ.

'ಆರೋಪಿಗಳು, ಹೊರ ರಾಜ್ಯ ಹಾಗೂ ಹೊರ ದೇಶಗಳಿಂದ ಡ್ರಗ್ಸ್ ತರಿಸಿ ನಗರದಲ್ಲಿ ಮಾರುತ್ತಿದ್ದರು. ಕೆಲ ಕಾಲೇಜುಗಳ ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು, ಕೆಲ ಕಾರ್ಮಿಕರು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು. ಆರೋಪಿಗಳು ಹಾಗೂ ಗ್ರಾಹಕರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಡಿವಿಎಸ್‌ಗೆ ಸಿಗದ ಜೆ.ಪಿ. ನಡ್ಡಾ

ಬೆಂಗಳೂರು: 'ದೆಹಲಿಯಲ್ಲಿ ಮೂರು ದಿನ ಇದ್ದರೂ ಪಕ್ಷದ ಅಧ್ಯಕ್ಷರ ಭೇಟಿ ಸಾಧ್ಯವಾಗಲಿಲ್ಲ. ಐದು ರಾಜ್ಯಗಳ ಚುನಾವಣೆಯ ಕಾರ್ಯದ ಒತ್ತಡವೇ ಇದಕ್ಕೆ ಕಾರಣ. ಅದಕ್ಕಾಗಿ ಬೇಸರ ಮಾಡಿಕೊಂಡಿಲ್ಲ' ಎಂದು ಸಂಸದ ಡಿ.ವಿ.ಸದಾನಂದಗೌಡ ಹೇಳಿದರು.

ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಕರೆಯ ಮೇರೆಗೆ ಭೇಟಿಯಾಗಲು ಸದಾನಂದಗೌಡ ದೆಹಲಿಗೆ ಬುಧವಾರವೇ ಹೋಗಿದ್ದರು. ಭೇಟಿ ಸಾಧ್ಯವಾಗದ ಕಾರಣ ಶುಕ್ರವಾರ ಅವರು ಬೆಂಗಳೂರಿಗೆ ವಾಪಸಾದರು.



'ಒಂದು ದಿನ ಉಳಿಯಲು ನಡ್ಡಾ ಸೂಚಿಸಿದ್ದರು. ಆದರೆ, ಇವತ್ತು ಪಕ್ಷದ ಕೆಲಸದ ಮೇಲೆ ತಮಿಳುನಾಡಿಗೆ ಹೋಗಬೇ-ಕಾಗಿದ್ದರಿಂದ ದೆಹಲಿಯಿಂದ ವಾಪಸ್ ಬಂದೆ. ನಾವು ಪಕ್ಷದ ವ್ಯವಸ್ಥೆಗೆ ಪೂರಕವಾಗಿರಬೇಕು. ಇದನ್ನು ನಕಾರಾತ್ಮಕ ದೃಷ್ಟಿಯಿಂದ ನೋಡಬೇಕಾಗಿಲ್ಲ' ಎಂದು ಅವರು ಹೇಳಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಸರ್ಕಾರದಿಂದ ರೈತರಿಗೆ ಯಾವುದೇ ನೆರವು ಸಿಗುತ್ತಿಲ್ಲ. ವಿರೋಧಿ ಪಕ್ಷಗಳ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದೆ. ಕಾಂಗ್ರೆಸ್‌ನಲ್ಲಿ ಆಂತರಿಕ ಕಚ್ಚಾಟ ಆರಂಭವಾಗಿದೆ. ಶಾಮನೂರು ಶಿವಶಂಕರಪ್ಪ ಅವರ ಒಂದು ಗುಂಪು, ಸತೀಶ ಜಾರಕಿಹೊಳಿಯ-ವರದ್ದು ಮತ್ತೊಂದು ಗುಂಪು. ಈ ಕಚ್ಚಾಟದಲ್ಲಿ ಆಡಳಿತ ಯಂತ್ರವೇ ಸ್ಥಗಿತಗೊಂಡಿದೆ' ಎಂದರು.

'ಎಚ್‌.ಡಿ.ಕೆ ಹೇಳಿದ್ದೆಲ್ಲ ಸತ್ಯವಲ್ಲ'

ಬೆಂಗಳೂರು: 'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದೆಲ್ಲವೂ ಸತ್ಯವಲ್ಲ. ಅವರು ಹೇಳಿದ್ದಕ್ಕೆಲ್ಲ ಉತ್ತರ ಕೊಡಲಾಗದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಸಮ್ಮಿಶ್ರ ಸರ್ಕಾರ ಪತನಕ್ಕೂ ಮೊದಲು ಪರಮೇಶ್ವರ ಮನೆಯಲ್ಲಿ ಚರ್ಚೆ ನಡೆದಿತ್ತು' ಎಂಬ ಕುಮಾರಸ್ವಾಮಿ ಆರೋಪದ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಸಚಿವರು, 'ಅಂತಹ ಯಾವುದೇ ಸಭೆ, ಚರ್ಚೆ ನಮ್ಮ ಮನೆಯಲ್ಲಿ ನಡೆದಿರಲಿಲ್ಲ. ಶಾಸಕರು ಬಂದು, ಹೋಗುತ್ತಾರೆ. ಕುಮಾರಸ್ವಾಮಿ ಆಧಾರರಹಿತ ಆರೋಪ ಮಾಡಿದ್ದಾರೆ' ಎಂದರು.

'ಕುಮಾರಸ್ವಾಮಿ ಆರೋಪ ಮಾಡುತ್ತಲೇ ಇರುತ್ತಾರೆ. ಅವರ ಹೇಳಿಕೆಗಳಿಗೆ ಜನರು ಉತ್ತರ ಕೊಟ್ಟಿದ್ದಾರೆ. ನಮ್ಮ ಅಹವಾಲುಗಳಿಗೂ ಜನರು ಉತ್ತರ ನೀಡಿದ್ದಾರೆ. ಅಷ್ಟನ್ನು ಅರ್ಥ ಮಾಡಿಕೊಂಡರೆ ಸಾಕು' ಎಂದು ಹೇಳಿದರು.

'ಬಿಟ್ ಕಾಯಿನ್ ಹಗರಣದ ತನಿಖೆ ಹೆಸರಿನಲ್ಲಿ ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದೆ' ಎಂಬ ಕುಮಾರಸ್ವಾಮಿ ಆರೋಪ ಕುರಿತು ಕೇಳಿದಾಗ, 'ಅಂತಹ ಪ್ರಕರಣ ನನ್ನ ಗಮನಕ್ಕೆ ಬಂದಿಲ್ಲ. ಅತ್ಯಂತ ಸೂಕ್ಷ್ಮವಾಗಿ ಕೆಲಸ ಮಾಡುವಂತೆ ತನಿಖಾ ತಂಡದಲ್ಲಿರುವ ಎಲ್ಲರಿಗೂ ಎಚ್ಚರಿಕೆ ನೀಡಲಾಗಿದೆ. ಅಷ್ಟಾಗಿಯೂ ಯಾರಾದರೂ ದೂರವಾಣಿ ಕದ್ದಾಲಿಕೆಯಂತಹ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಕ್ರಮ ಜರುಗಿಸಲಾಗುವುದು' ಎಂದರು.

ಅರ್ಚಕರ ಬಂಧನ: ಬ್ರಾಹ್ಮಣ ಮಹಾಸಭಾ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಲಿ ಉಗುರಿನ ಲಾಕೆಟ್ ಹೊಂದಿದ್ದ ಆರೋಪದಡಿ ಚಿಕ್ಕಮಗಳೂರು ತಾಲ್ಲೂಕಿನ ಖಾಂಡ್ಯ ಮಾರ್ಕಂಡೇಶ್ವರ ದೇವಸ್ಥಾನದ ಇಬ್ಬರು ಅರ್ಚಕರನ್ನು ಬಂಧಿಸಿರುವುದು ಅತ್ಯಂತ ಖಂಡನೀಯ. ಅರ್ಚಕರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಬಗ್ಗೆ ನಾಗರಿಕರಿಗೆ ತಿಳಿವಳಿಕೆ ನೀಡದೇ ನೇರವಾಗಿ ಬಂಧಿಸುವುದು ಸೂಕ್ತವಲ್ಲ. ಈ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳುವಾಗ ಆಯಾ ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಅಪರಾಧ ಎಸಗಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ ಎಂದು ಮಹಾಸ-ಭಾಧ್ಯಕ್ಷ ಅಶೋಕ ಹಾರನಹಳ್ಳಿ ತಿಳಿಸಿದ್ದಾರೆ.

ವನ್ಯಜೀವಿಗಳಿಂದ ತಯಾರಿಸಿದ ಪದಾರ್ಥಗಳನ್ನು ಎಲ್ಲ ಧರ್ಮೀಯರೂ ಬಹಳ ವರ್ಷಗಳಿಂದ ಮಠ, ಮಂದಿರಗಳಲ್ಲಿ ಉಪಯೋಗಿಸುತ್ತಿದ್ದಾರೆ. ಸನ್ಯಾಸಿಗಳು ಶತಮಾನಗಳಿಂದ ಕೃಷ್ಣಾಜಿನ(ಜಿಂಕೆಯ ಚರ್ಮ) ಬಳಕೆ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರ ಸಮುದಾ-ಯಗಳಲ್ಲೂ ನವಿಲುಗರಿಯನ್ನು ಉಪಯೋಗಿಸುವುದು ರೂಢಿಯಲ್ಲಿದೆ. ಮೊಕದ್ದಮೆ ದಾಖಲಿಸಬೇಕಾದ ಸಂದರ್ಭ ಎದುರಾದರೂ ಅವರನ್ನು ಬಂಧಿಸುವ ಅವಶ್ಯಕತೆ ಇಲ್ಲ. ಏಕೆಂದರೆ ಆ ವ್ಯಕ್ತಿಗಳಿಗೆ ಅಪರಾಧ ಹಿನ್ನೆಲೆ ಇರುವುದಿಲ್ಲ. ತಪ್ಪಿಸಿಕೊಂಡು ಹೋಗುವ ಸಾಧ್ಯತೆಯೂ ಇರುವುದಿಲ್ಲ ಎಂದು ಅವರು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಅರ್ನೇಶ್‌ಕುಮಾರ್ ಮತ್ತು ಬಿಹಾರ ರಾಜ್ಯದ ಮೊಕದ್ದಮೆಯಲ್ಲಿ ಈ ರೀತಿಯ ಅನವಶ್ಯಕವಾಗಿ ಬಂಧಿಸುವುದನ್ನು ಖಂಡಿಸಲಾಗಿದೆ. ಸರ್ಕಾರವು ಒಂದು ಮಧ್ಯಮ ಮಾರ್ಗ ಅನುಸರಿಸಬೇಕು. ವನ್ಯಜೀವಿಗಳಿಂದ ತಯಾರಿಸಿದ ಪದಾರ್ಥಗಳು ಯಾರ ಬಳಿಯಿದ್ದರೂ ಸಹ ಮುಂದೆ ನಿಗದಿಪಡಿಸುವ ಅವಧಿ ಒಳಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಬೇಕು ಹಾಗೂ ಸ್ವಇಚ್ಛೆಯಿಂದ ಮಾಹಿತಿ ನೀಡಿದಲ್ಲಿ ಅಂತವರ ಮೇಲೆ ಯಾವುದೇ ಕ್ರಮ ಜರುಗಿಸಬಾರದು ಎಂದು ತಿಳಿಸಿದ್ದಾರೆ.

ಹಾರ್ನ್ ಮಾಡಿದ ಕಾರಣಕ್ಕೆ ಬೆದರಿಕೆ

ಯಲಹಂಕ ನ್ಯೂಟೌನ್ ಪೊಲೀಸರಿಂದ ಆ್ಯಡಂ ಬಿದ್ದಪ್ಪ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ದಾರಿ ಬಿಡುವಂತೆ ಹಾರ್ನ್ ಮಾಡಿದರೆಂಬ ಕಾರಣಕ್ಕೆ ಕಾರು ಅಡ್ಡಗಟ್ಟಿ ದುರ್ವರ್ತನೆ ತೋರಿದ್ದ ಆರೋಪದಡಿ ಆ್ಯಡಂ ಬಿದ್ದಪ್ಪ ಅವರನ್ನು ಬಂಧಿಸಿದ್ದ ಯಲಹಂಕ ನ್ಯೂ ಟೌನ್ ಠಾಣೆ ಪೊಲೀಸರು, ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಿದ್ದಾರೆ.

'ಅ. 25ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಸಂತ್ರಸ್ತ ರಾಹುಲ್ ಅವರು ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಂಡು, ಆ್ಯಡಂನನ್ನು ಬಂಧಿಸಲಾಗಿತ್ತು. ಹೇಳಿಕೆ ಪಡೆದು ಠಾಣೆ ಜಾಮೀನು ಮೇಲೆ ಬಿಟ್ಟು ಕಳುಹಿಸಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಬಿ.ಎಂ. ಲಕ್ಷ್ಮಿಪ್ರಸಾದ್ ಹೇಳಿದರು.

ಘಟನೆ ವಿವರ: 'ವಸ್ತ್ರ ವಿನ್ಯಾಸಕ ಪ್ರಸಾದ್ ಬಿದ್ದಪ್ಪ ಮಗ ಆ್ಯಡಂ, ಪಾನಮತ್ತರಾಗಿ ಅತೀ ವೇಗದಲ್ಲಿ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿಕೊಂಡು ಹೊರಟಿದ್ದ. ಹಿಂದೆಯೇ ಕಾರಿನಲ್ಲಿ ಬರುತ್ತಿದ್ದ ರಾಹುಲ್, ದಾರಿ ಬಿಡುವಂತೆ ಹಾರ್ನ್ ಮಾಡಿದ್ದರು.



ಘಟನಾ ಸ್ಥಳಕ್ಕೆ ಹೋಗಿದ್ದ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಅವರು ಆ್ಯಡಂ ಬಿದ್ದಪ್ಪ ಅವರನ್ನು ವಶಕ್ಕೆ ಪಡೆದರು

'ಅಶ್ಲೀಲ ಸಂದೇಶ ಕಳುಹಿಸಿ ಸಿಕ್ಕಿಬಿದ್ದಿದ್ದ'

'ನಟಿ ಸಂಜನಾ ಗಲ್ರಾನಿ ಅವರಿಗೆ ಅಶ್ಲೀಲ ಸಂದೇಶ ಕಳುಹಿಸಿದ್ದ ಆರೋಪದಡಿ ಆ್ಯಡಂ ಬಿದ್ದಪ್ಪನನ್ನು ಇಂದಿರಾನಗರ ಠಾಣೆ ಪೊಲೀಸರು ಕೆಲ ತಿಂಗಳ ಹಿಂದೆಯಷ್ಟೇ ಬಂಧಿಸಿದ್ದರು. ಈ ಪ್ರಕರಣದಲ್ಲಿ ಜಾಮೀನು ಪಡೆದು ಆ್ಯಡಂ ಹೊರಗೆ ಬಂದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆದರೆ, ಆರಂಭದಲ್ಲಿ ದಾರಿ ಬಿಟ್ಟಿರಲಿಲ್ಲ. ರಾಹುಲ್ ಅವರೇ ಸ್ವಲ್ಪ ದೂರದವರೆಗೆ ಕಾರು ಚಲಾಯಿಸಿ ಆ್ಯಡಂ ಕಾರು ಹಿಂದಿಕ್ಕಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮತ್ತಷ್ಟು ವೇಗವಾಗಿ ಕಾರು ಚಲಾಯಿಸಿದ್ದ ಆ್ಯಡಂ, ಯಲಹಂಕದ ರೈಲ್ವೆ ಅಚ್ಚು ಮತ್ತು ಗಾಲಿ ಕಾರ್ಖಾನೆ ಬಳಿ ರಾಹುಲ್ ಅವರ ಕಾರು ಅಡ್ಡಗಟ್ಟಿದ್ದ ಆ್ಯಡಂ, ಅವರನ್ನು ಬೆದರಿಸಿದ್ದ. ಹೆದರಿದ್ದ ರಾಹುಲ್, ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರ ಜೊತೆಗೂ ಆ್ಯಡಂ ಗಲಾಟೆ ಮಾಡಿ ದುರ್ವರ್ತನೆ ತೋರಿದ್ದ. ನಂತರ, ಸಿಬ್ಬಂದಿ ಆ್ಯಡಂನನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು' ಎಂದು ಮೂಲಗಳು ಹೇಳಿವೆ.

ಪಾನಮತ್ತ ಚಾಲನೆ ಪ್ರಕರಣ: 'ಆ್ಯಡಂ ಬಿದ್ದಪ್ಪ ಮದ್ಯ ಕುಡಿದು ಕಾರು ಚಲಾಯಿಸುತ್ತಿದ್ದ ಆರೋಪವಿತ್ತು. ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಮದ್ಯದ ಅಂಶ ಪತ್ತೆಯಾಯಿತು. ಪಾನಮತ್ತ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗಿದೆ. ಕಾರು ಜಪ್ತಿ ಮಾಡಲಾಗಿದೆ' ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

'ಅತೀ ವೇಗದ ಚಾಲನೆ ಹಾಗೂ ಜೀವ ಬೆದರಿಕೆ ಆರೋಪದಡಿ ಆ್ಯಡಂ ವಿರುದ್ಧ ಯಲಹಂಕ ನ್ಯೂ ಟೌನ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ' ಎಂದು ಹೇಳಿದರು.

ಪ್ರತಿಭಟನೆಗೆ ಅವಕಾಶ ನಿರಾಕರಣೆ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್ ಭಾಗದಲ್ಲಿ ಶಾಂತಿ ನೆಲೆಸುವಂತೆ ಕೋರಿ, ರಾಜ್ಯದ ಹಲವು ಸ್ಥಳಗಳಲ್ಲಿ ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆಗಳನ್ನು ರಾಜ್ಯ ಸರ್ಕಾರ ಹತ್ತಿಕ್ಕುತ್ತಿದೆ ಎಂದು ಆರೋಪಿಸಿರುವ 'ನ್ಯಾಯ ಹಾಗೂ ಶಾಂತಿಗಾಗಿ ಬೆಂಗಳೂರು' ಸಂಘಟನೆ ಮುಖಂಡರು, ಪ್ರತಿಭಟನೆಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಪ್ಯಾಲೆಸ್ಟೀನ್‌ನಲ್ಲಿ ನಡೆಯುತ್ತಿರುವ ನರಮೇಧ ವಿರೋಧಿಸಿ ಪ್ರತಿಭಟನೆ ನಡೆಸಿದ್ದವರ ವಿರುದ್ಧ ದಾಖಲಾಗಿರುವ ಎಲ್ಲ ಎಫ್‌ಐಆರ್‌ಗಳನ್ನೂ ಕೂಡಲೇ ರದ್ದುಗೊಳಿಸಬೇಕು. ಪ್ಯಾಲೆಸ್ಟೀನ್ ಪರವಾಗಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದರೂ ಯಾವ ಕಾರಣಕ್ಕೆ ಪ್ರಕರಣ ದಾಖಲಿಸಲಾಗಿದೆ ಎಂಬುದರ ಕುರಿತು ತನಿಖೆ ನಡೆಸಬೇಕು ಎಂದು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಫಾರ್ ಟ್ರೇಡ್ ಯೂನಿಯನ್‌ನ ಕೆ.ಮೈತ್ರೇಯಿ ಹಾಗೂ ಸ್ವರಾಜ್ ಇಂಡಿಯಾದ ಗುಲಾಬ್ ಪಾಷಾ ಒತ್ತಾಯಿಸಿದ್ದಾರೆ.

ಇಸ್ರೇಲ್ ಕಡೆಯಿಂದ ಜನಸಾಮಾನ್ಯರ ಮೇಲೆ ದಾಳಿ ನಡೆಯುತ್ತಿದೆ. ಪ್ಯಾಲೆಸ್ಟೀನ್ ಜನರ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ ಎಂದು ಆತಂಕ ವ್ಯಕ್ತಪ-ಡಿಸಿದ್ದಾರೆ. ಆಸ್ಪತ್ರೆ, ಶಾಲೆ ಹಾಗೂ ಧಾರ್ಮಿಕ ಸಂಸ್ಥೆಗಳ ಮೇಲೆ ಬಾಂಬ್ ದಾಳಿಗೆ ಒಳಗಾಗಿವೆ. ಪ್ಯಾಲೆಸ್ಟೀನ್ ಆರೋಗ್ಯ ಸಚಿವಾಲಯದ ಮಾಹಿತಿ ಪ್ರಕಾರ 2,360 ಮಕ್ಕಳೂ ಒಳಗೊಂಡಂತೆ 5,791 ಮಂದಿ ಮೃತಪಟ್ಟಿದ್ದಾರೆ. ಪ್ಯಾಲೆಸ್ಟೀನ್‌ನಲ್ಲಿ ನರಮೇಧ ನಡೆಯುತ್ತಿರಬೇಕಾದರೆ ಅದನ್ನು ವಿರೋಧಿಸಿ, ನ್ಯಾಯ ಕೇಳುವುದು ನಮ್ಮೆಲ್ಲರ ಕರ್ತವ್ಯ. ಆದರೆ, ಅದಕ್ಕೆ ರಾಜ್ಯದಲ್ಲಿ ಅವಕಾಶ ಸಿಗುತ್ತಿಲ್ಲ ಎಂದು ದೂರಿದ್ದಾರೆ.

ಇದೇ 28ಕ್ಕೆ ಹಮ್ಮಿಕೊಂಡಿದ್ದ ಪ್ರತಿಭಟನೆಗೂ ಅನುಮತಿ ನಿರಾಕರಿ-ಸಲಾಗಿದೆ ಎಂದೂ ದೂರಿದ್ದಾರೆ.

ವಾಕ್ ಸ್ವಾತಂತ್ರ್ಯದ ಹಕ್ಕು ಕೇವಲ ನಮ್ಮ ದೇಶದ ವಿಷಯಗಳ ಬಗ್ಗೆ ಚಲಾಯಿಸಬೇಕು ಎಂಬುದು ಎಷ್ಟು ಸರಿ. ಶಾಂತಿಯುತ ಪ್ರತಿಭಟನೆಯಿಂದ ಕಾನೂನು ಸುವ್ಯವಸ್ಥೆಗೆ ಯಾವ ರೀತಿಯಲ್ಲಿ ಧಕ್ಕೆ ಆಗುತ್ತದೆ ಎಂದು ಹೇಳಲು ಯಾವುದೇ ಆಧಾರ ಇಲ್ಲ ಎಂದು ಹೋರಾಟಗಾರರಾದ ಐಶ್ವರ್ಯ ರವಿಕುಮಾರ್, ಟಿ.ನರಸಿಂಹ ಮೂರ್ತಿ, ಸೈಯದ್ ತೌಸಿಫ್ ಮಸೂದ್ ಮನವಿಯಲ್ಲಿ ತಿಳಿಸಿದ್ದಾರೆ.



'ಇಪಿಎಸ್– 95 ಪಿಂಚಣಿದಾರರಿಗೆ ಮಾಸಿಕ ಕನಿಷ್ಠ ₹ 7,500 ಪಿಂಚಣಿ ನೀಡಬೇಕು ಹಾಗೂ ವೈದ್ಯಕೀಯ ಸೌಲಭ್ಯ–ಇಪಿಎಸ್ ಕಾಯ್ದೆಯಡಿ ಬರುವ ನಿವೃತ್ತರಿಗೆ ಮಾಸಿಕ ₹ 5,000 ಪರಿಹಾರ ನೀಡಬೇಕು' ಎಂದು ಆಗ್ರಹಿಸಿ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು, ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆ

'ವಿಶೇಷ ಕಮಿಷನರ್ ನೇಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ದಟ್ಟಣೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಗರ ಸಂಚಾರ ವಿಭಾಗಕ್ಕೆ ವಿಶೇಷ ಕಮಿಷನರ್ ನೇಮಿಸಬೇಕು ಎಂದು ಆಮ್ ಆದ್ಮಿ ಪಕ್ಷ ಆಗ್ರಹಿಸಿದೆ.

ಎಂ.ಎ.ಸಲೀಂ ಅವರು ವಿಶೇಷ ಕಮಿಷನರ್ ಆಗಿದ್ದಾಗ ವಾಹನ ದಟ್ಟಣೆಯ ಸಮಸ್ಯೆ ಸ್ವಲ್ಪ ಸುಧಾರಣೆ ಕಂಡಿತ್ತು. ಅವರು ವರ್ಗಾವಣೆಯಾದ ಮೇಲೆ ಆ ಹುದ್ದೆಗೆ ಯಾರನ್ನೂ ಇದುವರೆಗೂ ನೇಮಿಸಿಲ್ಲ. ಆ ಹುದ್ದೆಗೆ ದಕ್ಷ ಅಧಿಕಾರಿಯನ್ನು ನೇಮಿಸಬೇಕು ಎಂದು ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಆಗ್ರಹಿಸಿದರು.

ನಗರದಲ್ಲಿ ಸಂಚಾರ, ಮಾಲಿನ್ಯ ನಿಯಂತ್ರಣದ ದೃಷ್ಟಿಯಲ್ಲಿ ದೆಹಲಿ ಮಾದರಿಯಲ್ಲಿ ಪ್ರೀಮಿಯಂ ಬಸ್‌ಗಳ ಸಂಚಾರವನ್ನು ಬೆಂಗಳೂರಿನಲ್ಲೂ ಆರಂಭಿಸಬೇಕು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸರ್ಕಾರವು 'ಪ್ರೀಮಿಯಂ ಬಸ್ ಅಗ್ರಿಗೇಟರ್ ಪಾಲಿಸಿ–2023'ಕ್ಕೆ ಅನುಮೋದನೆ ನೀಡಿದೆ. ಈ ಮೂಲಕ ಬಡತನ ರೇಖೆಗಿಂತ ಮೇಲಿರುವ ಮಧ್ಯಮ ವರ್ಗ ಹಾಗೂ ಶ್ರೀಮಂತ ವರ್ಗದವರನ್ನು ಬಸ್‌ಗಳಲ್ಲಿ ಸಂಚರಿಸುವಂತೆ ಉತ್ತೇಜನ ನೀಡುವ ಸಲುವಾಗಿ 'ಆ್ಯಪ್' ಆಧಾರಿತ ಆನ್‌ಲೈನ್ ಬಸ್ ಸೇವೆ ಯೋಜನೆ ಆರಂಭಿಸುತ್ತಿದೆ. ಇ-ವಾಹನಗಳ ಬಳಕೆಗೆ ಉತ್ತೇಜನ ನೀಡುತ್ತಿದೆ. ರಾಜ್ಯಪಾಲರ ಅನುಮೋದನೆ ಸಿಗುತ್ತಿದ್ದಂತೆ ಪ್ರೀಮಿಯಂ ಬಸ್ ಸೇವೆಗೆ ಚಾಲನೆ ಸಿಗಲಿದೆ ಎಂದು ನಗರದಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿ-ಸಿದರು.

ಎ.ಸಿ, ವೈ-ಫೈ, ಜಿಪಿಎಸ್, ಸಿಸಿ ಕ್ಯಾಮೆರಾ ಟಿ.ವಿ ವ್ಯವಸ್ಥೆ ಒಳಗೊಂಡ ಆಧುನಿಕ ಬಸ್‌ಗಳು ಸಂಚಾರ ಆರಂಭಿಸಿದರೆ ಸ್ವಂತ ಕಾರುಗಳನ್ನು ಬಿಟ್ಟು ಬಸ್‌ಗಳಲ್ಲೇ ಸಂಚರಿಸಲು ಆರಂಭಿಸುತ್ತಾರೆ. ಈ ಮೂಲಕ ಸಂಚಾರ ದಟ್ಟಣೆ, ವಾಯು ಮಾಲಿನ್ಯದಂತಹ ಪ್ರಮುಖ ಸಮಸ್ಯೆ ಹತೋಟಿಗೆ ತರಬಹುದು. ಪ್ರೀಮಿಯಂ ಬಸ್‌ಗಳಲ್ಲಿ ಆನ್‌ಲೈನ್ ಮೂಲಕ ಸೀಟು ಕಾಯ್ದಿರಿಸುವುದು, ಹಣ ಪಾವತಿ ಅವಕಾಶ ಇದೆ. ನಿಂತು ಪ್ರಯಾ-ಣಿಸುವುದಕ್ಕೆ ಅವಕಾಶ ಇರುವುದಿಲ್ಲ. ಎಲ್ಲರಿಗೂ ಆಸನದ ಸಿಗಲಿದೆ. ಬಸ್ ಒಳಗೆ ಟಿಕೆಟ್ ಹರಿಯುವ ಸಂಪ್ರದಾಯ ಇರುವುದಿಲ್ಲ. ನೂಕುನುಗ್ಗಲು, ಅನವಶ್ಯಕ ಗದ್ದಲ ಇರುವುದಿಲ್ಲ ಎಂದು ಹೇಳಿದರು.

ಬೆಂಗಳೂರಿನ ಸಂಚಾರ ದಟ್ಟಣೆ ನಿಯಂತ್ರಿಸಲು 190 ಕಿ.ಮೀ ಉದ್ದದ ಸುರಂಗ ಮಾರ್ಗ ಕೊರೆಯಲು ಡಿ.ಕೆ. ಶಿವಕುಮಾರ್ ಅವರು ಮುಂದಾಗಿದ್ದಾರೆ. ಇಂತಹ ಅಪಾಯಕಾರಿ, ಅವೈಜ್ಞಾನಿಕ ಯೋಜನೆಗಳಿಗೆ ಕೈಹಾಕುವ ಬದಲು ದೆಹಲಿ ಸರ್ಕಾರದ ಮಾದರಿ ಯೋಜನೆಗಳನ್ನು ರಾಜ್ಯದಲ್ಲೂ ಅನುಷ್ಠಾನಕ್ಕೆ ತರುವುದು ಉತ್ತಮ ಎಂದು ಹೇಳಿದರು.

ಬಾಹ್ಯಾಕಾಶ ವಿಜ್ಞಾನ–ತಂತ್ರಜ್ಞಾನ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಅಂತರ್‌ಶಿಸ್ತೀಯ ಕಲಿಕೆಗಾಗಿ ಇಲ್ಲಿನ ದಯಾನಂದ ಸಾಗರ್ ವಿಶ್ವವಿದ್ಯಾಲಯ-ದಲ್ಲಿ ಇಸ್ರೊ ಸಹಕಾರದಲ್ಲಿ 'ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ' ಆರಂಭಿಸಲಾಯಿತು.

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ವಿಜ್ಞಾನದ ವಿದ್ಯಾರ್ಥಿಗಳು ಬಾಹ್ಯಾಕಾಶ ವ್ಯವಸ್ಥೆಯ ಬಗ್ಗೆ ತಿಳಿಯಲು, ಪರೀಕ್ಷಿಸಲು, ಸಂಶೋಧನೆ ನಡೆಸಲು ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಉಪಯೋಗವಾಗಲಿದೆ.

ಅತ್ಯಾಧುನಿಕ ಕ್ಲೀನ್‌ರೂಂ, ಸಮಗ್ರ ಮೆಕ್ಯಾನಿಕಲ್ ಲ್ಯಾಬ್, ಪರೀಕ್ಷಾ ವಲಯ ಸಹಿತ ಎಲ್ಲ ಸೌಲಭ್ಯಗಳನ್ನು ಕೇಂದ್ರದಲ್ಲಿ ಕಲ್ಪಿಸಲಾಗಿದೆ. ವಿನ್ಯಾಸ, ತಂತ್ರಜ್ಞಾನ, ನವೀನ ಪೇಲೋಡ್‌ಗಳ (ಸಾಧನ) ಅಭಿವೃದ್ಧಿಯ ಪ್ರವರ್ತ-ಕಗಳು ಸೇರಿದಂತೆ ವಿದ್ಯಾರ್ಥಿಗಳ ಸಂಶೋಧನೆಗೆ ಬೇಕಾದ ಸೌಕರ್ಯಗಳಿವೆ. ಹ್ಯಾಕಥಾನ್, ನವೀನ ಪೇಲೋಡ್ ಕಲ್ಪನೆ, ಇತರ ಬಾಹ್ಯಾಕಾಶ ತಂತ್ರಜ್ಞಾನಗಳ ಸಮಸ್ಯೆಗಳ ಬಗ್ಗೆಯೂ ಕೌಶಲ ಅಭಿವೃದ್ಧಿ ಪಡಿಸಲು ಸಹಾಯ ಮಾಡುವ ಸ್ಪರ್ಧೆಗಳು ಇರುತ್ತವೆ. ವಿಮರ್ಶಾತ್ಮಕ ಮತ್ತು ಸೃಜನಶೀಲ ಚಿಂತನೆಗಳ ಮೂಲಕ ಪರಿಹಾರ ಕಂಡುಕೊಳ್ಳಲು ಕೇಂದ್ರ ಸಹಾಯ ಮಾಡಲಿದೆ.



ದಯಾನಂದ ಸಾಗರ್ ವಿಶ್ವವಿದ್ಯಾಲಯದಲ್ಲಿ ಆರಂಭವಾದ 'ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ'ವನ್ನು ಚೆನ್ನೈ ಎಂಜಿಆರ್ ಶೈಕ್ಷಣಿಕ ಮತ್ತು ಸಂಶೋಧನಾ ವಿದ್ಯಾಲಯದ ಕುಲಾಧಿಪತಿ ಆರ್.ಎಂ. ವಾಸಗಂ ಉದ್ಘಾಟಿಸಿದರು. ದಯಾನಂದ ಸಾಗರ ವಿಶ್ವವಿದ್ಯಾಲಯದ(ಡಿಎಸ್‌ಯು) ಸಹ ಕುಲಾಧಿಪತಿ ಡಾ. ಡಿ. ಪ್ರೇಮಚಂದ್ರ ಸಾಗರ್, ಆಡಳಿತ ಮಂಡಳಿ ಸದಸ್ಯ ರೋಹನ್ ಪ್ರೇಮ್ ಸಾಗರ್, ಡಿಎಸ್‌ಯು ಕುಲಪತಿ ಡಾ.ಕೆ.ಎನ್.ಬಿ. ಮೂರ್ತಿ ಇದ್ದಾರೆ

ಉದ್ಘಾಟನಾ ಕಾರ್ಯಕ್ರಮದಲ್ಲಿ ಚೆನ್ನೈ ಎಂಜಿಆರ್ ಶೈಕ್ಷಣಿಕ ಮತ್ತು ಸಂಶೋಧನಾ ವಿದ್ಯಾಲಯದ ಕುಲಾಧಿಪತಿ ಆರ್.ಎಂ. ವಾಸಗಂ, ದಯಾನಂದ ಸಾಗರ್ ವಿಶ್ವವಿದ್ಯಾ-ಲಯದ ಸಹ ಕುಲಾಧಿಪತಿ ಡಿ. ಪ್ರೇಮಚಂದ್ರ ಸಾಗರ್, ಕುಲಪತಿ ಕೆ.ಎನ್.ಬಿ. ಮೂರ್ತಿ, ಆಡಳಿತ ಮಂಡಳಿ ಸದಸ್ಯ ರೋಹನ್ ಪ್ರೇಮ್ ಸಾಗರ್ ಇದ್ದರು.

ಶಾಸಕ ಪೂಂಜ ವಿರುದ್ಧ ಪ್ರಕರಣ

ಬೆಳ್ತಂಗಡಿ: 'ಫೇಸ್‌ಬುಕ್ ಪೇಜ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಅವಹೇಳನ-ಕಾರಿಯಾಗಿ ಪೋಸ್ಟ್ ಮಾಡಿದ್ದಾರೆ' ಎಂದು ಆರೋಪಿಸಿ ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಿದ್ದರಾಮಯ್ಯ ಅವರು ಕಚೇರಿಯಲ್ಲಿ ಕುಳಿತಿರುವ ಟೇಬಲ್ ಮುಂಭಾಗ ಹಾಗೂ ಅವರ ಬೆಂಗಳೂರಿನ ಸಿ.ಎಂ. ನಿವಾಸದ ಗೇಟ್‌ನ ಮೇಲೆ 'ಕಲೆಕ್ಷನ್ ಮಾಸ್ಟರ್ (ಸಿ.ಎಂ) ಆಫ್ ಕರ್ನಾಟಕ' ಎಂದು ಬರೆದು ಹಸ್ತದ ಗುರುತನ್ನು ತಲೆ ಕೆಳಗೆ ಮಾಡಿ ಆ ಫೋಟೊಗಳನ್ನು ಫೇಸ್‌ಬುಕ್‌ನಲ್ಲಿ ಹಾಕಿದ್ದರು.

ಬಡ್ತಿಗೆ ಸಲ್ಲಿಸಿದ್ದ ಜಾತಿ ಪ್ರಮಾಣ ಪತ್ರ ಅಸಿಂಧು

ದಾಬಸ್ ಪೇಟೆ: ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಉಪನ್ಯಾಸಕಿ ಡಾ. ಸುಜಾ ಕೆ.ಶ್ರೀಧರ್ ಅವರು ಬಡ್ತಿ ಪಡೆಯಲು ಸಲ್ಲಿಸಿದ್ದ 'ಆದಿ ದ್ರಾವಿಡ' ಜಾತಿ ಪ್ರಮಾಣ ಪತ್ರವನ್ನು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯವು ಅಸಿಂಧುಗೊಳಿಸಿದೆ. ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸೂಚನೆ ನೀಡಿದೆ.

ನೆಲಮಂಗಲದ ಮಾಜಿ ಶಾಸಕ ಕೆ. ಶ್ರೀನಿವಾಸಮೂರ್ತಿ ಅವರ ಪತ್ನಿ ಸುಜಾ ಕೆ. ಶ್ರೀಧರ್ ಆರೋಪಿ.

ಸುಜಾ ಕೆ. ಶ್ರೀಧರ್ ಅವರು ಕೇರಳ-ದವರಾಗಿದ್ದು, ಈಳವ ಸಮುದಾಯಕ್ಕೆ ಸೇರಿದವರು. ಬಡ್ತಿಗಾಗಿ ತನ್ನ ಜಾತಿಯ ಬದಲು ಪತಿಯ ಜಾತಿಯ ಹೆಸರಲ್ಲಿ ಪ್ರಮಾಣ ಪತ್ರ ಸಲ್ಲಿಸಿದ್ದರು.

ಈ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು ತನಿಖೆ ನಡೆಸಿತ್ತು. ಸುಳ್ಳು ಪ್ರಮಾಣ ಪತ್ರ ಎಂಬುದು ಸಾಬೀ-ತಾಗಿದ್ದರಿಂದ ಆ ಪ್ರಮಾಣಪತ್ರವನ್ನು ಅಸಿಂಧುಗೊಳಿಸಲಾಗಿದೆ.

ಲೈಂಗಿಕ ಕಿರುಕುಳ, ಜಾತಿ ನಿಂದನೆ ಆರೋಪ

ಪ್ರಾಚಾರ್ಯೆ ಆತ್ಮಹತ್ಯೆ ಯತ್ನ: ಅಧಿಕಾರಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ರಾಮನಗರ: ಲೈಂಗಿಕ ಕಿರುಕುಳ ಮತ್ತು ಜಾತಿ ನಿಂದನೆಯಿಂದ ಬೇಸತ್ತ ಜಿಲ್ಲೆಯ ವಸತಿ ಶಾಲೆಯ ಪ್ರಾಚಾರ್ಯೆಯೊಬ್ಬರು ಅಕ್ಟೋಬರ್ 9ರಂದು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿರುವ ಅವರು ನೀಡಿದ ದೂರಿನ ಮೇರೆಗೆ ರಾಮನಗರದ ಸಮಾಜ ಕಲ್ಯಾಣ ಇಲಾಖೆಯ ಹಿಂದಿನ ಉಪ ನಿರ್ದೇಶಕ ಯೋಗೇಶ್ ಎಸ್.ಬಿ ಮತ್ತು ಅದೇ ಶಾಲೆಯ ಕನ್ನಡ ಶಿಕ್ಷಕ ಮಹೇಶ್ ಎಂ.ಬಿ ವಿರುದ್ಧ ಎಸ್‌ಸಿ ಮತ್ತು ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಮತ್ತು ಐಪಿಸಿ 509 ಕಲಂ ಅಡಿ ಇಲ್ಲಿನ ಪುರ ಪೊಲೀಸ್ ಠಾಣೆಯಲ್ಲಿ ಅ.22ರಂದು ಎಫ್‌ಐಆರ್ ದಾಖಲಾಗಿದೆ.

ಯೋಗೇಶ್ ಅವರು ಸದ್ಯ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾಗಿದ್ದಾರೆ.

ಆಯೋಗದ ಸದಸ್ಯೆಗೆ ಮುಖಂಡರ ದೂರು

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದಲಿತ ಮುಖಂಡರು ಆರೋಪಿಸಿದ್ದಾರೆ. ರಾಮನಗರಕ್ಕೆ ಗುರುವಾರ ಭೇಟಿ ನೀಡಿದ್ದ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ಸದಸ್ಯೆ ಡಾ. ಅಂಜು ಬಾಲಾ ಅವರಿಗೆ ಮುಖಂಡರು ದೂರು ಕೊಟ್ಟರು. ಅದಕ್ಕೆ ಪ್ರತಿಕ್ರಿಯಿಸಿದ ಅವರು, 'ಪ್ರಕರಣ ಕುರಿತು ಅಧಿಕಾರಿಯನ್ನು ಯಾಕೆ ಇನ್ನೂ ಅಮಾನತುಗೊಳಿಸಿಲ್ಲ. ಆತನ ವಿರುದ್ಧ ಯಾಕೆ ಕ್ರಮ ಕೈಗೊಂಡಿಲ್ಲ' ಎಂದು ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದ್ದರು.

ದೂರಿನಲ್ಲಿ ಏನಿದೆ?: ಲೈಂಗಿಕವಾಗಿ ಬಳಸಿಕೊಳ್ಳಲು ಯತ್ನಿಸುತ್ತಿದ್ದ ಯೋಗೇಶ್ ಅವರು ತಮ್ಮೊಂದಿಗೆ ಸಹಕರಿಸುವಂತೆ ಪೀಡಿಸುತ್ತಿದ್ದರು. ಈ ಬಗ್ಗೆ ಆಕ್ಷೇಪ ಎತ್ತಿದ್ದರೂ ತಮ್ಮ ವರ್ತನೆ ಮುಂದುವರಿಸಿದ್ದರು. ಶಾಲೆಯ ನಿರ್ಮಾಣ ಹಂತದ ಕಟ್ಟಡ ಪರಿಶೀಲನೆಗೆ ಬಂದಾಗ ಏಳು ತಿಂಗಳ ಬಾಣಂತಿಯಾಗಿದ್ದ ನನ್ನ ಜೊತೆ ಅನುಚಿತವಾಗಿ ವರ್ತಿಸಿದ್ದರು

ಕಾರ್ಯನಿಮಿತ್ತ ಅವರ ಕಚೇರಿಗೆ ಹೋದಾಗಲೆಲ್ಲಾ ನನಗೆ ಇದೇ ರೀತಿಯ ಕೆಟ್ಟ ಅನುಭವವಾಗುತ್ತಿತ್ತು. ವಿಷಯವನ್ನು ಪತಿ ಗಮನಕ್ಕೂ ತಂದಿದ್ದೆ. ಅವರು ಯೋಗೇಶ್ ಅವರನ್ನು ಭೇಟಿ ಮಾಡಿ, ನಿಮ್ಮ ನಡತೆ ಸರಿಪಡಿಸಿಕೊಳ್ಳಿ ಎಂದು ಬುದ್ಧಿವಾದ ಹೇಳಿದ್ದರು. ಅದಾದ ಬಳಿಕ, ಯೋಗೇಶ್ ಅವರು ವಿನಾ ಕಾರಣ ನನಗೆ ತೊಂದರೆ ನೀಡ-ಲಾರಂಭಿಸಿದರು

ಶಾಲೆಗೆ ಒಮ್ಮೆ ಭೇಟಿ ನೀಡಿದ್ದಾಗ, 'ನೀನು ಕರೆದರೆ ಬರುವುದಿಲ್ಲ. ನಿನಗೆ ದುರಹಂಕಾರ. ಕೀಳು ಜಾತಿಯವಳಾದ ನಿನಗೆ ಜಾತಿ ಸಂಸ್ಕಾರ ಇಲ್ಲ' ಎಂದು ಶಾಲೆಯ ಸಿಬ್ಬಂದಿ ಎದುರಿಗೆ ನಿಂದಿಸಿದರು. ವಿಷಯ ತಿಳಿದ ಪತಿ ಕಳೆದ ತಿಂಗಳು ದಲಿತ ಮುಖಂಡರೊಂದಿಗೆ ಯೋಗೇಶ್ ಅವರ ಕಚೇರಿಗೆ ತೆರಳಿ ವಿಚಾರಿಸಿದಾಗ, 'ತಪ್ಪಾಯಿತು ಕ್ಷಮಿಸಿ' ಎಂದು ಬೇಡಿಕೊಂಡಿದ್ದರು. ನಂತರ, ಸುಮ್ಮನಾಗಿದ್ದೆವು.

ಇದಾದ ಬಳಿಕ ಶಾಲೆಯಲ್ಲಿರುವ ಕನ್ನಡ ಶಿಕ್ಷಕ ಮಹೇಶ್ ಎಂ.ಬಿ ಎಂಬುವರನ್ನು ಬಳಸಿಕೊಂಡು ನನ್ನ ವಿರುದ್ಧ ಷಡ್ಯಂತ್ರ ಮಾಡಿದರು. ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ನನ್ನ ಜಾತಿ ವಿಷಯ ಪ್ರಸ್ತಾಪಿಸಿ, ಅವರಿಗೆ ನೀವು ಸಹಕರಿಸಬೇಡಿ ಎಂದು ಹೇಳುತ್ತಿದ್ದರು. ಇದೇ ವಿಷಯ ತಾರಕಕ್ಕೇರಿದಾಗ ನನ್ನನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಶಿಕ್ಷಕ ಮಹೇಶ್ ಅವರಿಗೆ ಹೊಣೆ ಕೊಟ್ಟರು.

ಇವರಿಬ್ಬರು ನೀಡಿದ ಮಾನಸಿಕ ಹಿಂಸೆ, ಲೈಂಗಿಕ ಕಿರುಕುಳ, ಅವಮಾನ ತಡೆಯಲಾಗದೆ ಅಕ್ಟೋಬರ್ 9ರಂದು ಆತ್ಮಹತ್ಯೆಗೆ ಯತ್ನಿಸಿದ್ದೆ. ಇಷ್ಟು ದಿನ ಆಸ್ಪತ್ರೆಯಲ್ಲಿ 12 ದಿನ ಚಿಕಿತ್ಸೆ ಪಡೆದು ಚೇತರಿಸಿಕೊಂಡ ಬಳಿಕ ಠಾಣೆಗೆ ಬಂದಿದ್ದೇನೆ ಎಂದು ಪ್ರಾಚಾರ್ಯೆ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಪ್ರಕರಣ ಕುರಿತು ಪ್ರತಿಕ್ರಿಯೆ ಪಡೆಯಲು ವಿಚಾರಣಾಧಿಕಾರಿ ರಾಮನಗರ ಡಿವೈಎಸ್ಪಿಗೆ ಕರೆ ಮಾಡಿದಾಗ, ಸ್ವೀಕರಿಸಲಿಲ್ಲ.



ಉಡುಪಿ ಸೀರೆಗೆ ಅಡಿಕೆ ಚೊಗರಿನ ಹೊಳಪು

ತಿಳಿಯಾದ ಮೈಬಣ್ಣ, ಗಾಢ ವರ್ಣದ ಕಡಿದಾದ ಅಂಚು, ಮುತ್ತಿನ ಗೆರೆಯ ಚೌಕಳಿ, ಹಣೆಯ ಬೊಟ್ಟಿನಂಥ ಪುಟ್ಟಪುಟ್ಟ ಬುಟ್ಟಾ, ಅಮ್ಮನ ಸ್ಪರ್ಶದಷ್ಟೇ ಮೃದುವಾದ ಸೀರೆಯೊಂದನ್ನು ಕೈಗಿಟ್ಟರೆ, ಅದು ಕರಾವಳಿಯ ಕೈಮಗ್ಗದ ಉಡುಪಿ ಸೀರೆ ಎಂದು ಥಟ್ಟನೆ ಹೇಳಿಬಿಡಬಹುದು.

ಸಂಧ್ಯಾ ಹೆಗಡೆ

ತಿಳಿಯಾದ ಮೈಬಣ್ಣ, ಗಾಢ ವರ್ಣದ ಕಡಿದಾದ ಅಂಚು, ಮುತ್ತಿನ ಗೆರೆಯ ಚೌಕಳಿ, ಹಣೆಯ ಬೊಟ್ಟಿನಂಥ ಪುಟ್ಟಪುಟ್ಟ ಬುಟ್ಟಾ, ಅಮ್ಮನ ಸ್ಪರ್ಶದಷ್ಟೇ ಮೃದುವಾದ ಸೀರೆಯೊಂದನ್ನು ಕೈಗಿಟ್ಟರೆ, ಅದು ಕರಾವಳಿಯ ಕೈಮಗ್ಗದ ಉಡುಪಿ ಸೀರೆ ಎಂದು ಥಟ್ಟನೆ ಹೇಳಿಬಿಡಬಹುದು.

ಉಡುಪಿ ಸೀರೆಯ ವೈಶಿಷ್ಟ್ಯವೇ ಅದು. ಬಾಸೆಲ್ ಮಿಷನ್ ಪರಿಚಯಿಸಿರುವ ಮಲಬಾರ್ ಫ್ರೇಮ್ ಮಗ್ಗ, ಅದಕ್ಕೆ ಒಪ್ಪವಾಗಿ ಪೋಣಿಸಿರುವ ಒಂದೆಳೆ ಹತ್ತಿ ನೂಲಿನ ಸಾಲು, ಮಗ್ಗದ ಮೇಲಿರುವಾಗಲೇ ಗಂಜಿ ಹಾಕಿ ಹದಗೊಳಿಸುವ ನೇಕಾರರ ಚಮತ್ಕಾರ, ಕೈಯಿಂದ ಅಡ್ಡ ನೂಲನ್ನು ಹಾಯಿಸಿ ನೇಯುವ ತಂತ್ರಗಾರಿಕೆ ನೋಡುವುದೇ ಸೊಗಸು.

ಕಡಲ ತಡಿಯ ವಾಣಿಜ್ಯ ನಗರಿಯಲ್ಲಿ ತಯಾರಾಗುವ ಈ ಕೈಮಗ್ಗದ ಸೀರೆಗಳಿಗೆ ದೊಡ್ಡ ಪರಂಪರೆಯಿದೆ. ಕಾಲಚಕ್ರದಲ್ಲಿ ಮಸುಕಾಗಿದ್ದ ದೇಸಿ ಉತ್ಪನ್ನಕ್ಕೆ ಈಗ ಮತ್ತೆ ಉಚ್ಛ್ರಾಯ ಕಾಲ. ಜಿಐ ಮಾನ್ಯತೆಯನ್ನು ಮುಡಿಗೇರಿಸಿಕೊಂಡಿರುವ ಉಡುಪಿ ಸೀರೆ ನೇಕಾರರ ಬದುಕಿಗೆ ನೆಲೆ ಕಲ್ಪಿಸಿದೆ. ಅಜ್ಜಿಯರು ಉಡುವ ಸೀರೆ ಎಂಬ ವೈರಾಗ್ಯದ ಭಾವ ಬದಿಗೆ ಸರಿದು, ತರುಣಿಯರು, ತಾರೆಯರ ಹೃದಯಕದ್ದ ಉಡುಪಿ ಸೀರೆ, ಮಾರುಕಟ್ಟೆಯಲ್ಲಿ ತನ್ನದೇ ಬ್ರ್ಯಾಂಡ್ ಸೃಷ್ಟಿಸಿದೆ. ಇತ್ತೀಚೆಗೆ ನಡೆದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಮಗಳ ಮದುವೆಯಲ್ಲೂ ಉಡುಪಿ ಸೀರೆ ಮೆರೆದಿದೆ.

ಕಿನ್ನಿಗೋಳಿಯಲ್ಲಿರುವ ತಾಳಿಪಾಡಿ ನೇಕಾರರ ಸೇವಾ ಸಹಕಾರಿ ಸಂಘದಲ್ಲಿ ಪ್ಲೇನ್ ಸೀರೆ, ಚೌಕಳಿ ಸೀರೆ, ಬುಟ್ಟಾ ಸೀರೆ, ಗೆರೆಯ ಸೀರೆ, ಯಕ್ಷಗಾನದ ಕಸೆ ಸೀರೆಗಳು ವೈವಿಧ್ಯ ವರ್ಣಗಳಲ್ಲಿ ಸಿದ್ಧವಾಗುತ್ತವೆ. ಹೊಸದಾಗಿ ಪ್ರಯೋಗಿಸಿರುವ ಅಡಿಕೆ ಚೊಗರಿನ ನೈಸರ್ಗಿಕ ಬಣ್ಣವು ಉಡುಪಿ ಸೀರೆಯ ಹೊಳಪನ್ನು ಹೆಚ್ಚಿಸಿ, ಮಾರುಕಟ್ಟೆಯಲ್ಲಿ ಟ್ರೆಂಡ್ ಸೃಷ್ಟಿಸಿದೆ. ಆನ್‌ಲೈನ್‌ನಲ್ಲೂ ಇವು ಲಭ್ಯ ಇವೆ. ಉಡುಪಿ ಸೀರೆ ಖರೀದಿಸಿದವರಿಗೆ ಅದರ ಲೇಬಲ್‌ನ ವೈಶಿಷ್ಟ್ಯ ಮುದ ನೀಡುತ್ತದೆ. ಲೇಬಲ್‌ನಲ್ಲಿ ನೇಕಾರರ ಚಿತ್ರವನ್ನೇ ಅಚ್ಚುಹಾಕಿ ಸೀರೆಯ ತಯಾರಕರನ್ನು ಪರಿಚಯಿಸಲಾಗುತ್ತಿದೆ.

ತಾಳಿಪಾಡಿ ಸಂಘದ ಎಲ್ಲ ಹಿರಿಮೆಗಳ ಹಿಂದೆ ಅವಿರತ ಕೆಲಸ ಮಾಡಿದ್ದು ಕಾರ್ಕಳದ ಕದಿಕೆ ಟ್ರಸ್ಟ್. ಉಡುಪಿ ಸೀರೆ ಉಳಿಸುವ ತುಡಿತದಿಂದ ಅಭಿಯಾನ ಕೈಗೆತ್ತಿಕೊಂಡು ಸುತ್ತಮುತ್ತಲಿನ ಜನರಿಗೆ ನಿರಂತರ ತರಬೇತಿ ನೀಡಿ, ಅವರ ಬೆನ್ನಿಗೆ ನಿಂತು ಹುರಿದುಂಬಿಸುತ್ತಿದೆ. ಹಿಂದೆ ಎಂಟು ನೇಕಾರರಿದ್ದ ತಾಳಿಪಾಡಿ ನೇಕಾರರ ಸಂಘದಲ್ಲಿ ಈಗ 35ಕ್ಕೂ ಹೆಚ್ಚು ಮಂದಿ ನೇಯ್ಗೆಯಲ್ಲಿ ತೊಡಗಿಕೊಂಡಿದ್ದಾರೆ. ಈ ಪುನಶ್ಚೇತನ ಯಜ್ಞದ ರೂವಾರಿ ಕದಿಕೆ ಟ್ರಸ್ಟ್ ಸ್ಥಾಪಕಾಧ್ಯಕ್ಷೆ ಮಮತಾ ರೈ ಮತ್ತು ಅವರಿಗೆ ಹೆಗಲಾದವರು ಅವರ ಪತಿ ಬಿ.ಸಿ.ಶೆಟ್ಟಿ.



ವಸ್ತ್ರ ವೈಭವ

ತಾಳಿಪಾಡಿ ಸಂಘದ ಜೊತೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಶಿವಳ್ಳಿ, ಪಡುಪಣಂಬೂರು, ಬ್ರಹ್ಮಾವರ ಮತ್ತಿತರ ಐದಾರು ನೇಕಾರರ ಸಹಕಾರ ಸಂಘಗಳಲ್ಲಿ ಉಡುಪಿ ಸೀರೆಗಳು ತಯಾರಾಗುತ್ತವೆ. ಹಿರಿಯರಿಗೆ ಸೀಮಿತವಾಗಿದ್ದ ಕಸುಬಿನಲ್ಲಿ ಹೊಸ ತಲೆಮಾರು ತೊಡಗಿಕೊಂಡಿದ್ದು, 100ಕ್ಕೂ ಹೆಚ್ಚು ಜನರಿಗೆ ಮಗ್ಗದ ನಡುವೆ ಬಾಂಧವ್ಯ ಬೆಸೆದಿದೆ.



ಸೀಗೆ ಹುಣ್ಣಿಮೆಯ ಸಂಭ್ರಮ

ಹುಲ್ಲುಲಿಗೋ.. ಸಲಾಂಬ್ರಿಗೋ!

ಶಿವಾನಂದ ಎನ್. ದೊಡ್ಡಮನಿ

ಭೂ

ತಾಯಿ ಹಸಿರುಟ್ಟು ಹುಲುಸಾದ ಫಸಲು ತುಂಬಿಕೊಂಡು ಕಂಗೊಳಿಸುತ್ತಿರುವಾಗ ಆ ಫಸಲಿಗೆ ಸೀರೆಯುಡಿಸಿ ಉಡಿ ಕಟ್ಟಿ, ಕುಪ್ಪುಸ ತೊಡಿಸಿ, ಪೂಜಿಸಿ ಆರಾಧಿಸುವ ರೈತ ಸಮೂಹ ಪಂಚ ಪಾಂಡವರ ದ್ಯೋತಕವಾಗಿ ಜಮೀನಲ್ಲಿ 5 ಕಲ್ಲುಗಳನ್ನಿರಿಸಿ ಪೂಜೆ ಸಲ್ಲಿಸುತ್ತಾರೆ. ಇದನ್ನೇ ಭೂಮಿ ಪೂಜೆ, ಶೀಗೆ ಹುಣ್ಣಿಮೆ ಎಂದು ಸಂಭ್ರಮಿಸುವರು. ಹೊಲದ ನಾಲ್ಕು ಸುತ್ತ ಚೆರಗ ಚೆಲ್ಲುವಾಗ ಮುಂದೆ ಒಬ್ಬರು ನೀರನ್ನು ಸಿಂಪಡಿ ಹುಲ್ಲುಲ್ಲಿಗೂ ಅಂತ ಕೂಗ್ತಾರೆ. ಆವಾಗ್ಲೇ ಹಿಂದಿನಿಂದ ಇಬ್ರು ಸಲಾಂಬ್ರಿಗೋ ಎಂದು ಹೊಲದಲ್ಲೆಲ್ಲ ಚರಗ ಚೆಲ್ಲುವ ಪದ್ಧತಿ ಇದೆ.

ಉತ್ತರ ಕರ್ನಾಟಕದ ಸುತ್ತಲಿನ ಹಲವು ಗ್ರಾಮಗಳಲ್ಲಿ ಸೀಗೆ ಹುಣ್ಣಿಮೆಯನ್ನು ಶ್ರದ್ಧಾ-ಭಕ್ತಿಗಳೊಂದಿಗೆ ಸಾಂಪ್ರದಾಯಿಕವಾಗಿ ನಮ್ಮ ಜನಪದರು ಹಾಕಿಕೊಟ್ಟ ಮಾರ್ಗದಲ್ಲಿ ಆಚರಿಸುತ್ತ ಬಂದಿದ್ದಾರೆ. ರೈತರು ಖುಷಿ ಖುಷಿಯಿಂದಲೇ ಭೂದೇವಿಯ ಆರಾಧನೆಯಲ್ಲಿ ನಿರತವಾಗುವುದನ್ನು ಆ ದಿನ ವಿಶೇಷವಾಗಿ ಗಮನ ಸೆಳೆಯುವುದನ್ನು ಕಾಣಬಹುದು.

ಭೂಮಿ ಸಂಭ್ರಮ

ರೈತರ ಶಕ್ತಿಯಾಗಿರುವ ಬಸವಣ್ಣನೆಂದು ನಂಬಿರುವ ಎತ್ತುಗಳನ್ನು ಮೈತೊಳೆದು ಸಿಂಗರಿಸಿ ಚಕ್ಕಡಿ ಕಟ್ಟಿಕೊಂಡು ಕುಟುಂಬ ಸದಸ್ಯರ ಜೊತೆಗೆ ತಮ್ಮ ಕೃಷಿ ಭೂಮಿಗೆ ತೆರಳಿದ ರೈತರು ಬೆಳೆದು ನಿಂತಿರುವ ಫಸಲಿಗೆ ಪೂಜೆ ಸಲ್ಲಿಸಿ, ಧನ್ಯತಾ ಭಾವದಲ್ಲಿ ತೇಲುವ ಶುಭದಿನವಾಗಿದೆ.

ರೈತ ಸಮೂಹ ಅಲ್ಲಿ ಹೊಲದಲ್ಲಿಯೇ ಸಿಗುವ ಗುಂಡು ಕಲ್ಲುಗಳಿಂದ ಪಾಂಡವರ ಮೂರ್ತಿ ನಿರ್ಮಿಸಿ ಅವುಗಳಿಗೂ ಪೂಜೆ ಸಲ್ಲಿಸಿ ಕುಟುಂಬದ ಯಜಮಾನ ಫಸಲಿಗೆ ಅರ್ಪಿಸಿರುವ ಎಡೆ (ಊಟ) ಸೇವಿಸುವ ಪದ್ಧತಿಯಿದೆ. ಎಡೆ ಸ್ವೀಕರಿಸುವ ಸಂದರ್ಭದಲ್ಲಿಯಾರೊಂದಿಗೂ ಮಾತನಾಡದೇ ಮೌನವಾಗಿ ಅತ್ಯಂತ ಶ್ರದ್ಧೆಯಿಂದ ಪ್ರಸಾದ ಸ್ವೀಕರಿಸಿದರೆ ಮುಂದಿನ ವರ್ಷದವರೆಗೆ ಯಾವುದೇ ತಾಪತ್ರಯ ಇಲ್ಲದಂತೆ ಫಸಲು ಕೈಹಿಡಿಯಲಿದೆ ಎನ್ನುವ ನಂಬಿಕೆಯೂ ಇದೆ.

ಹೊಲದ ಸುತ್ತಲೂ ಚರಗದ ರೂಪದಲ್ಲಿ ಚೆಲ್ಲುವುದರಿಂದ ಫಸಲು ಸಮೃದ್ಧವಾಗಲಿದೆ ಎನ್ನುವ ನಂಬಿಕೆಯ ಜೊತೆಗೆ ಹಕ್ಕಿ ಪಕ್ಷಿಗಳು ಅವನ್ನು ತಿನ್ನಲು ಬಂದು ಫಸಲಿಗೆ ಮುತ್ತಿರುವ ಕ್ರಿಮಿಕೀಟಗಳನ್ನು ತಿನ್ನುತ್ತವೆ ಎಂಬ ನಂಬಿಕೆಯೂ ಇದೆ.

ಸೀಗೆ ಹುಣ್ಣಿಮೆಯ ಸಡಗರಕ್ಕಾಗಿಯೇ ಈ ಭಾಗದಲ್ಲಿ ಹತ್ತಾರು ತರಾವರಿ ಹಬ್ಬದಡುಗೆ ಸಿದ್ಧಗೊಳ್ಳುತ್ತವೆ ಕಡುಬು, ಖರ್ಚಿಕಾಯಿ, ಹೋಳಿಗೆ, ಎಣ್ಣೆ ಹೋಳಿಗೆ, ಎಣಗಾಯಿ ಪಲ್ಯೆ, ಮಡಕಿಕಾಳು, ಹೆಸರು ಪಲ್ಯೆ, ವಿಧವಿಧದ ಬುತ್ತಿ ಹೀಗೆ ಹಲವಾರು ಪದಾರ್ಥಗಳನ್ನು ಕುಟುಂಬ ಸದಸ್ಯರು ಹಾಗೂ ಸ್ನೇಹಿತರ ಜತೆಗೂಡಿ ಸಹಭೋಜನದಲ್ಲಿ ತೊಡಗಿ ರೈತರು ಸೀಗೆ ಹುಣ್ಣಿಮೆಯ ಅರ್ಥಪೂರ್ಣ ಆಚರಣೆ ಮಾಡುವುದನ್ನು ಕಾಣುತ್ತೇವೆ.



ಮನೆಗಳಿಗೆ ಮರಳುವ ಸಂದರ್ಭದಲ್ಲಿ ಸ್ವಲ್ಪ ಫಸಲು ಕೊಯ್ದು ಮನೆಗೆ ತಂದು ಪೂಜೆ ಸಲ್ಲಿಸಲಾಗುವುದು. ಮುಂದೆ ಫಸಲಿನ ರಾಶಿಯಲ್ಲಿ ಅದನ್ನು ಇಟ್ಟರೆ ಮತ್ತಷ್ಟು ಸಮೃದ್ಧವಾಗಲಿದೆ ಎನ್ನುವ ಭಾವನೆ ಇದೆ. ಭೂತಾಯಿಯ ಆರಾಧನೆಗೆ ಮೀಸಲಿರುವ ಸೀಗೆ ಹುಣ್ಣಿಮೆ ಅತ್ಯಂತ ಶ್ರದ್ಧೆಯಿಂದ ಆಚರಿಸಲಾಗುತ್ತದೆ.

ಸೈಬರ್ ಅಪರಾಧ: ಇರಲಿ ಎಚ್ಚರ


‘ಪಾರ್ಟ್‌ಟೈಂ ಕೆಲಸ ನಂಬಿ ಹಣ ಕಳೆದುಕೊಂಡೆ...’

ನಾನೊಬ್ಬ ಗೃಹಿಣಿ. ಪತಿ, ಮಗಳು ಹಾಗೂ ಅತ್ತೆ- ಮಾವ ಇರುವ ಕುಟುಂಬ ನನ್ನದು. ಪತಿ ಬೆಳಿಗ್ಗೆ ಕೆಲಸಕ್ಕೆ ಹೋದರೆ, ರಾತ್ರಿಯೇ ಮನೆಗೆ ಬರುತ್ತಾರೆ. ಮಗಳು ಶಾಲೆಗೆ ಹೋದ ಮೇಲೆ ಮನೆಯಲ್ಲಿ ಅಷ್ಟೇನು ಕೆಲಸ ಇರುವುದಿಲ್ಲ. ಇಂಥ ಸಮಯದಲ್ಲಿ ಖಾಲಿ ಕೂರುವ ಬದಲು, ಏನಾದರೂ ಪಾರ್ಟ್‌ಟೈಂ ಕೆಲಸ ಮಾಡೋಣವೆಂಬ ಆಲೋಚನೆ ಬಂತು. ಅದಕ್ಕಾಗಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದೆ. ಆದರೆ, ಕೆಲಸ ಮಾಡುವುದು ಹೇಗೆ ? ಯಾರನ್ನು ಸಂಪರ್ಕಿಸುವುದು ? ಎಂಬುದು ಗೊತ್ತಾಗಲೇ ಇಲ್ಲ. ಕೆಲ ದಿನಗಳ ನಂತರ ಅಪರಿಚಿತ ಮೊಬೈಲ್ ಸಂಖ್ಯೆಯಿಂದ ಸಂದೇಶವೊಂದು ಬಂತು. ‘ಮನೆಯಿಂದಲೇ ಕೆಲಸ ಮಾಡಿ ತಿಂಗಳಿಗೆ ₹ 15,000 ಗಳಿಸಿ’ ಎಂದು ಸಂದೇಶದಲ್ಲಿ ಬರೆಯಲಾಗಿತ್ತು. ಇದು ನಿಜವೆಂದು ತಿಳಿದು, ಸಂದೇಶಕ್ಕೆ ಪ್ರತಿಕ್ರಿಯಿಸಿದೆ. ನಂತರ, ಟೆಲಿಗ್ರಾಂ ಗ್ರೂಪ್ ಸೇರಿಕೊಳ್ಳುವಂತೆ ಮತ್ತೊಂದು ಸಂದೇಶ ಬಂತು. ಟೆಲಿಗ್ರಾಂ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಗ್ರೂಪ್ ಸಹ ಸೇರಿದೆ.

ಟೆಲಿಗ್ರಾಂ ಗ್ರೂಪ್‌ಗೆ ನನ್ನದೇ ಹಲವರು ಸೇರಿದ್ದರು. ‘ಆಡ್ಮಿನ್’ ಎಂದು ಗುರುತಿಸಿಕೊಂಡಿದ್ದ ಸೈಬರ್ ವಂಚಕ, ಪ್ರತಿಯೊಬ್ಬರಿಗೂ ಟಾಸ್ಕ್ ನೀಡುವುದಾಗಿ ಹಾಗೂ ನಿಗದಿತ ಸಮಯದೊಳಗೆ ಟಾಸ್ಕ್ ಮುಗಿಸಿದರೆ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡುವುದಾಗಿ ಹೇಳಿದ್ದ.

ಪತ್ರವೊಂದರ ಫೋಟೊ ಕಳುಹಿಸಿದ್ದ ವಂಚಕ, ಪತ್ರದಲ್ಲಿರುವ ಇಂಗ್ಲಿಷ್ ಅಕ್ಷರಗಳನ್ನು ಟೈಪ್ ಮಾಡಿ ಕಳುಹಿಸಿ ಎಂದಿದ್ದರು. ಪಾರ್ಟ್‌ಟೈಂ ಸಿಕ್ಕಿತೆಂಬ ಖುಷಿಯಲ್ಲಿ ಟೈಪ್ ಮಾಡಿ, ನಿಗದಿತ ಸಮಯದೊಳಗೆ ವಾಪಸು ಕಳುಹಿಸಿದ್ದೆ. ಅದನ್ನು ನೋಡಿದ್ದ ಅಡ್ಮಿನ್, ಮರುದಿನವೇ ನನ್ನ ಖಾತೆಗೆ ₹ 800 ಕಳುಹಿಸಿದ್ದರು. ಹಣ ಬರುತ್ತಿದ್ದಂತೆ ಖುಷಿ ಇಮ್ಮಡಿಗೊಂಡಿತ್ತು. ಖಾಲಿ ಸಮಯದಲ್ಲಿ ಮತ್ತಷ್ಟು ಕೆಲಸ ಮಾಡುವ ಆಸೆ ಹುಟ್ಟಿತ್ತು.

ಕೆಲ ದಿನ ಬಿಟ್ಟು ಮತ್ತಷ್ಟು ಟಾಸ್ಕ್ ನೀಡಿದ್ದ ವಂಚಕ, ‘ನಿಮ್ಮ ಕೆಲಸ ಚೆನ್ನಾಗಿದೆ. ನಿಮಗೆ ಹೆಚ್ಚು ಟಾಸ್ಕ್ ನೀಡಲಾಗುವುದು. ನೀವು ನಿರಂತರವಾಗಿ ಕೆಲಸ ಮಾಡುತ್ತಿರಾ ಎಂಬ ನಂಬಿಗೆ ನಮಗೆ ಬರಬೇಕು. ಹೀಗಾಗಿ, ನೀವು ಮೊದಲಿಗೆ ಶುಲ್ಕ ಪಾವತಿಸಿ ನೋಂದಣಿ ಮಾಡಿಕೊಳ್ಳಬೇಕು’ ಎಂದಿದ್ದ. ಅದನ್ನು ನಂಬಿದ್ದ ನಾನು, ಶುಲ್ಕ ಪಾವತಿಸಿ ನೋಂದಣಿ ಮಾಡಿಸಿದ್ದೆ. ನಂತರ, ಟಾಸ್ಕ್ ಸಹ ಮಾಡಿ ಕಳುಹಿಸಿದ್ದೆ.



ಟಾಸ್ಕ್ ಹಣ ಪಾವತಿಸುವುದಾಗಿ ಹೇಳಿದ್ದ ವಂಚಕ, ಮುಂಗಡವಾಗಿ ತೆರಿಗೆ ಪಾವತಿಸುವಂತೆ ಹೇಳಿದ್ದ. ನಾನೂ ಪಾವತಿಸಿದ್ದೆ. ಆದರೆ, ವಂಚಕ ಹಣ ಕಳುಹಿಸಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ, ‘ನಿಮ್ಮ ಹಣ ಹೆಚ್ಚಿದೆ. ಹೀಗಾಗಿ, ಹೆಚ್ಚು ತೆರಿಗೆ ತುಂಬಬೇಕು’ ಎಂದಿದ್ದ. ಟಾಸ್ಕ್ ಹಣ ಬರಬಹುದೆಂದು ತಿಳಿದು, ಪುನಃ ಆರೋಪಿ ಹೇಳಿದ್ದ ಖಾತೆಗೆ ಹಣ ಜಮೆ ಮಾಡಿದ್ದೆ. ಇದಾದ ನಂತರವೂ ಹಣ ಬರಲಿಲ್ಲ. ಪುನಃ ಸಂಪರ್ಕಿಸಿದಾಗ, ವಂಚಕ ತೆರಿಗೆಯನ್ನೇ ಪ್ರಸ್ತಾಪಿಸಿದೆ. ಇದೇ ರೀತಿಯಲ್ಲೇ ವಂಚಕ, ಹಂತ ಹಂತವಾಗಿ ₹ 7.92 ಲಕ್ಷ ಹಾಕಿಸಿಕೊಂಡಿದ್ದ. ಪುನಃ ಹಣಕ್ಕಾಗಿ ಬೇಡಿಕೆ ಇರಿಸಿದ್ದ.

₹ 800 ಬಂತೆಂದು ಖುಷಿಯಲ್ಲಿದ್ದ ನಾನು, ಸೈಬರ್ ವಂಚಕರ ಜಾಲದಲ್ಲಿ ಸಿಲುಕಿ ₹ 7.92 ಲಕ್ಷ ಕಳೆದುಕೊಂಡೆ. ಪತಿ ಹಾಗೂ ಸ್ನೇಹಿತರ ಬಳಿ ವಿಷಯ ತಿಳಿಸಿದಾಗ, ನನ್ನದೇ ತಪ್ಪೆಂದು ಬೈದರು. ಪಾರ್ಟ್‌ಟೈಂ ಕೆಲಸದ ಆಸೆಯಿಂದ ಅಪರಿಚಿತ ಮೊಬೈಲ್ ಸಂದೇಶ ನಂಬಿ ಮೋಸ ಹೋದೆ. ವಂಚಕನ ವಿರುದ್ಧ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಎಫ್‌ಐಆರ್ ಸಹ ದಾಖಲಾಗಿದ್ದು, ವಂಚಕ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾನೆ.


‘ಮನೆಯಿಂದಲೇ ಕೆಲಸ ಮಾಡಿ ಹಣ ಗಳಿಸಿ’ ಎಂಬ ಸಂದೇಶವನ್ನು ಸಾಮೂಹಿಕವಾಗಿ ಕಳುಹಿಸುವ ವಂಚಕರು, ತಮ್ಮನ್ನು ಸಂಪರ್ಕಿಸುವ ಅಮಾಯಕರನ್ನು ಜಾಲಕ್ಕೆ ಸಿಲುಕಿಸಿ ಹಣ ದೋಚುತ್ತಿದ್ದಾರೆ. ನನ್ನಂತೆ ನಿತ್ಯವೂ ಹಲವರು ಹಣ ಕಳೆದುಕೊಳ್ಳುತ್ತಿರುವುದಾಗಿ ಪೊಲೀಸರು ಹೇಳುತ್ತಿದ್ದಾರೆ.

ಇಂದಿನ ಆಧುನಿಕ ಯುಗದಲ್ಲಿ ಸೈಬರ್ ಅಪರಾಧಗಳು ಹೆಚ್ಚಾಗುತ್ತಿವೆ. ನಾವೆಲ್ಲರೂ ಹೆಚ್ಚು ಜಾಗೃತಿ ವಹಿಸಬೇಕು. ಆಸೆ-ಆಮಿಷಗಳಿಗೆ ಮಾರುಹೋಗಿ ಎಚ್ಚರ ತಪ್ಪಿ ನನ್ನಂತೆ ಹಣ ಕಳೆದುಕೊಳ್ಳಬೇಡಿ

- ದೂರುದಾರ ಮಹಿಳೆ
(ನಿರೂಪಣೆ: ಸಂತೋಷ ಜಿಗಳಿಕೊಪ್ಪ)

ಬಾಂಧವ್ಯ ಮತ್ತು ಸ್ವಂತಿಕೆಗಳ ನಡುವಿನ ಸಮತೋಲನ

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

• ನಾನು ಹೆತ್ತವರೊಂದಿಗೆ ವಿಶೇಷವಾಗಿ ನನ್ನ ತಾಯಿಯೊಂದಿಗೆ ತುಂಬಾ ಅಂಟಿಕೊಂಡಿದ್ದೇನೆ. ಕ್ರಮೇಣ ನನ್ನ ಸುತ್ತಲಿರುವ ಎಲ್ಲರೂ ಬದಲಾದರು. ನನ್ನ ನೆರೆಹೊರೆಯವರು ಸಂಬಂಧಿಕರು ಸಹೋದ್ಯೋಗಿಗಳು ಸ್ನೇಹಿತರು ನನ್ನ ವಿರುದ್ಧ ತಿರುಗಿಬಿದ್ದರು. ಹೆತ್ತವರು ನನ್ನ ಬದ್ಧ ವೈರಿಗಳಾದರು. ಇಂದಿಗೂ 84 ವರ್ಷ ವಯಸ್ಸಿನ ನನ್ನ ತಾಯಿ ನನ್ನ ಪರಮ ಶತ್ರು. ನಾವು ಒಂದೇ ನಗರದಲ್ಲಿ ವಾಸಿಸುತ್ತಿದ್ದರೂ ನನ್ನ ತಾಯಿ ನನ್ನನ್ನು ಭೇಟಿಯಾಗಲು ಅಥವಾ ನನ್ನೊಂದಿಗೆ ಮಾತನಾಡಲು ನಿರಾಕರಿಸುತ್ತಿದ್ದಾರೆ. ಹಲವಾರು ಜ್ಯೋತಿಷಿಗಳು ನನ್ನ ಹಿರಿಯ ಸಹೋದರ ಮತ್ತು ಅವರ ಪತ್ನಿ ಮಾಟಮಂತ್ರ ಮಾಡಿದ್ದಾರೆ ಎಂದು ಹೇಳಿದರು. ಹೆಂಡತಿಯೊಂದಿಗಿನ ನನ್ನ ಸಂಬಂಧವೂ ಹದಗೆಟ್ಟಿದೆ. ದಯವಿಟ್ಟು ಈ ಮಾನಸಿಕ ಆಘಾತದಿಂದ ಹೊರಬರಲು ಸಲಹೆ ನೀಡಿ.

ಹೆಸರು ಊರು ತಿಳಿಸಿಲ್ಲ.

ನಿಮ್ಮ ಪತ್ರದಲ್ಲಿ ಆಳವಾದ ನೋವಿನ ಧ್ವನಿಯಿದೆ. ಆ ನೋವಿನ ಹಿಂದೆ ಏನಿರಬಹುದು ಎಂದು ಯೋಚಿಸಿದ್ದೀರಾ? ಪರಿಚಿತರೆಲ್ಲರೂ ನಿಮ್ಮ ವಿರುದ್ಧ ತಿರುಗಿ ಬಿದ್ದಿದ್ದಾರೆ, ತಾಯಿ ಮಾತನಾಡಿಸುತ್ತಿಲ್ಲ ಹಾಗೂ ಹೆಂಡತಿಯ ಜೊತೆಗಿನ ಸಂಬಂಧವೂ ಹದಗೆಟ್ಟಿದೆ ಎಂದು ಹೇಳಿದ್ದೀರಲ್ಲವೇ? ಅಂದರೆ ನಿಮಗೆ ಏಕಾಂಗಿತನ ಕಾಡುತ್ತಿರಬೇಕಲ್ಲವೇ? ಇದಕ್ಕೆ ಪರಿಹಾರ ಹುಡುಕುವ ಮೊದಲು ನಿಮ್ಮ ಎಲ್ಲಾ ಸಂಬಂಧಗಳೂ ಹದಗೆಟ್ಟಿದ್ದು ಹೇಗೆ ಎನ್ನುವುದನ್ನು ತಿಳಿದುಕೊಳ್ಳಬೇಕು.

ಮಾನವರಿಗೆ ಎರಡು ಮೂಲ ಅಗತ್ಯಗಳಿರುತ್ತವೆ. ಮೊದಲನೆಯದು ಮನುಷ್ಯ ಸಂಪರ್ಕದ ಹಸಿವು. ಇದನ್ನು “ಬಾಂಧವ್ಯ” (Attachment) ಎಂದು ಕರೆಯೋಣ. ಬಾಲ್ಯದ ಕೌಟುಂಬಿಕ ವಾತಾವರಣದಲ್ಲಿ ಬಾಂಧವ್ಯದ ಸಹಜ ರುಚಿ ಮಕ್ಕಳಿಗೆ ಬೇಕಾಗುತ್ತದೆ. ಅದರ ಕೊರತೆಯಾದರೆ ಜೀವಮಾನವಿಡೀ ಸಂಬಂಧಗಳನ್ನು ನಿಭಾಯಿಸುವುದರಲ್ಲಿ ತೊಂದರೆಯಾಗುತ್ತದೆ. ಇನ್ನೊಂದು ಮೂಲ ಅಗತ್ಯ ನಮ್ಮತನವನ್ನು ಉಳಿಸಿಕೊಂಡು ಬದುಕುವುದು. ಇದನ್ನು “ಸ್ವಂತಿಕೆ” (Authenticity) ಎಂದು ಕರೆಯೋಣ. ಸ್ವಂತಿಕೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದಾಗಲೆಲ್ಲಾ ಬಾಂಧವ್ಯ ಕಳೆದುಕೊಳ್ಳುವ ಭಯವಿರುತ್ತದೆ. ಸ್ವಂತಿಕೆಯನ್ನು ಉಳಿಸಿಕೊಳ್ಳದಿದ್ದರೆ ಸಂಬಂಧಗಳು ಅರ್ಥಕಳೆದುಕೊಳ್ಳುತ್ತವೆ. ಹಾಗಾಗಿ ಸ್ವಂತಿಕೆ ಮತ್ತು ಬಾಂಧವ್ಯಗಳು ಮೇಲುನೋಟಕ್ಕೆ ವಿರುದ್ಧ ಶಕ್ತಿಗಳಂತೆ ಕಂಡರೂ ವಾಸ್ತವದಲ್ಲಿ ಇದು ನಿಜವಲ್ಲ.

ನೀವು ಬಾಂಧವ್ಯ ಮತ್ತು ಸ್ವಂತಿಕೆಗಳ ನಡುವಿನ ಸಮತೋಲನವನ್ನು ಸಾಧಿಸುವುದಕ್ಕೆ ಕಷ್ಟಪಡುತ್ತಿದ್ದೀರಿ. ಇದು ನಿಮ್ಮಲ್ಲಿರುವ ಕೊರತೆ ಎಂದುಕೊಳ್ಳಬೇಕಾಗಿಲ್ಲ. ಸಮತೋಲವನ್ನು ಸಾಧಿಸುವ ಕಲಿಕೆ ಬಾಲ್ಯದಲ್ಲಿ ಸಿಗದಿರುವುದರಿಂದ ಈಗ ಅದರ ಪರಿಣಾಮಗಳನ್ನು ಎದುರಿಸುತ್ತಿದ್ದೀರಿ.

ಹೆತ್ತವರೊಂದಿಗೆ ಅದರಲ್ಲೂ ಹೆಚ್ಚಾಗಿ ತಾಯಿಗೆ ಬಹಳ ಅಂಟಿಕೊಂಡಿದ್ದೇನೆ ಎಂದು ಹೇಳಿದ್ದೀರಿ. ಬಾಲ್ಯದಲ್ಲಿ ತಾಯಿಗೆ ವಿರುದ್ಧವಾಗಿ ನಡೆದುಕೊಂಡಾಗ ಅವರ ಪ್ರತಿಕ್ರಿಯೆ ಹೇಗಿರುತ್ತಿತ್ತು? ನಿಮ್ಮನ್ನು ದೂರುವುದು? ಮಾತು ನಿಲ್ಲಿಸುವುದು? ಬೈಗುಳ ಅಥವಾ ದೈಹಿಕ ಹಿಂಸೆ? ಇಂತಹ ಪ್ರತಿಕ್ರಿಯೆಗಳನ್ನು ಎದುರಿಸಲಾಗದೆ ಪೋಷಕರ ಮೇಲೆ ಅವಲಂಬಿತವಾಗಿರುವ ಮಗು ಅವರಿಗೆ ಬೇಕಾದಂತೆ ಇದ್ದು ಅಂಟಿಕೊಳ್ಳುವ ಅನಿವಾರ್ಯತೆಗೆ ಸಿಕ್ಕಿಹಾಕಿಕೊಳ್ಳುತ್ತದೆ. ಆಗ ಮಗುವಿಗೆ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವುದು, ಅವುಗಳನ್ನು ನಿಭಾಯಿಸಲು ಕಲಿಯುವುದು ಮತ್ತು ಕೆಲವೊಮ್ಮೆ ಭಿನ್ನಾಭಿಪ್ರಾಯಗಳಿದ್ದಾಗಲೂ ಸಂಬಂಧವನ್ನು ಉಳಿಸಿಕೊಳ್ಳುವುದು- ಇವೆಲ್ಲದರ ಕಲಿಕೆ ಸಿಗುವುದಿಲ್ಲ. ಹಾಗಾಗಿ ಬೆಳೆಯುತ್ತಾ ಬಂದಂತೆ ಅಂತವರು ಸೌಹಾರ್ದಯುತ ಸಂಬಂಧಗಳನ್ನು ಕಟ್ಟಿಕೊಳ್ಳುವುದರಲ್ಲಿ ವಿಫಲರಾಗುತ್ತಾರೆ. ಸೌಹಾರ್ದಯುತ ಸಂಬಧಗಳಲ್ಲಿ ಮಾತ್ರ ನಮ್ಮ ಮಿದುಳು ನರಮಂಡಲಗಳು ಸಮಾಧಾನ ಮತ್ತು ಸುರಕ್ಷಿತ ಭಾವನೆಗಳನ್ನು ಅನುಭವಿಸತ್ತವೆ. ಅದು ದೊರಕದಿದ್ದಾಗ ಬಾಂಧವ್ಯದ ಹಸಿವು ತೀರದೆ ಏಕಾಂಗಿತನ ಅನುಭವಿಸುತ್ತೇವೆ.

ಹಾಗಿದ್ದರೆ ಬದಲಾವಣೆಯ ಪ್ರಯತ್ನವನ್ನು ಎಲ್ಲಿಂದ ಪ್ರಾರಂಭಿಸುವುದು? ಮೊದಲು ನಿಮ್ಮ ಎಂತಹ ಮಾತು ಮತ್ತು ವರ್ತನೆಗಳಿಂದ ಸಂಬಂಧಗಳು ಹಾಳಾದವು ಎಂದು ಯೋಚಿಸಿ. ಅಂತಹ ಮಾತು ವರ್ತನೆಗಳ ಪ್ರೇರಣೆ ನಿಮ್ಮೊಳಗಿನಿಂದ ಹೇಗೆ ಬರುತ್ತಿದೆ ಎಂದು ಹುಡುಕಬೇಕು. ನೀವು ಆತ್ಮಶೋಧನೆ ಮಾಡಿಕೊಳ್ಳಲು ಸಿದ್ಧರಾಗಬೇಕು. ಎಲ್ಲಾ ಸಂಬಂಧಗಳೂ ನಿಮ್ಮ ತಪ್ಪಿನಿಂದಲೇ ಹಾಳಾಗಿದೆ ಎಂದುಕೊಳ್ಳಬೇಕಾಗಿಲ್ಲ. ಕೆಲವೊಂದು ಸಂಬಂಧಗಳು ನಮ್ಮ ಎಲ್ಲಾ ಪ್ರಾಮಾಣಿಕ ಪ್ರಯತ್ನವನ್ನು ಮೀರಿ ಹಾಳಾಗಬಹುದು. ಆದರೆ ಎಲ್ಲಾ ಸಂಬಂಧಗಳೂ ಹಾಳಾಗುತ್ತಿವೆ ಎಂದರೆ ನಾವು ಆತ್ಮಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ನಿಮ್ಮ ಈ ಪ್ರಯತ್ನದಲ್ಲಿ ತಜ್ಞ ಮನೋಚಿಕಿತ್ಸಕರ ಸಹಾಯವಿದ್ದರೆ ಸಹಕಾರಿಯಾಗುತ್ತದೆ.

1,60,421 ಯುವ ಮತದಾರರು ಪಟ್ಟಿಗೆ ಸೇರ್ಪಡೆ; 86,062 ಮತದಾರರು ಹೆಸರು ರದ್ದು

ನಗರದಲ್ಲಿ 5 ಲಕ್ಷ ಮತದಾರರು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಮತದಾರರು ನೋಂದಣಿಯಾಗಿದ್ದಾರೆ.

2023ರ ಜನವರಿ 1ರಂದು ಪ್ರಕಟಿಸಿದ್ದ ಮತದಾರರ ಅಂತಿಮ ಪಟ್ಟಿಯಲ್ಲಿ 92,09,917 ಮತದಾರರಿದ್ದರು. ಅ.27ರಂದು ಪ್ರಕಟಿಸಿರುವ ಮತದಾರರ ಕರಡು ಪಟ್ಟಿಯಲ್ಲಿ ಮತದಾರರ ಸಂಖ್ಯೆ 97,90,499 ರಷ್ಟಾಯಿತು. ಒಟ್ಟಾರೆ ಹತ್ತು ತಿಂಗಳ ಅವಧಿಯಲ್ಲಿ 5,80,582 ಮತದಾರರು ಹೆಚ್ಚಾಗಿದ್ದಾರೆ.

ಕೇಂದ್ರ ಚುನಾವಣೆ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ಪರಿಷ್ಕರಣೆ ಕೈಗೊಂಡಿದ್ದು, ಅ.27 ರಂದು ಕರಡು ಪಟ್ಟಿ ಪ್ರಕಟಿಸಲಾಗಿದೆ. ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಿಕೊಳ್ಳಬಹುದು ಎಂದು ಬಿಬಿಎಂಪಿ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾಹಿತಿ ನೀಡಿದರು.

ಮತದಾರರ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದರಿಂದ ಮತಗಟ್ಟೆಗಳ ಸಂಖ್ಯೆಯೂ 8,615 ರಿಂದ 8,982ಕ್ಕೆ ಹೆಚ್ಚಿಸಲಾಗಿದೆ. ಮತದಾರರ ನೋಂದಣಿಗಾಗಿ ವಿಶೇಷ ಅಭಿಯಾನ ನಡೆಸಲಾಗುತ್ತದೆ. ಸದ್ಯದಲ್ಲೇ ದಿನಾಂಕ ಪ್ರಕಟಿಸಲಾಗುವುದು ಎಂದರು.

17 ವರ್ಷ ತುಂಬಿದವರೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಲು ಅವಕಾಶವಿದ್ದು, ಜ.1, ಏ.1, ಜುಲೈ 1 ಮತ್ತು ಅ.1 ಅನ್ನು ಅರ್ಹತಾ ದಿನಗಳನ್ನಾಗಿ ನಿಗದಿಪಡಿಸಲಾಗಿದೆ. ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯಲ್ಲಿ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ, ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಮಾಹಿತಿ ನೀಡಲಿದ್ದಾರೆ ಎಂದರು.

ಮತದಾರರ ಕರಡು ಪಟ್ಟಿಯನ್ನು ಪರಿಶೀಲಿಸಿಕೊಂಡು, ಅದರಲ್ಲಿ ಹೆಸರು ಬಿಟ್ಟು ಹೋಗಿದ್ದರೆ, ಹೆಸರು ತಪ್ಪಾಗಿದ್ದರೆ, ಭಾಗದ ಸಂಖ್ಯೆ ವರ್ಗಾವಣೆಯಾಗಬೇಕಿದ್ದರೆ, ಮತದಾರರ ಹೆಸರನ್ನು ತೆಗೆದು ಹಾಕಲು ಮನವಿ ಸಲ್ಲಿಸುವುದು, ಆಕ್ಷೇಪಣೆಗಳನ್ನು ಮತದಾರರ ನೋಂದಣಾಧಿಕಾರಿಗೆ ದೂರು ಸಲ್ಲಿಸಬಹುದು ಎಂದರು.

ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ಹರೀಶ್ ಕುಮಾರ್, ಡಾ. ದಾಕ್ಷಾಯಿಣಿ, ಡಾ. ಕೆ. ಜಗದೀಶ್ ನಾಯ್ಕ್, ಚುನಾವಣಾ ವಿಭಾಗದ ಸಹಾಯಕ ಆಯುಕ್ತ ಅಜಯ್ ಇದ್ದರು.

ಮತದಾರರ ಕರಡು ಪಟ್ಟಿ ಇಲ್ಲಿ ಲಭ್ಯ

ಮತದಾರರ ಕರಡು ಪಟ್ಟಿಯನ್ನು ಜಿಲ್ಲಾ ಚುನಾವಣಾಧಿಕಾರಿ, 28 ವಿಧಾನಸಭೆ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿ ಕಚೇರಿ, ಸಹಾಯಕ ಮತದಾರರ ನೋಂದಣಾಧಿಕಾರಿ ಕಚೇರಿ ಹಾಗೂ ವಾರ್ಡ್ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ.

ಮುಖ್ಯ ಚುನಾವಣಾಧಿಕಾರಿ ಅವರ ವೆಬ್‌ಸೈಟ್ www.ceokarnataka.kar.nic.in ಹಾಗೂ ಬಿಬಿಎಂಪಿ ವೆಬ್‌ಸೈಟ್ www.bbmp.gov.inwebsite

VHA (Voter Helpline App) ಮೊಬೈಲ್ ಆ್ಯಪ್ ಅಥವಾ ವೆಬ್‌ಪೋರ್ಟಲ್ voters.eci.gov.in

ಆನ್‌ಲೈನ್, ಆ್ಯಪ್‌ನಲ್ಲಿ ನೋಂದಣಿ

ಪ್ರಥಮ ಬಾರಿಗೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವವರು ನಮೂನೆ–6 ಅನ್ನು ಆನ್‌ಲೈನ್ ಮೂಲಕ ಸ್ವಯಂಪ್ರೇರಿತವಾಗಿ ವೆಬ್ ಪೋರ್ಟಲ್ https://voters.eci.gov.in/ ಅಥವಾ Voter Helpline ಮೊಬೈಲ್ ಆ್ಯಪ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. 2006ರ ಜನವರಿ-1ರವರೆಗೆ ಹುಟ್ಟಿರುವವರು ಅರ್ಜಿ ಸಲ್ಲಿಸಬಹುದು.

ಅತಿಹೆಚ್ಚು ಮತದಾರರಿರುವ ವಿಧಾನಸಭೆ ಕ್ಷೇತ್ರಗಳು

ವಿಧಾನಸಭೆ ಕ್ಷೇತ್ರ	ಮತದಾರರು
ಬೆಂಗಳೂರು ದಕ್ಷಿಣ	7,06,207
ಮಹದೇವಪುರ	6,18,938
ಯಶವಂತಪುರ	5,72,929
ಕೆ.ಆರ್. ಪುರ	5,20,824
ಬ್ಯಾಟರಾಯನಪುರ	5,13,322

ಅತಿಕಡಿಮೆ ಮತದಾರರಿರುವ ವಿಧಾನಸಭೆ ಕ್ಷೇತ್ರಗಳು

ವಿಧಾನಸಭೆ ಕ್ಷೇತ್ರ	ಮತದಾರರು
ಶಿವಾಜಿನಗರ	1,96,055
ರಾಜಾಜಿನಗರ	2,06,802
ಜಯನಗರ	2,10,449
ಮಲ್ಲೇಶ್ವರ	2,26,613
ಚಿಕ್ಕಪೇಟೆ	2,22,709

92,09,917 ಒಟ್ಟು ಮತದಾರರು

50,61,883 ಪುರುಷರು

47,26,856 ಮಹಿಳೆಯರು

1,760 ಇತರೆ

8982 ಒಟ್ಟು ಮತಗಟ್ಟೆಗಳು

ಡಿಸೆಂಬರ್ 9 ಆಕ್ಷೇಪಣೆ ಸಲ್ಲಿಸಲು ಅಂತಿಮ ದಿನ

ಸುದ್ದಿ 2 ನಿಮಿಷ

‘7ನೇ ವೇತನ ಆಯೋಗದ ವರದಿ ಜಾರಿಗೆ ಕ್ರಮ’

ತುಮಕೂರು: ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಸಂಬಂಧ ರಚಿಸಿರುವ ಏಳನೇ ವೇತನ ಆಯೋಗ ಮುಂದಿನ ನವೆಂಬರ್ ಒಳಗೆ ವರದಿ ಸಲ್ಲಿಸಲಿದ್ದು, ಅದರ ಜಾರಿಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಭರವಸೆ ನೀಡಿದ್ದಾರೆ.

ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾದ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಮೂರು ದಿನ ಕ್ರೀಡಾಕೂಟ ನಡೆಯಲಿದೆ.

ನವೆಂಬರ್ ಒಳಗೆ ವರದಿ ಸಲ್ಲಿಸುವಂತೆ ವೇತನ ಆಯೋಗಕ್ಕೆ ಸೂಚಿಸಲಾಗಿದೆ. ವರದಿ ಬಂದ ನಂತರ ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಭರವಸೆ ನೀಡಿದ್ದಾರೆ. ವೇತನ ಆಯೋಗ ಜಾರಿಯಾಗಲಿದ್ದು, ನೌಕರರು ಆತಂಕಪಡುವ ಅಗತ್ಯವಿಲ್ಲ ಎಂದು ಅಭಯ ನೀಡಿದರು.

ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಪಡಿಸಿ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಜಾರಿಗೆ ತರಲು ಸರ್ಕಾರ ಬದ್ಧವಾಗಿದ್ದು, ವರದಿ ನೀಡಲು ಸಮಿತಿ ರಚಿಸಲಾಗಿದೆ. ವರದಿ ಬಂದ ನಂತರ ಜಾರಿ ಮಾಡಲಾಗುವುದು ಎಂದರು.

‘ಶೋಷಣೆ ಎದುರಿಸಲು ಮಹಿಳೆಯರಿಗೆ ಶಿಕ್ಷಣವೇ ಶಕ್ತಿ’



ಬೆಂಗಳೂರು: ‘ಮಹಿಳೆಯು ಸಮಾಜದಲ್ಲಿ ಮುಂದೆ ಬರಲು, ಶೋಷಣೆಗಳನ್ನು ಎದುರಿಸಲು ಶಿಕ್ಷಣವೇ ಶಕ್ತಿಯಾಗಬಲ್ಲದು’ ಎಂದು ಲೇಖಕಿ ಮಾಲತಿ ಪಟ್ಟಣಶೆಟ್ಟಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕನ್ನಡದ ಧ್ರುವತಾರೆ ಸಾಧಕರೊಂದಿಗೆ ಮಾತು-ಕತೆಯಲ್ಲಿ ಜೀವನಾನುಭವವನ್ನು ಹಂಚಿಕೊಂಡರು.

‘ಪುಸ್ತಕದ ಓದಿನಿಂದ ದೊರಕುವ ಜ್ಞಾನ ಸೀಮಿತವಾದರೆ, ಬದುಕಿನ ಅನುಭವ ವಿಶಾಲವಾದದ್ದಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಮಹತ್ವದ ಕಾರ್ಯಗಳನ್ನು ಮಾಡಲು ಸವಾಲುಗಳೇ ಪ್ರೇರಣೆಯಾಯಿತು. ಮೂರು ವರ್ಷಗಳ ಅವಧಿಯಲ್ಲಿ 150ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿ, ಬಾಕಿ ಉಳಿದಿದ್ದ ಸಾಹಿತ್ಯ ಅಕಾಡೆಮಿ ಸುವರ್ಣ ಸಂಭ್ರಮದ ಕಾರ್ಯಕ್ರಮವನ್ನೂ ಯಶಸ್ವಿಯಾಗಿ ನಡೆಸಲು ಸಾಧ್ಯವಾಗಿದ್ದು ಈ ಆತ್ಮವಿಶ್ವಾಸದಿಂದಲೇ’ ಎಂದು ಹೇಳಿದರು.

‘ತಾಯಿಯನ್ನು ಕಳೆದು ಕೊಂಡು, ಅಜ್ಜಿಯ ಕೈಗೂಸಾಗಿ ಬೆಳೆದ ನನಗೆ ಆಕೆ ಎಲ್ಲವೂ ಆಗಿದ್ದಳು’ ಎಂದು ಸ್ಮರಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಇದ್ದರು.

ಲೋಕಸಭಾ ಚುನಾವಣೆಗೆ ಆಯೋಗದ ಸಿದ್ಧತೆ

ಮತದಾರರ ಕರಡು ಪಟ್ಟಿ ಪ್ರಕಟ; ನವೆಂಬರ್ 11ರಿಂದ ವಿಶೇಷ ನೋಂದಣಿ ಅಭಿಯಾನ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಕರಡು ಪಟ್ಟಿ ಪ್ರಕಟಿಸುವ ಮೂಲಕ 2024ರ ಲೋಕಸಭಾ ಚುನಾವಣೆಗೆ ಚುನಾವಣಾ ಆಯೋಗ ಸನ್ನದ್ಧವಾಗುತ್ತಿದ್ದು, ನ.11ರಿಂದ ಡಿ.3ರವರೆಗೆ ಶನಿವಾರ ಹಾಗೂ ಭಾನುವಾರಗಳಂದು ವಿಶೇಷ ನೋಂದಣಿ ಅಭಿಯಾನ ಹಮ್ಮಿಕೊಂಡಿದೆ.

ಕರಡು ಮತದಾರರ ಪಟ್ಟಿಗಾಗಿ https://ceo.karnataka.gov.in/en ಸಂಪರ್ಕಿಸಬಹುದು. ಆಕ್ಷೇಪಣೆಗಳನ್ನು ಸಲ್ಲಿಸಲು ಡಿ.9ರವರೆಗೆ ಅವಕಾಶ ಕಲ್ಪಿಸಲಾಗಿದೆ. ವಿಶೇಷ ಅಭಿಯಾನ ಮುಕ್ತಾಯವಾದ ನಂತರ ಜ.5ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಳೆದ ವಿಧಾನಸಭೆ ಚುನಾವಣೆಯ ನಂತರ 2.91 ಲಕ್ಷ ಹೊಸ ಮತದಾರರ ಸೇರ್ಪಡೆಯಾಗಿದೆ. ಹೊಸ ಮತದಾರರು ಹಾಗೂ ತಿದ್ದುಪಡಿ ಮಾಡಿದ 12 ಲಕ್ಷ ಮತದಾರರ ಗುರುತಿನ ಚೀಟಿಗಳನ್ನು ಅಂಚೆ ಮೂಲಕ ಮತದಾರರ ಮನೆಗೆ ಕಳುಹಿಸಲಾಗಿದೆ ಎಂದರು.

ಆಯೋಗ ಪ್ರಕಟಿಸಿರುವ 2024ರ ಮತದಾರರ ಕರಡು ಪಟ್ಟಿಯಲ್ಲಿ 5,33,77,162 ಮತದಾರರು ಇದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ 5,30,85,566 ಮತದಾರರು ಇದ್ದರು. 2.91 ಲಕ್ಷ ಮತದಾರರ ಹೆಚ್ಚಳವಾಗಿದೆ. 3.89 ಲಕ್ಷ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. 16.20 ಲಕ್ಷ ಅರ್ಜಿಗಳನ್ನು ಹೊಸದಾಗಿ ಸೇರಿಸಲಾಗಿದೆ. 1.73 ಲಕ್ಷ ತಿರಸ್ಕರಿಸಲಾಗಿದೆ ಎಂದರು.

224 ವಿಧಾನಸಭಾ ಕ್ಷೇತ್ರಗಳಲ್ಲಿ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ಅತಿ ಹೆಚ್ಚು ಅಂದರೆ 7,06,207 ಹಾಗೂ ಶೃಂಗೇರಿ ವಿಧಾನಸಭಾ ಕ್ಷೇತ್ರ ಅತಿ ಕಡಿಮೆ ಅಂದರೆ 1,66,907 ಮತದಾರರನ್ನು ಒಳಗೊಂಡಿದೆ. 115 ವಿಧಾನಸಭಾ ಕ್ಷೇತ್ರಗಳಲ್ಲಿ ಮಹಿಳಾ ಮತದಾರರೇ ಹೆಚ್ಚಿದ್ದಾರೆ. ಮಂಗಳೂರು ದಕ್ಷಿಣದಲ್ಲಿ ಪ್ರತಿ ಒಂದು ಸಾವಿರ ಪುರುಷರಿಗೆ 1,092 ಮಹಿಳಾ ಮತದಾರರು ಇದ್ದಾರೆ ಎಂದು ಹೇಳಿದರು.

ವಿಧಾನಸಭಾ ಚುನಾವಣೆಯಲ್ಲಿ 58,282 ಮತಗಟ್ಟೆ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. 845 ಮತಗಟ್ಟೆ ಹೊಸದಾಗಿ ಸೇರಿಸಲಾಗಿದೆ. 293 ವಿಲೀನಗೊಳಿಸಲಾಗಿದೆ. 2024 ಲೋಕಸಭಾ ಚುನಾವಣೆಗೆ ಒಟ್ಟು 58,834 ಮತಗಟ್ಟೆಗಳಿರುತ್ತವೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ವೆಂಕಟೇಶ್ ಕುಮಾರ್ ಹಾಗೂ ಕೂರ್ಮಾ ರಾವ್ ಉಪಸ್ಥಿತರಿದ್ದರು.

ಹೆಬ್ಬಾಳ ಪ್ರಕರಣದ ತನಿಖೆ ನಡೆಯುತ್ತಿದೆ: ಮೀನಾ

ಹೆಬ್ಬಾಳದಲ್ಲಿ ಪತ್ತೆಯಾದ ನಕಲಿ ಮತದಾರರ ಪಟ್ಟಿ ಪ್ರಕರಣ ಕುರಿತು ತನಿಖೆ ನಡೆಯುತ್ತಿದೆ. ಅಕ್ರಮವಾಗಿ ಚೀಟಿಗಳನ್ನು ಮುದ್ರಿಸುವುದು ಕಂಡುಬಂದರೆ ಆಯೋಗಕ್ಕೆ ಮಾಹಿತಿ ನೀಡಲು ಸಾರ್ವಜನಿಕರನ್ನು ಕೋರಲಾಗಿದೆ. ರೋಹಿಂಗ್ಯಾ ಸಮುದಾಯದವರೂ ಸೇರಿದಂತೆ ಅನಧಿಕೃತ ಮತದಾರರು ಇರುವ ಕುರಿತು ದೂರು ಬಂದರೆ ಕ್ರಮ ಕೈಗೊಳ್ಳಲಾಗುವುದು. ದೂರು ಆಧರಿಸಿ ಈಗಾಗಲೇ ಒಂದು ಪ್ರಕರಣ ಪತ್ತೆ ಮಾಡಲಾಗಿದೆ ಎಂದು ಮನೋಜ್‌ಕುಮಾರ್ ಮೀನಾ ಹೇಳಿದರು.

ಕೆಲ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಮನೆಮನೆ ಸಮೀಕ್ಷೆ ಮಾಡಿಸಿದ್ದೇವೆ. ಕಾರಣಗಳನ್ನು ಕಲೆಹಾಕಲಾಗುತ್ತಿದೆ

ಮನೋಜ್‌ಕುಮಾರ್ ಮೀನಾ, ರಾಜ್ಯ ಮುಖ್ಯ ಚುನಾವಣಾಧಿಕಾರಿ

ರಾಜ್ಯಪಾಲರ ಬದಲಿಸಬೇಡಿ: ಸ್ಟಾಲಿನ್ ವ್ಯಂಗ್ಯ

ಚೆನ್ನೈ: ದ್ರಾವಿಡವಾದದ ವಿರುದ್ಧದ ರಾಜ್ಯಪಾಲ ಆರ್.ಎನ್. ರವಿ ಅವರ ಹೇಳಿಕೆಗಳು ಡಿಎಂಕೆಯ ಚುನಾವಣಾ ಪ್ರಚಾರಕ್ಕೆ ‘ಹೆಚ್ಚು ಬಲ’ ನೀಡುತ್ತಿರುವುದರಿಂದ 2024ರ ಲೋಕಸಭೆ ಚುನಾವಣೆವರೆಗೂ ರಾಜ್ಯಪಾಲರನ್ನು ಬದಲಾಯಿಸಬೇಡಿ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವ್ಯಂಗಭರಿತವಾಗಿ ಮನವಿ ಮಾಡಿದ್ದಾರೆ.

‘ಸುಳ್ಳಿನ ಮೇಲೆ ಸುಳ್ಳಿನ ಆರೋಪ ಮಾಡಲು, ರಾಜ್ಯಪಾಲ ಆರ್. ಎನ್. ರವಿ ಅವರಿಗೆ ತಮಿಳುನಾಡಿನಲ್ಲಿ ಸಾಂವಿಧಾನಿಕ ಹುದ್ದೆಯಲ್ಲಿ ಮುಂದುವರಿಯಲು ಅನುಮತಿಸಬೇಕು ಮತ್ತು ಅವರನ್ನು ಲೋಕಸಭೆ ಚುನಾವಣೆವರೆಗೂ ಬದಲಾಯಿಸಬಾರದು ’ ಎಂದು ಸ್ಟಾಲಿನ್ ಲೇವಡಿ ಮಾಡಿದ್ದಾರೆ.

ಶಿಕ್ಷಕರ ಕ್ಷೇತ್ರ: ಕರಡು ಪಟ್ಟಿ ನ.23ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಶಿಕ್ಷಕರ ಕ್ಷೇತ್ರ ಹಾಗೂ ಪದವೀಧರರ ಕ್ಷೇತ್ರದ ಮತದಾರರ ಕರಡು ಪಟ್ಟಿಯನ್ನು ನ.23ರಂದು ಪ್ರಕಟಿಸಲಾಗುತ್ತದೆ ಎಂದು ಬಿಬಿಎಂಪಿ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್ ತಿಳಿಸಿದರು.

ಬೆಂಗಳೂರು ಶಿಕ್ಷಕರು ಹಾಗೂ ಪದವೀಧರರ ಕ್ಷೇತ್ರ ಚುನಾವಣೆಗೆ ಸಂಬಂಧಿಸಿದಂತೆ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜೊತೆ ಶುಕ್ರವಾರ ಸಭೆ ನಡೆಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಈ ಎರಡು ಕ್ಷೇತ್ರಗಳಲ್ಲಿ ನೂತನವಾಗಿ(ಡಿ-ನೊವೊ) ಮತದಾರ ಪಟ್ಟಿಯನ್ನು 2023ರ ನ.1ಕ್ಕೆ ಅನ್ವಯವಾಗುವಂತೆ ಸಿದ್ಧಪಡಿಸಲಾಗುತ್ತದೆ. ನ.6 ಅರ್ಜಿ ನಮೂನೆ-18 ಅಥವಾ ನಮೂನೆ-19ನ್ನು ಸ್ವೀಕರಿಸಲು ಕೊನೆ ದಿನ.

ನ.20ರಂದು ಹಸ್ತಪ್ರತಿಗಳು ತಯಾರಿಕೆ ಮತ್ತು ಕರಡು ಮತದಾರರ ಪಟ್ಟಿಯನ್ನು ಮುದ್ರಿಸಲಾಗುತ್ತದೆ. ನ. 23ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ. ಡಿ.9ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದ್ದು, ಡಿ.30ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಕೊಳಚೆ ನೀರು: ಜನರ ಪರದಾಟ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಮಮೂರ್ತಿನಗರ ವಾರ್ಡ್‌ನ ಗ್ರೀನ್ ಗಾರ್ಡನ್ ಬಡಾವಣೆಯಿಂದ ಕಲ್ಕೆರೆ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ನೀರು ರಸ್ತೆಯ ಮೇಲೆ ಹರಿಯುತ್ತಿರುವುದರಿಂದ ಜನರು ರಸ್ತೆ ದಾಟಲು ಹರಸಾಹಸ ಪಡುತ್ತಿದ್ದಾರೆ.

ಕಲ್ಕೆರೆ ಖಾನೆ ಮುಖ್ಯ ರಸ್ತೆಯ ಮೂಲಕ ಹಾದು ಹೋಗಿರುವ ಸುಮಾರು ಒಂದು ಕಿ.ಮೀ ಉದ್ದದ ರಾಜಕಾಲುವೆ ಕೆಲವು ಪ್ರಭಾವಿಗಳಿಂದ ಒತ್ತುವರಿಯಾಗಿದೆ. 60 ಅಡಿ ಇದ್ದ ರಾಜಕಾಲುವೆ ಸಣ್ಣ ಮೋರಿಯಂತಾಗಿರುವುದೇ ಕಾಲುವೆಯಲ್ಲಿ ಹರಿಯಬೇಕಿದ್ದ ಕೊಳಚೆ ರಸ್ತೆಗೆ ಬರಲು ಕಾರಣವಾಗಿದೆ.

ಮಳೆ ಬಂದರೆ ಕೊಳಚೆ ನೀರು ಮತ್ತು ಮಳೆ ನೀರು ಮನೆಗಳಿಗೆ ಪ್ರವಾಹದಂತೆ ನುಗ್ಗುತ್ತದೆ. ರಾಜಕಾಲುವೆಯಲ್ಲಿ ಗಿಡಗಂಟಿ ಬೆಳೆದಿವೆ. ಪ್ಲಾಸ್ಟಿಕ್ ಕವರ್, ಥರ್ಮಕೋಲ್‌ಗಳಿಂದ ಕಾಲುವೆ ತುಂಬಿ ಹೋಗಿದೆ. ಸೊಳ್ಳೆ ಉತ್ಪತ್ತಿಯ ತಾಣವಾಗಿದೆ ಎಂದು ಸ್ಥಳೀಯರು ತಿಳಿಸಿದರು.

ರಸ್ತೆ ದಾಟುವಾಗ ವಾಹನ ಸವಾರರು ಪಲ್ಟಿಯಾಗಿ ಗಾಯಗೊಂಡಿದ್ದಾರೆ. ಈ ದಾರಿಯಲ್ಲಿ ತೆರಳುವ ಜಾನುವಾರುಗಳಿಗೆ ತೊಂದರೆಯಾಗಿದೆ. ರಾಜಕಾಲುವೆ ಒತ್ತುವರಿಯೇ ಇದಕ್ಕೆ ಕಾರಣ. ಆದರೆ, ಒತ್ತುವರಿದಾರರ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಳ್ಳದೆ ಮೌನ ವಹಿಸಿದ್ದಾರೆ ಎಂದು ಸ್ಥಳೀಯ ಕಿರಣ್ ದೂರಿದರು.

ರಸ್ತೆಯಲ್ಲಿ ಹರಿಯುತ್ತಿರುವ ಕೊಳಚೆಯಲ್ಲಿ ದ್ವಿಚಕ್ರ ವಾಹನಗಳು ಹಾಗೂ ಲಘು ವಾಹನಗಳು ಸಂಚರಿಸುವುದೇ ಕಷ್ಟ. ಶಾಲಾ ಮಕ್ಕಳು, ಹಿರಿಯರು, ಗರ್ಭಿಣಿಯರು ರಸ್ತೆ ದಾಟಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ ಎಂದು ಸ್ಥಳೀಯ ನಿವಾಸಿ ಕಲ್ಕೆರೆ ರವಿಕುಮಾರ್ ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಬೃಹತ್ ನೀರುಗಾಲುವೆ ಅಧಿಕಾರಿಗಳಾದ ಮಾಲತಿ ಹಾಗೂ ಸತೀಶ್ ಅವರಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಪ್ರತಿಭಟನೆ... ವಿದ್ಯಾರ್ಥಿ ವೇತನ ಬಿಡುಗಡೆಗೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನೇತೃತ್ವದಲ್ಲಿ ವಿದ್ಯಾರ್ಥಿಗಳು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಅಮೃತ ಕಲಶ ಯಾತ್ರೆಯ ವಿಶೇಷ ರೈಲಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಂವಿಟಿ ಬೆಂಗಳೂರು - ನಿಜಾಮುದ್ದೀನ್ - ಎಸ್‌ಎಂವಿಟಿ ಬೆಂಗಳೂರು ಅಮೃತ ಕಲಶ ಯಾತ್ರೆ ವಿಶೇಷ ರೈಲಿಗೆ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ (ಎಸ್‌ಎಂವಿಟಿ) ಶುಕ್ರವಾರ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ ಚಾಲನೆ ನೀಡಿದರು.

ಅಕ್ಟೋಬರ್ 30 ಮತ್ತು 31 ರಂದು ನವದೆಹಲಿಯಲ್ಲಿ ನಡೆಯಲಿರುವ ‘ಮೇರಿ ಮಾಟಿ ಮೇರಾ ದೇಶ್’ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಅನುಕೂಲವಾಗುವಂತೆ ವಿಶೇಷ ರೈಲು ವ್ಯವಸ್ಥೆ ಮಾಡಲಾಗಿತ್ತು. ಅ.31ರಂದು ಪ್ರಧಾನಿ ನರೇಂದ್ರ ಮೋದಿ ಈ ಕಾರ್ಯಕ್ರಮದಲ್ಲಿ ಮಾತನಾಡಲಿದ್ದಾರೆ.

ದೇಶಕ್ಕಾಗಿ ತ್ಯಾಗ ಮಾಡಿದ ಜನರಿಗೆ ಗೌರವ ಸಲ್ಲಿಸುವ ಸಂಕೇತವಾಗಿ ಪ್ರತಿ ಮನೆಯಿಂದ ಮಣ್ಣು ಸಂಗ್ರಹಿಸಲಾಗಿತ್ತು. ಈ ಮಣ್ಣನ್ನು ದೆಹಲಿಗೆ ಅಮೃತ ಕಲಶದಲ್ಲಿ ಕೊಂಡೊಯ್ಯಲಾಗುತ್ತಿದೆ. ರಾಷ್ಟ್ರದ ರಾಜಧಾನಿಯಲ್ಲಿ ನಿರ್ಮಿಸಲಾಗುತ್ತಿರುವ ಅಮೃತ ವಾಟಿಕಾದಲ್ಲಿ ಈ ಮಣ್ಣು ಬಳಕೆಯಾಗಲಿದೆ. ಅಜಾದಿ ಕಾ ಅಮೃತ್ ಮಹೋತ್ಸವದ ಸ್ಮಾರಕದೊಂದಿಗೆ ಅಮೃತ್ ವಾಟಿಕಾವು ಇರಲಿದೆ.

ಅಮೃತ ಕಲಶ ಒಯ್ಯುತ್ತಿರುವ 234 ಜನರು, ನಗರ ಸ್ಥಳೀಯ ಸಂಸ್ಥೆಗಳ 314 ಮಂದಿ, ನೆಹರೂ ಯುವ ಕೇಂದ್ರ ಸಂಘಟನೆಯ 457 ಸ್ವಯಂಸೇವಕರು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ 11 ಬೆಂಗಾವಲು ಅಧಿಕಾರಿಗಳು ಈ ವಿಶೇಷ ರೈಲಿನಲ್ಲಿ ಪ್ರಯಾಣಿಸಿದರು.

ಚಾಲನಾ ಕಾರ್ಯಕ್ರಮದಲ್ಲಿ ರೈಲ್ವೆ ಮುಖ್ಯ ವಾಣಿಜ್ಯ ವ್ಯವಸ್ಥಾಪಕ ಅನೂಪ್ ದಯಾನಂದ ಸಾಧು, ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕ ಅಶುತೋಷ್ ಮಾಥುರ್, ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ. ದಾಸ್, ಅಂಚೆ ಇಲಾಖೆ ನಿರ್ದೇಶಕಿ ಕಿಯಾ ಅರೋರಾ, ನೆಹರೂ ಯುವ ಕೇಂದ್ರ ಸಂಘಟನೆ ಅಧಿಕಾರಿ ಎಂ.ಎನ್. ನಟರಾಜ್, ಜಿಲ್ಲಾ ಪಂಚಾಯಿತಿ ಸಿಇಒ ಕಾಂತರಾಜು ಪಿ.ಎಸ್. ಇದ್ದರು.



ಅಮೃತ ಕಲಶ ಯಾತ್ರೆ ವಿಶೇಷ ರೈಲಿಗೆ ಬೆಂಗಳೂರು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ಶುಕ್ರವಾರ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಚಾಲನೆ ನೀಡಿದರು.

‘ಬರ ಪರಿಹಾರ: ಕ್ರಿಯಾ ಯೋಜನೆ ರೂಪಿಸಿ’

ಕೆಂಗೇರಿ: ಬೆಂಗಳೂರು ದಕ್ಷಿಣ ತಾಲ್ಲೂಕು ಸಾಧಾರಣ ಬರ ಪೀಡಿತ ತಾಲ್ಲೂಕು ಎಂದು ಘೋಷಣೆಯಾಗಿದ್ದು, ಬರ ಪರಿಹಾರಕ್ಕಾಗಿ ಸರ್ಕಾರ ಹಣ ಬಿಡುಗಡೆ ಮಾಡಲು ಕ್ರಿಯಾ ಯೋಜನೆ ರೂಪಿಸಬೇಕು ಎಂದು ಯಶವಂತಪುರ ಶಾಸಕ ಎಸ್. ಟಿ. ಸೋಮಶೇಖರ್ ಸೂಚನೆ ನೀಡಿದರು.

ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಬರ ಪರಿಹಾರದ ಬಗ್ಗೆ ಚರ್ಚಿಸಲಾಯಿತು.

‘ಮುಂಗಾರು ವೈಫಲ್ಯದಿಂದ ರಾಜ್ಯದ 195 ತಾಲ್ಲೂಕುಗಳು ಬರ ಪೀಡಿತವಾಗಿವೆ. ಈ ಪೈಕಿ 161 ತಾಲ್ಲೂಕುಗಳು ತೀವ್ರ ಬರದಿಂದ ಬಾಧಿತವಾಗಿವೆ. 34 ತಾಲ್ಲೂಕುಗಳಲ್ಲಿ ಸಾಧಾರಣ ಬರಗಾಲವಿದೆ. ಈ ತಾಲ್ಲೂಕುಗಳಲ್ಲಿ ನಮ್ಮ ತಾಲ್ಲೂಕು ಕೂಡ ಸೇರಿದೆ’ ಎಂದು ವಿವರಿಸಿದರು.

ಯಶವಂತಪುರ ಕ್ಷೇತ್ರದಲ್ಲಿ ಸಾವಿರಾರು ರೈತರಿದ್ದಾರೆ. ಮಳೆ ಕೊರತೆಯಿಂದ ದನ ಕರುಗಳಿಗೆ ನೀರು-ಮೇವಿನ ಸಮಸ್ಯೆ ಉಂಟಾಗಲಿದೆ. ಈ ತೊಂದರೆ ನಿವಾರಿಸಲು ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ನೀರಿನ ತೊಟ್ಟಿ ನಿರ್ಮಾಣ ಮಾಡಬೇಕು. ಮೇವು ಪೂರೈಕೆ ಹಾಗೂ ಪಶುಗಳ ಸಂರಕ್ಷಣೆಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಜನರಿಗೆ ನೀರಿನ ಬವಣೆ ಉಂಟಾಗುತ್ತಿರುವ ಪ್ರದೇಶಗಳಲ್ಲಿ ಅಗತ್ಯ ಸಂಖ್ಯೆಯಲ್ಲಿ ಕೊಳವೆ ಬಾವಿ ಕೊರೆಸಲು ಒತ್ತು ನೀಡಬೇಕು. ಬರ ನಿರ್ವಹಣೆಗೆ ಅಂದಾಜು ವೆಚ್ಚ ಸಿದ್ಧಪಡಿಸಿ ಸರ್ಕಾರಕ್ಕೆ ಶೀಘ್ರ ಸಲ್ಲಿಸಬೇಕು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

16 ಗ್ರಾಮ ಪಂಚಾಯಿತಿಗಳ ಪಿಡಿಒ ಹಾಗೂ ಇತರೆ ಅಧಿಕಾರಿಗಳು ಪಾಲ್ಗೊಂಡಿದ್ದರು. ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಬಿಂದು ಇದ್ದರು.

ಮಧುಮೇಹಿಗಳ ದಿಕ್ಕು ತಪ್ಪಿಸುವ ಬಗ್ಗೆ ವೈದ್ಯಕೀಯ ತಜ್ಞರು ಕಳವಳ

‘ಡಯಾಬಿಟಿಸ್ ರೆಮಿಷನ್’ಗಿಲ್ಲ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧುಮೇಹ ನಿಯಂತ್ರಣಕ್ಕೆ ಸಹಕಾರಿಯಾದ ‘ಡಯಾಬಿಟಿಸ್ ರೆಮಿಷನ್’ ಪರಿಕಲ್ಪನೆ ರಾಜ್ಯದಲ್ಲಿ ಇತ್ತೀಚೆಗೆ ‘ಡಯಾಬಿಟಿಸ್ ರಿವರ್ಸಲ್’ ಹೆಸರಿನಲ್ಲಿ ಮುನ್ನಲೆಗೆ ಬಂದಿದೆ. ಆದರೆ, ಇದಕ್ಕೆ ಸೂಕ್ತ ಮಾರ್ಗಸೂಚಿ ಇಲ್ಲದಿರುವುದು ಚಿಕಿತ್ಸೆಗೆ ತೊಡಕಾಗಿದೆ.

ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿಯಿಂದ ಮಧುಮೇಹಕ್ಕೆ ಒಳಗಾಗುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಆದ್ದರಿಂದ ಆರೋಗ್ಯ ಇಲಾಖೆಯು ರಾಷ್ಟ್ರೀಯ ಮಧುಮೇಹ ನಿಯಂತ್ರಣ ಕಾರ್ಯಕ್ರಮದಡಿ 30 ವರ್ಷ ಮೇಲ್ಪಟ್ಟ ಎಲ್ಲರಿಗೂ ಎನ್‌ಸಿಡಿ ಕ್ಲಿನಿಕ್‌ಗಳಲ್ಲಿ (ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್) ತಪಾಸಣೆ ನಡೆಸುತ್ತಿದೆ. ರಾಜ್ಯದಲ್ಲಿ ಜಿಲ್ಲಾ ಹಂತದ 30 ಎನ್‌ಸಿಡಿ ಕ್ಲಿನಿಕ್‌ಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 347 ಸಿ.ಎಚ್.ಸಿ-ಎನ್.ಸಿ.ಡಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ತಪಾಸಣೆಯಲ್ಲಿ ಪ್ರತಿವರ್ಷ 90 ಸಾವಿರಕ್ಕೂ ಅಧಿಕ ಮಂದಿಯಲ್ಲಿ ಹೊಸದಾಗಿ ಮಧುಮೇಹ ಪತ್ತೆಯಾಗುತ್ತಿದೆ. ಈ ರೋಗವನ್ನು ಪಥ್ಯದ ಮೂಲಕ ನಿಯಂತ್ರಿಸುವ ವಿಧಾನಕ್ಕೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಸೂಕ್ತ ಮಾರ್ಗಸೂಚಿ ರೂಪಿಸಿಲ್ಲ.

‘ಡಯಾಬಿಟಿಸ್ ರೆಮಿಷನ್’ ವಿಧಾನದ ಬಗ್ಗೆ ಐಸಿಎಂಆರ್ 18 ಸಾವಿರ ವಯಸ್ಕ ಮಧುಮೇಹಿಗಳ ಮೇಲೆ ಸಂಶೋಧನೆ ನಡೆಸಿತ್ತು. ಈ ವಿಧಾನದಿಂದ ಮಧುಮೇಹಕ್ಕೆ ಕಾರಣವಾದ ಕಾರ್ಬೋಹೈಡ್ರೇಟ್ ಅಂಶವನ್ನು ಶೇ 54ಕ್ಕೆ ಇಳಿಸಿತ್ತು. ಇದೇ ವೇಳೆ ಪ್ರೊಟೀನ್ ಪ್ರಮಾಣವನ್ನು ಶೇ 20ಕ್ಕೆ ಹೆಚ್ಚಿಸಿತ್ತು. ಇದರಿಂದ ಮಧುಮೇಹ ನಿಯಂತ್ರಣ ಸಾಧ್ಯವಾಗಿತ್ತು. ಮಧುಮೇಹ ನಿಯಂತ್ರಣದ ಬಗ್ಗೆ ವಿವಿಧ ಖಾಸಗಿ ಸಂಸ್ಥೆಗಳೂ ಅಧ್ಯಯನ ನಡೆಸಿವೆ. ಆದರೆ, ನಿರ್ದಿಷ್ಟ ವಿಧಾನ ರೂಪಿಸಿಲ್ಲ. ಟೈಪ್ 2 ಮಧುಮೇಹದ ನಿರ್ವಹಣೆ ಬಗ್ಗೆ ಮಾರ್ಗಸೂಚಿ ರೂಪಿಸಿರುವ ಐಸಿಎಂಆರ್, ಪಥ್ಯದ ಮೂಲಕ ನಿಯಂತ್ರಣ ವಿಧಾನಕ್ಕೆ ಮಾರ್ಗಸೂಚಿ ನೀಡಿಲ್ಲ. ಇದರಿಂದಾಗಿ ಈ ವಿಧಾನದ ದುರ್ಬಳಕೆ ಬಗ್ಗೆ ಮಧುಮೇಹ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಮಾರ್ಗಸೂಚಿ ಅಗತ್ಯ: ಆಹಾರ ಪಥ್ಯದ ಮೂಲಕ ಮಧುಮೇಹ ಕಾಯಿಲೆಯನ್ನು ನಿಯಂತ್ರಿಸುವ ವಿಧಾನದ ಕುರಿತು ಪೂರ್ಣ ಪ್ರಮಾಣದ ಸಂಶೋಧನೆ ನಡೆಸಿ, ನಿರ್ದಿಷ್ಟ ಮಾರ್ಗಸೂಚಿ ರೂಪಿಸುವ ಬಗ್ಗೆಯೂ ಆಗ್ರಹ ವ್ಯಕ್ತವಾಗಿದೆ. ಈ ಬಗ್ಗೆ ಮಧುಮೇಹ ತಜ್ಞರೂ ಆಗಿರುವ ಡಾ. ವಾಸು ಎಚ್.ವಿ. ಅವರು ಐಸಿಎಂಆರ್ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪತ್ರ ಬರೆದಿದ್ದಾರೆ.

‘ಮಧುಮೇಹವನ್ನು ನಿಯಂತ್ರಿಸಬಹುದೇ ಹೊರತು ನಿವಾರಿಸಲು ಸಾಧ್ಯವಿಲ್ಲ. ಆಹಾರ ಪಥ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ಮಧುಮೇಹ ನಿಯಂತ್ರಣ ಸಾಧ್ಯವೆನ್ನುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಆಹಾರ ಪದ್ಧತಿಯಲ್ಲಿ ವ್ಯತ್ಯಾಸವಾದರೆ ಮತ್ತೆ ಮಧುಮೇಹ ಬರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮಾರ್ಗಸೂಚಿ ಅತ್ಯಗತ್ಯ. ಇಲ್ಲವಾದಲ್ಲಿ ಈ ವಿಧಾನವನ್ನು ಕೆಲ ಕೇಂದ್ರಗಳು ದುರ್ಬಳಕೆ ಮಾಡಿಕೊಂಡು, ಮಧುಮೇಹಿಗಳ ದಿಕ್ಕು ತಪ್ಪಿಸುವ ಸಾಧ್ಯತೆಯಿದೆ’ ಎಂದು ಮಧುಮೇದಹ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.



ಡಯಾಬಿಟಿಸ್ ರೆಮಿಷನ್ ಇತ್ತೀಚೆಗೆ ಉದ್ಯಮ ಆಗಿದೆ. ವ್ಯಾಯಾಮ, ಪಥ್ಯದಿಂದ ಮಧುಮೇಹವನ್ನು ಹತೋಟಿಗೆ ತಂದು, ಮಾತ್ರೆಗಳನ್ನು ಕಡಿಮೆ ಮಾಡಬಹುದು.

ಡಾ. ಅನಿಲ್ ಕುಮಾರ್ ಆರ್., ಕರ್ನಾಟಕ ಎಂಡೋಕ್ರೈನಾಲಜಿ ಮತ್ತು ಸಂಶೋಧನಾ ಸಂಸ್ಥೆ ಹೊರರೋಗಿ ವಿಭಾಗದ ಮುಖ್ಯಸ್ಥ



ಮಧುಮೇಹವನ್ನು ಮಾತ್ರೆ ಇಲ್ಲದೆ ನಿರ್ವಹಿಸಿ, ನಿಯಂತ್ರಿಸಬಹುದು. ಇದಕ್ಕೆ ಸೂಕ್ತ ಮಾರ್ಗಸೂಚಿ ಇಲ್ಲದಿದ್ದರೆ ಬಿಸಿನೆಸ್ ಆಗುವ ಸಾಧ್ಯತೆ ಇರುತ್ತದೆ. ವಿದೇಶದಲ್ಲಿ ಮಾರ್ಗಸೂಚಿಯಿದೆ.

ಡಾ. ವಾಸು ಎಚ್.ವಿ., ಆ್ಯಕ್ಟಿವ್ ಹೆಲ್ತ್ ಡಯಾಬಿಟಿಸ್ ಸೆಂಟರ್ ಮುಖ್ಯಸ್ಥ

‘ಅಲ್ಪಾವಧಿಯಲ್ಲಿ ನಿಯಂತ್ರಣ ಅಸಾಧ್ಯ’



ಡಾ. ಸಂಜಯ್ ಕಂಬಾರ್

‘ರಕ್ತದಲ್ಲಿರುವ ಸಕ್ಕರೆ ಅಂಶವನ್ನು ಆಹಾರ ಪಥ್ಯ, ವ್ಯಾಯಾಮದಿಂದ ನಿಯಂತ್ರಿಸಬಹುದು. ‘ಡಯಾಬಿಟಿಸ್ ರೆಮಿಷನ್’ ವಿಧಾನಕ್ಕೆ ಒಳಗಾದವರಿಗೆ ಹಂತ ಹಂತವಾಗಿ ಔಷಧದ ಪ್ರಮಾಣವನ್ನು ಕಡಿತ ಮಾಡಲಾಗುತ್ತದೆ. ಆಹಾರ ಪಥ್ಯ ಪಾಲನೆ ಹಾಗೂ ದೈಹಿಕ ಚಟುವಟಿಕೆ ಬಿಟ್ಟರೆ ಮತ್ತೆ ಮಧುಮೇಹ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಶಾಶ್ವತವಾಗಿ ಮಧುಮೇಹ ನಿಯಂತ್ರಣದ ಸದ್ಯದ ಮಟ್ಟಿಗೆ ಸಾಧ್ಯವಿಲ್ಲ’ ಎಂದು ಬೆಳಗಾವಿಯ ಕೆಎಲ್‌ಇ ಡಾ.ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದ ಮಧುಮೇಹ ತಜ್ಞ ಡಾ. ಸಂಜಯ್ ಕಂಬಾರ್ ತಿಳಿಸಿದರು.

‘ಮಧುಮೇಹ ಯಾವುದೇ ಹಂತದಲ್ಲಿ ಇದ್ದರೂ ನಿಯಂತ್ರಣ ಸಾಧ್ಯ. ಪ್ರತಿವರ್ಷ ಮಧುಮೇಹ ಪರೀಕ್ಷೆಗೆ ಒಳಪಟ್ಟರೆ ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ, ಆಹಾರ ಪಥ್ಯಕ್ಕೆ ಸೂಕ್ತ ಸಲಹೆಗಳನ್ನು ನೀಡಬಹುಹುದು. ಇದರ ನಿಯಂತ್ರಣಕ್ಕೆ ಕನಿಷ್ಠ ಮೂರು ತಿಂಗಳಾದರೂ ಬೇಕಾಗುತ್ತದೆ. ಕೆಲವರಿಗೆ ಒಂದು ವರ್ಷವೂ ಹಿಡಿಯುತ್ತದೆ’ ಎಂದು ಹೇಳಿದರು.

ಮೈಸೂರು– ಬೆಂಗಳೂರು: ಬಸ್ ಪ್ರಯಾಣ ದರ ಏರಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರು–ಮೈಸೂರು ತಡೆರಹಿತ ಬಸ್ ಪ್ರಯಾಣ ದರವನ್ನು ಕೆಎಸ್ಆರ್‌ಟಿಸಿ ಏರಿಕೆ ಮಾಡಿದ್ದು, ₹185 ಇದ್ದ ದರವು ₹200 ಆಗಿದೆ.

ಸಾಮಾನ್ಯ (ಕೆಂಪು ಬಸ್) ಪ್ರಯಾಣಕ್ಕೆ ₹15 ಹೆಚ್ಚಿಸಿದ್ದು, ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ ನಿಲುಗಡೆಯಿರುವ ಬಸ್ ಪ್ರಯಾಣ ದರದಲ್ಲಿ ಯಾವುದೇ ವ್ಯತ್ಯಾಸವಿಲ್ಲ.

'ಶಕ್ತಿ ಯೋಜನೆ ಅನುಷ್ಠಾನದ ನಂತರ ತಡೆರಹಿತ ಸೇವೆಗೆ ಬೇಡಿಕೆ ಹೆಚ್ಚಾಗಿದೆ. ಹೆದ್ದಾರಿಯ ಟೋಲ್ ದರವೂ ಏರಿಕೆಯಾಗಿದೆ. ಬಸ್ ಬಿಡಿಭಾಗಗಳು ಹಾಗೂ ಇಂಧನ ದರವೂ ಹೆಚ್ಚಿರುವುದರಿಂದ ದರ ಏರಿಕೆ ಮಾಡಲಾಗಿದೆ' ಎಂದು ನಿಗಮದ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಡಿ.ಶ್ರೀನಿವಾಸ್ ತಿಳಿಸಿದ್ದಾರೆ.

'ಬೆಂಗಳೂರು– ಮೈಸೂರು ನಡುವೆ ನಿತ್ಯ 30 ಬಸ್‌ಗಳು 65 ಬಾರಿ (ಟ್ರಿಪ್) ತಡೆರಹಿತವಾಗಿ ಸಂಚರಿಸುತ್ತಿವೆ. ರಾಜಹಂಸ, ಐರಾವತ ಸೇರಿದಂತೆ ಇತರ ಬಸ್ ದರದಲ್ಲಿ ಯಾವುದೇ ಹೆಚ್ಚಳ ಇಲ್ಲ' ಎಂದಿದ್ದಾರೆ.

ಗೌಪ್ಯವಾಗಿ ಪ್ರಕ್ರಿಯೆ ನಡೆಸಿದ ಗ್ರಂಥಾಲಯ ಇಲಾಖೆ • ಪ್ರಕಾಶಕರ ವಲಯದಲ್ಲಿ ಅಸಮಾಧಾನ

ಆಯ್ಕೆಯಾದ ಪುಸ್ತಕ ಮರುಪರಿಶೀಲನೆ

• ವರುಣ ಹೆಗಡೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸೂಚನೆ ಮೇರೆಗೆ ಎರಡು ವರ್ಷಗಳ ಹಿಂದೆಯೇ ಅಂತಿಮಗೊಂಡಿದ್ದ 2020ನೇ ಸಾಲಿನ ಪುಸ್ತಕಗಳ ಪಟ್ಟಿಯನ್ನು ರಾಜ್ಯ ಮಟ್ಟದ ನೂತನ ಪುಸ್ತಕ ಆಯ್ಕೆ ಸಮಿತಿ ಗೌಪ್ಯವಾಗಿ ಮರುಪರಿಶೀಲನೆ ನಡೆಸಿದೆ. ಈ ನಡೆ ಪ್ರಕಾಶಕರ ವಲಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಪುಸ್ತಕ ಆಯ್ಕೆಗೆ ಸಂಬಂಧಿಸಿದಂತೆ ಹಿಂದಿನ ಬಿಜೆಪಿ ಸರ್ಕಾರ ಸಾಹಿತಿ ದೊಡ್ಡರಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚಿಸಿತ್ತು. ಈ ಸಮಿತಿಯು 2020ನೇ ಸಾಲಿನ ಪುಸ್ತಕಗಳನ್ನು ಕಳೆದ ವರ್ಷ ಆಯ್ಕೆ ಮಾಡಿತ್ತು. ಮೀಸಲು ಅನುದಾನ ಅನ್ಯ ಕಾರ್ಯಗಳಿಗೆ ಬಳಕೆ ಸೇರಿ ವಿವಿಧ ಕಾರಣಗಳಿಂದ ವರ್ಷ ಕಳೆದರೂ ಸರ್ಕಾರವು ಪುಸ್ತಕ ಪಟ್ಟಿಗೆ ಅನುಮೋದನೆ ನೀಡಿ, ಖರೀದಿ ಪ್ರಕ್ರಿಯೆ ನಡೆಸಿರಲಿಲ್ಲ. ಕಳೆದ ಬಜೆಟ್‌ನಲ್ಲಿ ₹ 10 ಕೋಟಿ ಅನುದಾನ ಘೋಷಿಸಿದ್ದ ಕಾಂಗ್ರೆಸ್ ಸರ್ಕಾರ, ಇತ್ತೀಚೆಗೆ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯನ್ನು ಪುನರ್ ರಚಿಸಿದೆ. ಸಾಹಿತಿ ಕರೀಗೌಡ ಬೀಚನಹಳ್ಳಿ ಅವರ ಅಧ್ಯಕ್ಷತೆಯ ನೂತನ ಸಮಿತಿ ಇಲಾಖೆಯ ಸೂಚನೆ ಮೇರೆಗೆ ಅಂತಿಮಗೊಂಡಿದ್ದ ಪುಸ್ತಕ ಪಟ್ಟಿಯನ್ನು ಮರುಪರಿಶೀಲನೆ ನಡೆಸಿದೆ.

2020ನೇ ಸಾಲಿನ ಪುಸ್ತಕಗಳ ಖರೀದಿ ನನೆಗುದಿಗೆ ಬಿದ್ದಿರುವುದರಿಂದ ಮೂರು ವರ್ಷಗಳ ಪುಸ್ತಕ ಖರೀದಿ ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ಅಂತಿಮಗೊಂಡ 2020ನೇ ಸಾಲಿನ ಪುಸ್ತಕ ಪಟ್ಟಿಗೆ ಅನುಮೋದನೆ ನೀಡಿ, ಖರೀದಿ ಪ್ರಕ್ರಿಯೆ ನಡೆಸುವಂತೆ ಹಿಂದಿನ ಬಿಜೆಪಿ ಹಾಗೂ ಈಗಿನ ಕಾಂಗ್ರೆಸ್ ಸರ್ಕಾರಕ್ಕೆ ಪ್ರಕಾಶಕರು ಮತ್ತು ಸಾಹಿತಿಗಳು ಹಲವು ಬಾರಿ ಮನವಿ ಮಾಡಿಕೊಂಡಿದ್ದರು. ಈಗ ಮತ್ತೊಮ್ಮೆ ಪರಿಶೀಲನೆ ನಡೆಸಿ, ಅನುಮೋದನೆಗೆ ಸಲ್ಲಿಸಿರುವುದರಿಂದ ಪುಸ್ತಕ ಖರೀದಿ ಪ್ರಕ್ರಿಯೆ ಇನ್ನಷ್ಟು ವಿಳಂಬವಾಗಲಿದೆ.

ಕೈಬಿಟ್ಟಿರುವ ಬಗ್ಗೆ ಶಂಕೆ: ರಾಜ್ಯದಲ್ಲಿ ಸುಮಾರು 500 ಪ್ರಕಾಶನ ಸಂಸ್ಥೆಗಳಿವೆ. ಕೆಲವು ಲೇಖಕರು ಕೂಡ ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದಾರೆ. ಪ್ರತಿ ವರ್ಷ ಸುಮಾರು 8 ಸಾವಿರದಿಂದ 10 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಬಹುತೇಕ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ. ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ ಪ್ರತಿ ಶೀರ್ಷಿಕೆಯ 300 ಪ್ರತಿಗಳನ್ನು ಇಲಾಖೆ ಖರೀದಿಸಲಿದೆ. ನೂತನ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯು ಆಯ್ಕೆಯಾದ ಪುಸ್ತಕಗಳ ಪಟ್ಟಿ ಪರಿಶೀಲನೆ ವೇಳೆ ಕೆಲ ಪುಸ್ತಕಗಳನ್ನು ಕೈಬಿಟ್ಟಿರುವ ಬಗ್ಗೆ ಪ್ರಕಾಶಕರ ವಲಯದಲ್ಲಿ ಶಂಕೆ ವ್ಯಕ್ತವಾಗಿದೆ.

'ಇಲಾಖೆಯ ಸೂಚನೆಯಂತೆ 2020ನೇ ಸಾಲಿನ ಪುಸ್ತಕಗಳ ಮರುಪರಿಶೀಲನೆ ನಡೆಸಿದ್ದೇವೆಯೇ ಹೊರತು ಮರು ಆಯ್ಕೆ ಮಾಡಿಲ್ಲ' ಎಂದು ಪುಸ್ತಕ ಆಯ್ಕೆ ಸಮಿತಿಯ ಸದಸ್ಯರೊಬ್ಬರು ತಿಳಿಸಿದರು.

'ಇದೇ ಮೊದಲ ಬಾರಿ ರಾಜ್ಯ ಸರ್ಕಾರ ರಚಿಸಿದ ಸಮಿತಿಯೇ ಆಯ್ಕೆ ಮಾಡಿದ ಪುಸ್ತಕಗಳನ್ನು ಮತ್ತೊಮ್ಮೆ ಪರಿಶೀಲನೆ ನಡೆಸಲಾಗಿದೆ. ಈಗಾಗಲೇ ಖರೀದಿ ಪ್ರಕ್ರಿಯೆ ಸಾಕಷ್ಟು ವಿಳಂಬವಾಗಿದೆ. ಸರ್ಕಾರದ ಈ ನಡೆಯಿಂದ ಪುಸ್ತಕೋದ್ಯಮವೂ ರಾಜಕೀಯ ಬಣ್ಣ ಪಡೆದುಕೊಳ್ಳಲಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಪ್ರಕಾಶಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ಕನ್ನಡ ಪುಸ್ತಕೋದ್ಯಮಕ್ಕೆ ಹಿನ್ನಡೆ


ಯೋಜನೆಯಡಿ ಈಗಾಗಲೇ 2021ರ ಪುಸ್ತಕಗಳ ಖರೀದಿ ಪ್ರಕ್ರಿಯೆಯೂ ನಡೆದು, 2022ರ ಪುಸ್ತಕಗಳ ಆಯ್ಕೆ ಹಾಗೂ ಖರೀದಿ ಈ ವರ್ಷ ನಡೆಯಬೇಕಾಗಿತ್ತು. ಆದರೆ, 2020ರ ಪುಸ್ತಕಗಳ ಖರೀದಿಯೇ ನಡೆಯದಿದ್ದರಿಂದ ಮುಂದಿನ ವರ್ಷಗಳ ಆಯ್ಕೆ ಪ್ರಕ್ರಿಯೆಯೂ ನಡೆದಿಲ್ಲ. ಈಗ 2020ನೇ ಸಾಲಿನ ಪುಸ್ತಕಗಳ ಪಟ್ಟಿಯನ್ನು ಮರುಪರಿಶೀಲನೆ ನಡೆಸಿರುವ ಸಮಿತಿ, 2021ನೇ ಸಾಲಿನ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿದೆ. ಇದರಿಂದಾಗಿ ಇತ್ತೀಚಿನ ಪುಸ್ತಕಗಳು ರಾಜ್ಯದ ಗ್ರಂಥಾಲಯಗಳಲ್ಲಿ ಓದುಗರಿಗೆ ಸಿಗದಂತಾಗಿವೆ.

ಪ್ರಜಾವಾಣಿ ವಿಶೇಷ



ಪುಸ್ತಕಗಳ ಪಟ್ಟಿಯನ್ನು ನೂತನ ಸಮಿತಿ ಮರುಪರಿಶೀಲನೆ ನಡೆಸಿದ್ದು, ಅನುಮೋದನೆಗೆ ಕಾಯುತ್ತಿದ್ದೇವೆ. ಶೀಘ್ರವೇ ಖರೀದಿಯೂ ನಡೆಯಲಿದೆ

ಸತೀಶ್ ಕುಮಾರ್ ಹೊಸಮನಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ



ಪುಸ್ತಕ ಖರೀದಿಗೆ ನಿರ್ದಿಷ್ಟ ಬಜೆಟ್ ಘೋಷಿಸಬೇಕು. ಇಲ್ಲವಾದಲ್ಲಿ ಪ್ರತಿ ವರ್ಷವೂ ಖರೀದಿ ವಿಳಂಬ ಆಗುತ್ತದೆ. 2020ರ ಪಟ್ಟಿ ನಮ್ಮ ಮುಂದೆ ಇಲ್ಲ

ಕರೀಗೌಡ ಬೀಚನಹಳ್ಳಿ, ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ



ನಮ್ಮ ಸಮಿತಿಯು ಮೌಲಿಕವಾದ ಪುಸ್ತಕಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಿತ್ತು. ಪುಸ್ತಕ ಪಟ್ಟಿಯನ್ನು ಮರುಪರಿಶೀಲನೆ ಮಾಡುವುದು ಸರಿಯಾದ ಪ್ರಕ್ರಿಯೆಯಲ್ಲ

ದೊಡ್ಡರಂಗೇಗೌಡ, ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ಮಾಜಿ ಅಧ್ಯಕ್ಷ

ಬಸವೇಶ್ವರರ ಹೆಸರಿಗೆ ಯಾರ ವಿರೋಧ ಇಲ್ಲ

ವಿಜಯಪುರ ಜಿಲ್ಲೆಗೆ 'ಬಸವೇಶ್ವರ ಜಿಲ್ಲೆ' ಎಂದು ನಾಮಕರಣ ಮಾಡಬೇಕೆಂಬ ಧ್ವನಿಯೂ ಕೇಳಿಬಂದಿದೆ. ಸಾಧಕ–ಬಾದಕಗಳ ಬಗ್ಗೆ ಆಲೋಚಿಸಬೇಕು

ನಮ್ಮ ಮೆಟ್ರೊಗೆ ಬಸವೇಶ್ವರರ ಹೆಸರಿಡಲು ಚರ್ಚೆ: ಪಾಟೀಲ

ಬೆಂಗಳೂರು: 'ನಮ್ಮ ಮೆಟ್ರೊ'ಗೆ ಬಸವೇಶ್ವರರ ಹೆಸರನ್ನು ಇಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಮೆಟ್ರೊಗೆ ಬಸವೇಶ್ವರರ ಹೆಸರು ಇಡಬೇಕು ಎನ್ನುವ ಬೇಡಿಕೆ ಇದೆ. ಯಾವುದೋ ಒಂದು ನಿಲ್ದಾಣಕ್ಕೆ ಹೆಸರು ಇಡುವ ಬದಲು ಮೆಟ್ರೊ ವ್ಯವಸ್ಥೆಗೇ ಬಸವೇಶ್ವರರ ಹೆಸರು ಇಡುವುದು ಸೂಕ್ತ. ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರು ಇಟ್ಟ ಹಾಗೆ ಮೆಟ್ರೊಗೆ ಬಸವಣ್ಣನವರ ಹೆಸರಿಡಬೇಕು ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.



ಎಂ.ಬಿ. ಪಾಟೀಲ

ವಿಜಯಪುರ ಜಿಲ್ಲೆಗೆ 'ಬಸವೇಶ್ವರ ಜಿಲ್ಲೆ' ಎಂದು ನಾಮಕರಣ ಮಾಡಬೇಕೆಂಬ ಧ್ವನಿಯೂ ಕೇಳಿಬಂದಿದೆ. ಬಸವೇಶ್ವರರ ಹೆಸರನ್ನು ಇಡುವುದಕ್ಕೆ ಯಾರ ವಿರೋಧವೂ ಇಲ್ಲ. ವೈಯಕ್ತಿಕವಾಗಿ ನಾನಂತೂ ಬಸವಣ್ಣನವರ ಅಪ್ಪಟ ಅನುಯಾಯಿ. ಹೆಸರು ಬದಲಾವಣೆ ಮಾಡುವುದಕ್ಕೆ ಮುಂಚೆ ಹತ್ತು ಹಲವು ಸಾಧಕ ಬಾಧಕಗಳ ಬಗ್ಗೆ ಆಲೋಚಿಸಬೇಕಾಗುತ್ತದೆ ಎಂದು ಪಾಟೀಲ ಅವರು ವಿವರಿಸಿದರು.

ರಾಜ್ಯದ ಹೆಸರನ್ನು 'ಬಸವೇಶ್ವರ ನಾಡು' ಎಂದು ಬದಲಾಯಿಸುವ ಪ್ರಸ್ತಾವದ ಬಗ್ಗೆ ಮಾಹಿತಿ ಇಲ್ಲ. ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಅವರನ್ನು ಆ ರಾಜ್ಯದ ಸಾಂಸ್ಕೃತಿಕ ಪ್ರತೀಕ ಎಂದು ಪರಿಗಣಿಸಿರುವ ರೀತಿಯಲ್ಲೇ ನಮ್ಮಲ್ಲಿ ಬಸವೇಶ್ವರರನ್ನು ಸಾಂಸ್ಕೃತಿಕ ಪ್ರತೀಕವಾಗಿ ಪರಿಗಣಿಸಬೇಕು ಎಂಬ ಬೇಡಿಕೆ ಇದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸರ್ಕಾರಿ ಕಾರಲ್ಲಿ ಸುತ್ತು; ಮಕ್ಕಳ ಸಂಭ್ರಮ

ಕದ್ರಿಯಲ್ಲಿರುವ ಆಶ್ರಮ ಶಾಲೆಯಲ್ಲಿ ರಾತ್ರಿ ಕಳೆದ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್

ಪ್ರಜಾವಾಣಿ ವಾರ್ತೆ

ಮಂಗಳೂರು: ಸೂಟು ಹಾಕಿಕೊಂಡು ಸರ್ಕಾರಿ ಕಾರಿನಲ್ಲಿ ರಾತ್ರಿ ಏಕಾಏಕಿ ಬಂದಿಳಿದ ಅಧಿಕಾರಿಯನ್ನು ಕಂಡು ಮಕ್ಕಳಿಗೆ ಖುಷಿಯೋ ಖುಷಿ; ಸಿಬ್ಬಂದಿಗೆ ಅಚ್ಚರಿ. ಅಧಿಕಾರಿ ಮಕ್ಕಳೊಂದಿಗೆ ಊಟ ಮಾಡಿದರು, ಅಲ್ಲೇ ಮಲಗಿದರು. ಬೆಳಿಗ್ಗೆ ಅಲ್ಲೇ ತಿಂಡಿ ತಿಂದಿದ್ದು ಮಾತ್ರವಲ್ಲ, ಮಕ್ಕಳು ಸರ್ಕಾರದ ಕಾರಿನಲ್ಲಿ ಉದ್ಯಾನಕ್ಕೆ ಸುತ್ತು ಹಾಕಿ ಬರಲು ಅವಕಾಶ ನೀಡಿದರು.

ನಗರದ ಕದ್ರಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವಾಲ್ಮೀಕಿ ಆಶ್ರಮ ಶಾಲೆಯಲ್ಲಿ ಮಕ್ಕಳೊಂದಿಗೆ ಕಲೆತು, ಅವರಿಗೆ ಪಾಠ ಮಾಡಿ ತಂತ್ರಜ್ಞಾನ ಬಳಕೆಯ ಬಗ್ಗೆ ಮಾಹಿತಿ ನೀಡಿ ಕಾರಿನಲ್ಲಿ ಸುತ್ತಾಡಿಸಿದವರು ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್.



ವಾಲ್ಮೀಕಿ ಆಶ್ರಮ ಶಾಲೆಯಲ್ಲಿ ವಿದ್ಯಾರ್ಥಿ ಜೊತೆ ಮಾತನಾಡಿದ ಮಣಿವಣ್ಣನ್

ಪ್ರಕರಣವೊಂದರ ವಿಚಾರಣೆಗೆ ಸಂಬಂಧಿಸಿ ಶುಕ್ರವಾರ ನಗರದ ನ್ಯಾಯಾಲಯಕ್ಕೆ ಹಾಜರಾದ ಅವರು, ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ ಪ್ರಾಂಶುಪಾಲರ ಸಭೆ ನಡೆಸಿದರು.

ಗುರುವಾರ ರಾತ್ರಿ ವಿಮಾನದಲ್ಲಿ ಬಂದಿದ್ದರು. ಅವರಿಗಾಗಿ ಸರ್ಕಿಟ್ ಹೌಸ್‌ನಲ್ಲಿ ಕೊಠಡಿಯನ್ನು ಕಾಯ್ದಿರಿಸಲಾಗಿತ್ತು. ಆದರೆ, ಅಲ್ಲಿಗೆ ಹೋಗದೆ ಸಮೀಪದಲ್ಲೇ, ಕದ್ರಿಯಲ್ಲಿದ್ದ ಆಶ್ರಮ ಶಾಲೆಗೆ ತೆರಳಿದ್ದರು.

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಿವಕುಮಾರ್ ಸಿ. ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಸುರೇಶ್ ಅಡಿಗ ಜೊತೆ ಶಾಲೆಗೆ ತೆರಳಿದ ಅವರು ವಾರ್ಡನ್ ಸುವರ್ಣ ಅವರಿಂದ ಮಾಹಿತಿ ಪಡೆದುಕೊಂಡು ನಂತರ ಮಕ್ಕಳ ಜೊತೆ ಮಾತುಕತೆ ನಡೆಸಿದರು. ಅವರಿಗೆ ಗಣಿತ ಪಾಠ ಹೇಳಿಕೊಟ್ಟರು.

'ದುರ್ಬಲ ಬುಡಕಟ್ಟು (ಪಿವಿಟಿ) ಸಮುದಾಯದ ಮಕ್ಕಳಿಗಾಗಿ ಸ್ಥಾಪಿಸಿರುವ ಈ ಆಶ್ರಮ ಶಾಲೆಯಲ್ಲಿ ಉತ್ತರ ಕರ್ನಾಟಕದ ಮಕ್ಕಳೇ ಹೆಚ್ಚು ಇದ್ದಾರೆ. ದಸರಾ ರಜೆಯಲ್ಲಿ ಊರಿಗೆ ತೆರಳಿರುವ ಬಹುತೇಕರು ವಾಪಸಾಗಿರಲಿಲ್ಲ. ಶೇ 30ರಷ್ಟು ಮಕ್ಕಳು ಇದ್ದರು. ಅವರೊಂದಿಗೆ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಮಕ್ಕಳ ಊರಿನ ಬಗ್ಗೆ ಮಾಹಿತಿ ಪಡೆದುಕೊಂಡು ಗೂಗಲ್ ಮ್ಯಾಪ್‌ನಲ್ಲಿ ಅವರ ಊರನ್ನು ತೋರಿಸಿ ತಂತ್ರಜ್ಞಾನದ ಬಳಕೆಯನ್ನು ತಿಳಿಸಿದರು. ಮಕ್ಕಳ ಜೊತೆ ಊಟ ಮಾಡಿ ಶಾಲೆಯಲ್ಲೇ ಮಲಗಿದ ಅವರು ಬೆಳಿಗ್ಗೆ ಸರ್ಕಾರದ ಕಾರಿನಲ್ಲಿ ಮಕ್ಕಳನ್ನು ಸುತ್ತಾಡಿಸಲು ಕಳುಹಿಸಿದರು. ಈ ಸಂದರ್ಭದಲ್ಲಿ ಮಕ್ಕಳ ಸಂಭ್ರಮಕ್ಕೆ ಎಲ್ಲೆ ಇರಲಿಲ್ಲ' ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಿವಕುಮಾರ್ ಸಿ. 'ಪ್ರಜಾವಾಣಿ'ಗೆ ತಿಳಿಸಿದರು.



ಹಂಸಜ್ಯೋತಿ ಟ್ರಸ್ಟ್ ಹಾಗೂ ಆರ್. ಶ್ರೀನಿವಾಸ್ ಅಭಿನಂದನಾ ಸಮಿತಿ ಜಂಟಿಯಾಗಿ ನಗರದಲ್ಲಿ ಗುರುವಾರ ಆಯೋಜಿಸಿದ 'ಆರ್.ಶ್ರೀನಿವಾಸ್ 60 ಅಭಿನಂದನಾ ಸಮಾರಂಭ'ದಲ್ಲಿ ರಾಜ್ಯ ಸರ್ಕಾರಿ ನೌಕರರ ಕೇಂದ್ರ ಸಂಘದ ಖಜಾಂಚಿ ಆರ್. ಶ್ರೀನಿವಾಸ್ ದಂಪತಿಯನ್ನು ಸನ್ಮಾನಿಸಲಾಯಿತು. ವಿಧಾನಪರಿಷತ್ ಸದಸ್ಯ ಎಂ.ಆರ್.ಸೀತಾರಾಮ್, ಕೆ.ಸಿ. ಜನರಲ್ ಆಸ್ಪತ್ರೆಯ ನಿಕಟಪೂರ್ವ ವೈದ್ಯಕೀಯ ಅಧೀಕ್ಷಕ ಡಾ.ಎಚ್. ರವಿಕುಮಾರ್, ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ರಾಜ್ಯ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ. ವಿವೇಕ್ ದೊರೈ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘದ ಮಾಜಿ ಅಧ್ಯಕ್ಷ ಎ. ಪುಟ್ಟಸ್ವಾಮಿ, ರಾಜ್ಯ ನಿವೃತ್ತ ಸರ್ಕಾರಿ ನೌಕರರ ಕೇಂದ್ರ ಸಂಘದ ಸಂಘಟನಾ ಕಾರ್ಯದರ್ಶಿ ಮ.ಸ. ನಂಜುಂಡಸ್ವಾಮಿ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘದ ಸಂಚಾಲಕ ಪ್ರಕಾಶ್ ಗಿಡ್ಡೆ, ಕ್ಷಕಿರಣ ತಜ್ಞ ಖಾಜಾ ಮೊಯಿದ್ದೀನ್, ಅಭಿನಂದನಾ ಸಮಿತಿ ಅಧ್ಯಕ್ಷೆ ಸುಗುಣ ಕೃಷ್ಣಪ್ಪ ಇದ್ದಾರೆ.

ನ.4, 5ರಂದು ವಿಶ್ವೇಶ್ವರಾಯ ಕಬ್ಬಿಣ ಕಾರ್ಖಾನೆ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯು ಶತಮಾನೋತ್ಸವ ಸಂಭ್ರಮದಲ್ಲಿದ್ದು, ನ.4 ಮತ್ತು ನ.5ರಂದು ಭದ್ರಾವತಿಯಲ್ಲಿರುವ ಘಟಕದಲ್ಲಿ ಶತಮಾನೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಲಾವಿದ ಹಾಗೂ ಶತಮಾನೋತ್ಸವ ಸಮಿತಿ ಅಧ್ಯಕ್ಷ ಎಸ್. ದೊಡ್ಡಣ್ಣ, 'ಕಾರ್ಖಾನೆಯು ಕೈಗಾರಿಕಾ ವಲಯದಲ್ಲಿ ತನ್ನದೆ ಆದ ಹೆಗ್ಗುರುತು ಮೂಡಿಸಿದೆ. ಈ ಕೈಗಾರಿಕೆಯ ಶತಮಾನೋತ್ಸವ ಸಮಾರಂಭವನ್ನು ಮೈಸೂರಿನ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹಾಗೂ ಕೋಡಿ ಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ' ಎಂದು ಹೇಳಿದರು.

'ಈ ಸಮಾರಂಭದ ಪ್ರಯುಕ್ತ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ಕೆ.ಎಲ್.ಇ. ವಿದ್ಯಾಸಂಸ್ಥೆ ಅಧ್ಯಕ್ಷ ಪ್ರಭಾಕರ ಕೋರೆ, ವಿ.ಆರ್.ಎಲ್. ಸಮೂಹ ಸಂಸ್ಥೆಗಳ ಅಧ್ಯಕ್ಷ ವಿಜಯ ಸಂಕೇಶ್ವರ ಅವರಿಗೆ ಗೌರವಾರ್ಪಣೆ ಸಲ್ಲಿಸಲಾಗುತ್ತದೆ. ಮಾಜಿ ಮುಖ್ಯಮಂತ್ರಿಗಳನ್ನೂ ಇದೇ ಸಂದರ್ಭದಲ್ಲಿ ಗೌರವಿಸಲಾಗುತ್ತದೆ' ಎಂದು ಹೇಳಿದರು.

ವಕೀಲ ಹಾಗೂ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ.ಎ. ರೇವಣಸಿದ್ಧಯ್ಯ, 'ಶತಮಾನೋತ್ಸವದ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ' ಎಂದರು.

'ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅವಧಿಯಲ್ಲಿ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯ ಅವರ ಮಾರ್ಗದರ್ಶನದಂತೆ ಈ ಬೃಹತ್ ಉದ್ಯಮವನ್ನು 1923ರಲ್ಲಿ ಪ್ರಾರಂಭಿಸಲಾಯಿತು. ಕಾರ್ಖಾನೆಗೆ ಪ್ರಾರಂಭದಲ್ಲಿ ಮೈಸೂರು ಐರನ್ ಆ್ಯಂಡ್ ಸ್ಟೀಲ್ ವರ್ಕ್ಸ್ ಎಂದು ನಾಮಕರಣ ಮಾಡಲಾಗಿತ್ತು. 1975ರಲ್ಲಿ ವಿಶ್ವೇಶ್ವರಾಯ ಐರನ್ ಆ್ಯಂಡ್ ಸ್ಟೀಲ್ ಲಿಮಿಟೆಡ್ ಎಂಬುದಾಗಿ ಮರುನಾಮಕರಣ ಮಾಡಲಾಯಿತು' ಎಂದರು.

'ಜಲಜೀವನ್' ಕಾಮಗಾರಿ: ಸ್ವತಂತ್ರ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದ ಮನೆಗಳಿಗೆ ಕುಡಿಯುವ ನೀರು ಪೂರೈಸುವ ಜಲಜೀವನ್ ಮಿಷನ್‌ನಡಿ ಕೈಗೊಂಡ ಕಾಮಗಾರಿಗಳ ಗುಣಮಟ್ಟದಲ್ಲಿ ಸುಧಾರಣೆ ತರಲು ಸ್ವತಂತ್ರ ಸಂಸ್ಥೆಗಳಿಂದ ತಪಾಸಣೆ ನಡೆಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು, ತಪಾಸಣೆ ಕಾರ್ಯ ಕೈಗೆತ್ತಿಕೊಂಡಿರುವ 'ಬ್ಯೂರೊ ವೆರಿಟಾಸ್ ಇಂಡಿಯಾ ಬಾಹ್ಯ ಸಂಸ್ಥೆ'ಯ ಪ್ರಮುಖರೊಂದಿಗೆ ಶುಕ್ರವಾರ ನಡೆಸಿದ ಸಭೆಯ ನಂತರ ಅವರು ಮಾತನಾಡಿದರು.

ಗ್ರಾಮೀಣ ಮನೆಗಳಿಗೆ ನೀರು ಸರಬರಾಜು ಮಾಡುವ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬಂದಿವೆ. ಕಾಮಗಾರಿಗಳ ಭೌತಿಕ ಆಯಾಮಗಳು, ನೀರಿನ ಗುಣಮಟ್ಟಗಳನ್ನೂ ಪರೀಕ್ಷಿಸಲಾಗುತ್ತಿದೆ. ಭೂಮಿಯ ಒಳಗೆ ಅಳವಡಿಸಿದ ಕೊಳವೆಗಳ ಗುಣಮಟ್ಟ, ಸುರಕ್ಷತಾ ಕ್ರಮಗಳು, ನಲ್ಲಿ ಹಾಗೂ ಸಾಮಗ್ರಿಗಳ ಗುಣಮಟ್ಟಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದರು.

ರಾಜ್ಯದ 1,500 ಗ್ರಾಮಗಳಲ್ಲಿ ಕೈಗೆತ್ತಿಕೊಂಡಿರುವ ಬಹುಗ್ರಾಮ ನೀರು ಸರಬರಾಜು ಯೋಜನೆ ಒಳಗೊಂಡಂತೆ ಎಲ್ಲ ನೀರು ಸರಬರಾಜು ಯೋಜನೆಗಳ ಪರೀಕ್ಷಾ ಕಾರ್ಯ ಅ.9ರಿಂದ ನಡೆಸಲಾಗುತ್ತಿದೆ. 60 ದಿನಗಳ ಒಳಗೆ ವರದಿ ಸಲ್ಲಿಸಲಾಗಿದೆ. ಮೊದಲ ಹಂತದಲ್ಲಿ ರಾಜ್ಯದ 14 ಜಿಲ್ಲೆ ವ್ಯಾಪ್ತಿಯ 82 ತಾಲ್ಲೂಕುಗಳಲ್ಲಿನ 533 ಗ್ರಾಮಗಳಿಗೆ ನೀರು ಪೂರೈಸುವ 57 ಬಹುಗ್ರಾಮ ಕಾಮಗಾರಿಗಳ ತಪಾಸಣೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

ತಪಾಸಣೆ ನಡೆಯುವಾಗ ಗ್ರಾಮೀಣ ನೀರು ಸರಬರಾಜು ಇಲಾಖೆಯ ತಾಂತ್ರಿಕ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು, ಪತ್ತೆಯಾಗುವ ನ್ಯೂನತೆ ಸರಿಪಡಿಸಲು ತಕ್ಷಣವೇ ಕ್ರಮ ಕೈಗೊಳ್ಳುತ್ತಿದ್ದಾರೆ. ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಟಿಪ್ಪು ಸುಲ್ತಾನ್ ಖಡ್ಗ ಹರಾಜು

ಲಂಡನ್ (ಪಿಟಿಐ): ಮೈಸೂರಿನ ಮಹಾರಾಜರಾಗಿದ್ದ ಟಿಪ್ಪುಸುಲ್ತಾನ್ ಅವರದ್ದು ಎನ್ನಲಾದ ರತ್ನ ಖಚಿತ ಖಡ್ಗವನ್ನು ಲಂಡನ್‌ನ ಕ್ರಿಸ್ಟೀಸ್ ಆಕ್ಷನ್ ಹೌಸ್ ಹರಾಜು ಹಾಕಿದ್ದು, 100,800 ಪೌಂಡ್‌ಗೆ (ಅಂದಾಜು ₹1.01 ಕೋಟಿ) ಮಾರಾಟವಾಗಿದೆ. ಖರೀದಿದಾರರ ಹೆಸರನ್ನು ಗೋಪ್ಯವಾಗಿ ಇಡಲಾಗಿದೆ.

ದ ಆರ್ಟ್ ಆಫ್ ಇಸ್ಲಾಮಿಕ್ ಆ್ಯಂಡ್ ಇಂಡಿಯನ್ ವರ್ಲ್ಡ್ ಟಿಪ್ಪುಸುಲ್ತಾನ್ ಅವರಿಗೆ ಸೇರಿದ ಮತ್ತೊಂದು ಖಡ್ಗವನ್ನೂ ಹರಾಜಿಗೆ ಇಟ್ಟಿತ್ತು. ಆದರೆ ಇದು ಹರಾಜಾಗದೇ ಉಳಿದಿದೆ.

1799ರಲ್ಲಿ ಟಿಪ್ಪು ನಿಧನದ ನಂತರ ಈ ಖಡ್ಗಗಳು ಲಾರ್ಡ್ ಚಾರ್ಲ್ಸ್ ಕಾರ್ನವಾಲಿಸ್ ಕೈಗೆ ಸೇರಿದ್ದವು ಎಂದು ವಕ್ತಾರರು ತಿಳಿಸಿದ್ದಾರೆ.

ಮೈಸೂರು ರೇಸ್

ವಿಜಯ ಫಾಲ್ಕನ್‌ ಗೆಲ್ಲುವ ನಿರೀಕ್ಷೆ

ಮೈಸೂರು ರೇಸ್ ಕ್ಲಬ್ ಆನಿವರ್ಸರಿ ಕಪ್-2023 ಶನಿವಾರದ ಮೈಸೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ವಿಜಯ ಫಾಲ್ಕನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅನುಸ್ತುಬಾ 9, ಆಕರ್ 5, ಮ್ಯೂಸಿಕ್ ಡಿವೈನ್ 4
2ನೇ ರೇಸ್: ಸುಲ್ತಾನ್ ಸ್ವೋರ್ಡ್ 9, ಕ್ರಿಮ್‌ಸನ್ ಫ್ಯೆರ್ 5, ಗಿಂಟೋಕಿ 1
3ನೇ ರೇಸ್: ಕ್ರಾಸ್‌ವಾಟರ್ 8, ಸ್ಟಾರ್ ಕಾನ್ಸೆಪ್ಟ್ 5, ಚಿಲಾಡಿ 7
4ನೇ ರೇಸ್: ಐರನ್ ಕ್ಲಾಡ್ 4, ವೆಲ್ಲಿಂಗ್ಟನ್ 6, ಕ್ಲೆವರ್ ಹಾನ್ಸ್ 10
5ನೇ ರೇಸ್: ವಿಜಯ ಫಾಲ್ಕನ್ 5, ಶುಭಾಂಕರ್ 4, ಸೆಗೆರ 3
6ನೇ ರೇಸ್: ಮೈಟಿ ಜೊ 5, ಏಂಜೆಲೆಸ್ 9, ಲ್ಯಾಂಡ್ ಆಫ್ ಗೋಲ್ಡ್ 12
7ನೇ ರೇಸ್: ಸರ್ವೋತ್ತಮ್ 4, ಲಿಯೋಪಾರ್ಡ್ 1, ಬ್ಯೂಟಿಫುಲ್ ಒಬ್ಲಿವಿಯನ್ 6

ಉತ್ತಮ ಬೆಟ್: ಕ್ರಾಸ್‌ವಾಟರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

'ಮರು ನಾಮಕರಣದಿಂದ ನಷ್ಟವಿಲ್ಲ'

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ರಾಮನಗರ ಜಿಲ್ಲೆಗೆ ಬೆಂಗಳೂರು ದಕ್ಷಿಣ ಎಂದು ಮರು ನಾಮಕರಣ ಮಾಡುವುದರಿಂದ ಯಾವುದೇ ನಷ್ಟವಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಈ ಕುರಿತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ನನ್ನ ಜೊತೆ ಚರ್ಚಿಸಿಲ್ಲವಾದರೂ, ಹೆಸರು ಬದಲಾವಣೆಯಿಂದ ನಷ್ಟವೇನು ಆಗುವುದಿಲ್ಲ. ಅಲ್ಲದೆ, ಬೆಂಗಳೂರಿಗೆ ಸೇರಿಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಎಲ್ಲಕ್ಕಿಂತ ಮುಖ್ಯವಾಗಿ ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಹೆಚ್ಚಿನ ಅನುದಾನ ಕೊಡಬೇಕು' ಎಂದರು.

ಶಾಸಕ ಎಚ್.ಸಿ. ಬಾಲಕೃಷ್ಣ ಪ್ರತಿಕ್ರಿಯಿಸಿ, 'ರಾಮನಗರಕ್ಕೆ ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿದರೆ ಏನಾಗುತ್ತದೆ? ಇದನ್ನು ವಿರೋಧಿಸಿ ಎಚ್.ಡಿ. ಕುಮಾರಸ್ವಾಮಿ ಅವರು ಉಪವಾಸ ಮಾಡುತ್ತೇನೆ ಎಂದಿದ್ದಾರೆ. ಮಾಡೋದು, ಬಿಡೋದು ಅವರಿಗೆ ಬಿಟ್ಟಿದ್ದು' ಎಂದರು.

5 ವರ್ಷ: ₹7.60 ಲಕ್ಷ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವರ್ಷಗಳಲ್ಲಿ ಕರ್ನಾಟಕವು ₹7.60 ಲಕ್ಷ ಕೋಟಿ ಬಂಡವಾಳ ಹೂಡಿಕೆ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಇದು ಸಾವಯವ ಆಹಾರ ಉತ್ಪಾದಕರು ಮತ್ತು ಮಾರ್ಕೆಟಿಂಗ್ ಏಜೆನ್ಸಿಗಳ ಒಕ್ಕೂಟ (ಸಿಒಐಐ) ಹಾಗೂ ರಫ್ತು ಉತ್ತೇಜನಾ ಮಂಡಳಿ ನಡೆಸಿದ ಅಧ್ಯಯನ ವರದಿಯ ಮಾಹಿತಿ.

2022-23ನೇ ಸಾಲಿನಲ್ಲಿ ₹4,51,516.2 ಕೋಟಿ, 2021-22ರಲ್ಲಿ ₹79,816.4 ಕೋಟಿ, 2020-21ರಲ್ಲಿ ₹74,967.7 ಕೋಟಿ, 2019-20ನೇ ಸಾಲಿನಲ್ಲಿ ₹94,361.8 ಕೋಟಿ ಹಾಗೂ 2018-19ರಲ್ಲಿ ₹59,273.8 ಕೋಟಿ ಹೂಡಿಕೆಯಾಗಿದೆ.

2022-23ರಲ್ಲಿ ₹39,664.05 ಕೋಟಿ, 2021-22ರಲ್ಲಿ ₹21,336.2 ಕೋಟಿ, 2020-21ರಲ್ಲಿ ₹11,415.5 ಕೋಟಿ ಯೋಜನೆಗಳನ್ನು ಪೂರ್ಣಗೊಳಿಸಿದೆ ಎಂದು ಒಕ್ಕೂಟದ ಅಧ್ಯಕ್ಷ ಡಿ.ಎಸ್. ರಾವತ್ ಮಾಹಿತಿ ನೀಡಿದ್ದಾರೆ.



2022-23ನೇ ಸಾಲಿನಲ್ಲಿ ₹16,43,466.3 ಕೋಟಿ, ₹8,22,070.4 ಕೋಟಿ ಅನುಷ್ಠಾನದ ಹಂತದಲ್ಲಿವೆ. ಬಾಕಿ ಉಳಿದಿರುವ ಯೋಜನೆಗಳ ಅನುಷ್ಠಾನ ಪೂರ್ಣಗೊಂಡ ನಂತರ ರಾಜ್ಯದಲ್ಲಿ 5 ಲಕ್ಷಕ್ಕೂ ಹೆಚ್ಚು ಉದ್ಯೋಗಗಳ ಸೃಷ್ಟಿಯಾಗಲಿವೆ ಎಂದಿದ್ದಾರೆ.

2022-23ನೇ ಸಾಲಿನಲ್ಲಿ ಖಾಸಗಿ ವಲಯದಲ್ಲಿ ₹4,07,855.5 ಕೋಟಿ ಘೋಷಿಸಲಾದ ಹೊಸ ಹೂಡಿಕೆ. ಇದೇ ಅವಧಿಯಲ್ಲಿ ವಿದೇಶಿ ಖಾಸಗಿ ಹೂಡಿಕೆಯಲ್ಲೂ ಹೆಚ್ಚಳವಾಗಿದೆ. ₹66,334.9 ಕೋಟಿ ಯೋಜನೆಗಳು ಪೂರ್ಣಗೊಂಡಿವೆ ಎಂದು ಮಾಹಿತಿ ನೀಡಿದ್ದಾರೆ.

ಕರ್ನಾಟಕ 8.5 ಲಕ್ಷಕ್ಕೂ ಹೆಚ್ಚು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ನೆಲೆಯಾಗಿದೆ. 60 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿದೆ. ರಾಜ್ಯ ಸರ್ಕಾರ ಪ್ರೋತ್ಸಾಹ ನೀಡುತ್ತಿದ್ದರೂ, ಜಾಗತಿಕ ಸ್ಪರ್ಧೆಯಿಂದಾಗಿ ಸಣ್ಣ ಉದ್ಯಮಗಳು ಹಲವು ಸವಾಲುಗಳನ್ನು ಎದುರಿಸುತ್ತಿವೆ ಎಂದಿದ್ದಾರೆ.

ನಗರದಲ್ಲಿ ಇಂದು

ವಾಲ್ಮೀಕಿ ಜಯಂತಿ ಪ್ರಯುಕ್ತ 'ರಾಮಾಯಣ' ನೃತ್ಯ ನಾಟಕ ಪ್ರದರ್ಶನ: ನಿರ್ದೇಶನ: ಎ.ವಿ. ಸತ್ಯನಾರಾಯಣ, ತಂಡ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 9.30

'ಇಸ್ರೇಲ್–ಹಮಾಸ್ ಯುದ್ಧ', ಸಂಸ್ಕೃತಿ–ಸಂವಾದ: ಡಿ.ವಿ. ಗುರುಪ್ರಸಾದ್, ಅಜಿತ್ ಹನಮಕ್ಕನವರ್, ಶ್ರೇಯಾಂಕ ರಾನಡೆ, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

'ಇಮ್ಮೋರ್ಟಾಲಿಟಿ ಆ್ಯಂಡ್ ದಿ ಪರ್ಪೋಸ್ ಆಫ್ ಲೈಫ್' ಪುಸ್ತಕ ಬಿಡುಗಡೆ: ಡಿ. ಕುಪೇಂದ್ರ ರೆಡ್ಡಿ, ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, ಮುಖ್ಯ ಅತಿಥಿಗಳು: ಎಚ್. ಶರತ್ ಚಂದ್ರ, ಕೆ.ಎನ್. ಸುಬ್ಬಾರೆಡ್ಡಿ, ಕೃತಿ ಪರಿಚಯ: ಎಸ್.ವಿ. ಮಾರಪ್ಪ, ಟಿ.ಎಸ್. ರಘುನಾಥ್, ಆಯೋಜನೆ ಹಾಗೂ ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ ಸಭಾಂಗಣ, ಹೊಂಬೇಗೌಡ ಬಾಲಕರ ಪ್ರೌಢಶಾಲೆ, ಬೆಳಿಗ್ಗೆ 10

ಬಾನಂದೂರು ಕೆಂಪಯ್ಯ ಅವರ ಬದುಕು–ಹಾಡುಗಾರಿಕೆ ಕುರಿತ 'ಬಾನಂದದ ಕಿನ್ನೂರಿ' ಅಭಿನಂದನಾ ಗ್ರಂಥ ಬಿಡುಗಡೆ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಡಿ.ಎಸ್. ವೀರಯ್ಯ, ಸುಭಾಷ್ ಭರಣಿ, ವೇಮಗಲ್ ನಾರಾಯಣಸ್ವಾಮಿ, ಆಯೋಜನೆ: ಪಿತಾಮಹ ಪ್ರಕಾಶನ, ಸ್ಥಳ: ಸಮ್ಮೇಳನ ಸಭಾಂಗಣ, ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ: ಎಚ್.ಕೆ. ಪಾಟೀಲ, ಮುಖ್ಯ ಅತಿಥಿಗಳು: ರಮೇಶ್‌ಚಂದ್ರ ಲಹೋಟಿ, ಆರ್.ಪಿ. ಜಗದೀಶ್, ನಾಗಣ್ಣ, ಬಿ.ಟಿ. ವೆಂಕಟೇಶ್, ಪ್ರಶಸ್ತಿ ಪುರಸ್ಕೃತರು: ಹೊನಕೆರೆ ನಂಜುಂಡೇಗೌಡ, ಆಯೋಜನೆ: ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಮೇಲುಕೋಟೆ, ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಎಫ್‌ಕೆಸಿಸಿಐ), ಕೆ.ಜಿ. ರಸ್ತೆ, ಬೆಳಿಗ್ಗೆ 10.30

ಎಚ್‌ಐವಿ ಮತ್ತು ಕ್ಯಾನ್ಸರ್ ರೋಗಿಗಳ ಸಹಾಯಾರ್ಥ 'ಸುರಭಿ ಸಿರಿ' ಕನ್ನಡ ಮತ್ತು ಹಿಂದಿ ಗೀತೆಗಳ ಗಾಯನ: ಮುಖ್ಯ ಅತಿಥಿಗಳು: ಮಹೇಂದ್ರ ಎಂ. ಜೈನ್, ಡಾ. ವೀರೇಶ್, ಹರೀಶ್ ಎಂ.ಟಿ., ಹರಿಪ್ರಕಾಶ್ ಕೋಣೆಮನೆ, ಗಾಯಕರು: ಶ್ರುತಿ ರಾಘವೇಂದ್ರನ್, ಶ್ವೇತಾ ಪ್ರಭು, ವಾಣಿಶ್ರೀ ರವೀಶ್, ಶ್ರೀನಿವಾಸ ಮೂರ್ತಿ, ಕುಮಾರನ್ ಮುತ್ತುರಾಮನ್, ಮೋಹನ್ ಕಬ್ಬೂರು, ಆಯೋಜನೆ: ವೈದೇಹಿ ಮಹಿಳಾ ಮತ್ತು ಮಕ್ಕಳ ಪ್ರತಿಷ್ಠಾನ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ, ಮಧ್ಯಾಹ್ನ 3.30

ಮುಕೇಶ್ ಅವರ ಜನ್ಮ ಶತಮಾನೋತ್ಸವ ನೆನಪಿನಲ್ಲಿ ಸಂಗೀತ ಸಂಜೆ 'ಸುಹಾನಾ ಸಫರ್...': ಗಾಯಕರು: ಅಂಜಲಿ ಹಳಿಯಾಳ, ಲಕ್ಷ್ಮೀ ಶ್ರೇಯಾಂಶಿ, ನಾಗಮಂಗಲ ಶ್ರೀನಿವಾಸ್, ವಿಜಯಾನಂದ ನಾಯಕ, ವೆಂಕಟೇಶಮೂರ್ತಿ ಶಿರೂರು, ಮಹಾಂತೇಶ್ ಮಮದಾಪುರ, ವಿಜಯ ಧ್ವಜ, ಪರಿಕಲ್ಪನೆ: ಗುರು, ಆಯೋಜನೆ: ಶಿರೂರು ಪ್ರತಿಷ್ಠಾನ, ಸೃಜನ ಲಲಿತಕಲಾ ವೇದಿಕೆ, ಸ್ಥಳ: ಸಂಸ ಬಯಲು ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ಆರ್ಕಿಡ್ ಪ್ರದರ್ಶನ: ಉದ್ಘಾಟನೆ: ಡಿ. ಎಸ್. ರಮೇಶ್, ಆಯೋಜನೆ: ಆರ್ಕಿಡ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ಸೇಂಟ್ ಜೋಸೆಫ್ ವಿಶ್ವ ವಿದ್ಯಾಲಯ, ಲ್ಯಾಂಗ್‌ಫೋರ್ಡ್ ರಸ್ತೆ, ಬೆಳಿಗ್ಗೆ 10



'ಇಸ್ರೇಲ್ vs ಹಮಾಸ್' ಇತಿಹಾಸ, ಸಮರದ ಹಿನ್ನೆಲೆ, ವಾಸ್ತವ ಚಿತ್ರಣ: ಅಜಿತ್ ಹನಮಕ್ಕನವರ್, ಆಯೋಜನೆ: ಮಂಥನ ಬೆಂಗಳೂರು, ಸ್ಥಳ: ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 5.30

ಶರಣೆ ಗಂಗಾಂಬಿಕೆ ಜಯಂತಿ ಹಾಗೂ ಎಸ್. ರತ್ನ ವಿಠಲ್ಕರ್ ಅವರ 'ಹೆಣ್ಣಾದರೇನಂತೆ ಚಿವುಟದಿರಿ ಆತ್ಮ ಗೌರವ' ಪುಸ್ತಕ ಬಿಡುಗಡೆ: ಎಲ್.ಜಿ. ಮೀರಾ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಮುಖ್ಯ ಅತಿಥಿಗಳು: ಮಧುರಾ ಅಶೋಕ್ ಕುಮಾರ್, ಎಂ. ಪ್ರಭುಸ್ವಾಮಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಸಂಯಮ ಆರೋಗ್ಯ ಧಾಮ, ಅನ್ನಪೂರ್ಣೇಶ್ವರಿ ನಗರ, ಸಂಜೆ 5.30

ಭರತನಾಟ್ಯ ಪ್ರದರ್ಶನ: ಆವಂತಿಕಾ ಗುಂಡ್ಲಗುಟ್ಟ, ಉಪಸ್ಥಿತಿ: ಸತ್ಯನಾರಾಯಣ ರಾಜು, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 6

'ನಾಟ್ಯ ಪರಂಪರಾ ಉತ್ಸವ': ಗೌರವ ಅತಿಥಿಗಳು: ಗಿರಿಜಾ ಚಂದ್ರನ್, ಲಕ್ಷ್ಮಿ ಹರಿ, ಲಕ್ಷ್ಮಿ ವಿ., ಜ್ಯೋತಿ ರಘುರಾಮ್, ಪದ್ಮಿನಿ ಶ್ರೀಧರ್, ಗೌರವ ಸಮರ್ಪಣೆ: ಭಾಗವತುಲ ಮೋಹನ ರಾವ್, ಹರಿ, ಚೇತನಾ, ಆಯೋಜನೆ: ಕುಚಿಪುಡಿ ಪರಂಪರಾ ಫೌಂಡೇಶನ್, ಸ್ಥಳ: ರಮಣ ಮಹಶ್ರೀ ಹೆರಿಟೇಜ್ ಅಡಿಟೋರಿಯಂ, ಸಂಜಯನಗರ, ಸಂಜೆ 6

ಕರ್ನಾಟಕ ಸಂಗೀತ ಕಾರ್ಯಕ್ರಮ: ಗಾಯನ: ಸ್ಮೃತಿ ಕೆ.ಪಿ., ಪಿಟೀಲು: ಎಚ್.ವಿ. ರಘುರಾಂ, ಮೃದಂಗ: ವಿನಯ್ ನಾಗರಾಜನ್, ಘಟ: ಸಚಿನ್ ದೇವಿಪ್ರಸಾದ್, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.15

ಶಾರದಾ ಮಹಾಭಿಷೇಕ ಮತ್ತು ಶಾರದಾ ಶರನ್ನವರಾತ್ರಿ ಮಹೋತ್ಸವ: ಗಾಯನ: ಗೀತಾ ಸತ್ಯಮೂರ್ತಿ, ಆಯೋಜನೆ ಹಾಗೂ ಸ್ಥಳ: ಶೃಂಗೇರಿ ಶಂಕರಮಠ, ಶಂಕರಪುರ, ಸಂಜೆ 7

'ಸಡನ್ನಾಗ್ ಸತ್ತೋದ್ರೆ...!?' ನಾಟಕ ಪ್ರದರ್ಶನ: ನಿರ್ದೇಶನ: ಶೈಲೇಶ್ ಕುಮಾರ್, ಆಯೋಜನೆ: ಸೈಡ್ ವಿಂಗ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ತುಘಲಕ್–100ರ ಸಂಭ್ರಮ: 'ಹೂವು' ಏಕವ್ಯಕ್ತಿ ನಾಟಕ ಪ್ರದರ್ಶನ: ರಚನೆ: ಗಿರೀಶ್ ಕಾರ್ನಾಡ್, ನಿರ್ದೇಶನ: ಸಾಸ್ವೇಹಳ್ಳಿ ಸತೀಶ್, ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸಿದ್ದರಾಮಯ್ಯ ಅವರಿಂದ ಉದ್ಘಾಟನೆ

ವಿಶ್ವ ಬಂಟರ ಸಮ್ಮೇಳನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಉಡುಪಿ: ಜಾಗತಿಕ ಬಂಟರ ಸಂಘಗಳ ಒಕ್ಕೂಟದ ವತಿಯಿಂದ ಅ.28 ಹಾಗೂ 29ರಂದು ಇಲ್ಲಿ ವಿಶ್ವ ಬಂಟರ ಸಮ್ಮೇಳನ ಆಯೋಜಿಸಲಾಗಿದೆ.

ಅ.28ರಂದು ಮಧ್ಯಾಹ್ನ 1ಕ್ಕೆ ಅಜ್ಜರ ಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ವಿಶ್ವ ಬಂಟರ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಅ.29ರಂದು ನಡೆಯುವ ವಿಶ್ವ ಬಂಟರ ಸಾಂಸ್ಕೃತಿಕ ವೈಭವ ಕಾರ್ಯಕ್ರಮವನ್ನು ಗೃಹ ಸಚಿವ ಜಿ.ಪರಮೇಶ್ವರ ಉದ್ಘಾಟಿಸಲಿದ್ದಾರೆ.

ವಿಶ್ವದೆಲ್ಲೆಡೆ ನೆಲೆಸಿರುವ ಬಂಟ ಸಮುದಾಯದವರು ಎರಡು ದಿನ ನಡೆಯುವ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಅ.28ರಂದು ಬೆಳಿಗ್ಗೆ 9 ಗಂಟೆಗೆ ನಗರದ ಬೋರ್ಡ್ ಹೈಸ್ಕೂಲ್ ಬಳಿಯಿಂದ ಮೆರವಣಿಗೆಗೆ ಚಾಲನೆ ದೊರೆಯಲಿದ್ದು 62ಕ್ಕೂ ಹೆಚ್ಚು ಬಂಟರ ಸಂಘಗಳ ಆರು ಸಾವಿರ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಮೆರವಣಿಗೆಯಲ್ಲಿ ಉಡುಪಿ ಕೃಷ್ಣ, ಕಟೀಲು ದುರ್ಗಾಪರಮೇಶ್ವರಿ ಸ್ತಬ್ಧ ಚಿತ್ರ, ಕಂಬಳದ ಕೋಣಗಳು, ಕೇರಳದ ತೆಯ್ಯಂ, ಹುಲಿ ವೇಷ, ಕೀಲುಕುದುರೆ, ಗೊಂಬೆಗಳು, ಹೊನ್ನಾವರ ಬ್ಯಾಂಡ್ ಸೆಟ್, ಅಗೋಳಿ ಮಂಜಣ್ಣನ ವೇಷಧಾರಿ, ಚೆಂಡೆ, ವಾದ್ಯ, ಡೋಲು, ನಾಗಸ್ವರ, ಬಣ್ಣದ ಕೊಡೆಗಳು ಹಾಗೂ ವಿವಿಧ ವಿನೋದಾವಳಿಗಳು ಇರಲಿವೆ.



ಏಷ್ಯನ್ ಗೇಮ್ಸ್ ಪದಕ ವಿಜೇತ ಬ್ಯಾಡ್ಮಿಂಟನ್ ಆಟಗಾರ ಚಿರಾಗ್ ಶೆಟ್ಟಿ, ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಸ್ವಾಮೀಜಿ, ಒಡಿಯೂರು ಗುರುದೇವದತ್ತ ಸಂಸ್ಥಾನದ ಗುರುದೇವಾನಂದ ಸ್ವಾಮೀಜಿ, ಬಾರ್ಕೂರು ಬಾರ್ಗವ ಮಹಾಸಂಸ್ಥಾನದ ವಿಶ್ವ ಸಂತೋಷ್ ಭಾರತಿ ಸ್ವಾಮೀಜಿ, ಕೇಮಾರು ಸಾಂದೀಪನಿ ಆಶ್ರಮದ ಈಶ ವಿಠಲದಾಸ ಸ್ವಾಮೀಜಿ, ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ, ಕಟೀಲು ಕ್ಷೇತ್ರದ ಪ್ರಧಾನ ಅರ್ಚಕರಾದ ಲಕ್ಷ್ಮಿನಾರಾಯಣ ಅಸ್ರಣ್ಣ ಉಪಸ್ಥಿತರಿರಲಿದ್ದಾರೆ. ಕ್ರೀಡೋತ್ಸವ, ಸಾಧಕರಿಗೆ ಸನ್ಮಾನ ನೆರವೇರಲಿದೆ.

ನಟ–ನಟಿಯರಾದ ಸುನೀಲ್ ಶೆಟ್ಟಿ, ರಕ್ಷಿತ್ ಶೆಟ್ಟಿ, ಐಶ್ವರ್ಯ ರೈ ಬಚ್ಚನ್, ಶಿಲ್ಪಾ ಶೆಟ್ಟಿ ಕುಂದ್ರಾ, ರಿಷಬ್ ಶೆಟ್ಟಿ, ಗುರುಕಿರಣ್ ಶೆಟ್ಟಿ, ಶ್ರೀನಿಧಿ ಶೆಟ್ಟಿ, ಶಿವಧ್ವಜ್ ಶೆಟ್ಟಿ, ಅನುಷ್ಕಾ ಶೆಟ್ಟಿ, ಪೂಜಾ ಹೆಗ್ಡೆ, ರಾಜ್ ಬಿ. ಶೆಟ್ಟಿ, ರೂಪೇಶ್ ಶೆಟ್ಟಿ, ಯಶ್ ಭಾಗವಹಿಸಲಿದ್ದಾರೆ.

29ರಂದು ಬೆಳಿಗ್ಗೆ 10ಕ್ಕೆ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸಭಾಭವನದಲ್ಲಿ ಬಂಟರ ಸಾಂಸ್ಕೃತಿಕ ವೈಭವ ನಡೆಯಲಿದ್ದು ವಿಚಾರಗೋಷ್ಠಿ, ಕವಿಗೋಷ್ಠಿ, ಕಾವ್ಯಗಾಯನ ನಡೆಯಲಿದೆ. ಜಾಗತಿಕ ಬಂಟರ ಸಂಘದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದಾರೆ.

ಪ್ರವೀಣ್ ನೆಟ್ಟಾರು ಹತ್ಯೆ: ಆರೋಪಿಗಳ ಪತ್ತೆಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಮೂವರು ಆರೋಪಿಗಳ ಪತ್ತೆಗೆ ಬಹುಮಾನ ಘೋಷಿಸಿದೆ.

ನಿಷೇಧಿತ ಪಿಎಫ್‌ಐ ಸಂಘಟನೆ ಕಾರ್ಯಕರ್ತರಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಪಡಂಗಡಿ ಗ್ರಾಮದ ನೌಷದ್ (32 ವರ್ಷ- ಆರೋಪಿ ಸಂಖ್ಯೆ 23), ಕೊಡಗು ಜಿಲ್ಲೆ ಸೋಮವಾರಪೇಟೆಯ ಚೌಡ್ಲು ನಿವಾಸಿ ಅಬ್ದುಲ್ ನಾಸಿರ್ (41 ವರ್ಷ- ಆರೋಪಿ ಸಂಖ್ಯೆ 22), ಸೋಮವಾರಪೇಟೆಯ ಹನಗಲ್ ಕಲಂದಕೂರ್ ನಿವಾಸಿ, ಅಬ್ದುಲ್ ರಹಿಮಾನ್ (36 ವರ್ಷ- ಆರೋಪಿ ಸಂಖ್ಯೆ 24) ಈ ಮೂವರ ಬಗ್ಗೆ ಸುಳಿವು ನೀಡಿದವರಿಗೆ ತಲಾ ₹2 ಲಕ್ಷ ಬಹುಮಾನ ನೀಡುವುದಾಗಿ ಎನ್‌ಐಎ ತಿಳಿಸಿದೆ.

'ಕರ್ನಾಟಕ ಸಂಭ್ರಮ'ಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಂಭ್ರಮ-50ರ ಪ್ರಯುಕ್ತ ನವೆಂಬರ್ 1ರಿಂದ ವರ್ಷವಿಡೀ ಕಾರ್ಯಕ್ರಮಕ್ಕೆ ಸರ್ಕಾರ ಸಜ್ಜಾಗಿದ್ದು, ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಬಗ್ಗೆ ಅರಿವು ಮೂಡಿಸುವ ಅಭಿಯಾನವು 2024ರ ನವೆಂಬರ್ 1ರವರೆಗೂ ನಡೆಯಲಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '1973ರಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದಾಗ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ಮಾದರಿಯಲ್ಲೇ ಈ ಬಾರಿಯೂ ಸಂಭ್ರಮಾಚರಣೆಯನ್ನು ಆಯೋಜಿಸಲಾಗುತ್ತಿದೆ. ನ.1ರಂದು ಕನ್ನಡ ರಾಜ್ಯೋತ್ಸವದೊಂದಿಗೆ ಈ ಸಂಭ್ರಮಾಚರಣೆಗೆ ಚಾಲನೆ ದೊರೆಯಲಿದೆ' ಎಂದರು.

ನ.1ರಂದು ಬೆಳಿಗ್ಗೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರು ರಾಷ್ಟ್ರ ಧ್ವಜಾರೋಹಣ ಮಾಡಲಿದ್ದಾರೆ. ತಾಲ್ಲೂಕು ಕೇಂದ್ರ ಹಾಗೂ ಗ್ರಾಮ ಮಟ್ಟದಲ್ಲೂ ರಾಜ್ಯೋತ್ಸವ ಆಚರಿಸಲಾಗುತ್ತದೆ. ಆ ದಿನ ಬೆಳಿಗ್ಗೆ 9 ಗಂಟೆಗೆ ಎಲ್ಲ ರೇಡಿಯೊ ವಾಹಿನಿಗಳಲ್ಲಿ ನಾಡಗೀತೆ ಪ್ರಸಾರವಾಗಲಿದೆ. ರಾಜ್ಯದ ಎಲ್ಲ ಮನೆಗಳ ಮುಂದೆ ಮಹಿಳೆಯರು ಕೆಂಪು ಮತ್ತು ಹಳದಿ ಬಣ್ಣದ ರಂಗೋಲಿ ಬಿಡಿಸಿ ಸಂಭ್ರಮಿಸಲಿದ್ದಾರೆ. ಸಂಜೆ ಎಲ್ಲ ಹಳ್ಳಿ, ಪಟ್ಟಣಗಳಲ್ಲಿ ಕೆಂಪು ಮತ್ತು ಹಳದಿ ಬಣ್ಣಗಳ ಗಾಳಿಪಟಗಳ ಉತ್ಸವ ನಡೆಯಲಿದೆ. ರಾತ್ರಿ ಮನೆ, ಕಚೇರಿ, ಅಂಗಡಿಗಳ ಎದುರು ಕನ್ನಡ ಜ್ಯೋತಿ ಬೆಳಗುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ನ.2ರಂದು ಹಂಪಿಯ ವಿರೂಪಾಕ್ಷ ದೇವಾಲಯ ಮತ್ತು ಭುವನೇಶ್ವರಿ ದೇವಾಲಯಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪೂಜೆ ಸಲ್ಲಿಸುವರು. ಹಿರೇಹಡಗಲಿ ಕಣ್ಣನ್ ಅವರು ಕನ್ನಡ ಸ್ತೋತ್ರಗಳನ್ನು ಪಠಿಸುವರು. ನ.3ರಂದು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಗದುಗಿನ ವೀರನಾರಾಯಣ ದೇವಾಲಯದಲ್ಲಿ ಪೂಜೆ ಸಲ್ಲಿಸುವರು. ಅಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ಸನ್ಮಾನಿಸಲಾಗುವುದು ಎಂದರು.

ಕರ್ನಾಟಕ-50ರ ಅಂಗವಾಗಿ ರಾಜ್ಯಾದ್ಯಂತ ಕನ್ನಡ ರಥ ಯಾತ್ರೆ ನಡೆಯಲಿದೆ. ಬೆಂಗಳೂರಿನಲ್ಲಿ ಭುವನೇಶ್ವರಿ ದೇವಿಯ ಪ್ರತಿಮೆ ಮತ್ತು ಮೈಸೂರಿನಲ್ಲಿ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸ ಪ್ರತಿಮೆ ನಿರ್ಮಿಸಲಾಗುವುದು. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಭುವನೇಶ್ವರಿ ದೇವಸ್ಥಾನದ ಅಭಿವೃದ್ಧಿಗೂ ನೆರವು ನೀಡಲು ನಿರ್ಧರಿಸಲಾಗಿದೆ. ಶಾಲಾ, ಕಾಲೇಜುಗಳಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ಭಾಷಣ, ರಸಪ್ರಶ್ನೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ತಿಂಗಳೊಳಗೆ ನೇಮಕ: ವಿವಿಧ ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನವೆಂಬರ್ ಅಂತ್ಯದೊಳಗೆ ನೇಮಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯೋತ್ಸವಕ್ಕೆ ಐದು ಗೀತೆಗಳ ಆಯ್ಕೆ

ರಾಜ್ಯೋತ್ಸವದ ದಿನ ಗಾಯನಕ್ಕಾಗಿ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' (ಹುಯಿಲಗೋಳ ನಾರಾಯಣರಾಯರು), 'ಎಲ್ಲಾದರು ಇರು ಎಂತಾದರು ಇರು...' (ಕುವೆಂಪು), 'ಒಂದೇ ಒಂದೆ ಕರ್ನಾಟಕ ಒಂದೇ...' (ದ.ರಾ.ಬೇಂದ್ರೆ), 'ಹೊತ್ತಿತೋ ಹೊತ್ತಿತು ಕನ್ನಡದ ದೀಪ...' (ಸಿದ್ದಯ್ಯ ಪುರಾಣಿಕ) ಮತ್ತು 'ಹಸಿರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ...' (ಚೆನ್ನವೀರ ಕಣವಿ) ಗೀತೆಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಭೋವಿ ಸಮುದಾಯದಿಂದ ಸಿಎಂ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೋವಿ ಸಮುದಾಯಕ್ಕೆ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಜತೆಗೆ ವಿಧಾನಪರಿಷತ್ ಸದಸ್ಯ ಸ್ಥಾನವನ್ನು ನೀಡಬೇಕು ಎಂದು ಭೋವಿ ಜನಾಂಗದ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಸಚಿವ ಶಿವರಾಜ್ ತಂಗಡಗಿ ನೇತೃತ್ವದಲ್ಲಿ ಭೋವಿ ಜನಾಂಗದ ನಿಯೋಗವು ಶುಕ್ರವಾರ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಿತು. ಸಭೆಯಲ್ಲಿ ಸಮಾಜದ ಮುಖಂಡರು ಮಾತನಾಡಿ, ಸಮಾಜದ ಶ್ರೇಯೋಭಿವೃದ್ಧಿಗೆ ಭೋವಿ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿದ್ದು, ಹೆಚ್ಚಿನ ಅನುದಾನ ಒದಗಿಸಬೇಕು ಎಂದು ಮನವಿ ಮಾಡಿದರು.

ಭೋವಿ ಸಮಾಜದವರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಕುರಿತು ಪಕ್ಷದ ವರಿಷ್ಠರೊಂದಿಗೆ ಗಂಭೀರವಾಗಿ ಚರ್ಚೆ ಮಾಡಲಾಗುವುದು. ಅವರಿಗೆ ಅವಶ್ಯಕತೆ ವಿವರಿಸಲಾಗುವುದು ಎಂದು ಸಿದ್ದರಾಮಯ್ಯ ಅವರು ನಿಯೋಗಕ್ಕೆ ಭರವಸೆ ನೀಡಿದರು.

ಭೋವಿ ಸಮಾಜದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಮಾಜಿ ಸಚಿವ ವೆಂಕಟ ರಮಣಪ್ಪ ಮತ್ತು ಇತರರು ಇದ್ದರು.



ಸಭೆಯಲ್ಲಿ ಸಚಿವ ಶಿವರಾಜ ತಂಗಡಗಿ, ಭೋವಿ ಸಮಾಜದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಚ್‌.ಸಿ.ಮಹದೇವಪ್ಪ, ಮಾಜಿ ಸಚಿವ ವೆಂಕಟರಮಣಪ್ಪ ಇದ್ದರು

ಕೆಲವು ಜಿಲ್ಲೆಗಳಲ್ಲಿ ಚಳಿ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ದಿಢೀರ್ ಚಳಿಯ ವಾತಾವರಣ ಕಾಣಿಸಿದ್ದು, ವಿಜಯಪುರ ಜಿಲ್ಲೆಯಲ್ಲಿ ಶುಕ್ರವಾರ ಅತ್ಯಂತ ಕನಿಷ್ಠ ಉಷ್ಣಾಂಶ 13 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಗರಿಷ್ಠ ಉಷ್ಣಾಂಶ 36.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಕರಾವಳಿ ಹಾಗೂ ಉತ್ತರ ಒಳನಾಡು ಭಾಗದ ಕೆಲವು ಪ್ರದೇಶಗಳಲ್ಲಿ ಮುಂದಿನ ಎರಡು ದಿನಗಳಲ್ಲಿ ತಾಪಮಾನವು ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಕೆಲವು ಕಡೆಗಳಲ್ಲಿ ಉಷ್ಣಾಂಶವು ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ. ಬೆಳಗಿನ ಜಾವದಲ್ಲಿ ಮಂಜು ಮುಸುಕಿದ ವಾತವರಣ ಇರಲಿದೆ. ಗರಿಷ್ಠ ಉಷ್ಣಾಂಶವು 30 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ತಿಳಿಸಿದೆ.

ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲೂ ಬೆಳಿಗ್ಗೆ ಹಾಗೂ ಸಂಜೆ ವೇಳೆಯಲ್ಲಿ ಚಳಿ ತುಸು ಹೆಚ್ಚಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ಕಾಫಿ ಮಂಡಳಿಗೆ ಅಧ್ಯಕ್ಷರ ನೇಮಕ



ದಿನೇಶ್ ದೇವವೃಂದ

ಚಿಕ್ಕಮಗಳೂರು: ಒಂದೂವರೆ ವರ್ಷಗಳಿಂದ ಖಾಲಿ ಇದ್ದ ಕಾಫಿ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ದಿನೇಶ ದೇವವೃಂದ ಅವರನ್ನು ನೇಮಕ ಮಾಡಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಆದೇಶ ಹೊರಡಿಸಿದೆ.

ಮೂಡಿಗೆರೆ ತಾಲ್ಲೂಕಿನ ದೇವವೃಂದದ ದಿನೇಶ್ ಕಾಫಿ ಬೆಳೆಗಾರರಾಗಿದ್ದು, ಕಾಫಿ ಬೆಳೆಗಾರರ ಸಂಘಟನೆಗಳಲ್ಲೂ ಕೆಲಸ ಮಾಡಿದ್ದಾರೆ.

ಈ ಹಿಂದೆ ಎರಡು ಬಾರಿ ಕಾಫಿ ಮಂಡಳಿ ಅಧ್ಯಕ್ಷರಾಗಿದ್ದ ಎಂ.ಎಸ್. ಭೋಜೇಗೌಡ ಅವರು 2022ರಲ್ಲಿ ಹೆಜ್ಜೇನು ದಾಳಿಯಿಂದ ಮೃತಪಟ್ಟಿದ್ದರು. ಆ ಬಳಿಕ ಕಾಫಿ ಮಂಡಳಿ ಅಧ್ಯಕ್ಷ ಸ್ಥಾನ ಖಾಲಿ ಇತ್ತು.

ಕೆ. ಗೋವಿಂದ ಭಟ್ಟರಿಗೆ ಶೇಣಿ ಪ್ರಶಸ್ತಿ



ಸೂರಿಕುಮೇರು ಗೋವಿಂದ ಭಟ್

ಮಂಗಳೂರು: ಸುರತ್ಕಲ್‌ನ ಶೇಣಿ ಗೋಪಾಲಕೃಷ್ಣ ಭಟ್ ಚಾರಿಟಬಲ್ ಟ್ರಸ್ಟ್ ನೀಡುವ 2023ನೇ ಸಾಲಿನ ಶೇಣಿ ಪ್ರಶಸ್ತಿಗೆ ಯಕ್ಷಗಾನ ಕಲಾವಿದ ಕೆ.ಗೋವಿಂದ ಭಟ್ ಸೂರಿಕುಮೇರು ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹30 ಸಾವಿರ ಗೌರವಧನ ಒಳಗೊಂಡಿದೆ.

ಅ.29ರಂದು ಸಂಜೆ 4 ಗಂಟೆಗೆ ಸುರತ್ಕಲ್‌ನ ಗೋವಿಂದದಾಸ್ ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್‌ನ ಉಪಾಧ್ಯಕ್ಷ ಕೂಡ್ಲು ಮಹಾಬಲ ಶೆಟ್ಟಿ ತಿಳಿಸಿದ್ದಾರೆ.

ನಿಗಮಗಳ ಹುದ್ದೆ ಭರ್ತಿ: ಇಂದಿನಿಂದ ಪರೀಕ್ಷೆ ಆರಂಭ


ಬೆಂಗಳೂರು: ವಿವಿಧ ನಿಗಮಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅ.28 ಮತ್ತು 29ರಂದು ಪರೀಕ್ಷೆ ನಡೆಸುತ್ತಿದ್ದು, 5.35 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದಾರೆ.

28ರಂದು ನಡೆಯುವ ಪರೀಕ್ಷೆಯಲ್ಲಿ ಬೆಂಗಳೂರಿನ 72 ಕೇಂದ್ರಗಳು ಸೇರಿದಂತೆ ರಾಜ್ಯದ 350 ಕೇಂದ್ರಗಳಲ್ಲಿ 1.75 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯುವರು. 29 ರಂದು 870 ಕೇಂದ್ರಗಳಲ್ಲಿ 3.60 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಮಾಹಿತಿ ನೀಡಿದ್ದಾರೆ.

ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಅಷ್ಟೇ ಸಂಖ್ಯೆಯ ಪ್ರವೇಶ ಪತ್ರಗಳು ಡೌನ್‌ಲೋಡ್ ಆಗಿವೆ. ಕೆಲವರಿಗೆ ಎರಡು ಪ್ರತ್ಯೇಕ ಜಿಲ್ಲೆಗಳಲ್ಲಿ, ಅದೇ ಜಿಲ್ಲೆಯ ಬೇರೆಬೇರೆ ಕೇಂದ್ರಗಳಲ್ಲಿ ಪರೀಕ್ಷಾ ಕೇಂದ್ರಗಳು ದೊರಕಿವೆ. ಅಂಥವರು ತಮಗೆ ಅನುಕೂಲವಾಗುವ ಕಡೆ ಪರೀಕ್ಷೆ ಬರೆಯಬಹುದು. ಆದರೆ, ಪರೀಕ್ಷಾ ದಿನದಂದು ಎರಡೂ ಪ್ರವೇಶ ಪತ್ರಗಳನ್ನೂ ಕೊಠಡಿಯ ಮೇಲ್ವಿಚಾರಕರಿಗೆ ಸಲ್ಲಿಸಬೇಕು ಎಂದು ಅವರು ವಿವರಿಸಿದ್ದಾರೆ.

ವಾಲ್ಮೀಕಿ: ರಸಕವಿ ಋಷಿಕವಿ

● ಎಸ್. ಸೂರ್ಯಪ್ರಕಾಶ ಪಂಡಿತ್



ಇಂದು ವಾಲ್ಮೀಕಿ ಜಯಂತಿ

ವಾಲ್ಮೀಕಿ ಮಹರ್ಷಿಗಳ ಜಯಂತಿ ಎಂದರೆ ಅದು ರಾಮನ ಮಹಾಗುಣಗಳ ಸಂಕೀರ್ತನೆಯೇ ಹೌದು; ರಾಮಾಯಣದ ಪಾರಾಯಣವೇ ಹೌದು.

ಈ ಸೃಷ್ಟಿ ಇರುವ ತನಕವೂ ರಾಮಾಯಣ ಎಂಬ ಮಹಾಕಾವ್ಯವು ಲೋಕದಲ್ಲಿ ಪ್ರಸಿದ್ಧವಾಗಿರುತ್ತದೆ – ಎಂಬ ಪ್ರಶಸ್ತಿಯ ಮಾತೊಂದು ಇದೆ, ಪರಂಪರೆಯಲ್ಲಿ. ಇದು ಏಕಕಾಲದಲ್ಲಿ ವಾಲ್ಮೀಕಿಯನ್ನೂ ರಾಮಾಯಣವನ್ನೂ ರಾಮನನ್ನೂ ನಿತ್ಯಸತ್ಯವನ್ನಾಗಿಸಿದೆ. ರಾಮಾಯಣ ಎಂದರೇನೇ ಅದು ಮಾತಿನ ಮಹಿಮೆ. ರಾಮಾಯಣದ ಹುಟ್ಟಿನಿಂದ ಹಿಡಿದು, ಅದರ ನಾಯಕನ ಹಿರಿಮೆಯವರೆಗೂ, ಅಷ್ಟೇಕೆ, ರಾಮಾಯಣ ದುದ್ದಕ್ಕೂ, ಮಾತಿನ ಶಕ್ತಿಯನ್ನೇ ಕಾಣುತ್ತೇವೆ. ಇಂಥದೊಂದು ಅಪೂರ್ವ ಕಾವ್ಯವನ್ನು ಸೃಷ್ಟಿಸಿದ ಋಷಿಕವಿ ವಾಲ್ಮೀಕಿ.

ನಮಗೆ ವಾಲ್ಮೀಕಿ ಮಹರ್ಷಿಗಳ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಆದರೆ ರಾಮಾಯಣವನ್ನು ಓದುತ್ತಿದ್ದರೆ, ಅದರ ಒಂದೊಂದು ಮಾತಿನಲ್ಲೂ ವಾಲ್ಮೀಕಿಗಳ ವ್ಯಕ್ತಿತ್ವವೇ ಎದ್ದುಕಾಣುತ್ತದೆ. ವಾಲ್ಮೀಕಿಗಳ ವ್ಯಕ್ತಿತ್ವದಲ್ಲಿ ಮಹತ್ತರ ಬದಲಾವಣೆ ಆದದ್ದು ಅವರು ರಾಮನ ಬಗ್ಗೆ ನಾರದರು ಹೇಳಿದ ಮಾತುಗಳನ್ನು ಕೇಳಿದ ಮೇಲೆಯೇ. ಮೊದಲಿಗೆ ಅವರು ತಮ್ಮ ಮೋಕ್ಷವನ್ನು ಬಯಸಿ ಸಾಧನೆಯಲ್ಲಿ ನಿರತ ತಪಸ್ವಿಗಳಷ್ಟೇ ಆಗಿದ್ದರು; ಆದರೆ ರಾಮನ ಕಥೆಯನ್ನು ಕೇಳಿ ಅವರು ಜಗತ್ತಿನ ಸಂಕಟಕ್ಕೆ ಸ್ಪಂದಿಸಬಲ್ಲ ಋಷಿಕವಿಗಳೇ ಆದರು. ಒಂದು ಹಕ್ಕಿಯ ಆಕ್ರಂದನದಲ್ಲಿ ಅವರು ಇಡಿಯ ಜಗತ್ತಿನ ಅಳುವನ್ನೇ ಕಂಡರು. ಈ ವಿಶ್ವಾತ್ಮಭಾವದ ಕಾರಣದಿಂದಾಗಿಯೇ ಅವರ ಶೋಕವೇ ಶ್ಲೋಕವಾಯಿತು; ಈ ಸಹೃದಯತೆಯ ರಸಾಭಿವ್ಯಕ್ತಿಯಲ್ಲಿ ರಾಮ–ಸೀತೆಯರ ಕಥೆ 'ರಾಮಾಯಣ'ವಾಯಿತು.

ಇಂದು ಜಗತ್ತು ಕಿರಿದಾಗಿ, ಸಂಪರ್ಕಜಾಲದ ದೆಸೆಯಿಂದಾಗಿ, ಭೌತಿಕವಾಗಿ ಒಂದು ಪುಟ್ಟ ಗ್ರಾಮದಂತಾಗಿದೆ, ದಿಟ. ಹೀಗಿದ್ದರೂ, ಭಾವ–ಬುದ್ಧಿಗಳ ಪಾತಳಿಯಲ್ಲಿ ಎಲ್ಲರಲ್ಲೂ ಪ್ರತ್ಯೇಕತೆಯ ಭಾವವೇ ತೀವ್ರವಾಗುತ್ತಿದೆ. ಆದರೆ ಸಂಪರ್ಕಸಾಧನಗಳ ಆರ್ಭಟ ಇಲ್ಲದ ಕಾಲದಲ್ಲಿ ಇಡಿಯ ಭಾರತವನ್ನು ಒಗ್ಗೂಡಿಸಿದ್ದವರು ವಾಲ್ಮೀಕಿಗಳೇ ಹೌದು. ಅವರು ಕಂಡರಿಸಿದ 'ರಾಮತತ್ತ್ವ' ಎಂಬ ಧರ್ಮಸೇತು ನಮ್ಮ ದೇಶದ ಸಂಸ್ಕೃತಿಯನ್ನು ರೂಪಿಸಿತು; ಧರ್ಮದ ಸ್ವರೂಪವನ್ನು ಹಿಗ್ಗಿಸಿತು; ಮನುಷ್ಯ ಜೀವನದ ಆದರ್ಶಗಳನ್ನು ಬೆಳೆಯಿಸಿತು; ಜಾತಿ ಮತ ಭಾಷೆ ಪ್ರಾಂತಗಳ ಎಲ್ಲೆಯನ್ನು ಮೀರಿ ಎಲ್ಲರನ್ನೂ ರಾಮಭಾವದಲ್ಲಿ ಕೂಡಿಸಿತು.

ಶ್ರೀರಾಮನನ್ನು ಧರ್ಮದ ವಿಗ್ರಹರೂಪ ಎಂದು ವಾಲ್ಮೀಕಿಗಳು ಒಕ್ಕಣಿಸಿದ್ದಾರೆ. ಈ ಒಂದು ಮಾತಿನಲ್ಲಿ ರಾಮನ ವ್ಯಕ್ತಿತ್ವವೂ ವಾಲ್ಮೀಕಿಗಳ ವ್ಯಕ್ತಿತ್ವವೂ ಸ್ಫುಟವಾಗುತ್ತವೆ. ವಾಲ್ಮೀಕಿಗಳು ರಾಮಾಯಣವನ್ನು ಏಕಾಗಿ ಬರೆದರು ಎಂಬುದು ಈ ಮಾತಿನಿಂದ ಸ್ಪಷ್ಟವಾಗುತ್ತದೆ. ಧರ್ಮದ ಸ್ವರೂಪ ಹೇಗಿರುತ್ತದೆ – ಎಂಬುದೇ ಅವರ ಹುಡುಕಾಟವಾಗಿತ್ತು. ಆಗ ಅವರಿಗೆ ಒದಗಿದ ಕಾಣ್ಕೆಯೇ 'ರಾಮ'. ರಾಮ ಎಂಬ ಧರ್ಮದ ನಡೆದಾಡುವ ರೂಪವನ್ನು ಅವರು ಜಗತ್ತಿಗೆ ಕರುಣಿಸಿದರು, ಕಾಣಿಸಿದರು.

ನಾವಿಂದು ಧಾರ್ಮಿಕತೆಯನ್ನು ಅನುಕೂಲಸಿಂಧುವನ್ನಾಗಿಸಿಕೊಳ್ಳುತ್ತಿದ್ದೇವೆ. ಆದರೆ ದಿಟವಾದ ಧರ್ಮಶ್ರದ್ಧೆಯ ಆಕಾರವನ್ನು ಕಾಣಿಸಿದವರು ವಾಲ್ಮೀಕಿಗಳು. ಧರ್ಮ ಎನ್ನುವುದು ಸನಾತನವಾದುದು; ಅದು ನಮ್ಮ ಸ್ವಾರ್ಥ, ಬುದ್ಧಿ, ಅನುಕೂಲ, ದೇಶ, ಕಾಲಗಳನ್ನು ಮೀರಿದ ಶಾಶ್ವತ ತತ್ತ್ವ ಎಂಬುದರ ಮೀಮಾಂಸೆಯನ್ನು ರಾಮಾಯಣದ ಆರಂಭದಿಂದ ಕೊನೆಯ ತನಕ ಅವರು ನಿರೂಪಿಸಿದ್ದಾರೆ. ದಿಟವಾದ ಧಾರ್ಮಿಕ ಹೇಗಿರುತ್ತಾನೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು.

ರಾಮನು ಪಟ್ಟಾಭಿಷೇಕಕ್ಕೆ ಸಿದ್ಧನಾಗುತ್ತಿದ್ದಾನೆ. ಆದರೆ ಮುಂದೆ ಸ್ವಲ್ಪವೇ ಸಮಯದ ಅಂತರದಲ್ಲಿ ಕಾಡಿಗೆ ಹೋಗಲು ಅವನು ಸಿದ್ಧನಾಗಬೇಕಾಗುತ್ತದೆ. ಆಗ ರಾಮನ ಮುಖ ಹೇಗಿತ್ತು ಎಂಬುದನ್ನು ವಾಲ್ಮೀಕಿಗಳು ವರ್ಣಿಸುತ್ತಾರೆ: 'ಅವನು ಪಟ್ಟಾಭಿಷೇಕಕ್ಕೆ ಸಿದ್ಧವಾಗುತ್ತಿದ್ದಾಗ ಅವನ ಮುಖ ಹೇಗಿದ್ದಿತೋ, ಈಗ ಕಾಡಿಗೆ ಹೋಗಲು ಸಿದ್ಧವಾಗಬೇಕಾದರೂ ಹಾಗೆಯೇ ಇದ್ದಿತು; ಸ್ವಲ್ಪವೂ ವ್ಯತ್ಯಾಸ ಇರಲಿಲ್ಲ.'

ಧರ್ಮದಲ್ಲಿ ನಿರತನಾದವನಿಗೆ ನಾಡಾದರೂ ಒಂದೇ, ಕಾಡಾದರೂ ಒಂದೇ; ಅವನಿಗೆ ಧರ್ಮಮಾರ್ಗ ಮುಖ್ಯವೇ ಹೊರತು ಸಿಂಹಾಸನ–ವನವಾಸಗಳು ಅಲ್ಲ – ಎಂಬುದನ್ನು ತುಂಬ ಅದ್ಭುತವಾಗಿ ವಾಲ್ಮೀಕಿಗಳು ಸೂಚಿಸಿದ್ದಾರೆ. 'ಯಾವುದೇ ಕಾರಣಕ್ಕೂ ಅಧರ್ಮಮಾರ್ಗದಿಂದ ನಾನು ರಾಜ್ಯವನ್ನು ದಕ್ಕಿಸಿಕೊಳ್ಳಲಾರೆ' ಎಂದು ರಾಮ ನೇರವಾಗಿಯೇ ಘೋಷಿಸುತ್ತಾನೆ ಕೂಡ. ನಮಗಿಂದು ರಾಮಾಯಣ ಮತ್ತು ವಾಲ್ಮೀಕಿ ಮಹರ್ಷಿ ಪ್ರಸ್ತುತ ಎನಿಸುವುದೇ ಇಂಥ ಕಾಣ್ಕೆಗಾಗಿ.

'ಪ್ರಿಯವಾದ ಮಾತುಗಳನ್ನು ಆಡುವವರು ಯಾವಾಗಲೂ ದೊರೆಯುತ್ತಾರೆ. ಆದರೆ ಅಪ್ರಿಯವಾದರೂ ಹಿತವಾದ ಮಾತುಗಳನ್ನು ಹೇಳುವವವರೂ ಕೇಳುವವರೂ ಸಿಗುವುದು ಕಷ್ಟ.' ಇದು ರಾಮಾಯಣದ್ದೇ ಮಾತು. ಆದರೆ ವಾಲ್ಮೀಕಿಗಳು ನಮಗೆ ಹಿತವಾದ ಮಾತುಗಳನ್ನು ಪ್ರಿಯವಾದ ಮಾತುಗಳ ಮೂಲಕವೇ ಹೇಳಿ ನಮ್ಮ ಪಾಲಿಗೆ ರಸಕವಿಯೂ ಋಷಿಕವಿಯೂ ಆಗಿದ್ದಾರೆ. ಅವರ ಮಾತುಗಳನ್ನು ನಾವು ಕೇಳಬೇಕಷ್ಟೆ!

ಇ–ಆಡಳಿತ ಕೇಂದ್ರ (CEG — CENTRE FOR e-GOVERNANCE, e-Enabling Government)

ಕೊಠಡಿ ಸಂಖ್ಯೆ: 141, ಒಂದನೇ ಮಹಡಿ, ಎರಡನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು–560001. ದೂ: 080–22373840 ಫ್ಯಾಕ್ಸ್: 22373841

ಸಂಖ್ಯೆ: DPAR-CEG0ADM/51/2023-CEG ದಿನಾಂಕ: 27.10.2023

ಪ್ರಕಟಣೆ

ನಿಯೋಜನೆ ಆಧಾರದ ಮೇಲೆ ಕೇಸ್ವಾನ್, ಯೋಜನಾ ನಿರ್ದೇಶಕರ ಹುದ್ದೆಗಾಗಿ ಆಹ್ವಾನ

ಇ–ಆಡಳಿತ ಕೇಂದ್ರವು, ಕರ್ನಾಟಕ ಸರ್ಕಾರದ ಡಿಪಿಎಆರ್ (ಇ–ಆಡಳಿತ) ಅಡಿಯಲ್ಲಿ ಸ್ಥಾಪಿತಗೊಂಡ ಸೊಸೈಟಿ ಹಾಗೂ ಕರ್ನಾಟಕ ಸಂಘ–ಸಂಸ್ಥೆಗಳ ನೊಂದಾಯಿತ ಅಧಿನಿಯಮ 1960ರ ಪ್ರಕಾರ ನೊಂದಾಯಿತ ಸಂಸ್ಥೆಯಾಗಿದ್ದು, **ಕರ್ನಾಟಕ ರಾಜ್ಯ ವಿಸ್ತೃತ ಜಾಲ ಯೋಜನೆಗೆ ಯೋಜನಾ ನಿರ್ದೇಶಕರ ಹುದ್ದೆಗಾಗಿ (PD, KSWAN)** ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಯು 3 ವರ್ಷಗಳ ಅವಧಿಗೆ ನಿಯೋಜನೆ ಆಧಾರದ್ದಾಗಿದ್ದು, ಅಗತ್ಯತೆ ಆಧಾರದ ಮೇಲೆ ವಿಸ್ತರಿಸಬಹುದಾಗಿದ್ದು, PB Level-13/13A/14 ಅಥವಾ ತತ್ಸಮಾನದ ವೇತನ ಶ್ರೇಣಿಯಿರುತ್ತದೆ. ಅಭ್ಯರ್ಥಿಗಳು ವಿದ್ಯಾರ್ಹತೆ, ಅನುಭವ, ಅರ್ಜಿ ಸಲ್ಲಿಕೆ, ನಿಯಮ ಮತ್ತು ಷರತ್ತುಗಳು, ಇತ್ಯಾದಿ ವಿವರಗಳಿಗಾಗಿ **https://ceg.karnataka.gov.in** ಅನ್ನು ವೀಕ್ಷಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **ಈ ಜಾಹೀರಾತು ಪ್ರಕಟವಾದ ದಿನಾಂಕದಿಂದ 45 ದಿನಗಳು.**

ಸಹಿ/– ಆಡಳಿತಾಧಿಕಾರಿಗಳು
ಇ–ಆಡಳಿತ ಕೇಂದ್ರ

DIPR/CP/YC/1878/2023-24

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ D.P.A.R

ಪಾವಟೆನಗರ, ಧಾರವಾಡ. ದೂರವಾಣಿ: 0836–2215349. Website: www.kud.ac.in

ಸಂ.ಕವಿವಿ/ಸಿಆಸುವಿ/ಶಿಕ್ಷಕಕೇತರ/10/ಬ್ಯಾಕ್‌ಲಾಗ್-ಜಾಹೀರಾತು/2023/360 ದಿನಾಂಕ: 26.10.2023

ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಜಾಹೀರಾತು

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಾಕಿ ಉಳಿದಿರುವ ಬ್ಯಾಕ್‌ಲಾಗ್ ಹುದ್ದೆಗಳ ಈ ಕೆಳಕಂಡ ಬೋಧಕೇತರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಅ.ನಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಮೀಸಲಾತಿ
1	ಕರಡು ವಾಚಕರು	01	ಪರಿಶಿಷ್ಟ ಪಂಗಡ
2	ಬಡಿಗ/ಪೇಂಟರ್	01	ಪರಿಶಿಷ್ಟ ಪಂಗಡ
3	ಇಲೆಕ್ಟ್ರೀಷಿಯನ್	01	ಪರಿಶಿಷ್ಟ ಜಾತಿ

ಆಸಕ್ತ ಅಭ್ಯರ್ಥಿಗಳು ಸೂಕ್ತ ಮಾಹಿತಿಯೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ದೃಢೀಕೃತ ದಾಖಲೆಗಳ ಪ್ರತಿಗಳೊಂದಿಗೆ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ–580003, ಇವರಿಗೆ ದಿನಾಂಕ **28.11.2023** ರ ಒಳಗಾಗಿ ಸಲ್ಲಿಸಬೇಕು. ನಿಗದಿತ ಅರ್ಜಿ ನಮೂನೆ, ಶುಲ್ಕ, ಹುದ್ದೆಗಳ ಮೀಸಲಾತಿ ವಿಂಗಡನೆಯ ಕೋಷ್ಟಕ, ಶೈಕ್ಷಣಿಕ ವಿದ್ಯಾರ್ಹತೆ ಮಾಹಿತಿ ಹಾಗೂ ಇತರೆ ವಿವರಕ್ಕಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ **www.kud.ac.in** ನ **Notifications** ಅಂಕಣದಲ್ಲಿ ಪ್ರಚುರಪಡಿಸಲಾಗಿರುವ ಜಾಹೀರಾತನ್ನು ಓದಿಕೊಂಡು ಅಗತ್ಯ ಮಾಹಿತಿಯನ್ನು ಪಡೆದು ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಅಗತ್ಯ ವಿವರಗಳನ್ನು ಭರ್ತಿ ಮಾಡಿ ಅದರೊಂದಿಗೆ ಪೂರಕ ದಾಖಲೆಗಳನ್ನು ಲಗತ್ತಿಸಿ ನಾಲ್ಕು ಪ್ರತಿಗಳಲ್ಲಿ ಸಲ್ಲಿಸಬಹುದಾಗಿದೆ.

ಕುಲಸಚಿವರು



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು



ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ
ಹಾಗೂ
ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭ

ಶ್ರೀ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಮಾಲಾರ್ಪಣೆ: ದಿನಾಂಕ: 28.10.2023 **ಸಮಯ :** ಬೆಳಿಗ್ಗೆ 9.30ಕ್ಕೆ
ಸ್ಥಳ : "ಶ್ರೀ ಮಹರ್ಷಿ ವಾಲ್ಮೀಕಿ ತಪೋವನ" (ಶಾಸಕರ ಭವನದ ಮುಂಭಾಗ),
ವೇದಿಕೆ ಕಾರ್ಯಕ್ರಮ : ಸಮಯ : ಬೆಳಿಗ್ಗೆ 10.00ಕ್ಕೆ, **ಸ್ಥಳ :** ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.

ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ ||
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ ||



ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಡಾ|| ಹೆಚ್. ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು

ಶ್ರೀ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಪುಷ್ಪಾರ್ಚನೆ
ಶ್ರೀ ಬಿ. ನಾಗೇಂದ್ರ
ಮಾನ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು

ದಿವ್ಯ ಸಾನಿಧ್ಯ
ಶ್ರೀ ಶ್ರೀ ಶ್ರೀ ಪ್ರಸನ್ನಾನಂದ ಪುರಿ ಮಹಾಸ್ವಾಮೀಜಿಯವರು
ಜಗದ್ಗುರುಗಳು, ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಅಧ್ಯಕ್ಷತೆ
ಶ್ರೀ ರಿಜ್ವಾನ್ ಹರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಮಾನ್ಯ ಕೇಂದ್ರ ಸರ್ಕಾರದ ಸಚಿವರು, ರಾಜ್ಯ ಖಾತೆ ಸಚಿವರು, ಕರ್ನಾಟಕ ಸರ್ಕಾರದ ಎಲ್ಲಾ ಸಚಿವರು, ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನಪರಿಷತ್ ಸದಸ್ಯರುಗಳು ಹಾಗೂ ಎಲ್ಲಾ ಚುನಾಯಿತ ಜನ ಪ್ರತಿನಿಧಿಗಳು ಉಪಸ್ಥಿತರಿರುವರು

ಸರ್ವರಿಗೂ ಆದರದ ಸ್ವಾಗತ

ಭವ್ಯ ಮೆರವಣಿಗೆ

ಶ್ರೀ ಮಹರ್ಷಿ ವಾಲ್ಮೀಕಿ ಮಹಾಸಂಸ್ಥಾನ ಆದಿಗುರುಪೀಠ ಶ್ರೀ ಬೇಡರಕಣ್ಣಪ್ಪಸ್ವಾಮಿ ದೇವಸ್ಥಾನ ಬಸವನಗುಡಿಯಿಂದ **"ವಾಲ್ಮೀಕಿಜ್ಯೋತಿ"**ಮೆರವಣಿಗೆಯೊಂದಿಗೆ ಆಗಮಿಸಿ ಶ್ರೀ ಬಸವೇಶ್ವರ ವೃತ್ತದಿಂದ ಸಾಂಸ್ಕೃತಿಕ ಬುಡಕಟ್ಟು ಕಲಾ ತಂಡಗಳ ಪ್ರದರ್ಶನದೊಂದಿಗೆ ವೈಭವದ ಸ್ತಬ್ಧಚಿತ್ರಗಳ ಮೆರವಣಿಗೆ **ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರ** ಸಾರೋಟ್‌ನೊಂದಿಗೆ ಶಾಸಕರ ಭವನದ ಮುಂಭಾಗದಲ್ಲಿರುವ ಶ್ರೀ ಮಹರ್ಷಿ ವಾಲ್ಮೀಕಿ ತಪೋವನದಲ್ಲಿರುವ **"ಶ್ರೀ ಮಹರ್ಷಿ ವಾಲ್ಮೀಕಿ ಪ್ರತಿಮೆ"**ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಮಾಲಾರ್ಪಣೆ ನೆರವೇರಿಸಿದ ನಂತರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವೇದಿಕೆ ಕಾರ್ಯಕ್ರಮಕ್ಕೆ ವಿಧ್ಯುಕ್ತ ಚಾಲನೆ.



ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ **ಶ್ರೀ ಬಿ. ನಾಗೇಂದ್ರ** ರವರು ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ತಾಲ್ಲೂಕಿನ ಗೋಳೂರು ಹಾಡಿ ವಾಸ್ತವ್ಯ ಹೂಡಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುತ್ತಿರುವುದು.

ಶ್ರೀಮತಿ ವಂದಿತಾ ಶರ್ಮಾ, ಭಾ.ಆ.ಸೇ
ಮಾನ್ಯ ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ

ಮೇಜರ್ ಮಣಿವಣ್ಣನ್ ಪಿ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ

ಡಾ. ಇ. ವೆಂಕಟಯ್ಯ, ಭಾ.ಅ.ಸೇ.(ನಿ)
ಮಾನ್ಯ ಸಲಹೆಗಾರರು
ಪ.ಜಾತಿ ಮತ್ತು ಪ. ಪಂ. ಉಪಯೋಜನೆ

ಡಾ. ಕೆ. ರಾಕೇಶ್ ಕುಮಾರ್, ಭಾ.ಆ.ಸೇ.
ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ನವೀನ್ ಕುಮಾರ್ ರಾಜು ಎಸ್., ಭಾ.ಆ.ಸೇ.
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

ಕಲ್ಲೇಶ್ ಬಿ., ಕ.ಸಾ.ಸೇ
ನಿರ್ದೇಶಕರು,
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಪದ್ಮನಾಭ ಜೆ. ಜಿ
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು

ಡಾ. ಶ್ರೀನಿವಾಸ ಎಲ್.
ನಿರ್ದೇಶಕರು,
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕ ಲಕ್ಷ್ಮಣ ಸವದಿ ಮನೆಯಿಂದ ಪೆಂಡೆಂಟ್ ಜಪ್ತಿ • ಅಧಿಕಾರಿಗಳ ವಶಕ್ಕೆ ಡಿಆರ್‌ಎಫ್‌ಒ

ಹುಲಿ ಉಗುರು: ಮುಂದುವರಿದ 'ಬೇಟೆ'

'ಬಿಗ್ ಬಾಸ್' ಮನೆಯಲ್ಲಿ ಆರಂಭವಾದ ಹುಲಿ ಉಗುರಿನ ಪೆಂಡೆಂಟ್‌ಗಳ ಶೋಧ ಈಗ ರಾಜಕಾರಣದ 'ಬಿಗ್‌ಬಾಸ್'ಗಳ ಮನೆಗಳಿಗೆ ಪ್ರವೇಶಿಸಿದೆ. ಸಚಿವೆ, ಶಾಸಕ, ಕಾಂಗ್ರೆಸ್ ಮುಖಂಡನ ಮನೆಗಳಲ್ಲಿ ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದ್ದಾರೆ. ಪೆಂಡೆಂಟ್ ಧರಿಸಿದ್ದ ಚಿತ್ರ ಪ್ರಚಾರಪಡೆದಂತೆ ನಾಪತ್ತೆಯಾಗಿದ್ದ ಕಳಸದ ಡಿಆರ್‌ಎಫ್‌ಒ ಅವರನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಇತ್ತ, 'ಹುಲಿ ಉಗುರಿ'ನ ಪೆಂಡೆಂಟ್ ಧರಿಸಿದ್ದ ಪ್ರಮುಖರ ಚಿತ್ರಗಳು ಜಾಲತಾಣದಲ್ಲಿ ರಾರಾಜಿಸುತ್ತಿದ್ದು, ದೂರುಗಳು ದಾಖಲಾಗುತ್ತಿವೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಮನೆಯನ್ನು ಶುಕ್ರವಾರ ಪರಿಶೀಲಿಸಿದ ಅರಣ್ಯ ಇಲಾಖೆ ಅಧಿಕಾರಿಗಳು, ಹುಲಿ ಉಗುರಿನದ್ದು ಎನ್ನಲಾದ ಪೆಂಡೆಂಟ್ ಅನ್ನು ವಶಕ್ಕೆ ಪಡೆದರು.

ಸಚಿವೆ ಲಕ್ಷ್ಮೀ ಅವರ ಪುತ್ರ ಮೃಣಾಲ್ ಹುಲಿ ಉಗುರಿನ ಪೆಂಡೆಂಟ್ ಇರುವ ಆಭರಣ ಧರಿಸಿದ್ದಾರೆ ಎಂಬ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಹಂಚಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯಾಧಿಕಾರಿಗಳು ತಪಾಸಣೆ ನಡೆಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಶಂಕರ ಕಲ್ಲೋಳಿಕರ, ಹೆಬ್ಬುವರಿ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ ತೇಲಿ ನೇತೃತ್ವದ ಅಧಿಕಾರಿಗಳ ತಂಡ, ಮೃಣಾಲ್ ಹೆಬ್ಬಾಳಕರ ಅವರನ್ನು ವಿಚಾರಣೆಗೆ ಒಳಪಡಿಸಿತು.

'ಮದುವೆಯಲ್ಲಿ ಸಂಬಂಧಿಕರು ಈ ಪೆಂಡೆಂಟ್ ಕಾಣಿಕೆ ನೀಡಿದ್ದರು. ಇದು ನಿಜವಾದ ಹುಲಿ ಉಗುರಿನದ್ದಲ್ಲ, ಪ್ಲಾಸ್ಟಿಕ್ ನದ್ದು. ವಿಚಾರಣೆಗೆ ಪೂರ್ಣ ಸಹಕಾರ ನೀಡುತ್ತೇನೆ' ಎಂದು ಮೃಣಾಲ್ ಹೇಳಿದರು.

ಸಚಿವೆ ಲಕ್ಷ್ಮೀ ಅವರು, 'ಪುತ್ರನ ಕೊರಳಲ್ಲಿ ಇದ್ದುದು ಪ್ಲಾಸ್ಟಿಕ್ ನದ್ದು. ಅದನ್ನು ಅರಣ್ಯಾಧಿಕಾರಿಗಳಿಗೆ ಒಪ್ಪಿಸಿದ್ದೇವೆ. ಅವರು ತಪಾಸಣೆ ಮಾಡಲಿ. ನಿಜವಾದ ಹುಲಿ ಉಗುರಿನ ವಸ್ತು ಈಗ ಸಿಗಲು ಸಾಧ್ಯವಿಲ್ಲ' ಎಂದರು.

ಅಥಣಿ ವರದಿ: ಶಾಸಕ ಲಕ್ಷ್ಮಣ ಸವದಿ ಅವರ ಪುತ್ರ ಸುಮಿತ್ ಹುಲಿ ಉಗುರು ಹೋಲುವ ಪೆಂಡೆಂಟ್ ಧರಿಸಿದ ಚಿತ್ರವೂ ಜಾಲತಾಣಗಳಲ್ಲಿ ಹರಿದಾಡಿದ ಹಿನ್ನೆಲೆಯಲ್ಲಿ ಶಾಸಕರ ಮನೆಗೆ ಬಂದ ಅರಣ್ಯ ಇಲಾಖೆ ಅಧಿಕಾರಿಗಳು ಪೆಂಡೆಂಟ್ ಅನ್ನು ವಶಕ್ಕೆ ಪಡೆದರು.

ಅಧಿಕಾರಿಗಳು ಮನೆಗೆ ಏಕಾಏಕಿ ಬಂದಿದ್ದಕ್ಕೆ ಲಕ್ಷ್ಮಣ ಅವರ ಪತ್ನಿ ಸುಶೀಲಾ ಆಕ್ಷೇಪಿಸಿದರು. ಲಕ್ಷ್ಮಣ ಅವರ ಇನ್ನೊಬ್ಬ ಪುತ್ರ ಚಿದಾನಂದ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಪೆಂಡೆಂಟ್ ಅನ್ನು ವಿವಾಹದಲ್ಲಿ ಸ್ನೇಹಿತರು ಉಡುಗೊರೆ ನೀಡಿದ್ದರು' ಎಂದು ಹೇಳಿದರು.



ಬೆಳಗಾವಿಯಲ್ಲಿ ಶುಕ್ರವಾರ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಮನೆಗೆ ಬಂದ ಡಿಸಿಎಫ್ ಶಂಕರ ಕಲ್ಲೋಳಿಕರ ನೇತೃತ್ವದ ತಂಡ, ಮೃಣಾಲ್ ಅವರನ್ನು ವಿಚಾರಣೆ ಮಾಡಿತು

ಮಹಿಳಾ ಸಿಬ್ಬಂದಿ ಪೆಂಡೆಂಟ್ ವಶ

ಸುಳ್ಯ (ದಕ್ಷಿಣ ಕನ್ನಡ): ಇಲ್ಲಿನ ಪಟ್ಟಣ ಪಂಚಾಯಿತಿ ಸಿಬ್ಬಂದಿ ಶಶಿಕಲಾ ಅವರಿಂದ ಅಧಿಕಾರಿಗಳು ಹುಲಿ ಉಗುರು ಹೋಲುವ ಪೆಂಡೆಂಟ್ ವಶಪಡಿಸಿಕೊಂಡಿದ್ದಾರೆ. ಸಿಬ್ಬಂದಿ ಹುಲಿ ಉಗುರು ಹೋಲುವ ಪೆಂಡೆಂಟ್ ಧರಿಸಿದ್ದ ಚಿತ್ರ ಜಾಲ ತಾಣಗಳಲ್ಲಿ ಹರಿದಾಡಿತ್ತು.

'ಇದು ಅಸಲಿಯಲ್ಲ. ಯಾರೋ ಮಾರಾಟ ಮಾಡಲು ಬಂದವರಿಂದ ನನ್ನ ತಾಯಿ ಖರೀದಿಸಿ, ಧರಿಸುತ್ತಿದ್ದರು. ಅನೇಕ ವರ್ಷಗಳಿಂದ ನಾನು ಧರಿಸುತ್ತಿದ್ದೆ. ಫೋಟೊ ಜಾಲತಾಣಗಳಲ್ಲಿ ಹರಿದಾಡುತ್ತಿದ್ದಂತೆ ಅಧಿಕಾರಿಗಳ ಸೂಚನೆಯಂತೆ ವಲಯ ಅರಣ್ಯಾಧಿಕಾರಿ ಕಚೇರಿಗೆ ತೆರಳಿ ಅದನ್ನು ಕೊಟ್ಟು ಬಂದಿದ್ದೇನೆ' ಎಂದು ಶಶಿಕಲಾ ಪ್ರತಿಕ್ರಿಯಿಸಿದರು.

'ಪೆಂಡೆಂಟ್‌ನ ಪರಿಶೀಲನೆಗೆ ಪ್ರಯೋಗಾಲಯಕ್ಕೆ ಕಳುಹಿಸಿದೆ. ಅಸಲಿ ಹುಲಿ ಉಗುರಿನದ್ದಾಗಿದ್ದರೆ ಕ್ರಮ ಕೈಗೊಳ್ಳುತ್ತೇವೆ' ಎಂದು ಅಧಿಕಾರಿಗಳು ತಿಳಿಸಿದರು.

ಡಿಆರ್‌ಎಫ್‌ಒ ಅಮಾನತು



ದರ್ಶನ್‌ಕುಮಾರ್

ಚಿಕ್ಕಮಗಳೂರು: ಹುಲಿ ಉಗುರಿನ ಪೆಂಡೆಂಟ್ ಹೊಂದಿದ್ದ ಆರೋಪದಲ್ಲಿ ಕಳಸ ಉಪ ವಲಯ ಅರಣ್ಯಾಧಿಕಾರಿ ಎಂ.ದರ್ಶನ್ ಕುಮಾರ್ ಅವರನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಶುಕ್ರವಾರ ವಶಕ್ಕೆ ಪಡೆದರು.

ಈ ಬಗ್ಗೆ ಸುಪ್ರಿತ್ ಮತ್ತು ಅಬ್ದುಲ್ ಎಂಬುವರು ಗುರುವಾರ ದೂರು ಸಲ್ಲಿಸಿದ್ದರು. ಈ ಬಗ್ಗೆ ವಿವರಣೆ ಕೇಳಿದ ನಂತರ ದರ್ಶನ್ ಕುಮಾರ್ ಅಧಿಕಾರಿಗಳ ಸಂಪರ್ಕಕ್ಕೆ ಸಿಗದೆ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದರು.

ಶುಕ್ರವಾರ ಅವರನ್ನು ಅಧಿಕಾರಿಗಳು ಕೊಪ್ಪ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಮುಂದೆ ಹಾಜರು-ಪಡಿಸಿದರು. 'ಆಗ ಲಾಕೆಟ್ ಅನ್ನು ಒಪ್ಪಿಸಿದ್ದು, ಅದಕ್ಕೂ ಚಿತ್ರದಲ್ಲಿರುವ ಲಾಕೆಟ್‌ಗೂ ತಾಳೆಯಾಗುತ್ತಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮಾನತು: ಇತ್ತ ದರ್ಶನ್ ಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಕೊಪ್ಪ ಡಿಸಿಎಫ್ ಎಲ್.ದಿನೇಶ್ ಆದೇಶಿಸಿದ್ದಾರೆ.

ಅಧಿಕಾರಿಗಳ ಸಂಪರ್ಕಕ್ಕೆ ಸಿಗದಿರುವುದು, ಅನುಮತಿ ಇಲ್ಲದೆ ಕೇಂದ್ರ ಸ್ಥಾನ ತೊರೆದಿರುವುದು, ಶಿಸ್ತು ಉಲ್ಲಂಘನೆ ಆರೋಪ ಹಾಗೂ ಇಲಾಖೆ ಅಧಿಕಾರಿಯೇ ವನ್ಯಜೀವಿ ಕಾಯ್ದೆ ಉಲ್ಲಂಘಿಸಿದ್ದಾರೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಕಾಂಗ್ರೆಸ್ ಮುಖಂಡನ ಪೆಂಡೆಂಟ್ ವಶ

ಹುಬ್ಬಳ್ಳಿ: ಕಾಂಗ್ರೆಸ್ ಮುಖಂಡ ರಜತ್ ಉಳ್ಳಾಗಡ್ಡಿಮಠ ಅವರ ನಿವಾಸಕ್ಕೆ ಶುಕ್ರವಾರ ತೆರಳಿದ ಅರಣ್ಯ ಇಲಾಖೆ ಅಧಿಕಾರಿಗಳು ಪೆಂಡೆಂಟ್ ವಶಪಡಿಸಿಕೊಂಡರು.

'ಈ ಪೆಂಡೆಂಟ್ ಅನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿ-ಸಲಾಗುವುದು. ಹುಲಿ ಉಗುರೇ ಆಗಿದ್ದರೆ ಸೂಕ್ತ ಕ್ರಮ ಕೈಗೊಳ್ಳ-ಲಾಗುವುದು' ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪರಿಮಳಾ ವಿ.ಎಚ್.ಪರಿಮಳಾ ವಿ.ಎಚ್. ತಿಳಿಸಿದರು.

ನಾನು ಗಾಂಧಿವಾದಿ, ಪ್ರಾಣಿಯನ್ನು ಹಿಂಸಿಸಿ ಶೋಕಿ ಮಾಡುವ ಅವಶ್ಯಕತೆಯಿಲ್ಲ. ತನಿಖೆಗೆ ಸಹಕರಿಸುವೆ' ಎಂದು ರಜತ್ ಉಳ್ಳಾಗಡ್ಡಿಮಠ ಪ್ರತಿಕ್ರಿಯಿಸಿದರು.

ಜುವೆಲರ್ಸ್ ಮಾಲೀಕನ ಮನೆ ಶೋಧ

ತುಮಕೂರು: ನಗರದ ವಿಶ್ವಾಸ್ ಜುವೆಲರ್ಸ್ ಮಾಲೀಕ ವಿಶ್ವಾಸ್ ಹುಲಿ ಉಗುರಿನ ಪೆಂಡೆಂಟ್ ಧರಿಸಿರುವ ವಿಡಿಯೊ, ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಸ್ವಯಂಪ್ರೇರಿತ ದೂರು ದಾಖಲಿಸಿದ್ದಾರೆ.

ಅಧಿಕಾರಿಗಳು ನಗರದ ವಿಶ್ವಾಸ್ ಜುವೆಲರ್ಸ್ ಮಳಿಗೆ, ಮನೆ, ಗೋದಾಮಿನಲ್ಲಿ ಪರಿಶೀಲಿಸಿದರು. ಆಗ ವಿಶ್ವಾಸ ಹಾಜರಿರಲಿಲ್ಲ. ಹುಲಿ ಉಗುರಿನ ಪೆಂಡೆಂಟ್ ಕೂಡಾ ಪತ್ತೆಯಾಗಿಲ್ಲ.

ವರಮಹಾಲಕ್ಷ್ಮಿ ಹಬ್ಬದ ಶುಭಾಶಯ ಕೋರಿ ವಿವಿಧೆಡೆ ಫ್ಲೆಕ್ಸ್ ಹಾಕಿದ್ದು, ಅದರಲ್ಲಿ ಹುಲಿ ಉಗುರಿನ ಪೆಂಡೆಂಟ್ ಧರಿಸಿರುವ ವಿಶ್ವಾಸ ಚಿತ್ರ ಬಳಕೆಯಾಗಿತ್ತು. ಇದರ ಚಿತ್ರಗಳು ಎಲ್ಲೆಡೆ ಹರಿದಾಡಿದ ಫ್ಲೆಕ್ಸ್‌ಗಳನ್ನು ತೆರವುಗೊಳಿಸಲಾಗಿದೆ.

'ಅಧಿಕಾರಿಗಳ ತಂಡ ಪರಿಶೀಲಿಸಿದೆ. ವಿಶ್ವಾಸ್ ಧರಿಸಿರುವುದು ಹುಲಿ ಉಗುರಿನದ್ದೊ, ನಕಲಿಯೊ ಎಂದು ಖಚಿತವಾಗಿಲ್ಲ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಎಚ್.ಅನುಪಮಾ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ಶೀಘ್ರ: ಮಧು ಬಂಗಾರಪ್ಪ

ಶಿವಮೊಗ್ಗ: ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಶೀಘ್ರವೇ ಮೊಟ್ಟೆಯ ಜೊತೆಗೆ ಪೌಷ್ಟಿಕಾಂಶವುಳ್ಳ ವಿಶೇಷ ಆಹಾರ ನೀಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ಉತ್ತಮ ಆಹಾರ ಒದಗಿಸಲು ಸರ್ಕಾರ ಬದ್ಧವಾಗಿದೆ. ನವೆಂಬರ್ 23ರಿಂದ ವಿಶೇಷ ಆಹಾರ ನೀಡುವ ಯೋಜನೆ ಆರಂಭವಾಗಲಿದೆ ಎಂದರು.



ಶಾಲೆಗಳಲ್ಲಿ ವಿದ್ಯಾರ್ಥಿ-ಗಳಿಂದ ಶೌಚಾಲಯ ಸ್ವಚ್ಛ ಮಾಡಿಸುವಂತಿಲ್ಲ. ಶೌಚಾಲಯ ಸ್ವಚ್ಛಗೊಳಿಸಲು ವಿದ್ಯಾರ್ಥಿಗಳನ್ನು ಬಳಸಿಕೊಂಡಿದ್ದು ಕಂಡುಬಂದಲ್ಲಿ ಸಂಬಂಧಪಟ್ಟ ಮುಖ್ಯ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಲಾಗುವು-ದು. ಶಾಲೆಗಳ ಸ್ವಚ್ಛತೆಗಾಗಿ ಸರ್ಕಾರ ನೀಡುತ್ತಿರುವ ವಾರ್ಷಿಕ ₹10,000 ಅನುದಾನವನ್ನು ₹20,000ಕ್ಕೆ ಹೆಚ್ಚಿಸಲಾಗಿದೆ. ಶಾಲೆಯ ಸ್ವಚ್ಛತೆಗೆ ವಿದ್ಯಾರ್ಥಿಗಳನ್ನು ಬಳಸದೆ ಕಾರ್ಮಿಕರನ್ನು ನೇಮಿಸಿಕೊಳ್ಳಬೇ-ಕು ಎಂದು ಅವರು ಹೇಳಿದರು.

ರಾಜ್ಯದಲ್ಲಿ 9,000 ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದೆ. ಕಲ್ಯಾಣ ಕರ್ನಾಟಕ ಸೇರಿದಂತೆ ಬಹುತೇಕ ಜಿಲ್ಲೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಮುಂದಿನ ವರ್ಷವೂ 15,000 ಶಿಕ್ಷಕರ ನೇಮಕಾತಿಗೆ ತೀರ್ಮಾ-ನಿಸಲಾಗಿದೆ ಎಂದರು.

ಚಿಕ್ಕಮಗಳೂರು: ಪ್ರವಾಸಿಗರಿಗೆ ಮೂರು ದಿನ ನಿರ್ಬಂಧ

ಚಿಕ್ಕಮಗಳೂರು: ಶ್ರೀರಾಮ ಸೇನೆಯಿಂದ ದತ್ತಮಾಲಾ ಅಭಿಯಾನ ನಡೆಯುವುದರಿಂದ ನವೆಂಬರ್ 4ರಿಂದ ಮೂರು ದಿನ ಮುಳ್ಳಯ್ಯನಗಿರಿ ಸುತ್ತಮುತ್ತಲ ಪ್ರದೇಶಗಳಿಗೆ ಬೇರೆ ಪ್ರವಾಸಿಗರ ಭೇಟಿಯನ್ನು ಜಿಲ್ಲಾಡಳಿತ ನಿರ್ಬಂಧಿಸಿದೆ.

ನ.5ರಂದು ಶ್ರೀರಾಮ ಸೇನೆ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ನ.4ರ ಬೆಳಿಗ್ಗೆ 6ರಿಂದ ನ.6ರ ಬೆಳಿಗ್ಗೆ 10 ಗಂಟೆ ತನಕ ಇನಾಂ ದತ್ತಾತ್ರೇಯ ಬಾಬಾಬುಡನಗಿರಿ ಸ್ವಾಮಿ ದರ್ಗಾ, ಸೀತಾಳಯ್ಯನಗಿರಿ, ಮುಳ್ಳ-ಯ್ಯನಗಿರಿ, ಹೊನ್ನಮ್ಮನಹಳ್ಳ, ಮಾಣಿಕ್ಯಧಾರಾ ಜಲಪಾತ ಹಾಗೂ ಗಾಳಿಕೆರೆಗೆ ಬೇರೆ ಪ್ರವಾಸಿಗರು ಬರುವುದನ್ನು ನಿರ್ಬಂಧಿಸಲಾಗಿದೆ. ಭಾರಿ ವಾಹನಗಳ ಸಂಚಾರವನ್ನೂ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ತಿಳಿಸಿದ್ದಾರೆ.

ಸಂತೋಷ್‌ಗೆ ಜಾಮೀನು

ಬೆಂಗಳೂರು: ಹುಲಿ ಉಗುರು ಧರಿಸಿದ್ದ ಆರೋಪದಡಿ ಧಿತರಾಗಿದ್ದ ವರ್ತೂರು ಸಂತೋಷ್ (34) ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 2ನೇ ಹೆಚ್ಚುವರಿ ಎಸಿಜೆಎಂ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

'ಬಿಗ್‌ಬಾಸ್' ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದ ಸಂತೋಷ್ ಅವರನ್ನು ಕಗ್ಗಲೀಪುರ ವಲಯ ಅರಣ್ಯಾಧಿಕಾರಿ ನೇತೃತ್ವ ತಂಡ ಅ. 22ರಂದು ಬಂಧಿಸಿತ್ತು. ಸದ್ಯ ಸಂತೋಷ್ ನ್ಯಾಯಾಂಗ ಬಂಧನದಲ್ಲಿ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದರು.

ಸಂತೋಷ್ ಪರ ವಕೀಲರು ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ, ಶ್ಯೂರಿಟಿ ಒದಗಿಸಬೇಕು ಹಾಗೂ ವಿಚಾರಣೆಗೆ ಹಾಜರಾಗಬೇಕು ಎಂಬುದು ಸೇರಿ ಕೆಲ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿದೆ.

ಸಂತೋಷ್ ಪರ ವಕೀಲರು, 'ಸಂತೋಷ್ ಕೃಷಿ ಕುಟುಂಬದವರು. ಅಪರಾಧಗಳಲ್ಲಿ ಭಾಗಿಯಾಗಿಲ್ಲ. ಹುಲಿ ಉಗುರು ಧರಿಸಿದ್ದ ನಟರು, ಇತರರಿಗೆ ನೋಟಿಸ್ ನೀಡಿರುವ ಅಧಿಕಾರಿಗಳು, ಸಂತೋಷ್‌ರಿಗೆ ನೋಟಿಸ್ ನೀಡದೇ ಬಂಧಿಸಿದ್ದರು' ಎಂದು ಹೇಳಿದ್ದರು.

ಬಿಡುಗಡೆ ಶೀಘ್ರ: ಕಾರಾಗೃಹದ ಅಧಿಕಾರಿಗಳಿಗೆ ಜಾಮೀನು ನೀಡಿದ ಆದೇಶದ ಪ್ರತಿ ತಲುಪಿದ ನಂತರದ ಕಾನೂನು ಪ್ರಕ್ರಿಯೆ ಬಳಿಕ ಸಂತೋಷ್ ಶುಕ್ರವಾರ ರಾತ್ರಿ ಸಂತೋಷ್ ಜೈಲಿನಿಂದ ಬಿಡುಗಡೆಗೊಳ್ಳುವ ಸಾಧ್ಯತೆಗಳಿವೆ.

ನವಿಲುಗರಿಗೆ ವಿನಾಯಿತಿ: ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವಿಲುಗರಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು ಹಾಗೂ ದೇಶದೊಳಗೆ ಮಾರಾಟ ಮಾಡುವುದು ಕಾನೂನುಬಾಹಿರವಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಸೆಕ್ಷನ್ 43ರ ಅಡಿಯಲ್ಲಿ ನವಿಲುಗರಿಗಳಿಗೆ ವಿನಾಯಿತಿ ನೀಡಲಾಗಿದೆ. ನವಿಲು ಗರಿಗಳಿಂದ ತಯಾರಿಸಿದ ಯಾವುದೇ ವಸ್ತುಗಳನ್ನು ರಫ್ತು ಮಾಡುವಂತಿಲ್ಲ ಎಂದು ಭಾರತ ಸರ್ಕಾರದ ಆದೇಶ ಹೇಳಿದೆ.

ಉದುರಿದ ನವಿಲು ಗರಿಗಳನ್ನು ಸಂಗ್ರಹಿಸುವುದು ಮತ್ತು ದೇಶದೊಳಗೆ ಮಾರುವುದು ಅಪರಾಧವಲ್ಲ.

ಸಂಗ್ರಹ, ಸಾಗಣೆ, ಮಾರಾಟಕ್ಕೆ ಕಾನೂನಿನಲ್ಲೇ ಅವಕಾಶ

ಹುಲಿ ಉಗುರಿನ ಪೆಂಡೆಂಟ್ ಮತ್ತು ವನ್ಯಜೀವಿಗಳ ಅಂಗಾಂಗಗಳಿಗೆ ಸಂಬಂಧಿಸಿ ಒಂದು ಸಮುದಾಯದ ಜನರನ್ನು ಮಾತ್ರ ಗುರಿ ಮಾಡಿಕೊಂಡು ಅರಣ್ಯ ಇಲಾಖೆ ಕ್ರಮ ತೆಗೆದುಕೊಳ್ಳುತ್ತಿದೆ. ನವಿಲು ಗರಿ ಸಂಗ್ರಹವೂ ಅಪರಾಧ. ಆದರೆ ದರ್ಗಾಗಳಲ್ಲಿ ನವಿಲು ಗರಿ ಬಳಸುವವರ ವಿರುದ್ಧ ಇಲಾಖೆ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಶಾಸಕ ಅರವಿಂದ ಬೆಲ್ಲದ ಅವರು ಗುರುವಾರ ಇದೇ ಆಕ್ಷೇಪ ವ್ಯಕ್ತಪಡಿಸಿದ್ದರು. ಬಿಜೆಪಿ ಸಂಸದ ಸಂಗಣ್ಣ ಕರಡಿ ಇದಕ್ಕೆ ಬೆಂಬಲ ಸೂಚಿಸಿ, 'ನವಿಲುಗರಿ ಬಳಸುವ ಮೌಲ್ವಿಗಳ ಮೇಲೂ ಕ್ರಮವಾಗಬೇಕು ಎಂದು ಶಾಸಕ ಅರವಿಂದ ಬೆಲ್ಲದ ನೀಡಿದ ಹೇಳಿಕೆಯಲ್ಲಿ ಸತ್ಯವಿದೆ. ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿ-ಸಿದ್ದರು. ಬಿಜೆಪಿ ಶಾಸಕ ದೊಡ್ಡನಗೌಡ ಎಚ್. ಪಾಟೀಲ, 'ನವಿಲು ಗರಿಗಳು ಮಸೀದಿಯಲ್ಲಾದರೂ ಇರಲಿ, ಗುಡಿಗಳಲ್ಲಾದರೂ ಇರಲಿ ವಶಪಡಿಸಿಕೊಳ್ಳಬೇಕು' ಎಂದು ಒತ್ತಾಯಿಸಿದರು.

ಆದರೆ ಧಾರ್ಮಿಕ, ಸಾಂಪ್ರದಾಯಿಕ ಆಚರಣೆಗಳ ಸಲುವಾಗಿ ನವಿಲುಗರಿಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದು ಕಾನೂನು ಬಾಹಿರ ಅಲ್ಲ ಎಂದು 2014ರಲ್ಲಿ ಕೇಂದ್ರ ಅರಣ್ಯ ಸಚಿವಾಲಯವು ಅಧಿಸೂಚನೆ ಹೊರಡಿಸಿತ್ತು. 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ 43, 44(4) ಮತ್ತು 49(ಎ) ಸೆಕ್ಷನ್‌ಗಳು ನವಿಲು ಗರಿ ಸಂಗ್ರಹಕ್ಕೆ, ಸಾಗಣೆಗೆ ಮತ್ತು ಮಾರಾಟಕ್ಕೆ ಅವಕಾಶ ಮಾಡಿಕೊಡುತ್ತದೆ. ಕಾಯ್ದೆಯ ಈ ಸೆಕ್ಷನ್‌ಗಳ ಆಧಾರದಲ್ಲಿ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿತ್ತು.

ಶಾಖಾದ್ರಿ ಮನೆಯಲ್ಲಿ ಚರ್ಮ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಇನಾಂ ದತ್ತಾತ್ರೇಯ ಬಾಬಾಬುಡನಗಿರಿ ಸ್ವಾಮಿ ದರ್ಗಾದ ಗೌಸ್ ಮಹಿದ್ದೀನ್ ಶಾಖಾದ್ರಿ ಅವರ ಮನೆಯಲ್ಲಿ ಚಿರತೆ ಮತ್ತು ಜಿಂಕೆ ಚರ್ಮ ಪತ್ತೆಯಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಶುಕ್ರವಾರ ವಶಪಡಿ-ಸಿಕೊಂಡಿದ್ದಾರೆ.

ಹಿಂದಿನ ಶಾಖಾದ್ರಿಗಳು ಹುಲಿ ಚರ್ಮದ ಮೇಲೆ ಕುಳಿತಿರುವ ಚಿತ್ರಗಳ ಸಹಿತ ದೂರನ್ನು ಶ್ರೀರಾಮ ಸೇನೆ ಕಾರ್ಯಕರ್ತರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ನೀಡಿದ್ದರು.

ಮಾರುಕಟ್ಟೆ ರಸ್ತೆಯಲ್ಲಿರುವ ಶಾಖಾದ್ರಿ ಅವರ ನಿವಾಸಕ್ಕೆಅಧಿಕಾ-ರಿಗಳು ಮಧ್ಯಾಹ್ನವೇ ತೆರಳಿದ್ದರು. ಮನೆಯಲ್ಲಿ ಯಾರೂ ಇಲ್ಲದ್ದರಿಂದ ರಾತ್ರಿವರೆಗೆ ಕಾದು ಕುಳಿತಿದ್ದರು. ಶಾಖಾದ್ರಿ ಬೇರೆ ಊರಿನಲ್ಲಿದ್ದು, ಅವರ ಕುಟುಂಬದವರು ಬಾಗಿಲು ತೆರೆದು ಪರಿಶೀಲನೆಗೆ ಅವಕಾಶ ನೀಡಿದರು.



ಶಾಖಾದ್ರಿ ಅವರ ಮನೆಯಲ್ಲಿ ದೊರೆತ ಚಿರತೆ ಚರ್ಮ

'ತಪಾಸಣೆ ವೇಳೆ ಹುಲಿ ಚರ್ಮ ಪತ್ತೆಯಾಗಲಿಲ್ಲ. ಆದರೆ, ಚಿರತೆ ಮತ್ತು ಜಿಂಕೆ ಚರ್ಮ ಪತ್ತೆಯಾಗಿದ್ದು, ವಶಕ್ಕೆ ಪಡೆಯಲಾಗಿದೆ. ಸದ್ಯ ಯಾರನ್ನೂ ವಶಕ್ಕೆ ಪಡೆದಿಲ್ಲ. ಕಾನೂನು ಕ್ರಮ ಮುಂದುವರಿಯಲಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

'ಅನಾದರ' ವಿರುದ್ಧ ಅಭಿಯಾನ

ಒಂದನೇ ಪುಟದಿಂದ

ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಗೆ ಮುನ್ನವೇ ಕನ್ನಡಿಗ ಮತದಾರರನ್ನು ಭಾವನಾ-ತ್ಮಕವಾಗಿ ಕಟ್ಟಿ ಹಾಕುವ ಪ್ರಯತ್ನದ ಭಾಗವಾಗಿದೆ ಎಂದು ಹೇಳಲಾಗುತ್ತಿದೆ.

'ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರದ ನಡವಳಿಕೆಗಳು ಒಕ್ಕೂಟ ವ್ಯವಸ್ಥೆಯ ಮೂಲ ಆಶಯಕ್ಕೆ ವಿರುದ್ಧವಾಗಿ ಇರುವುದರಿಂದ ಅದರ ವಿರುದ್ಧ ಧ್ವನಿ ಎತ್ತುವುದು ಅನಿವಾರ್ಯವೆಂದು ಭಾವಿಸಿ ಇವತ್ತಿನಿಂದಲೇ 'ಸ್ವಾಭಿಮಾನಿ_ ಕನ್ನಡಿಗರ ಪ್ರಶ್ನೆ ಹ್ಯಾಷ್‌ಟ್ಯಾಗ್ ಅಡಿ ಸಾಮಾಜಿಕ ಜಾಣತಾಣದಲ್ಲಿ ಅಭಿಯಾನ ಕೈಗೊಳ್ಳಲಾಗುತ್ತಿದೆ' ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ಪ್ರಧಾನಿ ಮೋದಿ ವಿರುದ್ಧ ನೇರ ವಾಗ್ದಾಳಿ ಮಾಡಿರುವ ಅವರು, 'ನಿಮ್ಮ ನೇತೃತ್ವದ ಸರ್ಕಾರ ಕರ್ನಾಟಕದ ಮೇಲೆ ಸೇಡು ತೀರಿಸಿಕೊಳ್ಳುತ್ತಿದೆ-ಯೇ? ಇದು ನನ್ನ ಪ್ರಶ್ನೆ ಮಾತ್ರವಲ್ಲ. ನಾಡಿನ ಆರೂವರೆ ಕೋಟಿ ಸ್ವಾಭಿಮಾನಿ ಕನ್ನಡಿಗರ ಪ್ರಶ್ನೆ' ಎಂದಿದ್ದಾರೆ.

'ನಮ್ಮ ನಾಡು ಕರ್ನಾಟಕ ಎಂದು ಮರುನಾಮಕರಣಗೊಂಡು 50 ವಸಂತಗಳು ತುಂಬುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಗಿ ಬಂದ ಹಾದಿ ಸ್ಮರಿ-ಸಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ' ಎಂದು ಅವರು ಹೇಳಿದ್ದಾರೆ.

ಕರ್ನಾಟಕದ ವಿರುದ್ಧ ಕೇಂದ್ರ ಸರ್ಕಾರ ನಡೆಸುತ್ತಿರುವ ಅನ್ಯಾಯದ ಸರಮಾಲೆ ಮುಂದುವರಿದಿದೆ. ನಿರಂತರವಾಗಿ ಸ್ವಾಭಿಮಾನಿ ಕನ್ನಡಿಗರನ್ನು ನಿರ್ಲಕ್ಷಿಸಿ ಅವಮಾನಿಸಲಾಗುತ್ತಿದೆ ಎಂದು ದೂರಿರುವ ಅವರು, ಅದಕ್ಕೆ ಕೆಲವು ಅಂಕಿ ಅಂಶಗಳನ್ನೂ ಲಗತ್ತಿಸಿದ್ದಾರೆ.

ನಿಗಮ, ಮಂಡಳಿ ಅಧ್ಯಕ್ಷ ಪಟ್ಟ?

ಒಂದನೇ ಪುಟದಿಂದ

ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹೆಚ್ಚು ಅನುಕೂಲವಾಗುವಂತೆ ನಿಗಮ, ಮಂಡಳಿಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ನೀಡಬೇಕೆಂಬ ಬೇಡಿಕೆಯನ್ನು ಕೆಪಿಸಿಸಿ ಅಧ್ಯಕ್ಷರೂ ಆದ ಶಿವಕುಮಾರ್ ಮುಂದಿಟ್ಟಿದ್ದರು. ಆದರೆ, ಚುನಾವಣೆ ವೇಳೆ ಶಾಸಕರು ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕದಂತೆ ತಡೆಯಲು ಅವರಿಗೆ ಪ್ರಮುಖ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡುವುದು ಅನಿವಾರ್ಯ ಎಂದು ಸಿದ್ದರಾಮಯ್ಯ ಮನವೊಲಿಸಿದ್ದಾರೆ ಎಂದು ಗೊತ್ತಾಗಿದೆ.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಜತೆ ಶಿವಕುಮಾರ್ ಅವರು ನಿಗಮ, ಮಂಡಳಿ ನೇಮಕಾತಿ ಕುರಿತು ಇತ್ತೀಚೆಗೆ ಚರ್ಚೆ ನಡೆಸಿದ್ದರು. ಸಿದ್ದರಾಮಯ್ಯ ಮತ್ತು ರಾಜ್ಯ ಕಾಂಗ್ರೆಸ್ ಉಸ್ತುವಾ-ರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಜತೆ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರುವಂತೆ ಖರ್ಗೆ ಮತ್ತು ವೇಣುಗೋಪಾಲ್ ಸೂಚಿಸಿದ್ದರು. ಸುರ್ಜೇವಾಲಾ ಅವರು ಮಧ್ಯಪ್ರದೇಶ ವಿಧಾನಸಭಾ ಚುನಾವಣಾ ಪ್ರಚಾರದ-ಲ್ಲಿದ್ದಾರೆ. ಅವರ ಜತೆ ಚರ್ಚಿಸಿದ ಬಳಿಕ ನಿಗಮ, ಮಂಡಳಿಗಳ ನೇಮಕಾತಿ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪ್ರಾದೇಶವಾರು, ಜಾತಿವಾರು ಪ್ರಾತಿನಿಧ್ಯಗಳನ್ನು ನಿಗಮ, ಮಂಡಳಿಗಳ ನೇಮಕಾತಿಯಲ್ಲೂ ನೀಡಲು ನಿರ್ಧರಿಸ-ಲಾಗಿದೆ. ಸಂಪುಟ ಸೇರಲು ಬಯಸಿರುವ ಕೆಲವು ಹಿರಿಯ ಶಾಸಕರನ್ನೂ ನಿಗಮ, ಮಂಡಳಿಗಳ ಅಧ್ಯಕ್ಷರಾಗುವಂತೆ ಮನವೊಲಿಕೆ ಮಾಡಲು ಸಿದ್ಧತೆ ನಡೆದಿದೆ ಎಂದು ಮೂಲಗಳು ಹೇಳಿವೆ.

'ಎರಡೂವರೆ ವರ್ಷಗಳ ಬಳಿಕ ಡಿಕೆಶಿಗೆ ಪಟ್ಟ'

ಪ್ರಜಾವಾಣಿ ವಾರ್ತೆ



ಗಣಿಗ ರವಿಕುಮಾರ್

ದಾವಣಗೆರೆ: 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಆಡಳಿತದ ಎರಡೂವರೆ ವರ್ಷಗಳ ನಂತರ ಮುಖ್ಯಮಂತ್ರಿ ಆಗುವುದು ಗ್ಯಾರಂಟಿ' ಎಂದು ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಶಾಸಕ ರವಿಕುಮಾರ್ ಗಣಿಗ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಆಯ್ಕೆ ವಿಚಾರ ಹೈಕಮಾಂಡ್‌ಗೆ ಬಿಟ್ಟದ್ದು. ಡಿ.ಕೆ. ಶಿವಕುಮಾರ್ ಅವರು ಪಕ್ಷಕ್ಕಾಗಿ ದುಡಿದಿದ್ದಾರೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ಮುಖ್ಯಮಂತ್ರಿ ಆಯ್ಕೆ ಕುರಿತು ಯಾವುದೇ ಒಪ್ಪಂದವಾಗಿ-ಲ್ಲ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೋ ಗೊತ್ತಿಲ್ಲ' ಎಂದರು.

'ಸಿದ್ದರಾಮಯ್ಯ ಉತ್ತಮ ಯೋಜನೆ ಕೊಟ್ಟಿದ್ದಾರೆ. 5 ಗ್ಯಾರಂಟಿಗಳು ಜನಪ್ರಿಯವಾಗಿವೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಸೇರಿದಂತೆ ಕನಿಷ್ಠ 20 ಸ್ಥಾನಗಳನ್ನಾ-ದರೂ ಗೆಲ್ಲುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಎರಡೂವರೆ ವರ್ಷಗಳ ನಂತರ ಸಿದ್ದರಾಮಯ್ಯ ರಾಜೀನಾಮೆ ನೀಡುವರೇ' ಎಂಬ ಪ್ರಶ್ನೆಗೆ ಪ್ರತಿಕ್ರಿ-ಯಿಸಿದ ಅವರು, 'ಅದನ್ನು ಕಾಲವೇ ನಿರ್ಧರಿಸುತ್ತದೆ. ನಾನು ಯಾರ ಪರವೂ ಇಲ್ಲ. ವಿರುದ್ಧವೂ ಇಲ್ಲ. ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಎಸ್.ಎಸ್. ಮಲ್ಲಿಕಾರ್ಜುನ್, ಸತೀಶ ಜಾರಕಿಹೊಳಿ, ರಾಹುಲ್ ಗಾಂಧಿ ಅವರೆಲ್ಲರ ಜೊತೆಯಲ್ಲೇ 135 ಶಾಸಕರು ಇದ್ದೇವೆ. ನಮ್ಮಲ್ಲಿ ಯಾವುದೇ ಬಣ ಇಲ್ಲ' ಎಂದರು.

ರವಿ ನನಗೂ ಸ್ನೇಹಿತ. ಪಕ್ಷಕ್ಕೆ ಕರೆಯುವುದು ಬಿಡುವುದು ಬೇರೆ ವಿಷಯ. ಹಣದ ಆಮಿಷ ಮಾಡಿದ್ದಕ್ಕೆ ದಾಖಲೆ ಇದ್ದರೆ ಕೊಡಲಿ.

ಎನ್.ಆರ್. ಸಂತೋಷ್, ಬಿ.ಎಸ್.ವೈ ಆಪ್ತ

'ಶಾಸಕರಿಗೆ ತಲಾ ₹50 ಕೋಟಿ ಆಮಿಷ'

ಬೆಂಗಳೂರು: 'ಬಿಜೆಪಿ ಮತ್ತು ಜೆಡಿಎಸ್‌ನವರು ನಮ್ಮ ಪಕ್ಷದ ಐವರು ಶಾಸಕರನ್ನು ಸೆಳೆಯುವ ಪ್ರಯತ್ನ ಮಾಡಿದ್ದು, ತಲಾ ₹50 ಕೋಟಿ ಆಮಿಷ ಒಡ್ಡಿದ್ದಾರೆ' ಎಂದು ರವಿ ಪಿ. ಗಣಿಗ ಆರೋಪಿಸಿದರು. ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಂದಿನ ದಿನಗಳಲ್ಲಿ ಆ ಐವರು ಶಾಸಕರನ್ನು ನಿಮ್ಮ ಮುಂದೆ ಕರೆದುಕೊಂಡು ಬರುತ್ತೇನೆ. ಈ ಬಗ್ಗೆ ಮಾತನಾಡಿದ ಆಡಿಯೊ ಕೂಡಾ ಇದೆ. ಕಾಂಗ್ರೆಸ್ ಶಾಸಕರ ಖರೀದಿ ತಂಡದಲ್ಲಿ ಯಡಿಯೂರಪ್ಪ ಸಂಬಂಧಿ ಎನ್.ಆರ್. ಸಂತೋಷ್ ಇದ್ದಾರೆ. ರಾಜ್ಯದ ನಾಲ್ಕು ದಿಕ್ಕುಗಳಿಂದಲೂ ಆಪರೇಷನ್ ನಡೆಯುತ್ತಿದೆ. ಎನ್.ಆರ್.ಸಂತೋಷ್ ಹತ್ತು ದಿನಗಳ ಹಿಂದೆ ಗೋಲ್ಡ್ ಫಿಂಚ್ ನಲ್ಲಿ ಯಾರನ್ನು ಭೇಟಿ ಮಾಡಿದ್ದರು? ಹಳೇ ಮೈಸೂರು ಭಾಗದ ವಿಧಾನಪರಿಷತ್ ಸದಸ್ಯರೊಬ್ಬರು ಮತ್ತು ಬೆಳಗಾವಿ ಭಾಗದ ಶಾಸಕರು ಈ ಕೆಲಸದಲ್ಲಿ ನಿರತರಾಗಿದ್ದಾರೆ' ಎಂದರು.

ಸಂಕ್ಷಿಪ್ತ ಸುದ್ದಿ

'ನ. 5ರ ನಂತರ ವಿಚಾರಣೆಗೆ ಸಿದ್ಧ'



ನವದೆಹಲಿ (ಪಿಟಿಐ): ತೃಣಮೂಲ ಕಾಂಗ್ರೆಸ್‌ನ ಲೋಕಸಭೆ ಸದಸ್ಯೆ ಮಹುವಾ ಮೊಯಿತ್ರಾ ಅವರು ಸಂಸತ್ತಿನ ನೀತಿ ನಿಯಮಗಳ ಸಮಿತಿಗೆ ಪತ್ರ ಬರೆದಿದ್ದು, ಪೂರ್ವನಿಗದಿತ ಕಾರ್ಯಕ್ರಮಗಳಿಂದಾಗಿ ಅ. 31ರಂದು ವಿಚಾರಣೆಗೆ ಹಾಜರಾಗಲು ಸಾಧ್ಯವಾಗದು ಎಂದು ತಿಳಿಸಿದ್ದಾರೆ.

31ರಂದು ವಿಚಾರಣೆಗೆ ಹಾಜರಾಗಲು ಸೂಚಿಸಿ ಸಮಿತಿ ಸೂಚಿಸಿತ್ತು. ಸಮಿತಿ ಅಧ್ಯಕ್ಷ ವಿನೋದ್ ಕುಮಾರ್ ಸೋನ್ಕರ್ ಅವರಿಗೆ ಬರೆದಿರುವ ಪತ್ರದಲ್ಲಿ, ನವೆಂಬರ್ 5ರ ನಂತರ ನಿಗದಿಪಡಿಸುವ ಯಾವುದೇ ದಿನದಂದು ವಿಚಾರಣೆಗೆ ಹಾಜರಾಗುತ್ತೇನೆ ಎಂದು ತಿಳಿಸಿದ್ದಾರೆ.

ನೀಟ್ ವಿರೋಧಿ ಮಸೂದೆ: ಒಪ್ಪಿಗೆ ನೀಡಲು ರಾಷ್ಟ್ರಪತಿಗೆ ಮನವಿ

ಚೆನ್ನೈ (ಪಿಟಿಐ): ನೀಟ್ ವಿರೋಧಿ ಮಸೂದೆಗೆ ಅನುಮೋದನೆ ನೀಡುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶುಕ್ರವಾರ ಒತ್ತಾಯಿಸಿದ್ದಾರೆ.

ಇಲ್ಲಿನ 'ಇಂಡಿಯನ್ ಮ್ಯಾರಿಟೈಮ್ ಯೂನಿವರ್ಸಿಟಿ'ಯ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಬಂದಿದ್ದ ರಾಷ್ಟ್ರಪತಿ ಮುರ್ಮು ಅವರಿಗೆ ಈ ಕುರಿತ ಪತ್ರವನ್ನು ಮುಖ್ಯಮಂತ್ರಿ ಹಸ್ತಾಂತರಿಸಿದರು ಎಂದು ಪ್ರಕಟಣೆ ತಿಳಿಸಿದೆ.

'ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅವಕಾಶಗಳನ್ನು ಕಳೆದುಕೊಳ್ಳುತ್ತಿರುವುದನ್ನು ಮತ್ತು ಅನೇಕ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಅಂಶಗಳನ್ನು ಉಲ್ಲೇಖಿಸಲಾಗಿದೆ. ಹೀಗಾಗಿ ಈ ವಿಷಯದಲ್ಲಿ ತಾವು ತಕ್ಷಣವೇ ಮಧ್ಯಪ್ರವೇಶಿಸಿ, ಮಸೂದೆಗೆ ಒಪ್ಪಿಗೆ ನೀಡುವಂತೆ ಕೋರುತ್ತೇನೆ' ಎಂದು ಮುಖ್ಯಮಂತ್ರಿ ಸ್ಟಾಲಿನ್ ಪತ್ರದಲ್ಲಿ ಹೇಳಿದ್ದಾರೆ.

ಪಶ್ಚಿಮ ಬಂಗಾಳ: ಸಚಿವ ಮಲ್ಲಿಕ್ ಬಂಧನ

ಕೋಲ್ಕತ್ತ (ಪಿಟಿಐ): ಬಹುಕೋಟಿ ಮೊತ್ತದ ಪಡಿತರ ವಿತರಣೆ ಹಗರಣದ ತನಿಖೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಅರಣ್ಯ ಸಚಿವ ಹಾಗೂ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ನಾಯಕ ಜ್ಯೋತಿಪ್ರಿಯೊ ಮಲ್ಲಿಕ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಬಂಧಿಸಿದೆ.

ಸುಮಾರು 18 ಗಂಟೆಗಳವರೆಗೆ ವಿಚಾರಣೆ ನಡೆಸಿದ ಬಳಿಕ ಅವರನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಬಂಧಿಸಲಾಯಿತು.

'2ನೇ ಮದುವೆಗೆ ಅನುಮತಿ ಕಡ್ಡಾಯ'

ಗುವಾಹಟಿ (ಪಿಟಿಐ): 'ತಮ್ಮ ಧರ್ಮದಲ್ಲಿ ಅವಕಾಶ ಇದ್ದರೂ ರಾಜ್ಯದ ಸರ್ಕಾರಿ ನೌಕರರು ಎರಡನೇ ಮದುವೆಯಾಗುವ ಪೂರ್ವದಲ್ಲಿ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವಶರ್ಮಾ ಶುಕ್ರವಾರ ಹೇಳಿದ್ದಾರೆ.

ಸಂಗಾತಿಯು ಜೀವಂತವಿದ್ದಾ-ಗಲೇ ಸರ್ಕಾರಿ ನೌಕರರು ಎರಡನೇ ಮದುವೆಯಾಗುವುದು ನಿಷಿದ್ಧ. ಈ ನಿಯಮವನ್ನು ಮೀರಿದರೆ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಎಚ್ಚರಿಸಿ ರಾಜ್ಯ ಸರ್ಕಾರ ಇತ್ತೀಚೆಗೆ ಆದೇಶ ಹೊರಡಿಸಿದೆ.

'ಇದು, ಹಳೆಯ ಆದೇಶವಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

'ಏನೂ ತಿಂದಿಲ್ಲ ಅಂತ ಆಣೆ ಮಾಡಿ ಎಚ್‌.ಡಿ.ಕೆಗೆ ಬಾಲಕೃಷ್ಣ ಸವಾಲು

ಪ್ರಜಾವಾಣಿ ವಾರ್ತೆ



ಎಚ್.ಸಿ. ಬಾಲಕೃಷ್ಣ

ಮಾಗಡಿ (ರಾಮನಗರ): 'ನಾವೆಲ್ಲಾ ಕಳ್ಳರೇ... ಒಪ್ಕೊತೀವಿ. ನಾವೆಲ್ಲಾ ತಿಂದಿದ್ದೀವಿ. ಹಾಗಾದರೆ, ನೀವು ಸತ್ಯ ಹರಿಶ್ಚಂದ್ರ, ಏನೂ ತಿಂದಿಲ್ಲ ಅಂತ ಬಂದು ಆಣೆ ಮಾಡಿ' ಎಂದು ಮಾಗಡಿ ಶಾಸಕ ಎಚ್. ಸಿ. ಬಾಲಕೃಷ್ಣ ಅವರು ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸವಾಲು ಹಾಕಿದ್ದಾರೆ.

ಪಟ್ಟಣದಲ್ಲಿ ಶುಕ್ರವಾರ ಮಾಧ್ಯಮ-ದವರೊಂದಿಗೆ ಮಾತನಾಡಿದ ಅವರು, 'ಸರ್ಕಾರಿ ನೌಕರರ ವರ್ಗಾವಣೆ, ನೇಮಕಾತಿಯಲ್ಲಿ ಹಣ ಪಡೆದಿಲ್ಲ ಎಂದು ಧರ್ಮಸ್ಥಳ ಅಥವಾ ಚಾಮುಂಡಿ ಸನ್ನಿಧಿಯಲ್ಲಿ ಪ್ರಮಾಣ ಮಾಡಲು ಸಿದ್ಧ' ಎಂಬ ಕುಮಾರಸ್ವಾಮಿ ಅವರ ಸವಾಲಿಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

'ಏಯ್ ಥೂ.. ಅವರ ಬಾಲಿಶ ಹೇಳಿಕೆಗೆ ಉತ್ತರ ಕೊಡಲ್ಲ ನಡಿಯಪ್ಪಾ...' ಎನ್ನುತ್ತಲೇ ಮಾತಿಗಿಳಿದ ಅವರು, 'ಆಣೆ ಮಾಡಿ ಅಂದ್ರೆ, ಅವರನ್ನು ಕರೆಯಿರಿ, ಇವರನ್ನ ಕರೆಯಿರಿ ಅನ್ನೋದಲ್ಲ. ನೀವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕರೆಯಿರಿ ಅಂದರೆ ಆಗುತ್ತದೆಯೇ? ನಾನು ಹೇಳಿರೋದು ನಿಮ್ಮ ಕುಟುಂಬದವರು ತಿಂದಿಲ್ವಾ ಅಂತಾ. ಅವರ ತಂದೆ ಎಚ್.ಡಿ. ದೇವೇಗೌಡ ಅವರನ್ನು ಕರೆಸಿ ಆಣೆ ಮಾಡಿಸ್ತಾರಾ ಕೇಳ್ರಿ' ಎಂದರು.

'ಒಬ್ಬ ಮಾಜಿ ಮುಖ್ಯಮಂತ್ರಿ ಹೀಗೆ ಚಿಲ್ಲರೆಯಾಗಿ ಮಾತನಾಡಬಾರದು. ಎರಡು ಸಲ ಸಿಎಂ ಆಗಿರುವ ಅವರು ತೂಕವಾಗಿ ಮತ್ತು ಸಮಯೋಚಿತವಾಗಿ ಮಾತನಾಡಬೇಕು' ಎಂದರು.

ಲೋಕಾಯುಕ್ತಕ್ಕೆ ದೂರು ಕೊಡಲಿ

'ಅಧಿಕಾರಿಗಳ ವರ್ಗಾವಣೆಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸುತ್ತಿರುವ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಆ ಬಗ್ಗೆ ತಮ್ಮ ಬಳಿ ದಾಖಲೆಗಳಿದ್ದರೆ ಲೋಕಾಯುಕ್ತಕ್ಕೆ ದೂರು ಕೊಡಲಿ' ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಕುಮಾರಸ್ವಾಮಿ ಅವರಿಗೆ ತಿರುಗೇಟು ನೀಡಿದರು.

ಪಟ್ಟಣದಲ್ಲಿ ಶುಕ್ರವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ಈ ವಿಷಯದಲ್ಲಿ ಆಣೆ ಪ್ರಮಾಣ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ' ಎಂದರು.

ಎಂಟು ಜನರಿಗೆ ವಾಲ್ಮೀಕಿ ಪ್ರಶಸ್ತಿ

ಪುರಸ್ಕೃತರಲ್ಲಿ ಎನ್‌.ವೈ. ಹನುಮಂತಪ್ಪ, ಸುಕನ್ಯಾ ಮಾರುತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ (ಅ.28) ನಡೆಯುವ ವಾಲ್ಮೀಕಿ ಜಯಂತಿ ಸಮಾರಂಭದಲ್ಲಿ ಒಡಿಶಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್.ವೈ. ಹನುಮಂತಪ್ಪ ಸೇರಿದಂತೆ ಎಂಟು ಮಂದಿಗೆ 'ರಾಜ್ಯಮಟ್ಟದ ವಾಲ್ಮೀಕಿ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, 'ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಹಿಂದಿನ ಸ್ವಾಮೀಜಿ ಪುಣ್ಯಾನಂದಪುರಿಯವರ ತಾಯಿ ಮಹಾದೇವಮ್ಮ, ಬೆಳಗಾವಿ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಕ್ರಿಯ-ರಾಗಿರುವ ರಾಮಣ್ಣ ಮಹಾದೇವ ಗಸ್ತಿ, ಹಾಸನ ಜಿಲ್ಲೆಯಲ್ಲಿ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿ-ರುವ ಜಿ.ಒ. ಮಹಾಂತಪ್ಪ, ಮೈಸೂರು ಜಿಲ್ಲೆಯಲ್ಲಿ ಗಿರಿಜನ ಸಂಘಟನೆಯಲ್ಲಿ ಸಕ್ರಿಯರಾಗಿರುವ ಸೋಮಣ್ಣ, ರಾಯಚೂರು ಜಿಲ್ಲೆಯ ಸ್ತ್ರೀರೋಗ ತಜ್ಞೆ ಶಾರದಾ ಪ್ರಭು ಹುಲಿ ನಾಯಕ, ಕವಯತ್ರಿ ಸುಕನ್ಯಾ ಮಾರುತಿ ಮತ್ತು ಬಳ್ಳಾರಿ ಜಿಲ್ಲೆಯ ಬಯಲಾಟ ಕಲಾವಿದೆ ಸುಜಾತಮ್ಮ ಪುರಸ್ಕೃತರಲ್ಲಿ ಸೇರಿದ್ದಾರೆ' ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಬಿ. ಶಿವಪ್ಪ ಅಧ್ಯಕ್ಷತೆಯ ಸಮಿತಿಯು ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆಮಾಡಿದೆ. 113 ಅರ್ಜಿಗಳು ಬಂದಿದ್ದವು. 60 ವರ್ಷಕ್ಕಿಂತ ಹೆಚ್ಚು ವಯಸ್ಸಾದ ಸಾಧಕರನ್ನೇ ಈ ಬಾರಿ ಆಯ್ಕೆಮಾ-ಡಲಾಗಿದೆ. ಪುರಸ್ಕೃತರಿಗೆ ತಲಾ ₹5 ಲಕ್ಷ ನಗದು ಮತ್ತು 20 ಗ್ರಾಂ. ತೂಕದ ಚಿನ್ನದ ಪದಕ ನೀಡಿ ಗೌರವಿಸಲಾಗುವು-ದು ಎಂದು ತಿಳಿಸಿದರು.

ಶನಿವಾರ ರಾಜ್ಯದಾದ್ಯಂತ ವಾಲ್ಮೀಕಿ ಜಯಂತಿ ಆಚರಣೆ ನಡೆಯಲಿದೆ. ಬೆಂಗಳೂರಿನ ಬಸವನಗುಡಿಯ ಬೇಡರ ಕಣ್ಣಪ್ಪ ದೇವಸ್ಥಾನದಿಂದ ಬಸವೇಶ್ವರ ವೃತ್ತದವರೆಗೆ ವಾಲ್ಮೀಕಿ ಜ್ಯೋತಿಯ ಮೆರವಣಿಗೆ ನಡೆಯಲಿದೆ. ಶಾಸಕರ ಭವನದ ಆವರಣದಲ್ಲಿರುವ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶನಿವಾರ ಬೆಳಿಗ್ಗೆ 9.30ಕ್ಕೆ ಮಾಲಾರ್ಪಣೆ ಮಾಡುವರು. ಬೆಳಿಗ್ಗೆ 10 ಗಂಟೆಯಿಂದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಮಾರಂಭ ನಡೆಯಲಿದೆ ಎಂದರು.

ವಾಲ್ಮೀಕಿ ಜಯಂತಿ ಸಮಾರಂಭದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕ ರಿಜ್ವಾನ್ ಅರ್ಷದ್ ಕೂಡ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

4 ತಿಂಗಳಲ್ಲಿ 2,081 ಶಿಕ್ಷಕರ ವೇತನ ಕಡಿತ

ಪಟ್ನಾ (ಪಿಟಿಐ): ಬಿಹಾರದಲ್ಲಿ ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಬೋಧನೆಗೆ ಸಂಬಂಧಿಸಿದ ನಿಯಮಗಳನ್ನು ಉಲ್ಲಂಘಿಸಿರುವ ಆರೋಪದಲ್ಲಿ 22 ಶಿಕ್ಷಕರನ್ನು ಅಮಾನತು ಮಾಡಲಾಗಿದೆ ಮತ್ತು ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆಯೇ ಗೈರುಹಾಜರಾಗಿದ್ದ 2,081 ಶಿಕ್ಷಕರ ವೇತನವನ್ನು ಕಡಿತಗೊಳಿಸಲಾಗಿದೆ.

ಶಿಕ್ಷಕರ ನೇಮಕಾತಿ ನಿಯಮಾವಳಿಗಳನ್ನು ಉಲ್ಲಂಘಿಸಿರುವ ಆರೋಪಕ್ಕಾಗಿ 17 ಶಿಕ್ಷಕರನ್ನು ವಜಾಗೊಳಿಸುವಂತೆಯೂ ಶಿಕ್ಷಣ ಇಲಾಖೆ ಶಿಫಾರಸು ಮಾಡಿದೆ.

ರಾಜಸ್ಥಾನ ವಿಧಾನಸಭಾ ಚುನಾವಣೆ: ಮತ್ತೆ ಐದು ಗ್ಯಾರಂಟಿ ಘೋಷಿಸಿದ ಸಿ.ಎಂ ಅಶೋಕ್ ಗೆಹಲೋತ್

ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್

ಜೈಪುರ (ಪಿಟಿಐ): ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಜಾರಿ, ಹಸುವಿನ ಸಗಣಿ ಖರೀದಿ ಮತ್ತು ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಅಥವಾ ಟ್ಯಾಬ್ಲೆಟ್ ವಿತರಣೆ ಸೇರಿದಂತೆ ಐದು 'ಗ್ಯಾರಂಟಿ'ಗಳನ್ನು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಶುಕ್ರವಾರ ಘೋಷಿಸಿದ್ದಾರೆ.

ಇಂಗ್ಲಿಷ್ ಮಾಧ್ಯಮದಲ್ಲಿ ಶಾಲಾ ಶಿಕ್ಷಣ, 'ಗೋಧನ್ ಯೋಜನೆ' ಅಡಿ ಕೆ.ಜಿ.ಗೆ ₹2ರಂತೆ ಹಸುವಿನ ಸಗಣಿ ಖರೀದಿ ಮತ್ತು ನೈಸರ್ಗಿಕ ವಿಪತ್ತುಗಳಿಂದ ಆಗುವ ನಷ್ಟಕ್ಕೆ ₹15 ಲಕ್ಷ ವಿಮಾ ರಕ್ಷಣೆಯ ಭರವಸೆ ನೀಡಿದರು.

ಭವಿಷ್ಯದಲ್ಲಿ ಯಾವುದೇ ತೊಡಕಾಗದಂತೆ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ ಜಾರಿಗೆ ಅಗತ್ಯ ಕಾನೂನು ರೂಪಿಸಲಾಗುವುದು. ಸರ್ಕಾರಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಮೊದಲ ವರ್ಷದಲ್ಲಿ ಟ್ಯಾಬ್ಲೆಟ್ ಅಥವಾ ಲ್ಯಾಪ್‌ಟಾಪ್ ನೀಡಲಾಗುವುದು ಎಂದು ಅವರು ಹೇಳಿದರು.

ಪ್ರಧಾನಿ ಮೋದಿ ಅವರು ಕಾಂಗ್ರೆಸ್‌ನ 'ಗ್ಯಾರಂಟಿ ಮಾದರಿ'ಯನ್ನು ಅನುಸರಿಸುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಪಕ್ಷದ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿ, ಅದರಲ್ಲಿ ಹೆಚ್ಚಿನ ಘೋಷಣೆ ಮಾಡಲಾಗುವುದು ಎಂದರು.

ಎರಡು ದಿನಗಳ ಹಿಂದೆಯಷ್ಟೇ ಕಾಂಗ್ರೆಸ್ ಎರಡು ಭರವಸೆಗಳನ್ನು ಘೋಷಿಸಿತ್ತು. 1.05 ಕೋಟಿ ಜನರಿಗೆ ₹ 500 ದರದಲ್ಲಿ ಅಡುಗೆ ಅನಿಲ ಸಿಲಿಂಡರ್ ಮತ್ತು ಮನೆ ಯಜಮಾನಿಗೆ ₹ 10,000 ವಾರ್ಷಿಕ ಗೌರವಧನ ನೀಡುವುದಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಪ್ರಕಟಿಸಿದ್ದರು.

'ತನಿಖಾ ಸಂಸ್ಥೆಗಳು ರಾಜಕೀಯ ಅಸ್ತ್ರವಾಗಿ ಮಾರ್ಪಟ್ಟಿವೆ. ಮೋದಿ ಅವರೇ ನಿಮಗೆ ಅರ್ಥವಾಗುತ್ತಿಲ್ಲ. ನಿಮ್ಮ ಅಧಿಕಾರದ ಕ್ಷಣಗಣನೆ ಪ್ರಾರಂಭವಾಗಿದೆ. ಬಿಜೆಪಿ ವಿರುದ್ಧ ಸಾಕಷ್ಟು ಧ್ವನಿ ಎತ್ತಿದ್ದರಿಂದ ಇ.ಡಿ ನನ್ನನ್ನು ಗುರಿಯಾಗಿಸಿಕೊಂಡಿದೆ' ಎಂದು ಅಶೋಕ್ ಗೆಹಲೋತ್ ಹೇಳಿದರು.

ಜಾರಿ ನಿರ್ದೇಶನಾಲಯವನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ ಗೆಹಲೋತ್, ಮುಖ್ಯಮಂತ್ರಿಯೊಬ್ಬರು (ಭೂಪೇಶ್ ಬಘೇಲ್) ನಾಯಿಗಳಿಗಿಂತ ಹೆಚ್ಚಾಗಿ ಇ.ಡಿ ದೇಶದಲ್ಲಿ ಅಲೆದಾಡುತ್ತಿದೆ ಎಂದು ಹೇಳಬೇಕಾಯಿತು. ಇದಕ್ಕಿಂತ ದೊಡ್ಡ ದುರದೃಷ್ಟ ಮತ್ತೇನಿದೆ? ಎಂದು ಅವರು ಪ್ರಶ್ನಿಸಿದರು.

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಗೋವಿಂದ್ ಸಿಂಗ್ ದೋತಸ್ರ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ ಗುರುವಾರ ದಾಳಿ ನಡೆಸಿತ್ತು.



ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುಖ್‌ಜಿಂದರ್ ಸಿಂಗ್ ರಾಂಧವ, ಪಿಸಿಸಿ ಅಧ್ಯಕ್ಷ ಗೋವಿಂದ್ ಸಿಂಗ್ ದೋತಸ್ರ ಅವರು ಕಾಂಗ್ರೆಸ್‌ನ 7 ಘೋಷಣೆಗಳ ಪತ್ರ ಬಿಡುಗಡೆ ಮಾಡಿದರು ಪಿಟಿಐ ಚಿತ್ರ

40 ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ನರೇಂದ್ರ ಮೋದಿ, ಶಾ, ಯೋಗಿ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ ಬಿಜೆಪಿಯ 40 ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಹೆಸರುಗಳಿವೆ.

ಆದರೆ, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಉಮಾ ಭಾರತಿ ಅವರ ಹೆಸರು ಪಟ್ಟಿಯಲ್ಲಿಲ್ಲ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ನಿತಿನ್ ಗಡ್ಕರಿ, ಜ್ಯೋತಿರಾದಿತ್ಯ ಸಿಂಧಿಯಾ, ಸ್ಮೃತಿ ಇರಾನಿ, ಅನುರಾಗ್ ಠಾಕೂರ್, ಅಶ್ವಿನಿ ವೈಷ್ಣವ್, ಪೀಯೂಷ್ ಗೋಯಲ್, ನರೇಂದ್ರ ಸಿಂಗ್ ತೋಮರ್, ಭೂಪೇಂದರ್ ಯಾದವ್, ಫಗ್ಗನ್ ಸಿಂಗ್ ಕುಲಸ್ತೆ, ಅರ್ಜುನ್ ಮುಂಡಾ ಮುಂತಾದವರ ಹೆಸರುಗಳು ಪಟ್ಟಿಯಲ್ಲಿವೆ.

ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಬಿಜೆಪಿ ನಾಯಕ ಮನೋಜ್ ತಿವಾರಿ ಮತ್ತು ಮಧ್ಯಪ್ರದೇಶದ ಗೃಹ ಸಚಿವ ನರೋತ್ತಮ್ ಮಿಶ್ರಾ ಸಹ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಸುದ್ದಿಗಾರರರ ಜತೆ ಮಾತನಾಡಿದ ಉಮಾ ಭಾರತಿ, 'ಸಿ.ಎಂ ಚೌಹಾಣ್ ಬಯಸಿದರೆ ನನ್ನ ಸೇವೆಯನ್ನು ಪಕ್ಷಕ್ಕೆ ಬಳಸಬಹುದು' ಎಂದರು.

ಲೋಕಸಭಾ ಚುನಾವಣೆಗೆ ಸ್ಪರ್ಧಿಸುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಉಮಾ, 'ಈ ಪ್ರಶ್ನೆಯನ್ನು ಬಿಜೆಪಿ ಅಧ್ಯಕ್ಷ ನಡ್ಡಾ ಅವರಿಗೆ ಕೇಳಬೇಕು' ಎಂದರು. ಕಳೆದ ವರ್ಷ ಉಮಾ ಭಾರತಿ ಮದ್ಯದಂಗಡಿಗಳ ವಿರುದ್ಧ ಅಭಿಯಾನ ನಡೆಸಿದ್ದರು. ಇದು ಬಿಜೆಪಿ ಸರ್ಕಾರಕ್ಕೆ ಮುಜುಗರದ ಪರಿಸ್ಥಿತಿ ಸೃಷ್ಟಿಸಿತು. ಮೋದಿ, ಅಮಿತ್ ಶಾ ಮತ್ತು ಯೋಗಿ ಅವರನ್ನು ತಮ್ಮ ಕ್ಷೇತ್ರಗಳಿಗೆ ಕಳುಹಿಸುವಂತೆ ರಾಜ್ಯದ ಬಹುತೇಕ ಅಭ್ಯರ್ಥಿಗಳು ಮನವಿ ಮಾಡಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಛತ್ತೀಸಗಢ ವಿಧಾನಸಭೆ ಚುನಾವಣೆ

ಮೊದಲ ಹಂತ

- 20 ಸ್ಥಾನಗಳು
- 223 ಅಭ್ಯರ್ಥಿಗಳು
- 25 ಮಹಿಳೆಯರು
- ನ.7 ಮತದಾನದ ದಿನ

ಅಪರಾಧ ಮತ್ತು ಅಭ್ಯರ್ಥಿಗಳು

- ಗಂಭೀರ ಪ್ರಕರಣಗಳು 16
- ಬಿಜೆಪಿ 4
- ಜೆಸಿಸಿ 2
- ಎಎಪಿ 1
- ಕಾಂಗ್ರೆಸ್ 0

5 ರೆಡ್ ಅಲರ್ಟ್ ಕ್ಷೇತ್ರಗಳು (ಅಪರಾಧ ಪ್ರಕರಣ ಹೊಂದಿರುವ 3 ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳಿರುವ ಕ್ಷೇತ್ರ)

ಹಣ ಮತ್ತು ಅಭ್ಯರ್ಥಿಗಳು

- ಕೋಟ್ಯಧಿಪತಿಗಳು 46
- ಕಾಂಗ್ರೆಸ್ 17
- ಬಿಜೆಪಿ 14
- ಎಎಪಿ 3
- ಜೆಸಿಸಿ 2

ಅಭ್ಯರ್ಥಿಗಳ ಆಸ್ತಿ ವಿವರ

- ಬಿಜೆಪಿ ₹5.33ಕೋಟಿ
- ಕಾಂಗ್ರೆಸ್ ₹5.27ಕೋಟಿ
- ಎಎಪಿ ₹4.45ಕೋಟಿ
- ಜೆಸಿಸಿ ₹30.54ಲಕ್ಷ

ಅತಿ ಶ್ರೀಮಂತ ಅಭ್ಯರ್ಥಿ
- ಖಡಂಗ್‌ರಾಜ್ ಸಿಂಗ್, ಎಎಪಿ, ಕವರ್ಧ ಕ್ಷೇತ್ರ ₹40.01ಕೋಟಿ

ಆಸ್ತಿ ಇಲ್ಲ ಎಂದ ಅಭ್ಯರ್ಥಿಗಳು
- ಪರ್ವತಿ ತೇಟ, ಆಜಾದ್ ಜನತಾ ಪಾರ್ಟಿ, ಕಾಂಕೇರ್
- ನಾಗೇಶ್ ಪುರಂ, ಜೆಸಿಸಿ, ಮೊಹ್ಲಾ, ಮನ್‌ಪುರ

ಕಡಿಮೆ ಆಸ್ತಿ
- ಹೇಮ್‌ಕುಮಾರ್ ಸತ್‌ನಮಿ–ಸ್ವತಂತ್ರ–ದೊಂಗರ್‌ಗಢ–₹8,000

ಶಿಕ್ಷಣ
- 5–12ನೇ ತರಗತಿ 115
- ಪದವೀಧರರು 97
- 5 ಡಿಪ್ಲೊಮಾ
- 5 ಸಾಕ್ಷರರು
- 1 ಮಾಹಿತಿ ನೀಡಿಲ್ಲ

ವಯಸ್ಸು (ಅಭ್ಯರ್ಥಿಗಳು)
- 25 ರಿಂದ 40 ವರ್ಷ: 103
- 41 ರಿಂದ 60 ವರ್ಷ: 98
- 61 ರಿಂದ 80 ವರ್ಷ: 22

ಮೂಲ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

'ಮಹಿಳೆಯರಿಗೆ ಸರ್ಕಾರಿ ನೌಕರಿಯಲ್ಲಿ ಶೇ 33 ಮೀಸಲಾತಿ'

ಐಜ್ವಾಲ್ (ಪಿಟಿಐ): ಸರ್ಕಾರಿ ನೌಕರಿಯಲ್ಲಿ ಮಹಿಳೆಯರಿಗೆ ಶೇಕಡಾ 33 ರಷ್ಟು ಮೀಸಲಾತಿ ಮತ್ತು ಎಂಎನ್‌ಎಫ್ ಸರ್ಕಾರದ ಜನ ಕಲ್ಯಾಣ ಯೋಜನೆಗಳ ತನಿಖೆ ನಡೆಸುವುದು ಸೇರಿದಂತೆ ಹಲವು ಭರವಸೆಗಳನ್ನು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಘೋಷಿಸಿದ್ದಾರೆ.

ಮಿಜೋರಾಂ ವಿಧಾನಸಭಾ ಚುನಾವಣೆಗೆ ಶುಕ್ರವಾರ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಇದನ್ನು ವಾಸ್ತವದ ದಾಖಲೆಯನ್ನಾಗಿ ಮಾಡಲು ಬಿಜೆಪಿ ಬದ್ಧವಾಗಿದೆ ಎಂದು ಹೇಳಿದರು.


ಅನೇಕ ರಾಜಕೀಯ ಪಕ್ಷಗಳು ಪ್ರಣಾಳಿಕೆಯಲ್ಲಿ ಹಲವು ಭರವಸೆಗಳನ್ನು ಘೋಷಿಸುತ್ತವೆ. ಆದರೆ, ಅವುಗಳು ಕಾಗದದಲ್ಲಿಮಾತ್ರನೋಡುತ್ತೇವೆ. ಬಿಜೆಪಿ ಅಧಿಕಾರಕ್ಕೆ ಬಂದರೆ, ರಾಜ್ಯದ ಕೃಷಿ ಮೂಲಸೌಕರ್ಯ ಪುನರುಜ್ಜೀವನಗೊಳಿಸಲು ₹1,000 ಕೋಟಿ ಹೂಡಿಕೆ ಮಾಡಲಿದೆ. ರಾಜ್ಯದ ಮೊದಲ ಮಹಿಳಾ ಪೊಲೀಸ್ ಬೆಟಾಲಿಯನ್ 'ಮಿಜೋರಾಂ ಹೈಚಿಯೇಟ್ ಬೆಟಾಲಿಯನ್" ಸ್ಥಾಪನೆ ಹಾಗೂ ಮಾದಕ ವ್ಯಸನ ನಿಗ್ರಹಿಸಲು 'ಆಪರೇಷನ್ ಡ್ರಗ್ ಫ್ರೀ ಮಿಜೋರಾಂ' ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಝೊರಾಂಥಾಂಗ ನೇತೃತ್ವದ ಮಿಜೋ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಸರ್ಕಾರದ ಪ್ರಮುಖ ಯೋಜನೆಯಾದ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನದಲ್ಲಿನ ಅಕ್ರಮಗಳು ಮತ್ತು ಭ್ರಷ್ಟಾಚಾರ ಬಗ್ಗೆ ತನಿಖೆ ನಡೆಸಲು ಬಿಜೆಪಿ ವಿಶೇಷ ತನಿಖಾ ತಂಡವನ್ನು ರಚಿಸಲಾಗುವುದು ಎಂದರು.

ಮಿಜೋರಾಂ ಮತ್ತು ಅಸ್ಸಾಂ ನಡುವಿನ ದೀರ್ಘಕಾಲದ ಗಡಿ ವಿವಾದ ಪರಿಹರಿಸಲು ಬಿಜೆಪಿ ಬದ್ಧವಾಗಿದೆ. ಸರ್ಕಾರಿ ಶಾಲೆಗಳು ಹಾಗೂ ಕಾಲೇಜುಗಳ ಪುನರುಜ್ಜೀವನಗೊಳಿಸಲಾಗುವುದು. ಹೊಸ ಸರ್ಕಾರಿ ಕಾಲೇಜುಗಳನ್ನು ನಿರ್ಮಿಸಲಾಗುವುದು ಎಂದರು.

'ಹಿಂದುಳಿದ ವರ್ಗಕ್ಕೆ ಸಿ.ಎಂ ಸ್ಥಾನ'

ಪ್ರಜಾವಾಣಿ ವಾರ್ತೆ


ಅಮಿತ್ ಶಾ

ಹೈದರಾಬಾದ್: ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗದ ನಾಯಕನನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಸೂರ್ಯಪೇಟ್‌ನಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾದರೆ ಹಿಂದುಳಿದ ವರ್ಗದವರನ್ನು ಮುಖ್ಯಮಂತ್ರಿ ಮಾಡಲು ನಿರ್ಧರಿಸಿದ್ದೇವೆ. ಬಿಜೆಪಿ ಮಾತ್ರ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಬದ್ಧವಾಗಿದೆ ಎಂದರು.


ಈ ಘೋಷಣೆಯೊಂದಿಗೆ ತೆಲಂಗಾಣದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಆಗಬೇಕೆಂಬ ಕೇಂದ್ರ ಸಚಿವ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಜಿ. ಕಿಶನ್ ರೆಡ್ಡಿ ಅವರ ಆಕಾಂಕ್ಷೆಗೆ ಅಮಿತ್ ಶಾ ತಣ್ಣೀರು ಎರಚಿದ್ದಾರೆ.

ಕಾಂಗ್ರೆಸ್ ಮತ್ತು ಆಡಳಿತಾರೂಢ ಬಿಆರ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಎರಡೂ ವಂಶಪಾರಂಪರ್ಯ ಪಕ್ಷಗಳು ಮತ್ತು ರಾಜ್ಯಕ್ಕೆ ಒಳ್ಳೆಯದನ್ನು ಮಾಡಲು ಸಾಧ್ಯವಿಲ್ಲ. ಪ್ರಧಾನಿ ಮೋದಿ ನೇತೃತ್ವದಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶ ಮಾಡಲು ಸಾಧ್ಯ ಎಂದರು.

ಕೆ.ಚಂದ್ರಶೇಖರ ರಾವ್ ಅವರು ತಮ್ಮ ಮಗ ಕೆ.ಟಿ.ರಾಮರಾವ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲು ಬಯಸಿದರೆ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ತಮ್ಮ ಮಗ ರಾಹುಲ್ ಗಾಂಧಿಯನ್ನು ಪ್ರಧಾನಿ ಮಾಡಲು ಬಯಸಿದ್ದಾರೆ ಎಂದರು.

ದಲಿತ ನಾಯಕನನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದು ಅಥವಾ ದಲಿತರಿಗೆ ಮೂರು ಎಕರೆ ಭೂಮಿ ನೀಡುವುದು ಸೇರಿದಂತೆ ಹಲವು ಚುನಾವಣಾ ಭರವಸೆಗಳನ್ನು ಸಿ.ಎಂ ಈಡೇರಿಸಿಲ್ಲ. ಬಜೆಟ್‌ನಲ್ಲಿ ದಲಿತರಿಗೆ ಮೀಸಲಿಟ್ಟಿರುವ ₹ 50,000 ಕೋಟಿ ಎಲ್ಲಿವೆ? ಎಂದು ಶಾ ಪ್ರಶ್ನಿಸಿದರು.

'ಕೈ' ಅಧಿಕಾರಕ್ಕೆ ಬಂದರೆ ಜನಕಲ್ಯಾಣ ಯೋಜನೆ ರದ್ದು: ಕೆಸಿಆರ್ ಟೀಕೆ


ಚಂದ್ರಶೇಖರ ರಾವ್

ಮಹಬುದಾಬಾದ್ (ತೆಲಂಗಾಣ) (ಪಿಟಿಐ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತ ಬಂಧು ಮತ್ತು ರೈತರಿಗೆ ಉಚಿತ ವಿದ್ಯುತ್ ನಂತಹ ಕಲ್ಯಾಣ ಯೋಜನೆಗಳನ್ನು ರದ್ದುಗೊಳಿಸಲಿದೆ ಎಂದು ಬಿಆರ್ ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಶುಕ್ರವಾರ ಹೇಳಿದ್ದಾರೆ.

ವಿವಿಧೆಡೆ ಆಯೋಜಿಸಿದ್ದ ರ‍್ಯಾಲಿಗಳಲ್ಲಿ ಮಾತನಾಡಿದ ಕೆಸಿಆರ್, ಅಭಿವೃದ್ಧಿಯ ದೃಷ್ಟಿಯಿಂದ 10 ವರ್ಷಗಳ ಬಿಆರ್‌ಎಸ್ ಆಡಳಿತ ಹಾಗೂ 50 ವರ್ಷಗಳ ಕಾಂಗ್ರೆಸ್ ಆಡಳಿತವನ್ನು ಹೋಲಿಕೆ ಮಾಡಿ. ಬಿಆರ್‌ಎಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರಗತಿ ಮುಂದುವರಿಯುತ್ತದೆ. ಇದರಿಂದ ಜನರಿಗೆ ಲಾಭವಾಗಲಿದೆ ಎಂದರು.


ಕಾಂಗ್ರೆಸ್ ಆಡಳಿತದಲ್ಲಿ ರೈತರು ರಸಗೊಬ್ಬರಗಳ ಕೊರತೆಯಿಂದ ಬಳಲುತ್ತಿದ್ದಾರೆ ಮತ್ತು ನಕಲಿ ಬೀಜಗಳ ಬೆದರಿಕೆ ಇದೆ. ಭತ್ತವನ್ನು ಖರೀದಿಸುವವರು ಇಲ್ಲ ಎಂದು ಮುಖ್ಯಮಂತ್ರಿ ಆರೋಪಿಸಿದರು.

'ರಾಮಮಂದಿರ ಶೀಘ್ರ ಪೂರ್ಣ'

ಚಿತ್ರಕೂಟ, ಮಧ್ಯಪ್ರದೇಶ (ಪಿಟಿಐ): ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಗೆ ಶೀಘ್ರವೇ ಸಿದ್ಧಗೊಳ್ಳಲಿದೆ. ಉದ್ಘಾಟನೆಯು ಮುಂದಿನ ಜನವರಿ 22ರಂದು ನಡೆಯುವ ನಿರೀಕ್ಷೆ ಇದ್ದು ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರದವರು ಈಗಾಗಲೇ ತಮ್ಮನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿಯೂ ಇದ್ದಾರೆ ಎಂದು ಪ್ರಧಾನಿ ಮೋದಿ ಹೇಳಿದರು.

ಜಗದ್ಗುರು ರಾಮ್‌ಭದ್ರಾಚಾರ್ಯ ಅವರ ತುಳಸಿಪೀಠದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ರಾಮಮಂದಿರ ನಿರ್ಮಾಣದಲ್ಲಿ ಜಗದ್ಗುರು ರಾಮ್‌ಭದ್ರಾಚಾರ್ಯರ ಕೊಡುಗೆ ಸ್ಮರಿಸಿದರು. ಸಂಸ್ಕೃತವು ಸಂಪ್ರದಾಯದ ಭಾಷೆ ಅಷ್ಟೇ ಅಲ್ಲ, ಅದು ನಮ್ಮ ಪ್ರಗತಿ ಮತ್ತು ಗುರುತು ಎಂದರು. ಜಗದ್ಗುರು ರಾಮ್‌ಭದ್ರಾಚಾರ್ಯ ಅವರು ಬರೆದ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ಅಂಚೆ ಚೀಟಿ ಬಿಡುಗಡೆ: ಉದ್ಯಮಿ ಮತ್ತು ದಾನಿ ದಿ. ಅರವಿಂದ್ ಭಾಯಿ ಮಫತ್‌ಲಾಲ್ ಅವರ ಗೌರವಾರ್ಥ ವಿಶೇಷ ಅಂಚೆ ಚೀಟಿಯನ್ನು ಪ್ರಧಾನಿ ಬಿಡುಗಡೆ ಮಾಡಿದರು. ಮಫತ್‌ಲಾಲ್ ಅವರ ಜನ್ಮ ಶತಮಾನೋತ್ಸವ ಅಂಗವಾಗಿ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾತನಾಡಿದರು.


ಚಿತ್ರಕೂಟದ ತುಳಸಿ ಪೀಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೋದಿ ಪಾಲ್ಗೊಂಡಿದ್ದರು. ಮಧ್ಯಪ್ರದೇಶ ರಾಜ್ಯಪಾಲ ಮಂಗುಭಾಯಿ ಪಟೇಲ್ ಇದ್ದಾರೆ ಪಿಟಿಐ ಚಿತ್ರ

ಚುನಾವಣಾ ಕಣದಲ್ಲಿ...

ಇನ್ನೂ ಒಂಬತ್ತು ಕ್ಷೇತ್ರಗಳಲ್ಲಿ ಖಾತೆ ತೆರೆಯದ ಬಿಜೆಪಿ

ರಾಯಪುರ (ಪಿಟಿಐ): ಬಿಜೆಪಿ 15 ವರ್ಷ ಛತ್ತೀಸಗಢದಲ್ಲಿ ಆಡಳಿತ ನಡೆಸಿದೆ. ಆದರೆ, ರಾಜ್ಯ ರಚನೆಯಾದಾಗಿನಿಂದ ಒಂಬತ್ತು ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಲು ಸಾಧ್ಯವಾಗಿಲ್ಲ. ಹಾಗಾಗಿ ಪಕ್ಷವು 9 ಸ್ಥಾನಗಳ ಪೈಕಿ 6 ಸ್ಥಾನಗಳಿಗೆ ಈ ಬಾರಿ ಹೊಸ ಮುಖಗಳನ್ನು ಕಣಕ್ಕಿಳಿಸಿದೆ.

ಛತ್ತೀಸಗಢದಲ್ಲಿ ನವೆಂಬರ್ 7 ಮತ್ತು 17 ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ಒಂಬತ್ತು ಸ್ಥಾನಗಳಲ್ಲಿ ಸೀತಾಪುರ, ಪಾಲಿ-ತನಾಖರ್, ಮಾರ್ವಾಹಿ, ಮೊಹ್ಲಾ-ಮನ್ಪುರ್ ಮತ್ತು ಕೊಂಟಾ ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾಗಿದ್ದರೆ, ಉಳಿದ ನಾಲ್ಕು ಸ್ಥಾನಗಳಾದ ಖಾರ್ಸಿಯಾ, ಕೊರ್ಬಾ, ಕೋಟಾ ಮತ್ತು ಜೈಜೈಪುರ ಸಾಮಾನ್ಯ ಕ್ಷೇತ್ರಗಳಾಗಿವೆ.

2003, 2008 ಮತ್ತು 2013ರ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಜಯ ಸಾಧಿಸಿತು. 2018ರಲ್ಲಿ ಕಾಂಗ್ರೆಸ್ 68 ಸ್ಥಾನಗಳನ್ನು ಗೆಲ್ಲುವ ಮೂಲಕ ರಮಣ್ ಸಿಂಗ್ ಸರ್ಕಾರ ಅಧಿಕಾರ ಗದ್ದುಗೆಗೇರಿತು. ಬಿಜೆಪಿಯ ಸಂಖ್ಯಾಬಲ ಈಗ 15ಕ್ಕೆ ಕುಸಿದಿದೆ.

'ಆಯಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಉತ್ಸಾಹದಿಂದ ಪ್ರಚಾರದಲ್ಲಿ ತೊಡಗಿದ್ದಾರೆ. ಸಾರ್ವಜನಿಕರಿಂದ ಉತ್ತಮ ಬೆಂಬಲವೂ ದೊರೆತಿದೆ' ಎಂದು ಪಕ್ಷದ ಚುನಾವಣಾ ಪ್ರಚಾರ ಸಮಿತಿ ಸಂಚಾಲಕ ಸಂತೋಷ್ ಪಾಂಡೆ ತಿಳಿಸಿದ್ದಾರೆ.

ಹಿಮಂತ್‌ಗೆ ಚುನಾವಣಾ ಆಯೋಗದ ನೋಟಿಸ್

ಗುವಾಹಟಿ (ಪಿಟಿಐ): ಕೋಮು ಪ್ರಚೋದನಕಾರಿ ಹೇಳಿಕೆಗಾಗಿ ಚುನಾವಣಾ ಆಯೋಗವು ಶೋಕಾಸ್ ನೋಟಿಸ್ ನೀಡಿದ್ದರೂ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಶುಕ್ರವಾರ ತಮ್ಮ ಭಾಷಣವನ್ನು ಸಮರ್ಥಿಸಿಕೊಂಡಿದ್ದಾರೆ.

ಛತ್ತೀಸಗಢದ ಕವರ್ಧಾದಲ್ಲಿ ಅಕ್ಟೋಬರ್ 18 ರಂದು ನಡೆದ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಶರ್ಮಾ ಅವರು 'ಅಕ್ಬರ್ ಅವರನ್ನು ಕಳುಹಿಸದಿದ್ದರೆ ಮಾತಾ ಕೌಸಲ್ಯ ಭೂಮಿ ಅಪವಿತ್ರವಾಗುತ್ತದೆ' ಎಂದು ಹೇಳಿದ್ದರು.

ಅಕ್ಬರ್ ವಿರುದ್ಧ ಹೇಳಿಕೆ ನೀಡಿದ್ದಕ್ಕಾಗಿ ಶರ್ಮಾ ವಿರುದ್ಧ ಕಾಂಗ್ರೆಸ್ ಆಯೋಗಕ್ಕೆ ದೂರು ನೀಡಿತ್ತು. ಭಗವಾನ್ ರಾಮನ ತಾಯಿ ಮಾತಾ ಕೌಸಲ್ಯ ಆಧುನಿಕ ಛತ್ತೀಸಗಢದವರು ಎಂದು ನಂಬಲಾಗಿದೆ. ಅಕ್ಟೋಬರ್ 30 ರೊಳಗೆ ನೋಟಿಸ್‌ಗೆ ಉತ್ತರಿಸುವಂತೆ ಆಯೋಗ ಸೂಚಿಸಿದೆ.

ನಕಲಿ ವಿಡಿಯೊ: ಎಫ್‌ಐಆರ್

ಇಂದೋರ್ (ಪಿಟಿಐ): ಬಿಜೆಪಿ ಅಭ್ಯರ್ಥಿ ಕೈಲಾಶ್ ವಿಜಯವರ್ಗೀಯ ಅವರನ್ನು ರಾವಣ ಮತ್ತು ಅವರ ಪ್ರತಿಸ್ಪರ್ಧಿಯನ್ನು ರಾಮನೆಂದು ಬಿಂಬಿಸಿ, ಸಿದ್ದಪಡಿಸಿದ್ದ ವಿಡಿಯೊ ಸಂಬಂಧ ಇಂದೋರ್ ಪೊಲೀಸರು ಶುಕ್ರವಾರ ಎಫ್‌ಐಆರ್ ದಾಖಲಿಸಿದ್ದಾರೆ.

ನವೆಂಬರ್ 17 ರಂದು ನಡೆಯಲಿರುವ ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗೆ ಇಂದೋರ್ -1 ಕ್ಷೇತ್ರದಿಂದ ವಿಜಯವರ್ಗೀಯ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಅವರು ಕಾಂಗ್ರೆಸ್ ಶಾಸಕ ಸಂಜಯ್ ಶುಕ್ಲಾ ವಿರುದ್ಧ ಸ್ಪರ್ಧಿಸುತ್ತಿದ್ದಾರೆ.

ಏರೋಡ್ರೋಮ್ ಪೊಲೀಸ್ ಠಾಣೆಯಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿದ್ದರೆ, ವಿವಿಧ ಕಲಂ ಅಡಿ ಅಪರಾಧ ವಿಭಾಗದ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ದಸರಾ ದಿನದಂದು ವಾಟ್ಸ್‌ಆ್ಯಪ್‌ನಲ್ಲಿ 'ಸಿಯಾಸಿ ದಾವ್ ಪೆಚ್" ಎಂಬ ಗುಂಪಿನಲ್ಲಿ ವಿಡಿಯೊ ಪೋಸ್ಟ್ ಮಾಡಲಾಗಿದೆ ಎಂದು ಆರೋಪಿಸಿ ಬಿಜೆಪಿಯ ಕಾನೂನು ಘಟಕ ದೂರು ನೀಡಿತ್ತು. ವಿವಾದಾತ್ಮಕ ವಿಡಿಯೊ ಪೋಸ್ಟ್ ಮಾಡಿದ ವ್ಯಕ್ತಿಯನ್ನು ಗುರುತಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇರಾನ್ ಬೆಂಬಲಿತ ನೆಲೆಗಳ ಮೇಲೆ ಅಮೆರಿಕ ದಾಳಿ

ಮುಖ್ಯಾಂಶಗಳು
- ಅಮೆರಿಕದಿಂದ ಪ್ರತೀಕಾರದ ಕ್ರಮ
- ರೆವಲ್ಯೂಷನರಿ ಗಾರ್ಡ್ ಕೋರ್ ನೆಲೆ ಮೇಲೆ ದಾಳಿ
- ಶಸ್ತ್ರಾಸ್ತ್ರ, ಯುದ್ಧ ಸಾಮಗ್ರಿ ಸಂಗ್ರಹ ಧ್ವಂಸಗೊಳಿಸಿದ ಅಮೆರಿಕ

ಇರಾಕ್ ಮತ್ತು ಸಿರಿಯಾದಲ್ಲಿ ಅಮೆರಿಕದ ಸೇನೆ ಮೇಲೆ ನಡೆಸಿದ ದಾಳಿಗೆ ಪ್ರತಿಯಾಗಿ ಆತ್ಮರಕ್ಷಣೆಯ ಭಾಗವಾಗಿ ಈ ದಾಳಿ ನಡೆಸಲಾಗಿದೆ

ಲೋಯ್ಡ್ ಆಸ್ಟಿನ್
ಅಮೆರಿಕದ ರಕ್ಷಣಾ ಕಾರ್ಯದರ್ಶಿ

ವಾಷಿಂಗ್ಟನ್ (ಎಪಿ) : ಪೂರ್ವ ಸಿರಿಯಾದಲ್ಲಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೋರ್ ಮತ್ತು ಬೆಂಬಲಿತ ಗುಂಪುಗಳ ಎರಡು ನೆಲೆಗಳ ಮೇಲೆ ಶುಕ್ರವಾರ ನಸುಕಿನಲ್ಲಿ ಫೈಟರ್ ಜೆಟ್‌ಗಳ ಮೂಲಕ ಅಮೆರಿಕ ವಾಯುದಾಳಿ ನಡೆಸಿದೆ ಎಂದು ಪೆಂಟಗನ್ ತಿಳಿಸಿದೆ.

ಈ ಪ್ರದೇಶದಲ್ಲಿ ಅಮೆರಿಕದ ನೆಲೆಗಳು ಮತ್ತು ಸೇನೆ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳು ನಡೆಸಿದ್ದಕ್ಕೆ ಪ್ರತೀಕಾರವಾಗಿ ಈ ದಾಳಿ ನಡೆಸಿರುವುದಾಗಿ ಹೇಳಿದೆ.

ಇರಾಕ್ ಗಡಿಗೆ ಹೊಂದಿಕೊಂಡಿರುವ ಸಿರಿಯಾದ ಬೌಕಮಾಲ್ ಪಟ್ಟಣದ ಸಮೀಪ ಶುಕ್ರವಾರ ಎರಡು ಎಫ್-16 ಫೈಟರ್ ಜೆಟ್‌ಗಳ ಮೂಲಕ ದಾಳಿ ನಡೆಸಲಾಗಿದೆ.

ಶಸ್ತ್ರಾಸ್ತ್ರ ಹಾಗೂ ಯುದ್ಧ ಸಾಮಗ್ರಿ ಸಂಗ್ರಹಿಸಿದ್ದ ನೆಲೆಯನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ಅಮೆರಿಕ ಹೇಳಿದೆ.

ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಸಿಬ್ಬಂದಿ ಈ ನೆಲೆಯಲ್ಲಿದ್ದರು. ನಾಗರಿಕರು ಇಲ್ಲಿರಲಿಲ್ಲ. ಆದರೆ ಅನಾಹುತದ ವಿವರಗಳು ಅಮೆರಿಕಕ್ಕೆ ಲಭ್ಯವಾಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಸ್ರೇಲ್ ಹಾಗೂ ಹಮಾಸ್ ನಡುವೆ ಸಂಘರ್ಷ ಆರಂಭವಾದಾಗಿನಿಂದ ಇರಾಕ್ ಮತ್ತು ಸಿರಿಯಾದಲ್ಲಿ ಇರಾನ್ ಬೆಂಬಲಿತ ಪಡೆಗಳು ಅಮೆರಿಕ ಮತ್ತು ಮಿತ್ರ ಪಡೆಗಳ ಮೇಲೆ ಕನಿಷ್ಠ 19 ಬಾರಿ ದಾಳಿ ನಡೆಸಿವೆ ಎಂದು ಪೆಂಟಗನ್ ಹೇಳಿದೆ.

ಇರಾಕ್ ಮತ್ತು ಸಿರಿಯಾದಲ್ಲಿ ಅಮೆರಿಕದ ಸೇನೆ ವಿರುದ್ಧ ನಡೆಸಿದ ದಾಳಿಗೆ ಪ್ರತಿದಾಳಿ ನಡೆಸುವ ಮೂಲಕ ತನ್ನ ಸೇನೆ ಮೇಲೆ ನಡೆದ ದಾಳಿಯನ್ನು ಅಮೆರಿಕ ಸಹಿಸುವುದಿಲ್ಲ ಹಾಗೂ ತನ್ನ ಸೈನಿಕರನ್ನು ರಕ್ಷಿಸಿಕೊಳ್ಳಬಲ್ಲದು ಎಂಬುದನ್ನು ಸ್ಪಷ್ಟಪಡಿಸಲು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಸೂಚಿಸಿದ್ದಾರೆ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲೊಯ್ಡ್ ಆಸ್ಟಿನ್ ಹೇಳಿದರು.

ಹಮಾಸ್ ವಿರುದ್ಧ ಇಸ್ರೇಲ್ ನಡೆಸಿರುವ ದಾಳಿಗೂ ಈ ಕಾರ್ಯಾಚರಣೆಗೂ ಸಂಬಂಧವಿಲ್ಲ. ಇದೇ ಬೇರೆ ಎಂದು ಅವರು ಹೇಳಿದರು. ಸಿರಿಯಾದಲ್ಲಿ 900 ಮತ್ತು ಇರಾಕ್‌ನಲ್ಲಿ 2500 ಪಡೆಗಳನ್ನು ಅಮೆರಿಕ ಹೊಂದಿದೆ.

ಇಸ್ರೇಲ್ ರಕ್ಷಣಾ ಪಡೆ ಹೇಳಿಕೆ • ಗಾಜಾ ಪಟ್ಟಿಯಲ್ಲಿ ಮುಂದುವರಿದ ಸೀಮಿತ ಭೂದಾಳಿ

ಹಮಾಸ್‌ನ ಐವರು ಕಮಾಂಡರ್‌ಗಳ ಹತ್ಯೆ

ದೇರ್ ಅಲ್– ಬಾಲಾಹ್ (ಗಾಜಾ ಪಟ್ಟಿ) (ಎಪಿ): ಗಾಜಾಪಟ್ಟಿಯಲ್ಲಿ ನಡೆಸಿದ ದಾಳಿ ವೇಳೆ ಹಮಾಸ್‌ನ ಐವರು ಹಿರಿಯ ಕಮಾಂಡರ್‌ಗಳು ಸಾವಿಗೀಡಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಹೇಳಿದೆ.

ಗುರುವಾರ ನಡೆಸಿದ ವಾಯು ದಾಳಿಯೊಂದರಲ್ಲಿ ಹಮಾಸ್‌ನ ಬೇಹುಗಾರಿಕೆ ವಿಭಾಗದ ಉಪ ಮುಖ್ಯಸ್ಥ ಶಾದಿ ಬರೂದ್ ಹತರಾಗಿದ್ದಾರೆ. ಇಸ್ರೇಲ್ ಮೇಲೆ ನಡೆದ ದಾಳಿಯ ಸಂಚು ರೂಪಿಸಿದವರಲ್ಲಿ ಬರೂದ್ ಕೂಡ ಸೇರಿದ್ದರು. ಮತ್ತೊಂದು ದಾಳಿಯಲ್ಲಿ ಖಾನ್ ಯೂನಿಸ್‌ನ ರಾಕೆಟ್ ಸಂಗ್ರಹಾಗಾರದ ಮುಖ್ಯಸ್ಥ ಹಸನ್ ಅಲ್ ಅಬ್ದುಲ್ಲಾ ಮೃತಪಟ್ಟಿದ್ದಾರೆ ಎಂದು ಐಡಿಎಫ್ ಹೇಳಿದೆ.

ಹಮಾಸ್‌ನ ಹಿರಿಯ ಕಮಾಂಡರ್‌ಗಳಾದ ರಿಫಾತ್ ಅಬ್ಬಾಸ್, ಇಬ್ರಾಹಿಂ ಜದ್ಬಾ ಮತ್ತು ತಾರಿಕ್ ಮರೌಫ್ ಅವರೂ ಮೃತಪಟ್ಟಿದ್ದಾರೆ ಎಂದು ಶುಕ್ರವಾರ ಸಂಜೆ ನೀಡಿದ ಮತ್ತೊಂದು ಹೇಳಿಕೆಯಲ್ಲಿ ಮಿಲಿಟರಿ ತಿಳಿಸಿದೆ.

ಮುಂದುವರಿದ ದಾಳಿ: ಈ ಮಧ್ಯೆ ಇಸ್ರೇಲ್ ಪಡೆಯು ಫೈಟರ್ ಜೆಟ್‌ಗಳು ಮತ್ತು ಡ್ರೋನ್‌ಗಳ ನೆರವಿನೊಂದಿಗೆ ಗಾಜಾದಲ್ಲಿ ಮತ್ತು ಗಾಜಾ ಹೊರವಲಯದಲ್ಲಿ ಸೀಮಿತ ಭೂದಾಳಿಯನ್ನು ಮುಂದುವರಿಸಿವೆ ಎಂದು ಇಸ್ರೇಲ್ ಮಿಲಿಟರಿ ಶುಕ್ರವಾರ ಹೇಳಿದೆ. ಗಾಜಾ ಮೇಲೆ ಪೂರ್ಣ ಪ್ರಮಾಣದಲ್ಲಿ ಭೂದಾಳಿ ನಡೆಸಲು ಸಿದ್ಧತೆ ನಡೆಸುತ್ತಿರುವುದರ ಜತೆಗೇ ಈ ದಾಳಿ ಮುಂದುವರಿಸಿದೆ.


ಇಸ್ರೇಲ್‌ನ ದಾಳಿಯಿಂದ ತಪ್ಪಿಸಿಕೊಳ್ಳಲು ರಮಲ್ಲಾದಲ್ಲಿ ಶುಕ್ರವಾರ ಪ್ಯಾಲೆಸ್ಟೀನ್ ಯುವಕರು ಸುರಕ್ಷಿತ ಸ್ಥಳದೆಡೆಗೆ ತೆರಳಿ ಅಡಗಿ ಕುಳಿತರು ಎಎಫ್‌ಪಿ ಚಿತ್ರ

ದಾಳಿ ನಿಲ್ಲಿಸಿ, ಜನರ ಜೀವ ಉಳಿಸಿ: ಪ್ಯಾಲೆಸ್ಟೀನ್ ಮನವಿ

ವಿಶ್ವಸಂಸ್ಥೆ (ಎಪಿ): 'ಯುದ್ಧ ನಿಲ್ಲಿಸಿ ಮತ್ತು ಜನರ ಜೀವ ಉಳಿಸಿ' ಎಂದು ಪ್ಯಾಲೆಸ್ಟೀನ್‌ನ ರಾಯಭಾರಿ ರಿಯಾದ್ ಮನ್ಸೌರ್ ಗುರುವಾರ ವಿಶ್ವಸಂಸ್ಥೆಯ ಸಭೆಯಲ್ಲಿ ಮನವಿ ಮಾಡಿದರು. ಆದರೆ ಇಸ್ರೇಲ್‌ನ ರಾಜತಾಂತ್ರಿಕ ಅಧಿಕಾರಿ 'ಹಮಾಸ್ ಬಂಡುಕೋರರು ನಿರ್ನಾಮವಾಗುವವರೆಗೆ ನಾವು ವಿರಮಿಸುವುದಿಲ್ಲ ಎಂದು ಮತ್ತೆ ಘೋಷಿಸಿದರು.

ಇಸ್ರೇಲ್ ದಾಳಿ ಕುರಿತಂತೆ ಸಾಮಾನ್ಯ ಸಭೆಯ ತುರ್ತು ವಿಶೇಷ ಸಭೆಯಲ್ಲಿ ಗುರುವಾರ ಕದನ ವಿರಾಮ ಘೋಷಿಸಬೇಕೆಂಬ ಅರಬ್ ರಾಷ್ಟ್ರಗಳ ನಿರ್ಣಯವನ್ನು ಭಾಷಣಕಾರರು ಬೆಂಬಲಿಸಿದರು. ಆದರೆ ವಿಶ್ವಸಂಸ್ಥೆಯಲ್ಲಿರುವ ಇಸ್ರೇಲ್ ರಾಯಭಾರಿ ಗಿಲಾಡ್ ಎರ್ಡನ್ ಅವರು 'ಕದನ ವಿರಾಮ ಎಂದರೆ ಶಸ್ತ್ರಸಜ್ಜಿತರಾಗಲು ಹಮಾಸ್ ಬಂಡುಕೋರರಿಗೆ ಮತ್ತೆ ಸಮಯ ನೀಡಿದಂತೆ. ಆಗ ಅವರು ಮತ್ತೆ ನಮ್ಮನ್ನು ಕೊಲ್ಲುತ್ತಾರೆ' ಎಂದರು.

ಅಕ್ಟೋಬರ್ 7ರಂದು ಹಮಾಸ್ ಬಂಡುಕೋರರು ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ಆಕ್ರಮಣ ನಡೆಸಿದ ಬಳಿಕ ಇಸ್ರೇಲ್ ನಡೆಸಿರುವ ವಾಯುದಾಳಿಯಲ್ಲಿ 7,326 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ 3,038ಕ್ಕೂ ಹೆಚ್ಚು ಮಕ್ಕಳು ಮತ್ತು 1,500ಕ್ಕೂ ಹೆಚ್ಚು ಮಹಿಳೆಯರು ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.


ಇಸ್ರೇಲ್–ಹಮಾಸ್ ಸಮರ

ವಿವಾದ ಸೃಷ್ಟಿಸಿದ ತರೂರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಪ್ಯಾಲೆಸ್ಟೀನಿಯನ್ನರ ಪರ ಸಭೆಯಲ್ಲಿ ಕಾಂಗ್ರೆಸ್ ನಾಯಕ ಶಶಿ ತರೂರ್ ಅವರು ಹಮಾಸ್ ಭಯೋತ್ಪಾದನಾ ಸಂಘಟನೆ ಎಂದು ಹೇಳಿಕೆ ನೀಡಿರುವುದು ಕೇರಳದಲ್ಲಿ ವಿವಾದ ಸೃಷಿಸಿದೆ.

ಸಿಪಿಎಂನ ಕೆಲವರು ಮತ್ತು ಮುಸ್ಲಿಂ ಸಂಘಟನೆಗಳು ತರೂರ್ ಅವರು ಇಸ್ರೇಲ್ ಪರವಾಗಿದ್ದಾರೆ ಎಂದರೆ, ಬಿಜೆಪಿಯು ಹಮಾಸ್ ಕುರಿತ ಅವರ ಹೇಳಿಕೆಯನ್ನು ಬೆಂಬಲಿಸಿದೆ ಅಲ್ಲದೆ ಇಸ್ರೇಲ್– ಪ್ಯಾಲೆಸ್ಟೀನ್ ವಿಷಯದಲ್ಲಿ ಅವರು ಮತಬ್ಯಾಂಕ್ ರಾಜಕೀಯ ಮಾಡುತ್ತಿದ್ದಾರೆ ಎಂದು ಆರೋಪಿಸಿದೆ.

ತರೂರ್ ಅವರು ನಂತರದಲ್ಲಿ ಸ್ಪಷ್ಟನೆ ನೀಡಿ, ತಾವು ಪಾಲೆಸ್ಟೀನ್ ಜನರ ಪರ ಇರುವುದಾಗಿ ಹೇಳಿದ್ದಾರೆ. ಇಸ್ರೇಲ್ ಅನ್ನು ತಾವು ಬೆಂಬಲಿಸಿದ್ದಾಗಿ ದಾರಿತಪ್ಪಿಸುವಂತಹ ಹೇಳಿಕೆಗಳು ಬಂದಿವೆ. ಇದು ಸರಿಯಲ್ಲ ಎಂದು ತಿಳಿಸಿದ್ದಾರೆ.

ಕೋಯಿಕ್ಕೋಡ್‌ನಲ್ಲಿ ಗುರುವಾರ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ ಹಮಾಸ್‌ನ 'ಭಯೋತ್ಪಾದನಾ ದಾಳಿ'ಗೆ ಇಸ್ರೇಲ್ ಪ್ರತಿಕ್ರಿಯೆ ಸೂಕ್ತವಾಗಿಲ್ಲ ಎಂದು ಹೇಳಿದರು. ಇದು ವಿವಾದಕ್ಕೆ ಕಾರಣವಾಯಿತು.

'ಒತ್ತೆಯಾಳುಗಳ ಬಿಡುಗಡೆಗೆ ಕದನವಿರಾಮ ಅಗತ್ಯ': ಕದನವಿರಾಮ ಒಪ್ಪಂದಕ್ಕೆ ಬರುವವರೆಗೆ ಒತ್ತೆಯಾಳುಗಳ ಬಿಡುಗಡೆ ಸಾಧ್ಯವಿಲ್ಲ. ದಾಳಿ ವೇಳೆ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಆಗುವುದಿಲ್ಲ ಎಂದು ಪ್ಯಾಲೆಸ್ಟೀನಿಯನ್ನರ ಹಮಾಸ್ ಸಂಘಟನೆ ಹೇಳಿರುವುದಾಗಿ ರಷ್ಯಾದ ಪತ್ರಿಕೆಯೊಂದು ವರದಿ ಮಾಡಿದೆ.

ಇಸ್ರೇಲ್ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ಅಲ್ಲಿಂದ ಕರೆತಂದ ಒತ್ತೆಯಾಳುಗಳು ವಿವಿಧೆಡೆ ಇದ್ದು ಅವರನ್ನು ಒಂದೆಡೆ ಸೇರಿಸಲು ಮತ್ತು ಬಿಡುಗಡೆ ಮಾಡಲು ಕಾಲಾವಕಾಶ ಬೇಕು ಎಂದು ಮಾಸ್ಕೊಗೆ ಭೇಟಿ ನೀಡಲಿರುವ ಹಮಾಸ್ ನಿಯೋಗದ ಸದಸ್ಯ ಅಬು ಹಮೀದ್ ಅವರು ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಎದುರಿಗೆ ಕಾಣುವ ಮನುಷ್ಯರನ್ನೇ ಗೌರವಿಸದಿದ್ದರೆ, ಕಾಣದ ದೇವರನ್ನು ಹೇಗೆ ಪ್ರಾರ್ಥಿಸಲು ಸಾಧ್ಯ?

-ಮದರ್ ತೆರೆಸಾ

ಹೆಣ್ಣುಭ್ರೂಣ ಹತ್ಯೆ ಪಿಡುಗು ನಿವಾರಣೆಗೆ ಬೇಕು ಇಚ್ಛಾಶಕ್ತಿ

ಗರ್ಭಿಣಿಯರನ್ನು ಅಕ್ರಮವಾಗಿ ಸ್ಕ್ಯಾನಿಂಗ್‌ಗೆ ಒಳಪಡಿಸಿ ಭ್ರೂಣಲಿಂಗ ಪತ್ತೆ ಮಾಡುವ ಜಾಲ ರಾಜ್ಯದಲ್ಲಿ ಸಕ್ರಿಯವಾಗಿರುವುದು ಆಘಾತಕಾರಿ ಸಂಗತಿ. ಲಿಂಗತಾರತಮ್ಯದ ವಿರುದ್ಧ ಎಷ್ಟೆಲ್ಲ ಜಾಗೃತಿ ಅಭಿಯಾನ ನಡೆದರೂ ಈ ವಿಷಯದಲ್ಲಿ ಸಮಾಜ ಇನ್ನೂ ಕುರುಡಾಗಿದೆ ಎನ್ನುವುದರ ದ್ಯೋತಕ ಇದು. ಮೊದಲು ಭ್ರೂಣಲಿಂಗ ಪತ್ತೆ ಮಾಡುವುದು, ಹೆಣ್ಣುಭ್ರೂಣ ಎಂದು ದೃಢಪಟ್ಟ ಬಳಿಕ ನಿರ್ದಯವಾಗಿ ಗರ್ಭಪಾತ ಮಾಡಿಸುವುದು ನಾಗರಿಕ ಸಮಾಜವೇ ನಾಚಿ, ತಲೆ ತಗ್ಗಿಸುವಂತಹ ಕೃತ್ಯ. ಇಂತಹ ಕೃತ್ಯದಲ್ಲಿ ಭಾಗಿಯಾಗುತ್ತಿರುವವರಿಗೆ ವೈದ್ಯಕೀಯ ತಂತ್ರಜ್ಞಾನವೇ ಆಯುಧವಾಗಿ ಸಿಕ್ಕಿರುವುದು ದುರದೃಷ್ಟಕರ. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲ ಭಾಗಗಳಲ್ಲೂ ಭ್ರೂಣಲಿಂಗ ಪತ್ತೆಯ ಹಾವಳಿ ಕಂಡುಬಂದಿರುವುದು ಈ ಜಾಲ ಎಷ್ಟು ಸಕ್ರಿಯವಾಗಿದೆ ಎನ್ನುವುದಕ್ಕೆ ನಿದರ್ಶನ. ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರಿನಲ್ಲಿ ಈ ಕೃತ್ಯದಲ್ಲಿ ತೊಡಗಿದ್ದ ಜಾಲವೊಂದು ಕಳೆದ ಮೂರು ವರ್ಷಗಳಲ್ಲಿ 650ಕ್ಕೂ ಅಧಿಕ ಭ್ರೂಣಲಿಂಗ ಪತ್ತೆ ಮಾಡಿರುವ ಸಂಗತಿ ತನಿಖೆಯಿಂದ ಬಯಲಾಗಿದೆ. ಅದರಲ್ಲಿ 200ಕ್ಕೂ ಅಧಿಕ ಹೆಣ್ಣುಭ್ರೂಣಗಳ ಹತ್ಯೆ ಆಗಿರುವುದಂತೂ ದಿಗಿಲುಗೊಳಿಸುವಂತಹ ವಿದ್ಯಮಾನ. ಮಂಡ್ಯ- ಪಾಂಡವಪುರ ರಸ್ತೆಯಲ್ಲಿದ್ದ ಆಲೆಮನೆಯೊಂದರಲ್ಲಿ ಸ್ಕ್ಯಾನಿಂಗ್ ಯಂತ್ರ ಇರಿಸಿ, ಅಲ್ಲಿಯೇ ಲಿಂಗ ಪತ್ತೆ ಮಾಡಿ, ಹೆಣ್ಣುಭ್ರೂಣವೆಂದು ಗೊತ್ತಾಗುತ್ತಿದ್ದಂತೆ ಗರ್ಭಪಾತ ಮಾಡಿಸುತ್ತಿದ್ದ ಕೃತ್ಯದಲ್ಲಿ ತೊಡಗಿದವರು ಹೃದಯಹೀನರೇ ಸರಿ. ಸಾಮಾನ್ಯವಾಗಿ ಭ್ರೂಣಕ್ಕೆ 7-8 ವಾರಗಳು ತುಂಬಿದಾಗ ಲಿಂಗ ಪತ್ತೆ ಮಾಡಲು ಸಾಧ್ಯ. ಹೆಣ್ಣುಭ್ರೂಣ ಎಂದು ಗೊತ್ತಾಗಿ ಗರ್ಭಪಾತ ಮಾಡಿಸುವ ಪ್ರವೃತ್ತಿ ಈ ಸಂದರ್ಭದಲ್ಲೇ ಹೆಚ್ಚು. ಭ್ರೂಣಗಳಿಗೆ 10-12 ವಾರಗಳು ತುಂಬಿದಾಗ ಹೆಚ್ಚಿನ ವೈದ್ಯಕೀಯ ಗರ್ಭಪಾತ ಪ್ರಕರಣಗಳು ನಡೆಯುತ್ತಿರುವುದಕ್ಕೂ ಭ್ರೂಣಲಿಂಗ ಪತ್ತೆಗೂ ನೇರ ಸಂಬಂಧವಿದೆ ಎಂಬುದು ಸುಸ್ಪಷ್ಟ. ಭಾರತದಲ್ಲಿ ಭ್ರೂಣಕ್ಕೆ 24 ವಾರಗಳು ತುಂಬುವವರೆಗೂ ಗರ್ಭಪಾತ ಮಾಡಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಕಾನೂನು ಒದಗಿಸಿರುವ ಈ ಅವಕಾಶವು ವ್ಯಾಪಕವಾಗಿ ದುರ್ಬಳಕೆ ಆಗುತ್ತಿದೆ ಎಂಬ ವಾದಕ್ಕೆ ನಮ್ಮ ನಡುವೆ ನಡೆದಿರುವ ವಿದ್ಯಮಾನಗಳು ಪುರಾವೆಯಾಗಿವೆ.



ಹೆಣ್ಣುಭ್ರೂಣ ಹತ್ಯೆಯನ್ನು ತಡೆಗಟ್ಟುವಲ್ಲಿ ಆರೋಗ್ಯ ಇಲಾಖೆಯ ಪಾತ್ರ ಮಹತ್ವದ್ದಾಗಿದೆ

ಸಮಾಜದಲ್ಲಿ ಹೆಚ್ಚು ಹೆಚ್ಚು ಜಾಗೃತಿ ಮೂಡಿದಂತೆ, ಸುಶಿಕ್ಷಿತ ಸಮುದಾಯದ ಪ್ರಮಾಣ ಹೆಚ್ಚುತ್ತಾ ಹೋದಂತೆ ಹೆಣ್ಣುಭ್ರೂಣ ಹತ್ಯೆಯಂತಹ ಪಿಡುಗು ನಿವಾರಣೆಯಾಗುತ್ತಾ ಹೋಗಬೇಕಿತ್ತು. ಆದರೆ, ರಾಜ್ಯದಲ್ಲಿ ನಡೆದಿರುವ ಬೆಳವಣಿಗೆಗಳು ತದ್ವಿರುದ್ಧವಾಗಿವೆ. ಇಷ್ಟಕ್ಕೂ ಹೆಣ್ಣುಮಗುವನ್ನು ಈ ಪರಿ ದ್ವೇಷಿಸಲು ಕಾರಣವೇನು? ಹಾಗೆ ಮಕ್ಕಳಲ್ಲಿ ತಾರತಮ್ಯ ಮಾಡುವಾಗ ನಾಚಿಕೆಯೇ ಆಗಲಾರದೇನು? ವಿಪರ್ಯಾಸದ ಸಂಗತಿ ಎಂದರೆ, ವಯಸ್ಸಾದ ಎಷ್ಟೋ ಮಹಿಳೆಯರೂ ಹೆಣ್ಣುಮಗುವನ್ನು ಬಯಸುವುದಿಲ್ಲ. ಹೆಣ್ಣುಮಕ್ಕಳನ್ನು 'ಹೊರೆ' ಎಂದು ಭಾವಿಸುವ ಮನಃಸ್ಥಿತಿಯೇ ಈ ಪ್ರವೃತ್ತಿಗೆ ಮೂಲ ಕಾರಣ. ಗಂಡುಮಕ್ಕಳ ಬಗ್ಗೆ ವಿಪರೀತ ಒಲವು ತೋರುವ ಪಕ್ಷಪಾತ ಧೋರಣೆಯು ತಲೆಮಾರುಗಳಿಂದಲೂ ಗಟ್ಟಿಯಾಗಿ ನೆಲೆಯೂರಿದೆ. ಸಮಾಜದಲ್ಲಿ ಬೇರೂರಿರುವ ಈ ಮನೋಭಾವದಿಂದಾಗಿ ಹೆಣ್ಣು-ಗಂಡಿನ ಲಿಂಗಾನುಪಾತದಲ್ಲೂ ಕುಸಿತವಾಗಿದೆ. 2011ರ ಜನಗಣತಿ ಪ್ರಕಾರ, ಪ್ರತಿ ಸಾವಿರ ಪುರುಷರಿಗೆ ಇರುವ ಮಹಿಳೆಯರ ಪ್ರಮಾಣ 918 ಮಾತ್ರ. ಲಿಂಗಾನುಪಾತ ಸಮ ಇದ್ದರಷ್ಟೇ ಅದು ಸ್ವಸ್ಥ ಸಮಾಜದ ಲಕ್ಷಣ. ಈ ಅನುಪಾತದಲ್ಲಿ ಏರುಪೇರು ಮಾಡುತ್ತಿರುವುದು ಸ್ವಯಂಕೃತ ಅಪರಾಧ. ಸುಧಾರಿತ ತಂತ್ರಜ್ಞಾನವು ಗ್ರಾಮಾಂತರ ಭಾಗಗಳಲ್ಲೂ ಸಿಗುವಂತಾಗಿರುವುದು, ಅದರ ದುರುಪಯೋಗ ಹೆಚ್ಚಿರುವುದು, ವರದಕ್ಷಿಣೆ ಪಿಡುಗು ಮತ್ತು ಮಗನನ್ನು ಅನ್ನದಾತನನ್ನಾಗಿ ನೋಡುವ ಪ್ರವೃತ್ತಿಯು ಹೆಣ್ಣುಭ್ರೂಣಕ್ಕೆ ಕಂಟಕವಾಗಿದೆ. ಭ್ರೂಣಲಿಂಗ ಪತ್ತೆಯು 'ಗರ್ಭಧಾರಣೆಪೂರ್ವ ಮತ್ತು ಪ್ರಸವಪೂರ್ವ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಅಧಿನಿಯಮ-1994'ರ ಪ್ರಕಾರ ಶಿಕ್ಷಾರ್ಹ ಅಪರಾಧ. ಹೀಗಿದ್ದೂ ಭ್ರೂಣಲಿಂಗ ಪತ್ತೆ ಮತ್ತು ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ಹೆಚ್ಚಲು ಕಾಯ್ದೆಯ ಅನುಷ್ಠಾನದಲ್ಲಿ ಆಗಿರುವ ಲೋಪಗಳೇ ಕಾರಣ. ಭ್ರೂಣಲಿಂಗ ಪತ್ತೆಗೆ ಕಡಿವಾಣ ಹಾಕಿ, ಹೆಣ್ಣುಭ್ರೂಣ ಹತ್ಯೆಯನ್ನು ತಡೆಗಟ್ಟುವಲ್ಲಿ ಆರೋಗ್ಯ ಇಲಾಖೆಯ ಪಾತ್ರ ಮಹತ್ವದ್ದಾಗಿದೆ. ಸಮಾಜದಲ್ಲಿ ಜಾಗೃತಿ ಮೂಡಿಸುವ ಜತೆಜತೆಗೆ ಕುಕೃತ್ಯದಲ್ಲಿ ತೊಡಗಿರುವ ಜಾಲವನ್ನು ಮಟ್ಟಹಾಕುವ ಕೆಲಸವನ್ನೂ ಇಲಾಖೆ ಮಾಡಬೇಕಿದೆ. ಹೆಣ್ಣುಭ್ರೂಣ ಹತ್ಯೆಗೆ ಕಾರಣರಾದವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಿ, ಈ ಪಿಡುಗನ್ನು ಸಂಪೂರ್ಣವಾಗಿ ತೊಲಗಿಸಬೇಕಿದೆ. ಇಲ್ಲದಿದ್ದರೆ 'ಬೇಟಿ ಬಚಾವೊ' ಎನ್ನುವಂತಹ ಸರ್ಕಾರದ ಆಕರ್ಷಕ ಘೋಷಣೆಗಳು ಬರೀ ಘೋಷಣೆಗಳಾಗಿ ಉಳಿಯುತ್ತವೆ.

ದಿನದ ಟ್ವೀಟ್

ಆರ್ಥಿಕತೆ ಬಲಪಡಿಸೋಣ



ನಮ್ಮ ಅಜ್ಜ, ಅಜ್ಜಿಯ ಪೀಳಿಗೆಯವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ನಮ್ಮ ತಂದೆ ತಾಯಿಯ ಪೀಳಿಗೆಯವರು ಅನ್ನ, ವಸ್ತ್ರ, ವಸತಿಗಾಗಿ ಹೋರಾಡಿದರು. ನಿಮಗೆ ಇಷ್ಟವೋ ಇಲ್ಲವೋ ನಮ್ಮ ಪೀಳಿಗೆಯಂತೂ ಭಾರತವನ್ನು ಬೃಹತ್ ಆರ್ಥಿಕತೆಯನ್ನಾಗಿ ಕಟ್ಟುವ ಕಾರ್ಯದಲ್ಲಿ ತೊಡಗಿಕೊಂಡಿದೆ. ಅದಕ್ಕೆ ಎಲ್ಲ ಬಗೆಯ ಪ್ರಯತ್ನಗಳೂ ಬೇಕು. ಈ ಪಯಣಕ್ಕೆ ಕೊಡುಗೆ ನೀಡುವುದಕ್ಕಿಂತ ಹೆಚ್ಚಿನ ತೃಪ್ತಿ ಬೇರೊಂದಿರಲಾರದು!

ಭವಿಷ್ ಅಗರವಾಲ್, ಉದ್ಯಮಿ

ಕಿಡಿನುಡಿ



ಮಹಿಳೆಯರು ಸರ್ಕಾರಿ ಸೇವೆಗೆ ಹೆಚ್ಚಾಗಿ ಬಂದರೆ ವ್ಯವಸ್ಥೆ ಸುಧಾರಿಸಬಹುದು, ಭ್ರಷ್ಟಾಚಾರ ತಗ್ಗಬಹುದು ಎಂಬ ಊಹೆ ದಿನೇ ದಿನೇ ಹುಸಿಯಾಗುತ್ತಿದೆ. ಅವರು ಸಹ ಪುರುಷರಂತೆ, ಕೆಲವೊಮ್ಮೆ ಅವರಿಗೂ ಮೀರಿ ಭ್ರಷ್ಟಾಚಾರದಲ್ಲಿ ತೊಡಗಿರುವುದನ್ನು ನೋಡಿದರೆ ದುಃಖವಾಗುತ್ತದೆ. ಇಂದು ಬಲೆಗೆ ಬಿದ್ದಿರುವ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಯ ಪ್ರಕರಣ ಇದಕ್ಕೆ ಪುಷ್ಟಿ ನೀಡುತ್ತದೆ.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಬುಧವಾರ, 28-10-1998

● **ದಳ ಸರ್ಕಾರದ ವಿರುದ್ಧ ಅವಿಶ್ವಾಸ ಮಂಡನೆಗೆ ಕಾಂಗ್ರೆಸ್ ನಿರ್ಧಾರ**

ಬೆಂಗಳೂರು, ಅ. 27– ಈ ತಿಂಗಳ 29ರಿಂದ ಆರಂಭವಾಗುವ ವಿಧಾನಸಭೆ ಅಧಿವೇಶನದಲ್ಲಿ ಜೆ.ಎಚ್.ಪಟೇಲ್ ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷವು ಅವಿಶ್ವಾಸ ನಿರ್ಣಯ ಮಂಡಿಸಲಿದೆ.

ಕೆಪಿಸಿಸಿ ಅಧ್ಯಕ್ಷ ಧರ್ಮಸಿಂಗ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಪಕ್ಷದ ಮುಖಂಡರ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ರಾಜ್ಯದ ಆಡಳಿತ ಜನತಾಪಕ್ಷದಲ್ಲಿ ಉದ್ಭವಿಸಿರುವ ಬಿಕ್ಕಟ್ಟು ಮತ್ತು ಅಧಿವೇಶನದ ಅವಧಿಯಲ್ಲಿ ಕಾಂಗ್ರೆಸ್ ಅನುಸರಿಸಬೇಕಾದ ತಂತ್ರವನ್ನು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು ಎಂದು ಪಕ್ಷದ ವಕ್ತಾರ ಬಿ.ಕೆ.ಚಂದ್ರಶೇಖರ್ ತಿಳಿಸಿದ್ದಾರೆ.

ಪಕ್ಷದ ಕಾರ್ಯಕರ್ತರ ಭಾವನೆಗಳನ್ನು ಪರಿಗಣಿಸಿ ಅವಿಶ್ವಾಸ ನಿರ್ಣಯ ಮಂಡಿಸುವುದು ಅನಿವಾರ್ಯ ಕ್ರಮ ಎಂದು ನಿರ್ಧರಿಸಲಾಯಿತು ಎಂದು ಅವರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 28-10-1973

● **ಸೂಪ ಜಲಾಶಯಕ್ಕೆ ಪ್ರಧಾನಿಯಿಂದ ನಾಳೆ ಶಂಕುಸ್ಥಾಪನೆ**

ಬೆಂಗಳೂರು, ಅ. 27– ಕಾಳಿ ನದಿ ವಿದ್ಯುತ್ ಯೋಜನೆಯ ಮುಖ್ಯ ಜಲಾಶಯಗಳಲ್ಲಿ ಒಂದಾದ ಸೂಪ ಜಲಾಶಯಕ್ಕೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಸೋಮವಾರ ಶಂಕುಸ್ಥಾಪನೆ ಮಾಡಲಿದ್ದು, ಯೋಜನೆಯ ಪ್ರಥಮ ಘಟ್ಟದ ನಾಲ್ಕು ಜಲಾಶಯಗಳಲ್ಲಿ ಇದೊಂದು.

ನಲವತ್ತು ಕೋಟಿ ರೂಪಾಯಿ ವೆಚ್ಚದ ಈ ಜಲಾಶಯ ನಿರ್ಮಾಣವಾದಾಗ ನಿಲ್ಲುವ ನೀರಿನ ಮುನ್ನೂರು ಅಡಿ ಆಳದಲ್ಲಿ ಇಡೀ ಸೂಪ ಪಟ್ಟಣ ಮುಳುಗಲಿದೆ. ತಾಲ್ಲೂಕು ಮುಖ್ಯ ಸ್ಥಳವಾದ ಸೂಪ ಪಟ್ಟಣದ ಜನಸಂಖ್ಯೆ ಮೂರು ಸಾವಿರ.

156 ಕೋಟಿ ರೂಪಾಯಿ ವೆಚ್ಚದ ಪ್ರಥಮ ಘಟ್ಟದಲ್ಲಿ ನಿರ್ಮಿಸಲಾಗುವ ಇತರ ಮೂರು ಜಲಾಶಯಗಳೆಂದರೆ ಬೊಮ್ಮನಹಳ್ಳಿ, ಕನೇರಿ, ತಟ್ಟಿಹಳ್ಳ.


● **ವಿಶ್ವಸಂಸ್ಥೆ ತುರ್ತು ಪಡೆಯಿಂದ ಶಾಂತಿಪಾಲನೆ ಕಾರ್ಯಾರಂಭ**

ಕೈರೊ, ಅ. 27– ಸುತ್ತುವರಿಯಲ್ಪಟ್ಟ ಸೂಯೆಜ್ ನಗರದ ಮೇಲೆ ಇಸ್ರೇಲ್ ಭಾರಿ ದಾಳಿ ನಡೆಸುವುದೆಂದು ತಾನು ನಿರೀಕ್ಷಿಸಿರುವುದಾಗಿ ಈಜಿಪ್ಟ್ ಹೇಳುತ್ತಿದ್ದಂತೆ, ವಿಶ್ವಸಂಸ್ಥೆಯ ತುರ್ತು ಪಡೆಯ ಪ್ರಥಮ ತುಕಡಿಯು ಮಧ್ಯಪ್ರಾಚ್ಯದ ಕದನವಿರಾಮ ರೇಖೆಯುದ್ದಕ್ಕೂ ಇಂದು ಸಜ್ಜಾಗಿ ನಿಂತಿತು.

ನೀಲಿ ವರ್ಣದ ಉಕ್ಕಿನ ಶಿರಸ್ತ್ರಾಣ ಧರಿಸಿದ್ದ ಸುಮಾರು 600 ಮಂದಿ ವಿಶ್ವಸಂಸ್ಥೆ ಸಿಪಾಯಿಗಳನ್ನು ಸೈಪ್ರಸ್‌ನಿಂದ ಬ್ರಿಟನ್ ವಿಮಾನ ಪಡೆಯ ವಿಮಾನಗಳು ನಿನ್ನೆ ಹಾಗೂ ಇಂದು ಕರೆತಂದವು ಎಂದು ವಿಶ್ವಸಂಸ್ಥೆ ವಕ್ತಾರರೊಬ್ಬರು ಇಲ್ಲಿ ತಿಳಿಸಿದರು.

ಎಲ್ಲ ಪಕ್ಷಗಳಲ್ಲೂ ಕಾರ್ಯಕರ್ತರು ಮೂಲೆಗುಂಪು, ನಾಯಕರ ಮೇಲಾಟ

ಮೂರೂ ಬಿಟ್ಟರಷ್ಟೇ ಮತದಾರ ದೊಡ್ಡವ!



ಅನುಸಂಧಾನ

ರವೀಂದ್ರ ಭಟ್ಟ

'ಮೂರೂ ಬಿಟ್ಟವ ಊರಿಗೆ ದೊಡ್ಡವ' ಎಂಬ ಗಾದೆಯೊಂದು ನಮ್ಮಲ್ಲಿ ಇದೆ. ಕರ್ನಾಟಕದ ಮತದಾರರೂ ಈಗ ಮೂರೂ ಬಿಡಬೇಕಾದ ಹಂತ ತಲುಪಿದ್ದಾರೆ. ಅಂದರೆ, ಮತದಾರರು ಮಾನ, ಮರ್ಯಾದೆ, ಘನತೆ ಬಿಡಬೇಕು ಎಂದಲ್ಲ. ಅವುಗಳನ್ನು ಉಳಿಸಿಕೊಳ್ಳಲು ಈಗ ಚಾಲ್ತಿಯಲ್ಲಿರುವ ಮೂರೂ ಪಕ್ಷಗಳನ್ನು ಬಿಡಬೇಕಾಗಿದೆ ಅಷ್ಟೆ. ಆದರೆ ಈ ಮೂರು ಪಕ್ಷಗಳು ಬಿಟ್ಟರೂ ಬಿಡದ ಮಾಯೆಯಂತೆ ಇವೆ. ಮತದಾರರಿಗೆ ಮತ್ತೊಂದನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವೇ ಇಲ್ಲದಂತಾಗಿದೆ.

ಇಂತಹ ಸ್ಥಿತಿಯಲ್ಲಿ ಹೊಸದೊಂದು ಹುಟ್ಟಬಹುದು ಎಂಬ ಸಣ್ಣ ಆಸೆಯೂ ಅವರಲ್ಲಿದೆ. ಕರ್ನಾಟಕದ ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಯಾವ ಪಕ್ಷದಲ್ಲಿಯೂ ಕಾರ್ಯಕರ್ತರಿಗೆ ಮೂರು ಕಾಸಿನ ಬೆಲೆಯೂ ಇಲ್ಲದಂತಾಗಿದೆ. ಮತದಾರರಂತೂ ಅನಾಥರಾಗಿ ಎಷ್ಟೋ ವರ್ಷಗಳು ಕಳೆದುಹೋಗಿವೆ. ಪಕ್ಷಗಳಂತೂ ಮತದಾರರನ್ನು ಕೈಬಿಟ್ಟಿವೆ. ಈಗ ಮತದಾರರು ಮನಸ್ಸು ಮಾಡಬೇಕಷ್ಟೆ.

ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷವನ್ನೇ ತೆಗೆದುಕೊಳ್ಳಿ. ಇದೇ ವರ್ಷದ ಮೇ ತಿಂಗಳಿನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಜಯ ಗಳಿಸಿದ ಕಾಂಗ್ರೆಸ್ ಪಕ್ಷಕ್ಕೆ ಈಗ ಸರ್ಕಾರ ಮುಖ್ಯವಾಗಿದೆ. ಪಕ್ಷ ಸೊರಗುತ್ತಿದೆ. ಕಾರ್ಯಕರ್ತರು ಪರದಾಡುತ್ತಿದ್ದಾರೆ. ಬೇರೆ ಪಕ್ಷಗಳಿಂದ ಬರುತ್ತಿರುವ ಮುಖಂಡರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದನ್ನು ಬಿಟ್ಟರೆ ಪಕ್ಷವನ್ನು ಚುರುಕುಗೊಳಿಸುವ ಇನ್ನಾವುದೇ ಕೆಲಸ ನಡೆಯುತ್ತಿಲ್ಲ. ಕಾರ್ಯಕರ್ತರನ್ನು ಹುರಿದುಂಬಿಸುವ ಕೆಲಸವಾಗುತ್ತಿಲ್ಲ. ಬೇರುಮಟ್ಟದಲ್ಲಿ ಅವರನ್ನು ಸಜ್ಜುಗೊಳಿಸುವುದಕ್ಕೆ ಆದ್ಯತೆ ಸಿಗುತ್ತಿಲ್ಲ. ಇನ್ನೂ ಆ ಪಕ್ಷ ಗೆಲುವಿನ ಅಮಲಿನಲ್ಲಿಯೇ ಇದೆ. ಅದರಿಂದ ಹೊರಬರದಿದ್ದರೆ ಲೋಕಸಭಾ ಚುನಾವಣೆ ಹುಳಿ ಮಜ್ಜಿಗೆಯಾಗಬಹುದು.

ಪಕ್ಷ ಅಧಿಕಾರಕ್ಕೆ ಬಂದ ಮೂರು ತಿಂಗಳಿನಲ್ಲಿಯೇ ಸಚಿವರ ವಿರುದ್ಧ ಆರೋಪಗಳು ಕೇಳಿಬರುತ್ತಿವೆ. 'ಶಾಸಕರ ಮಾತಿಗೇ ಬೆಲೆ ಇಲ್ಲದಂತಾಗಿದೆ. ಪಕ್ಷದ ಕಾರ್ಯಕರ್ತರ, ಜನಸಾಮಾನ್ಯರ ಕುಂದುಕೊರತೆಗಳನ್ನು ಕೇಳುತ್ತಿಲ್ಲ' ಎಂಬ ಆರೋಪ ವ್ಯಾಪಕವಾಗಿ ಕೇಳಿಬಂದಿದ್ದರಿಂದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅಖಾಡಕ್ಕೆ ಇಳಿಯಬೇಕಾಯಿತು. ಹಿಂದಿನ ಅವಧಿಯ ಸರ್ಕಾರದಲ್ಲಿ ಶೇ 40ರಷ್ಟು ಲಂಚ ಇದೆ ಎಂಬ ಆರೋಪವನ್ನೇ ಮುಂದಿಟ್ಟುಕೊಂಡು ಚುನಾವಣೆಯಲ್ಲಿ ಮತ ಗಳಿಸಿದ ಕಾಂಗ್ರೆಸ್ ಪಕ್ಷಕ್ಕೆ ಈಗಲೂ ಭ್ರಷ್ಟಾಚಾರವನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಅಲ್ಲದೆ ಗುತ್ತಿಗೆದಾರರು ಈ ಪಕ್ಷದ ವಿರುದ್ಧವೂ ಕಮಿಷನ್ ಆರೋಪ ಮಾಡುತ್ತಿದ್ದಾರೆ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಸರ್ಕಾರಿ ನೌಕರರು ಮತ್ತು ಅಧಿಕಾರಿಗಳ ವರ್ಗಾವಣೆಯಲ್ಲಿ ಭಾರೀ ಪ್ರಮಾಣದ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿಬಂದಿದೆ. ಅದು ಸುಳ್ಳು ಎಂದು ನಿರೂಪಿಸಲು ಸಾಧ್ಯವಾಗಿಲ್ಲ. 'ಹೌದು ವರ್ಗಾವಣೆಯಲ್ಲಿ ಭಾರೀ ಭ್ರಷ್ಟಾಚಾರ ನಡೆಯುತ್ತಿದೆ. ಗ್ಯಾರಂಟಿ ಯೋಜನೆಗಳಅನುಷ್ಠಾನಕ್ಕೆಭಾರೀಪ್ರಮಾಣದಹಣವ್ಯಯಮಾಡುತ್ತಿರುವುದರಿಂದ ಅಭಿವೃದ್ಧಿಗೆ ಅನುದಾನ ಸಿಗುತ್ತಿಲ್ಲ. ಅನುದಾನವೇ ಇಲ್ಲದ ಮೇಲೆ ಭ್ರಷ್ಟಾಚಾರ ಮಾಡುವುದೆಂತು? ಅದಕ್ಕೇ ಈಗ ಸದ್ಯಕ್ಕೆ ವರ್ಗಾವಣೆ ದಂಧೆಯೇ ಕಾಮಧೇನು ಆಗಿದೆ' ಎಂದು ಕಾಂಗ್ರೆಸ್ ಮುಖಂಡರೇ ಹೇಳುತ್ತಾರೆ. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರ ಪುತ್ರ ಆಡಳಿತ ನಡೆಸುತ್ತಿದ್ದರು ಎಂಬ ಆಪಾದನೆ ಇತ್ತು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೂಡ 'ಸನ್ ಸ್ಟ್ರೋಕ್'ನಿಂದ ಮುಕ್ತವಾಗಿಲ್ಲ ಎಂಬ ಮಾತು ಪಕ್ಷದ ಒಳಗೇ ಇದೆ.

ಕಾಂಗ್ರೆಸ್‌ಪಕ್ಷಕ್ಕೆಅದ್ಭುತಅವಕಾಶಗಳಿದ್ದವು.ಪ್ರಮುಖ ವಿರೋಧ ಪಕ್ಷವಾಗಿರುವ ಬಿಜೆಪಿಗೆ ಇನ್ನೂ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನೂ ಬದಲಾಯಿಸಲು ಕಾಲ ಕೂಡಿಬಂದಿಲ್ಲ. ಆ ಪಕ್ಷ ಒಂದು ರೀತಿಯಲ್ಲಿ ನಾಯಕನಿಲ್ಲದ ನಾವೆಯಂತಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಸಿಕ್ಕ ಗೆಲುವು, ಗ್ಯಾರಂಟಿಗಳ ಅನುಷ್ಠಾನದಂತಹ ಕಾರಣಗಳಿಗಾಗಿ ಜನ ಇನ್ನೂ ಕಾಂಗ್ರೆಸ್ ಪಕ್ಷದಿಂದದೂರವಾಗಿಲ್ಲ.ಆದರೂಮುಂಬರುವಲೋಕಸಭಾ ಚುನಾವಣೆಗೆ ಪಕ್ಷವನ್ನು ಇನ್ನಷ್ಟು ಸಜ್ಜುಗೊಳಿಸುವ ಉತ್ಸಾಹ ಪಕ್ಷದಲ್ಲಿ ಕಾಣುತ್ತಿಲ್ಲ. 'ಪಕ್ಷ ಮತ್ತು ಸರ್ಕಾರದ ಪ್ರಶ್ನೆ ಬಂದರೆ ಅಧಿಕಾರವನ್ನೇ ಆಯ್ಕೆ ಮಾಡಿಕೊಳ್ಳುವ, ಗುಣ ಮತ್ತು ಹಣದ ಆಯ್ಕೆ ಬಂದರೆ ಹಣವನ್ನೇ ಆಯ್ಕೆ ಮಾಡಿಕೊಳ್ಳುವ ಪ್ರವೃತ್ತಿ ಹೆಚ್ಚಾಗಿದ್ದೇ ಕಾಂಗ್ರೆಸ್ ಪಕ್ಷಕ್ಕೆ ದುಬಾರಿಯಾಗುತ್ತಿದೆ' ಎಂಬ ಪಕ್ಷದ ಹಿರಿಯರ ಮಾತು ಬರೀ ಪಿಸುಮಾತಾಗಿದೆ.

ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರೂ ಹೌದು, ನೀರಾವರಿ ಸಚಿವರೂ ಹೌದು, ಬೆಂಗಳೂರು ಅಭಿವೃದ್ಧಿ ಮಂತ್ರಿಯೂ ಹೌದು. ಶಿವಕುಮಾರ್ ಅವರಿಗೆ ನೀರಾವರಿಗಿಂತ ಬೆಂಗಳೂರು ಅಭಿವೃದ್ಧಿಯ ಬಗ್ಗೆಯೇ



ಹೆಚ್ಚು 'ಪರಿ' ಎಂಬ ಮಾತು ಪಕ್ಷದ ವಲಯದಲ್ಲಿ ಇದೆ. ಮೇಲ್ನೋಟಕ್ಕೆ ಇದು ಸತ್ಯ ಎಂದೂ ಅನ್ನಿಸುತ್ತದೆ. ಅದಕ್ಕಾಗಿಯೇ ಕನಕಪುರ ಬೆಂಗಳೂರಿಗೆ ಸೇರಬೇಕು ಎಂದು ಅವರು ಬಯಸುತ್ತಾರೆ. ಅದಕ್ಕೆ ಸಕಾರಣಗಳೂ ಇರಬಹುದು. ಆದರೆ ಅದರ ಭಾರದಲ್ಲಿ ನೀರಾವರಿ ಇಲಾಖೆ ಅನಾಥವಾಗಬಾರದಲ್ಲ. ಬೆಂಗಳೂರು ಅಭಿವೃದ್ಧಿ ಎಷ್ಟು ಮುಖ್ಯವೋ ರಾಜ್ಯದ ಕಲ್ಯಾಣದ ದೃಷ್ಟಿಯಿಂದ ನೀರಾವರಿಯೂ ಅಷ್ಟೇ ಮುಖ್ಯ.

ಅಧಿಕಾರಕ್ಕೆ ಬಂದು ಆರು ತಿಂಗಳಾಗುತ್ತಿದೆ. ಕಾರ್ಯಕರ್ತರಿಗಾಗಲೀ ಮುಖಂಡರಿಗಾಗಲೀ ಯಾವುದೇ ಹುದ್ದೆ ಇನ್ನೂ ಲಭ್ಯವಾಗಿಲ್ಲ. ನಿಗಮ, ಮಂಡಳಿಗಳ ಅಧ್ಯಕ್ಷ, ಸದಸ್ಯರ ಭರ್ತಿಗೆ ಕ್ರಮ ಕೈಗೊಂಡಿಲ್ಲ. ಸಚಿವ ಸ್ಥಾನ ಸಿಗದೆ ಇರುವ ಶಾಸಕರೂ ಪಕ್ಷಕ್ಕಾಗಿ ದುಡಿದ ಮುಖಂಡರೂ ಯಾವುದಾದರೂ ಒಂದು ಹುದ್ದೆ ಲಭ್ಯವಾಗಬಹುದೆಂಬ ನಿರೀಕ್ಷೆಯಲ್ಲಿಯೇ ಇದ್ದಾರೆ. ಆದರೆ ಅದು ಸಿಗುವ ಮುನ್ಸೂಚನೆ ಕಾಣುತ್ತಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಈಗ ಎರಡು ಶಕ್ತಿ ಕೇಂದ್ರಗಳಿವೆ. ಮೂರನೇ ಕೇಂದ್ರ ಹುಟ್ಟುವ ನಿರೀಕ್ಷೆ ಇದೆ. ಶಕ್ತಿ ಕೇಂದ್ರಗಳು ಹೆಚ್ಚಾದ ಹಾಗೆ ಪಕ್ಷ ಬಡವಾಗುತ್ತದೆ.


ಕಾಂಗ್ರೆಸ್ ಪಕ್ಷದ ಕತೆ ಹೀಗಾದರೆ, ಪ್ರಮುಖ ವಿರೋಧ ಪಕ್ಷ ಬಿಜೆಪಿಯದ್ದೂ ಅದೇ ಕತೆ. ಅಲ್ಲಿಯೂ ಕಾರ್ಯಕರ್ತರಿಗೂ ಗೌರವ ಇಲ್ಲ, ಮುಖಂಡರಿಗೂ ಗೌರವ ಇಲ್ಲ. ರಾಜ್ಯಮಟ್ಟದಲ್ಲಿ ಆ ಪಕ್ಷಕ್ಕೆ ಯಾರು ನಾಯಕರು ಎನ್ನುವುದೇ ತಿಳಿಯುತ್ತಿಲ್ಲ. ಸ್ಥಳೀಯ ನಾಯಕರಿಗೆ ಗೊತ್ತೇ ಆಗದಂತೆ ಕೇಂದ್ರದ ಮುಖಂಡರೇ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳುವ ನಿರ್ಧಾರ ಪ್ರಕಟಿಸುತ್ತಾರೆ. ಅದನ್ನು ಒಪ್ಪಬೇಕೋ ಬೇಡವೋ ಎನ್ನುವ ಗೊಂದಲ ಸ್ಥಳೀಯ ನಾಯಕರದ್ದು. ನಾಯಕನೇ ಇಲ್ಲದಿರುವುದರಿಂದ ಈಗ ಎಲ್ಲರೂ ನಾಯಕರು. ಒಬ್ಬೊಬ್ಬರು ಒಂದೊಂದು ಹೇಳಿಕೆ ನೀಡುತ್ತಿದ್ದಾರೆ.

ವಿಧಾನಸಭೆಯ ಸೋಲಿನಿಂದ ಕಂಗೆಟ್ಟಿರುವ ಕಾರ್ಯಕರ್ತರಲ್ಲಿ ಉತ್ಸಾಹ ತುಂಬುವ ಕೆಲಸ ನಡೆಯುತ್ತಿಲ್ಲ. 'ನಾವೂ ಜೀವಂತ ಇದ್ದೇವೆ' ಎಂದು ತೋರಿಸಿಕೊಳ್ಳಲು ಹೋರಾಟಗಳು ನಡೆಯುತ್ತಿವೆ. ಮಾತಿನ ಅಬ್ಬರ ಜೋರಾಗಿಯೇ ಇದೆ. ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಬೀಳಿಸಿ ಹೊಸ ಸರ್ಕಾರ ರಚಿಸುವ ಮಾತನ್ನು ಆಡುತ್ತಿದ್ದಾರೆ. ಅಧಿಕಾರದಿಂದ ಹೊರಬಂದ ಚಡಪಡಿಕೆ ಅವರಲ್ಲಿ ಕಾಣುತ್ತಿದೆ. ಒಬ್ಬರ ವಿರುದ್ಧ ಇನ್ನೊಬ್ಬರು ಆರೋಪ ಮಾಡುವ ಪರಿಪಾಟವೂ ಮುಂದುವರಿದಿದೆ. ಬರೀ ಗುಂಪು ರಾಜಕಾರಣ.

ಜಾತ್ಯತೀತ ಜನತಾದಳ ಕುಟುಂಬದ ಪಕ್ಷವೇ ಹೌದು ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ತಂದೆ, ಮಕ್ಕಳು ಸೇರಿ ಬಿಜೆಪಿ ಜೊತೆ ಹೊಂದಾಣಿಕೆಯ ತೀರ್ಮಾನ ಮಾಡುತ್ತಾರೆ. ರಾಜ್ಯ ಘಟಕದ ಅಧ್ಯಕ್ಷರು ಅದನ್ನು ವಿರೋಧಿಸಿದರೆ ರಾಜ್ಯ ಘಟಕವೇ ವಿಸರ್ಜನೆಯಾಗುತ್ತದೆ. ಅಲ್ಲೂ ಕಾರ್ಯಕರ್ತರು ಅನಾಥರೇ ಆಗಿದ್ದಾರೆ. ಒಟ್ಟಿನಲ್ಲಿ ಮೂರೂ ಪಕ್ಷಗಳಲ್ಲಿ ಕಾರ್ಯಕರ್ತರು ಮೂಲೆಗುಂಪಾಗಿದ್ದಾರೆ. ಅವರಿಗೆ ಮೂರು ಕಾಸಿನ ಬೆಲೆಯೂ ಇಲ್ಲ. ಈಗ ಮತದಾರರು ತಮ್ಮ ಘನತೆ ಉಳಿಸಿಕೊಳ್ಳಲು ಮೂರನ್ನೂ ಬಿಡಬೇಕಾಗಿದೆ. ಆ ಮೂಲಕ ದೊಡ್ಡವರಾಗಬೇಕಿದೆ.

ತಮ್ಮನ್ನು ಬಿಟ್ಟರೆ ಬೇರೆ ಗತಿ ಇಲ್ಲ ಎಂಬ ಭಾವನೆ ರಾಜಕೀಯ ಪಕ್ಷಗಳಿಗೆ ಇರಬಹುದು. ಆದರೆ, ಮತದಾರರು ಮನಸ್ಸು ಮಾಡಿದರೆ ಮತ್ತೊಂದು ಹುಟ್ಟಬಹುದು.

ಚುರುಮುರಿ



ಎಲ್ಲವ್ನ ಮುಸ್ಕು!

● ತುರುವೇಕೆರೆ ಪ್ರಸಾದ್

'ಲೇಯ್', ವಿಷಯ ಗೊತ್ತಾಯ್ತೇನ್ರೋ? ಎಲ್ಲವ್ನ ಮುಸ್ಕು ಅದ್ಯಾವುದೋ ಹೆಸ್ರು ಚೇಂಜ್ ಮಾಡುದ್ರೆ ಶಾನೆ ದುಡ್ ಕೊಡ್ತೀನಿ ಅಂತ ಯೋಳವ್ನಂತೆ' ಸಿಬಿರೆಬ್ಬಿದ ಗುದ್ಲಿಂಗ.

'ಅದು ಎಲ್ಲವ್ನ ಮುಸ್ಕು ಅಲ್ಲಲೇ ಎಲಾನ್ ಮಸ್ಕ್. ವಿಕಿಪೀಡಿಯಾ ಹೆಸ್ರನ್ನ ಡಿಕಿಪೀಡಿಯಾ ಮಾಡುದ್ರೆ ಒಂದು ಬಿಲಿಯನ್ ಡಾಲರ್ ಕೊಡ್ತೀನಿ ಅಂತ ರಾಕೆಟ್ ಹಾರ್ಸಿದಾರೆ'.

'ಯಪ್ಪೋ, ಒಂದು ಹೆಸ್ರು ಬದ್ಲಾಯ್ಸಕ್ಕೆ ಈಟೊಂದು ದುಡ್ಡಾ? ನಾನಾಗಿದ್ರೆ ಡಿಕ್ಕಿಪೀಡಿಯಾ ಅಂತಲೋ ಡುಮ್ಕಿಪೀಡಿಯಾ ಅಂತಲೋ ಬದ್ಲಾಯಿಸ್ಕಂಡ್ ಬುಡ್ತಿದ್ದೆ'.

'ಲೋ ಗುಲ್ಡು, ಅದು ನಿನ್ನ ಲೋಕಲ್ ಲೀಕಿಪೀಡಿಯಾ ಚಾನಲ್ ಅಲ್ಲ ಕಣಲೇ, ಇದೆಲ್ಲಾ ಮುಸ್ಕಿನ್ ಗುದ್ದು'.

'ಒಂದು ಬಿಲಿಯನ್ ಡಾಲರ್ ಅಂದ್ರೆ ಸುಮಾರು 8 ಸಾವಿರ ಕೋಟಿ ರೂಪಾಯಿ ಆಯ್ತು. ನಮ್ಮಲ್ಲಾಗಿದ್ರೆ ರಾತ್ರೋ ರಾತ್ರಿ ಮಸ್ಕು, ನೋ ರಿಸ್ಕು, ಯಾವ ಹೆಸರು ಬೇಕಾರೂ ಇಕ್ಕಂತಿದ್ರು'.

'ನಾವು ಹೆಸರು ಬದ್ಲಿಸೋದ್ರಲ್ಲಿ ನಿಸ್ಸೀಮರು. ಪುಕ್ಕಟೆ ರಾಜಕೀಯ ತೆವಲಿಗೇ ಅವಾಗವಾಗ ಹೆಸರು ಬದ್ಲಾಯಿಸ್ತೀರ್ತೀವಿ'.

'ಹ್ಯೂಂಕಣೇಳಪ್ಪ, ರಸ್ತೆ ಎಸರು ಬದ್ಲಾಯ್ಸೀವಿ, ಏರಿಯಾ ಹೆಸ್ರು, ಊರ್ ಹೆಸರು, ಅಪ್ಪ, ಅಮ್ಮನ ಹೆಸ್ರು ಎಲ್ಲಾ ಹಿಸ್ಟ್ರಿ ಅಳಿಸಿ ಪಾಮಿಸ್ಟ್ರಿ ಕೇಳಿ ರಾತ್ರೋ ರಾತ್ರಿ ಬೇರೆ ಮಾಡಿ ಮಡಗ್ಬುಡ್ತೀವಿ'.

'ಹೌದೌದು, ಕೈನೋರು ಆಳುವಾಗ ಮಡಗಿದ್ ಎಸರನ್ನ ಕಮಲ್ದೋರು ಕಿತ್ತಾಕ್ತಾರೆ, ಕಮಲ್ದೋರು ಬರ್ಸಿದ್ ಬೋರ್ಡ್‌ನ ಇವರು ಮುದ್ದಾರ್ತಾರೆ. ಎಲ್ಲಾ ಕಡೆ ಕುಲಾಕರ್ಮ ಎಬ್ಬಿವ್ರೆ. ಇಸ್ಕೂಲ್ ಮಕ್ಕಿಗಂತೂ ಕನ್‌ಫ್ಯೂಸೋ ಕನ್‌ಫ್ಯೂಸು!'

'ದೊಡ್ಡೋರ್ಗೂ ಕನ್‌ಫ್ಯೂಸ್ ಅದೆ. ಈ ದೇಶದ ಎಸ್ರೇ ಬದ್ಲುಸಕ್ಕೆ ಒಂಟವ್ರಲ್ಲ, ಅದ್ರಾಗೂ ಎಲ್ಲವ್ನ ಮುಸ್ಕು ಕೈವಾಡ ಇರಬೈದಾ?'

'ಅಹಾ! ನಿನ್ ತಲೇಲಿ ಸಗಣಿ ತುಂಬ್ಕೊಂಡಿದೆ ಅನ್ಸುತ್ತೆ' ರೇಗಿದ ಕಲ್ಲೇಶಿ.

'ಊ ಕಣ್ಲಾ! ಮರ್ತಿದ್ದೆ ನೋಡು, ಸಗಣಿ ಇಮೋಜಿ ಆಕ್ಕಳಿ ಅಂತ ಯೋಳವ್ರೆ ಮುಸ್ಕು'.

'ನಮ್ ನಾಯಕರಾಗಿದ್ರೆ ರಾತ್ರೋರಾತ್ರಿ ಸಗಣಿ ಇಮೋಜಿ ಹಾಕ್ಕಂಡು ಬಿಲಿಯನ್ನೂ ಬಾಚ್ಕಂಡ್ ಬುಡ್ತಿದ್ರು' ಎಂದ ಪರ್ಮೇಶಿ. ಎಲ್ಲಾ ಗೊಳ್ಳೆಂದು ನಕ್ಕರು.

ಸಂಗತ

ಪ್ರಬಲ ಸಂದೇಶ ರವಾನೆಯಾಗಲಿ

ವನ್ಯಜೀವಿಯ ಅಂಗಾಂಗಗಳನ್ನು ಅಕ್ರಮವಾಗಿ ಇರಿಸಿಕೊಂಡವರ ವಿರುದ್ಧ ಕಠಿಣ ಕ್ರಮ ಅಗತ್ಯ

● ಅಖಿಲೇಶ್ ಚಿಪ್ಪಳಿ

ವನ್ಯಜೀವಿ ಸಂರಕ್ಷಣಾ ಕಾಯ್ದೆ- 1972ರ ಜಾರಿಯ ಹೊತ್ತಿನಲ್ಲಿ ಕೇಂದ್ರ ಸರ್ಕಾರ ಸುತ್ತೋಲೆ ಹೊರಡಿಸಿ, ಯಾರ ಬಳಿಯಾದರೂ ವನ್ಯಜೀವಿಗಳಿಗೆ ಸಂಬಂಧಿಸಿದ ಚರ್ಮ, ದಂತ, ಉಗುರಿನಂತಹ ವಸ್ತುಗಳಿದ್ದರೆ ಸರ್ಕಾರಕ್ಕೆ ಒಪ್ಪಿಸಬೇಕು ಅಥವಾ ಅರಣ್ಯ ಇಲಾಖೆಯಿಂದ ಅನುಮತಿ ಪಡೆದು ಇಟ್ಟುಕೊಳ್ಳಬಹುದು ಎಂದು ಹೇಳಿತ್ತು. ತದನಂತರ, ರಾಜ್ಯ ಸರ್ಕಾರವೂ ಕೆಲವು ಬಾರಿ ಸುತ್ತೋಲೆ ಹೊರಡಿಸಿ, ಇಂತಹುದೇ ಸೂಚನೆ ನೀಡಿತ್ತು.

ಖ್ಯಾತನಾಮರು ಹುಲಿ ಉಗುರಿನ ಲಾಕೆಟ್‌ಗಳು, ಪೆಂಡೆಂಟ್‌ಗಳನ್ನು ಈವರೆಗೆ ಸಾರ್ವಜನಿಕವಾಗಿ ಪ್ರದರ್ಶಿಸುತ್ತಾ, ವನ್ಯಜೀವಿಗಳ ಸಂತತಿಯ ಕುಸಿತಕ್ಕೆ ಪರೋಕ್ಷವಾಗಿ ಕಾರಣರಾಗಿರುವುದು ಈ ನಾಡಿನ ದುರಂತ. ಟಿ.ವಿ. ಚಾನೆಲ್‌ವೊಂದರ ರಿಯಾಲಿಟಿ ಷೋ 'ಬಿಗ್‌ಬಾಸ್' ಸ್ಪರ್ಧಿಯೊಬ್ಬರ ಕತ್ತಿನಲ್ಲಿ ಇತ್ತೀಚೆಗೆ ತೂಗಾಡುತ್ತಿದ್ದ ಹುಲಿ ಉಗುರು ಆ ಸ್ಪರ್ಧಿಯ ಕುತ್ತಿಗೆಗೆ ಕಾನೂನು ಕುಣಿಕೆ ಬಿಗಿಯುವಂತೆ ಮಾಡಿದ ನಂತರ ಈ ವಿದ್ಯಮಾನ ಇನ್ನಿಲ್ಲದಂತೆ ಸುದ್ದಿ ಮಾಡುತ್ತಿದೆ.

ಅರಣ್ಯ ಇಲಾಖೆಯು ಮೈಕೊಡವಿ ಎದ್ದು, ಈ ದಿಸೆಯಲ್ಲಿ ಎಲ್ಲೆಡೆಯೂ ಕಾರ್ಯಾಚರಣೆ ನಡೆಸುತ್ತಿದೆ. ಕೆಲವು ಚಿತ್ರನಟರು ತಮ್ಮಲ್ಲಿದ್ದ ಹುಲಿ ಉಗುರನ್ನು ಇಲಾಖೆಗೆ ಒಪ್ಪಿಸಿ, ತಮಗೆ ಕಾನೂನಿನ ಅರಿವಿರಲಿಲ್ಲ ಎಂದು ಹೇಳಿಕೆ ನೀಡಿ, ಸಂಕಷ್ಟದಿಂದ ಪಾರಾದೆವು ಎಂದುಕೊಂಡಿದ್ದಾರೆ. ಕಾನೂನಿನ ಕುರಿತ ಅರಿವಿನ ಕೊರತೆಯ ಕಾರಣಕ್ಕೆ ಯಾರಿಗೇ ಆಗಲಿ ಶಿಕ್ಷೆಯಿಂದ ವಿನಾಯಿತಿ ಸಿಗುವುದಿಲ್ಲವೆಂದು ಸಂವಿಧಾನ ಎತ್ತಿ ಹೇಳಿದೆ. ಇದನ್ನು ಸಾರ್ವಜನಿಕರು ಮೊದಲು ಅರ್ಥ ಮಾಡಿಕೊಳ್ಳಬೇಕು. ಕಾಯ್ದೆ ಪ್ರಕಾರ, ಯಾವುದೇ ಆರೋಪಿಯು ಇಂತಹ ಪ್ರಕರಣದಲ್ಲಿ ಸಿಲುಕಿದರೆ, ತಾನು ಅಪರಾಧಿಯಲ್ಲ ಎಂದು ಸಾಬೀತುಪಡಿಸುವ ಕಾನೂನು ಪ್ರಕ್ರಿಯೆಯ ಹೊಣೆಯನ್ನು ಖುದ್ದು ಹೊತ್ತುಕೊಳ್ಳಬೇಕು. ಆದರೆ ಈಗ, ಅವರು ಇಲಾಖೆಗೆ ಒಪ್ಪಿಸಿದ ಹುಲಿ ಉಗುರುಗಳು ಅಸಲಿಯೋ ನಕಲಿಯೋ ಎಂಬುದನ್ನು ಕಂಡುಕೊಳ್ಳಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುವುದು ತಾರತಮ್ಯದ ನಡೆಯಾಗುತ್ತದೆ.

ಬಂಗಾರದ ಆಭರಣ ಮಳಿಗೆಗಳ ಕೆಲವು ಮಾಲೀಕರು ತಮ್ಮ ಗ್ರಾಹಕರಿಗೆ ಹುಲಿ ಉಗುರಿನ ಲಾಕೆಟ್, ಆನೆ ಬಾಲದ ಕೂದಲಿನ ಉಂಗುರಗಳನ್ನು ಮಾಡಿಕೊಡುವುದಾಗಿ ಆಮಿಷ ಒಡ್ಡುವುದು, ಅನುಕೂಲಸ್ಥರು ಇವರ ಬಲೆಗೆ ಬೀಳುವುದು ಸಾಮಾನ್ಯವಾಗಿದೆ. ದೊಡ್ಡ ಮಟ್ಟದ ಈ ದಂಧೆಯ ಮೂಲವನ್ನು ಇಲಾಖೆ ಶೋಧಿಸಬೇಕಾಗಿದೆ. ಈ ಮೊದಲು ಶಿವಮೊಗ್ಗದಲ್ಲಿ ಕೃಷಿಕರೊಬ್ಬರು ಅಕ್ರಮವಾಗಿ ಅಳವಡಿಸಿಕೊಂಡಿದ್ದ ವಿದ್ಯುತ್ ತಂತಿಗೆ ಸಿಲುಕಿ ಸತ್ತ ಎರಡು ಆನೆಗಳ ಬಾಲದಲ್ಲಿ ಕೂದಲುಗಳನ್ನು ಕಿತ್ತು ಸಾಗಿಸಿದ್ದರಲ್ಲಿ ತನ್ನ ಸಿಬ್ಬಂದಿಯೇ ಶಾಮೀಲಾಗಿದೆ ಎಂಬ ಸಾರ್ವಜನಿಕ ಸಂಶಯವನ್ನು ಇಲಾಖೆ ಎದುರಿಸಿತ್ತು. ಅಂತೂ ಈ ಪ್ರಕರಣ ತನಿಖೆಗೆ ಒಳಪಡದೇ ಮುಕ್ತಾಯಗೊಂಡಿತು.

ವೈಜ್ಞಾನಿಕವಾಗಿ ಹುಲಿ ಉಗುರಿನಲ್ಲಾಗಲಿ ಅಥವಾ ಕಾಡುಕೋಣದ ಕೊಂಬಿನಲ್ಲಾಗಲಿ ಯಾವುದೇ ವಿಶೇಷ ಶಕ್ತಿ ಇರುವುದಿಲ್ಲ, ಮನುಷ್ಯರ ಕೂದಲು ಹಾಗೂ ಉಗುರಿನಲ್ಲಿರುವ ಕೆರಟಿನ್ ಎಂಬ ರಾಸಾಯನಿಕ ಅಂಶವೇ ವನ್ಯಜೀವಿಗಳ ಉಗುರಿನಲ್ಲೂ ಇರುತ್ತದೆ ಎಂಬುದು ಅರ್ಥವಾದರೆ, ಎಷ್ಟೋ ವನ್ಯಜೀವಿಗಳ ಸಂರಕ್ಷಣೆಯಾಗುತ್ತದೆ. ಷೋಕಿಗಾಗಿಯೋ ಮೂಢನಂಬಿಕೆಯ ನೆಲೆಯಲ್ಲಿಯೋ ಹುಲಿ ಉಗುರನ್ನು ಧರಿಸುವ ಶ್ರೀಮಂತರು ಖುದ್ದಾಗಿ ಹುಲಿ ಬೇಟೆಯಾಡುವುದಿಲ್ಲ. ಆದರೆ ವನ್ಯಜೀವಿಗಳನ್ನು ಬೇಟೆಯಾಡಿ, ಅವುಗಳ ಅಂಗಾಂಗ ಹಾಗೂ ಮಾಂಸವನ್ನು ಮಾರುವ ದಂಧೆಕೋರರಿದ್ದಾರೆ.

ವನ್ಯಜೀವಿಗಳ ಸಂರಕ್ಷಣೆಗೆ ಕುತ್ತಾಗಿರುವ ಇನ್ನೊಂದು ಗಂಭೀರವಾದ ಸಂಗತಿ ಮಲೆನಾಡಿನಲ್ಲಿದೆ. ಅದೇ ಅಕ್ರಮ ಬಂದೂಕು. ಶಿವಮೊಗ್ಗ ಜಿಲ್ಲೆಯೊಂದರಲ್ಲೇ ಅನುಮತಿ ಪಡೆಯದ ಸುಮಾರು 5,000 ಬಂದೂಕುಗಳಿವೆ. ಇವುಗಳಿಗೆ ಬೇಕಾದ ಗನ್ ಪೌಡರ್, ಚರೆ, ಗುಂಡುಗಳನ್ನು ಅನಿಯಂತ್ರಿತವಾಗಿ ಮಲೆನಾಡಿನಲ್ಲಿ ಮಾರಲಾಗುತ್ತಿದೆ. ಶಸ್ತ್ರಾಸ್ತ್ರ ಸಂಗ್ರಹದ ವಿಷಯ ನೇರವಾಗಿ ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲವಾದರೂ, ಅದು ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವ ಮೂಲಕ ಅಕ್ರಮ ಬಂದೂಕು ತಯಾರಿಕಾ ಘಟಕಗಳನ್ನು ಹಾಗೂ ಹಾಲಿ ಅಕ್ರಮ ಬಂದೂಕುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕಾಗಿದೆ.



ಕೆಲ ವರ್ಷಗಳ ಹಿಂದೆ ರಾಜ್ಯ ಅರಣ್ಯ ಪಡೆಯ ಮುಖ್ಯಸ್ಥರಾಗಿದ್ದವರ ಐಷಾರಾಮಿ ಕೊಠಡಿಯಲ್ಲಿ, ಅವರ ಕುರ್ಚಿಯ ಹಿಂಭಾಗದಲ್ಲಿ ಸುಮಾರು 6 ಅಡಿ ಉದ್ದದ ಆನೆ ದಂತದ ಜೋಡಿಯನ್ನು ಕಮಾನಿನ ರೀತಿ ಜೋಡಿಸಿಡಲಾಗಿತ್ತು. 'ಇದೇನು ಸ್ವಾಮಿ, ಆನೆದಂತವನ್ನು ಹೀಗೆ ಬಳಸಿಕೊಳ್ಳುವುದು ಅಪರಾಧವಲ್ಲವೇ?' ಎಂದು ಕೇಳಿದಾಗ, 'ಇಲ್ಲ, ಈ ದಂತಗಳು ನಮ್ಮ ಇಲಾಖೆಯ ಹೆಮ್ಮೆ' ಎಂದು ಅವರು ತಮ್ಮ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದರು.

ಇದಕ್ಕೆ ಸರ್ಕಾರ ಅನುಮತಿ ನೀಡಿರಬಹುದು. ಆದರೆ, ಇಲಾಖೆಯ ಒಬ್ಬ ಉನ್ನತಾಧಿಕಾರಿ ಆನೆ ದಂತವನ್ನು ಹೀಗೆ ಪ್ರದರ್ಶನಕ್ಕೆ ಇಟ್ಟರೆ, ನೈತಿಕವಾಗಿ ಅದು ಸಾರ್ವಜನಿಕರಿಗೆ ಯಾವ ಬಗೆಯ ಸಂದೇಶವನ್ನು ನೀಡಬಹುದು?ಇಲಾಖೆಇದನ್ನುಮೊದಲುಪರಾಮರ್ಶಿಸಿಕೊಳ್ಳಬೇಕಾಗಿದೆ.

ಲಾಗಾಯ್ತಿನಿಂದ ಮನೆಯಲ್ಲಿ ಇಟ್ಟುಕೊಂಡ ಕಾಡುಕೋಣ, ಕಾನುಕುರಿ, ಜಿಂಕೆಯ ಕೊಂಬುಗಳನ್ನು ನಿಗದಿತ ಸಮಯದಲ್ಲಿ ಸರ್ಕಾರಕ್ಕೆ ಒಪ್ಪಿಸಬೇಕು ಎಂದು ಪ್ರಕಟಣೆ ನೀಡಲು, ಅದಕ್ಕೆ ತಪ್ಪಿದರೆ ಮತ್ತು ಅಕ್ರಮವಾಗಿ ಬಂದೂಕುಗಳನ್ನು ಹೊಂದಿದ್ದರೆ ಕಠಿಣ ಕ್ರಮ ಜರುಗಿಸಲು ಇಲಾಖೆ ಹಿಂಜರಿಯುವುದಿಲ್ಲ ಎಂಬ ಬಲವಾದ ಸಂದೇಶವನ್ನು ನೀಡುವುದು, ಮುಂದಿನ ದಿನಗಳಲ್ಲಿ ವನ್ಯಜೀವಿಗಳ ಸಂರಕ್ಷಣೆಯ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಗಲಿದೆ.

ವಾಚಕರ ವಾಣಿ

ಜಂಟಿ ಆಯುಕ್ತರ ಅತಿಯಾಸೆಗಾಯ್ತು ಶಾಸ್ತಿ

ಬೆಳಗಾವಿ ವಿಭಾಗದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತೆ ಲೋಕಾಯುಕ್ತ ಬಲೆಗೆ ಬಿದ್ದಿರುವುದು ವರದಿಯಾಗಿದೆ (ಪ್ರ.ವಾ., ಅ. 27). ವಿಕಾಸ ಕಂಪೋಸಿಟ್ಸ್ ಸಂಸ್ಥೆಯ ವ್ಯವಸ್ಥಾಪಕರು ಕಟ್ಟಿದ್ದ ₹ 41 ಸಾವಿರ ಜಿಎಸ್‌ಟಿ ಮೊತ್ತವನ್ನು ಮರಳಿ ಪಡೆಯುವುದಕ್ಕೆ ನೆರವಾಗಲು ಆಯುಕ್ತೆ ₹ 25 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು ಎಂದು ವರದಿಯಾಗಿದೆ. ಅಂದರೆ, ಅವರು ಮರಳಿ ಪಡೆಯಬೇಕಿದ್ದ ಹಣದಲ್ಲಿ ಇದು ಶೇ 60ಕ್ಕೂ ಹೆಚ್ಚಿನ ಪ್ರಮಾಣ. ಹೀಗಾಗಿ, ಆ ವ್ಯವಸ್ಥಾಪಕರು ಲೋಕಾಯುಕ್ತಕ್ಕೆ ದೂರು ನೀಡಿದ್ದು ಒಂದು ರೀತಿಯಲ್ಲಿ ಸರಿಯಾಗಿಯೇ ಇದೆ! ₹ 41 ಸಾವಿರಕ್ಕೆ ₹ 10 ಸಾವಿರ ಲಂಚ ಕೇಳಿದ್ದರೆ, ಅದು ಒಟ್ಟು ಮೊತ್ತದಲ್ಲಿ ಕಾಲು ಭಾಗದಷ್ಟಾಗುತ್ತಿತ್ತು. ಅತಿಯಾಸೆ ಗತಿಗೇಡು ಎಂಬಂತೆ ಆಗಿರಬಹುದು ಜಂಟಿ ಆಯುಕ್ತರ ಸ್ಥಿತಿ!

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಆಣೆ-ಪ್ರಮಾಣ: ನಂಬುವವರಾರು?

ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸರ್ಕಾರಿ ನೌಕರರ ವರ್ಗಾವಣೆ ಅಥವಾ ನೇಮಕಾತಿಯಲ್ಲಿ ಲಂಚ ಪಡೆದಿಲ್ಲವೆಂದು ಧರ್ಮಸ್ಥಳ ಮತ್ತು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಆಣೆ- ಪ್ರಮಾಣ ಮಾಡಲು ಪರಸ್ಪರ ಸವಾಲು ಹಾಕಿದ್ದಾರೆ. ಇದು, 'ದನ ತಿನ್ನುವವನಿಗೆ ಗೊಬ್ಬರದ ಮೇಲೆ ಆಣೆ' ಎನ್ನುವ ಗಾದೆ ಮಾತಿನಂತಿದೆ. ಜನರು ರಾಜಕಾರಣಿಗಳ ಮೇಲೆ ವಿಶ್ವಾಸವನ್ನು ಕಳೆದುಕೊಂಡು ಬಹಳಷ್ಟು ವರ್ಷಗಳೇ ಆಗಿವೆ. ಇಂದು ಬಹುಪಾಲು ರಾಜಕಾರಣಿಗಳು ನೈತಿಕತೆ ಉಳಿಸಿಕೊಂಡಿಲ್ಲ, ಭ್ರಷ್ಟರಾಗಿ ರಾಜಕಾರಣ ಮಾಡುತ್ತಿದ್ದಾರೆ. ಇವರು ಹೀಗೆಲ್ಲಾ ಮಾಡಿ ಜನರನ್ನು ನಂಬಿಸಲು ಸಾಧ್ಯವಿಲ್ಲ. ದೇವರ ಎದುರು ಆಣೆ- ಪ್ರಮಾಣ ಮಾಡುವ ಧೈರ್ಯವೂ ಹಲವರಿಗೆ ಇರುವುದಿಲ್ಲ. ಹೀಗಾಗಿ, ಇವೆಲ್ಲವೂ ಬರೀ ಸಾರ್ವಜನಿಕ ಮನರಂಜನೆಯಂತೆ ಆಗಿವೆ.

ಬೂಕನಕೆರೆ ವಿಜೇಂದ್ರ, ಮೈಸೂರು

ತರಕಾರಿಗಳಲ್ಲಿ ಭಾರಲೋಹ: ಮುನ್ನೆಚ್ಚರಿಕೆಯೇ ಮದ್ದು

ಬೆಂಗಳೂರಿನ ವಿವಿಧೆಡೆ ಮಾರಾಟವಾಗುತ್ತಿರುವ ತರಕಾರಿಗಳಲ್ಲಿ ವಿಷಕಾರಿ ಭಾರಲೋಹಗಳ ಸಾಂದ್ರತೆ ಮಿತಿಮೀರಿದ್ದು, ಕೊಳಚೆ ನೀರಿನಲ್ಲಿ ತರಕಾರಿ ಬೆಳೆಯುವುದನ್ನು ನಿಷೇಧಿಸಬೇಕು ಎಂಬ ಅರಣ್ಯ ಇಲಾಖೆಯ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಸಲಹೆಯು (ಪ್ರ.ವಾ., ಅ. 27) ಒಪ್ಪುವಂಥದ್ದು. ಆದರೆ, ಇಂತಹ ಆಹಾರ ಪದಾರ್ಥಗಳನ್ನು ಮಾರಾಟ ಮಾಡಿದರೆ ವ್ಯಾಪಾರಿಗಳಿಗೆ ಶಿಕ್ಷೆ ವಿಧಿಸುವ ಅವಕಾಶ ಕಾನೂನಿನಲ್ಲಿ ಇದೆ ಎಂಬ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಹೇಳಿಕೆಯು ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಂಬಂತಿದೆ!

ತರಕಾರಿ ಬೆಳೆಯಲು ಕೊಳಚೆ ನೀರು ಬಳಕೆಯಾಗಿದೆಯೇ ಇಲ್ಲವೇ ಎಂಬ ಮಾಹಿತಿಯನ್ನು ವ್ಯಾಪಾರಿಗಳು ಅಥವಾ ಗ್ರಾಹಕರು ಹೇಗೆ ತಿಳಿಯಲು ಸಾಧ್ಯ? ಆದ್ದರಿಂದ, ಮಾರುಕಟ್ಟೆ ಹಂತದಲ್ಲಿಯೇ ತರಕಾರಿಗಳ ಗುಣಮಟ್ಟದ ಪರೀಕ್ಷೆ ನಡೆಸುವ ವ್ಯವಸ್ಥೆಯಾಗಲಿ ಅಥವಾ ಮಾರುಕಟ್ಟೆಗೆ ತಲುಪುವುದಕ್ಕೆ ಮೊದಲು ಬೆಳೆ ಇನ್ನೂ ಜಮೀನಿನಲ್ಲಿ ಇರುವಾಗಲೇ ಅವುಗಳಿಗೆ ಉಪಯೋಗಿಸುತ್ತಿರುವ ನೀರು ಹಾಗೂ ಅಂಥ ನೀರಿನಲ್ಲಿ ಬೆಳೆದ ತರಕಾರಿಯ ಗುಣಮಟ್ಟವನ್ನು ಪರೀಕ್ಷೆಗೆ ಒಳಪಡಿಸುವ ವ್ಯವಸ್ಥೆಯನ್ನು ರೂಪಿಸಲು ಸರ್ಕಾರ ಚಿಂತನೆ ನಡೆಸಲಿ.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಯುದ್ಧ ಅಂದರೆ...

ಬಿರಿಯಾನಿ ಅಥವಾ
ಹೋಳಿಗೆ ಊಟವಲ್ಲ,
ಅದು ಸಾವು ನೋವಿನ ಗೂಡು,
ಸಾವಿರಾರು ಸಮಾಧಿಗಳ
ಮೇಲೆ ವಿಜೃಂಭಿಸುವ ಸಿಂಹಾಸನ,
ಈ ಯುದ್ಧ ತಕ್ಷಣವೇ ನಿಲ್ಲುವಂತಾಗಿ
ಪೋಸ್ಟರ್‌ಗಳಲ್ಲಿ ಇರುವ ಪಾರಿವಾಳ
ಆದಷ್ಟು ಬೇಗ ಸಜೀವವಾಗಿ
ಹಾರಾಡಲಿ!

ಎಚ್.ಕೆ.ಕೊಟ್ರಪ್ಪ, ಹರಿಹರ

ತುಘಲಕ್ ನೆನಪಿಸುವ ನಾಯಕರ ಸಮರ!

ರಾಮನಗರ ಜಿಲ್ಲೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಂದು ಮರುನಾಮಕರಣ ಮಾಡುವ ಕುರಿತಾಗಿ ಎದ್ದಿರುವ 'ಶಿವ-ಕುಮಾರ ಸಮರ' (ಪ್ರ.ವಾ, ಅ. 25) ಭಾರತದ ಇತಿಹಾಸದಲ್ಲಿ ತನ್ನ ಕೆಲವು ಅನಪೇಕ್ಷಿತ ನಿರ್ಧಾರಗಳಿಂದಾಗಿ ಬಹುಚರ್ಚಿತನಾಗಿರುವ ಮೊಹಮ್ಮದ್ ಬಿನ್ ತುಘಲಕ್‌ನನ್ನು ನೆನಪಿಗೆ ತರುತ್ತದೆ ಎಂದರೆ ಅತಿಶಯೋಕ್ತಿಯಾಗದು. ಈ ಮರುಳ ಸಮಾಜದಲ್ಲಿ ರಾಜಕೀಯದ ಲಾಭಕ್ಕಾಗಿ ಏನೆಲ್ಲಾ ಮಾಡಬಹುದು ಎಂಬುದೂ ತಿಳಿಯುತ್ತದೆ.

ನೆರೆಯ ಆಂಧ್ರಪ್ರದೇಶದಲ್ಲಿ ಅಂದಿನ ಮುಖ್ಯಮಂತ್ರಿ ವಿಜಯವಾಡ- ಗುಂಟೂರು ನಡುವಿನ ಪ್ರದೇಶವನ್ನು ಅಮರಾವತಿ ಎಂದು ಹೆಸರಿಸಿ, ಆ ರಾಜ್ಯದ ರಾಜಧಾನಿಯನ್ನಾಗಿ ಮಾಡಲೆತ್ನಿಸಿದರು. ನಂತರದಲ್ಲಿ ಇಂದಿನ ಮುಖ್ಯಮಂತ್ರಿ, ಅಮರಾವತಿ ಒಂದೇ ಏಕೆ ಎಂದು ಕರ್ನೂಲು ಮತ್ತು ವಿಶಾಖಪಟ್ಟಣವನ್ನೂ ರಾಜಧಾನಿಯಾಗಿ ಘೋಷಿಸಿದರು. ಕಡೆಗೆ ನ್ಯಾಯಾಲಯದ ಚಾಟಿಯಿಂದ ಅಮರಾವತಿಗೇ ಅಂಟಿಕೊಳ್ಳಬೇಕಾಯಿತು. ಇದೊಂದು ರೀತಿಯ ಮೋಜಿನಾಟ ಅಥವಾ ಬೇರೇನೆನ್ನಬೇಕೋ ತಿಳಿಯದು. ಭಲೇ! ಹೀಗೇ ನಡೆಯಲಿ ರಾಜಕಾರಣ.

ರಮೇಶ್, ಬೆಂಗಳೂರು

ಕನ್ನಡದ ಶುದ್ಧ ಬಳಕೆ ಇರಲಿ

ಚಂದನ ಕನ್ನಡ ವಾಹಿನಿಯು ಕನ್ನಡತನಕ್ಕೆ ಹೆಸರಾಗಿದೆ. ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎನ್ನುವ ಚಂದನ ದೂರದರ್ಶನದಲ್ಲಿ ಮೈಸೂರು ದಸರಾದ ನಿರೂಪಣೆ ಮಾಡಿದಂತಹ ಆ ಇಬ್ಬರು ಮಹನೀಯರ ಉಚ್ಚಾರಗಳು ಅಸಹನೀಯವಾಗಿದ್ದವು. 'ಹ' ಕಾರದ ಉಚ್ಚಾರಣೆ ಅವರಿಗೆ ಬರುತ್ತಿರಲಿಲ್ಲ. ಹೀಗಾಗಿ ಅವೆಲ್ಲವೂ 'ಅ' ಕಾರವನ್ನು ಅವಲಂಬಿಸಿದ್ದವು. 'ಹಾಸನ'ವನ್ನು 'ಆಸನ', 'ಹಿಂದೆ' ಎಂಬುದನ್ನು 'ಇಂದೆ' ಎಂದೆಲ್ಲ ಉಚ್ಚಾರಣೆ ಮಾಡಿದ್ದು ಕನ್ನಡ ನಾಡಿನ ಪ್ರೇಕ್ಷಕರಿಗೆ, ಕೇಳುಗರಿಗೆ ಅಸಹನೀಯವಾಗಿತ್ತು. ಕನ್ನಡ ನಾಡಿನಲ್ಲಷ್ಟೇ ಅಲ್ಲ ಜಗತ್ತಿನಾದ್ಯಂತ ಮೈಸೂರಿನ ಜಂಬೂಸವಾರಿಯ ನೇರಪ್ರಸಾರವನ್ನು ನೋಡಲು ಜನ ಕಾತರದಿಂದ ಕಾಯುತ್ತಿರುತ್ತಾರೆ. ಆದರೆ ಕನ್ನಡದ ಉಚ್ಚಾರಣೆಯನ್ನು ಸ್ಪಷ್ಟವಾಗಿ ಮಾಡಲು ಬಾರದವರನ್ನು ನಿರೂಪಣೆಗಾಗಿ ನೇಮಿಸಿದರೆ ಹೇಗೆ? ಕೆಲವು ಖಾಸಗಿ ಚಾನೆಲ್‌ಗಳಲ್ಲಂತೂ ಇಂತಹ ಹಲವು ತಪ್ಪುಗಳು ನಿತ್ಯವೂ ನಡೆಯುತ್ತಿರುತ್ತವೆ. ಆ ಬಗ್ಗೆ ಯಾರೂ ಹೆಚ್ಚು ತಲೆಕೆಡಿಸಿಕೊಳ್ಳದಿರುವುದು ದುರಂತ.

ಜಗದೀಶ ನೂಲಿನವರ, ಯಾದಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಣೆ

‘ತಾರತಮ್ಯ ನಿವಾರಣೆಯಲ್ಲಿ ವಿಫಲವಾದ ಸುಪ್ರೀಂ ಕೋರ್ಟ್’

• ನಮ್ರತಾ ಮುಖರ್ಜಿ



ಹಲವು ವರ್ಷಗಳಿಂದ ಸುಪ್ರೀಂ ಕೋರ್ಟ್, ತಾನೇ ಅನುಸರಿಸಿಕೊಂಡು ಬಂದಿದ್ದ ಸಮಾನತೆಯ ನ್ಯಾಯವಿವೇಚನೆಯ ಆಧಾರದಲ್ಲಿ ವೈವಾಹಿಕ ಸಮಾನತೆಯ ಪರ ತೀರ್ಪನ್ನು ನೀಡಬಹುದಿತ್ತು. ಕುತೂಹಲಕಾರಿ ಅಂಶವೇನೆಂದರೆ, ಎಲ್‌ಜಿಬಿಟಿಕ್ಯು+ ಸಮುದಾಯದವರಿಗೆ ವೈವಾಹಿಕ ಸಮಾನತೆ ನೀಡದಿರುವುದು ಅವರಿಗೆ ತೋರುವ ತಾರತಮ್ಯವಾಗಿದೆ ಎಂಬುದನ್ನು ಎಲ್ಲಾ ನ್ಯಾಯಮೂರ್ತಿಗಳೂ ಉಲ್ಲೇಖಿಸಿದ್ದಾರೆ. ಆದರೆ, ಇದಕ್ಕೆ ಪರಿಹಾರವನ್ನು ಮಾತ್ರ ಅವರು ನೀಡಲಿಲ್ಲ

ವೈವಾಹಿಕ ಸಮಾನತೆಯ ಪ್ರಕರಣದ ಕುರಿತು ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪೊಂದನ್ನು ನೀಡಿದೆ. ಈ ಬಗ್ಗೆ ಹಲವು ಅರ್ಜಿಗಳು ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿದ್ದವು. ಎಲ್‌ಜಿಬಿಟಿಕ್ಯು + ವ್ಯಕ್ತಿಗಳನ್ನು ಒಳಗೊಳ್ಳದೇ ಇರುವ 1954ರ ವಿಶೇಷ ವಿವಾಹ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿಯೇ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು. 3:2 ಬಹುಮತದ ತೀರ್ಪಿನಲ್ಲಿ ನ್ಯಾಯಾಲಯವು ವಿಶೇಷ ವಿವಾಹ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿ ಹಿಡಿದಿದೆ ಮತ್ತು ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಲು ನಿರಾಕರಿಸಿದೆ.

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಪ್ರತ್ಯೇಕ ಅಧಿಕಾರಗಳ ತತ್ವವನ್ನು ಮುಂದಿಟ್ಟುಕೊಂಡು ನ್ಯಾಯಾಲಯವು ತನ್ನ ತೀರ್ಪು ನೀಡಿದೆ. ವಿಶೇಷ ವಿವಾಹ ಕಾಯ್ದೆ ಅಡಿಯಲ್ಲಿ ಸಲಿಂಗ ವಿವಾಹಕ್ಕೆ ಅನುಮತಿ ನೀಡಬೇಕಾಗಿರುವುದು ನ್ಯಾಯಾಂಗದ ವ್ಯಾಪ್ತಿಗೆ ಬರುವುದಿಲ್ಲ. ಕಾನೂನುಗಳನ್ನು ತಿದ್ದುಪಡಿ ಮಾಡುವುದು, ಜಾರಿ ಮಾಡುವುದರ ಮೂಲಕ ವೈವಾಹಿಕ ಸಮಾನತೆ ನೀಡಬೇಕಾಗಿರುವುದು ಶಾಸಕಾಂಗದ ಕಾರ್ಯವ್ಯಾಪ್ತಿ ಎಂದು ನ್ಯಾಯಾಲಯ ಹೇಳಿದೆ. ವೈವಾಹಿಕ ಸಮಾನತೆ ನೀಡಬೇಕು ಎಂದಾದರೆ, ನಿರ್ವಹಣೆ, ಜೀವನಾಂಶ, ವಿಚ್ಛೇದನ ಮತ್ತು ಉತ್ತರಾಧಿಕಾರ... ಹೀಗೆ ಗೊಂಚಲು ಗೊಂಚಲಾಗಿರುವ ಕೌಟುಂಬಿಕ ಕಾನೂನುಗಳಿಗೆ ಆಮೂಲಾಗ್ರ ಸುಧಾರಣೆ ಮಾಡಬೇಕಾಗುತ್ತದೆ. ಈ ಕಾರಣಕ್ಕಾಗಿ ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಬೇಕಾಗಿರುವುದು ಶಾಸಕಾಂಗದ ಕೆಲಸ ಎಂದು ನ್ಯಾಯಾಲಯ ತನ್ನ ವಾದಕ್ಕೆ ಸಮರ್ಥನೆ ಮುಂದಿಟ್ಟಿದೆ.

ವಿವಾಹದ ಹಕ್ಕು ಮತ್ತು ತಾರತಮ್ಯ: ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಅವರ ಜೊತೆಯಲ್ಲಿ ಸಂಬಂಧ ಇರಿಸಿಕೊಳ್ಳುವುದು ಮೂಲಭೂತ ಹಕ್ಕು ಎಂದು ಪೀಠ ಹೇಳಿದೆ. ಹಾಗೆಂದು ಸರ್ಕಾರವು ಈ ಸಂಬಂಧಕ್ಕೆ ಕಾನೂನು ಮಾನ್ಯತೆ ನೀಡಬೇಕು ಎಂದೇನು ಇಲ್ಲ ಎಂದೂ ನ್ಯಾಯಾಲಯದ ಹೇಳಿದೆ.

ಹಲವು ವರ್ಷಗಳಿಂದ ಸುಪ್ರೀಂ ಕೋರ್ಟ್, ತಾನೇ ಅನುಸರಿಸಿಕೊಂಡು ಬಂದಿದ್ದ ಸಮಾನತೆಯ ನ್ಯಾಯವಿವೇಚನೆಯ ಆಧಾರದಲ್ಲಿ ವೈವಾಹಿಕ ಸಮಾನತೆಯ ಪರ ತೀರ್ಪನ್ನು ನೀಡಬಹುದಿತ್ತು. ಕುತೂಹಲಕಾರಿ ಅಂಶವೇನೆಂದರೆ, ಎಲ್‌ಜಿಬಿಟಿಕ್ಯು + ಸಮುದಾಯದವರಿಗೆ ವೈವಾಹಿಕ ಸಮಾನತೆ ನೀಡದಿರುವುದು ಅವರಿಗೆ ತೋರುವ ತಾರತಮ್ಯವಾಗಿದೆ ಎಂಬುದನ್ನು ಎಲ್ಲಾ ನ್ಯಾಯಮೂರ್ತಿಗಳೂ ಉಲ್ಲೇಖಿಸಿದ್ದಾರೆ. ಆದರೆ, ಇದಕ್ಕೆ ಪರಿಹಾರವನ್ನು ಮಾತ್ರ ಅವರು ನೀಡಲಿಲ್ಲ.

ಸಲಿಂಗ ವಿವಾಹಕ್ಕೆ ಸಂಬಂಧಿಸಿ ಪರಿಹಾರ ನೀಡುವುದಕ್ಕೆ ನ್ಯಾಯಾಲಯಕ್ಕೆ ಅಧಿಕಾರ ಇಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ. ಸಮಾನತೆಯ ಹಕ್ಕನ್ನು ಉಲ್ಲಂಘಿಸಿರುವುದಕ್ಕಾಗಿ ವಿಶೇಷ ವಿವಾಹ ಕಾಯ್ದೆಯು ಅಸಾಂವಿಧಾನಿಕವಾಗಿದೆ ಎಂದು ನ್ಯಾಯಮೂರ್ತಿ ಎಸ್.ಕೆ. ಕೌಲ್ ಅವರು ಅಭಿಪ್ರಾಯಪಡುತ್ತಾರೆ. ಆದರೆ, ಈ ಕಾಯ್ದೆಯನ್ನು ತೆಗೆದುಹಾಕಲು ನಿರಾಕರಿಸುತ್ತಾರೆ.

ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಿಲ್ಲದ ಕಾರಣಕ್ಕಾಗಿ ಎಲ್‌ಜಿಬಿಟಿಕ್ಯು + ಸಮುದಾಯದ ಜನರು ಉದ್ಯೋಗ, ಆರೋಗ್ಯ, ವ್ಯವಹಾರ, ಸಾಮಾಜಿಕ ಭದ್ರತೆ ಹಾಗೂ ಜೀವವಿಮೆಗಳಿಗೆ ಸಂಬಂಧಿಸಿ ಸಮಸ್ಯೆ ಎದುರಿಸುತ್ತಿದ್ದಾರೆ ಎಂಬುದನ್ನು ನ್ಯಾಯಮೂರ್ತಿ ರವೀಂದ್ರ ಭಟ್ ಅವರು ಒಪ್ಪಿಕೊಂಡಿದ್ದಾರೆ. ಇಂಥ ಅನ್ಯಾಯ ಮತ್ತು ಅಸಮಾನತೆಗಳು ಎಲ್‌ಜಿಬಿಟಿಕ್ಯು + ಸಮುದಾಯದವರಿಗೆ ತಾರತಮ್ಯವನ್ನು ಎದುರಿಸುವಂತೆ ಮಾಡಿದೆ ಎಂದೂ ಹೇಳುತ್ತಾರೆ. ಇಷ್ಟೆಲ್ಲಾ ಹೇಳಿದರೂ, ಎಲ್‌ಜಿಬಿಟಿಕ್ಯು + ವ್ಯಕ್ತಿಗಳ ಸಾಂವಿಧಾನಿಕ ಹಕ್ಕುಗಳನ್ನು ಮಾನ್ಯ ಮಾಡಲಿಲ್ಲ.

ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡದಿರಲು ಸುಪ್ರೀಂ ಕೋರ್ಟ್ ಮಂಡಿಸಿರುವ ವಾದವು, ಭಾರತ ಸರ್ಕಾರ ಮತ್ತು ನವತೇಜ್ ಜೋಹಾರ್ ಪ್ರಕರಣದಲ್ಲಿ ತಾನೇ ನೀಡಿದ್ದ ತೀರ್ಪನ್ನು ನಿರ್ಲಕ್ಷಿಸಿದೆ. ಲಿಂಗದ ಆಧಾರದಲ್ಲಿ ತಾರತಮ್ಯ ಮಾಡುವುದು ಸಂವಿಧಾನಬಾಹಿರ ಎಂದು ನವತೇಜ್ ಜೋಹಾರ್ ಪ್ರಕರಣದಲ್ಲಿ ನ್ಯಾಯಾಲಯ ಹೇಳಿತ್ತು. ತಾರತಮ್ಯ ನಿವಾರಣೆಗಾಗಿಯೇ ಕಾನೂನೊಂದನ್ನು ರಚಿಸಲಾಗುತ್ತದೆ. ಆದರೆ, ಈ ಕಾನೂನಿನ ಕೆಲವು ಅಂಶಗಳು ತಾರತಮ್ಯಕ್ಕೆ ಎಡೆಮಾಡಿಕೊಡುತ್ತದೆ. ಇದೇ ಪರೋಕ್ಷ ತಾರತಮ್ಯ ಎಂದು ಸ್ವತಃ ಸುಪ್ರೀಂ ಕೋರ್ಟ್ ಆ ಪ್ರಕರಣದಲ್ಲಿ ಅರ್ಥೈಸಿತ್ತು.

ಸಲಿಂಗ ವಿವಾಹ ಸಂಬಂಧದ ತೀರ್ಪು ನೀಡುವಾಗ ಸುಪ್ರೀಂ ಕೋರ್ಟ್ ಇಂಥ ಪರೋಕ್ಷ ತಾರತಮ್ಯಗಳು ಇರುವ ಹಲವು ಪ್ರಕರಣಗಳನ್ನು ನಿರ್ಲಕ್ಷಿಸಿದೆ. ಇದೇ ತೀರ್ಪಿನಲ್ಲಿ ಎಲ್‌ಜಿಬಿಟಿಕ್ಯು + ಸಮುದಾಯದವರು ಅನುಭವಿಸುವ ತಾರತಮ್ಯ ಹಾಗೂ ಅದರಿಂದಾಗುವ ಪರಿಣಾಮಗಳ ಬಗ್ಗೆ ನ್ಯಾಯಪೀಠವು ಉಲ್ಲೇಖಿಸಿತಾದರೂ ತಾರತಮ್ಯದ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗಲಿಲ್ಲ.

ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಿದರೆ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಪ್ರತ್ಯೇಕ ಅಧಿಕಾರಗಳು ತತ್ವಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ ಎನ್ನುವ ನ್ಯಾಯಾಲಯದ ಆತಂಕಕ್ಕೆ ಏನು ಕಾರಣ ಎಂಬುದನ್ನು ಯಾರಾದರೂ ಊಹಿಸಬಹುದು. ಇಲ್ಲಿ ಎರಡು ವಿಷಯಗಳಿವೆ. ಮೊದಲನೆಯದು: ಕೌಟುಂಬಿಕ ಕಾನೂನು ಹಾಗೂ ವಿವಾಹವು ಹೆಣ್ಣು ಮತ್ತು ಗಂಡನ್ನು ಪ್ರತ್ಯೇಕವಾಗಿ ನಡೆಸಿಕೊಳ್ಳುತ್ತದೆ. ಎರಡನೆಯದು: ನಿರ್ವಹಣೆ, ವಿಚ್ಛೇದನ, ಪೋಷಕತ್ವ, ಉತ್ತರಾಧಿಕಾರ... ಇಂಥ ಕೌಟುಂಬಿಕ ಕಾನೂನುಗಳಿಗೆ ವಿವಾಹವು ಮೊದಲ ಬಿಂದುವಾಗಿದೆ. ಈ ಬಿಂದುವಿನಿಂದಲೇ ಈ ಎಲ್ಲಾ ಕಾನೂನುಗಳು, ಹಕ್ಕುಗಳು, ರಕ್ಷಣೆಗಳನ್ನು ನೀಡಲಾಗುತ್ತದೆ. ಎಲ್‌ಜಿಬಿಟಿಕ್ಯು + ಸಮುದಾಯದ ಜನರಿಗೆ ವಿವಾಹದ ಹಕ್ಕು ಎಂಬುದನ್ನು ನಿರ್ವಾತದಲ್ಲಿ ಕಾರ್ಯಗತಗೊಳಿಸಲು ಸಾಧ್ಯವಿಲ್ಲ. ಇದಕ್ಕಾಗಿ ಕೌಟುಂಬಿಕ ಕಾನೂನುಗಳಲ್ಲಿ ಸುಧಾರಣೆ ತರಬೇಕಾಗುತ್ತದೆ. ವಿಶೇಷ ವಿವಾಹ ಕಾಯ್ದೆ ಹಾಗೂ ವೈಯಕ್ತಿಕ ಕಾನೂನುಗಳಿಗೂ ಇದು ಅನ್ವಯವಾಗುತ್ತದೆ.

ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ಸರಿಯಾಗಿಯೇ ಇದೆ. ಇದು ಶಾಸಕಾಂಗದ ಕಾರ್ಯವ್ಯಾಪ್ತಿಗೆ ಬರುತ್ತದೆ ಯಾದರೂ, ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡುವಲ್ಲಿ ಈ ‘ಕಾರ್ಯವ್ಯಾಪ್ತಿ’ಯ ತತ್ವವು ಅಡ್ಡಿ ಬರುವುದಿಲ್ಲ. ಇಡೀಯ ಕಾನೂನನ್ನೇ ರದ್ದು ಮಾಡುವ ಬದಲು, ತಾರತಮ್ಯಕ್ಕೆ ಕಾರಣ ವಾಗುತ್ತಿರುವ ಅಂಶಗಳನ್ನು ಅಮಾನ್ಯ ಎಂದು ಸುಪ್ರೀಂ ಕೋರ್ಟ್ ಘೋಷಣೆ ಮಾಡಬಹುದಿತ್ತು. ಒಂದೊಮ್ಮೆ ಕಾನೂನಿನ ಇಂಥ ಅಂಶಗಳು ಅಸಾಂವಿಧಾನಿಕ ಎಂದು ಪೀಠ ಹೇಳಿದ್ದರೆ, ಆಗ ಶಾಸಕಾಂಗವು ಸರಿಯಾದ ಕ್ರಮ ಕೈಗೊಳ್ಳಲು ಅನುವು ಮಾಡಿದಂತಾಗುತ್ತಿತ್ತು. ಸೂಕ್ತ ಕಾನೂನುಗಳು ಇಲ್ಲದ ಸಂದರ್ಭಗಳಲ್ಲಿ ಕಡ್ಡಾಯವಾಗಿ ಪಾಲನೆ ಮಾಡಲೇಬೇಕಾದ ಮಾರ್ಗಸೂಚಿಗಳನ್ನು ನ್ಯಾಯಾಲಯ ಈ ಹಿಂದೆ ಹಲವು ಬಾರಿ ಆದೇಶಿಸಿದೆ. ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡುವುದನ್ನು ಪರಿಶೀಲಿಸಿದ ಸಂದರ್ಭದಲ್ಲಿ ಈ ವಿಚಾರವನ್ನು ಸುಪ್ರೀಂ ಕೋರ್ಟ್ ಗಣನೆಗೆ ತೆಗೆದುಕೊಳ್ಳದ್ದರಿಂದ ಎಲ್‌ಜಿಬಿಟಿಕ್ಯು + ಸಮುದಾಯಕ್ಕೆ ಸಾಂವಿಧಾನಿಕ ಹಕ್ಕುಗಳನ್ನು ನಿರಾಕರಣೆ ಮಾಡಿದಂತಾಗಿದೆ. ಸಲಿಂಗ ವಿವಾಹವನ್ನು ಮಾನ್ಯ ಮಾಡುವುದನ್ನು ವಿರೋಧಿಸುವವರ ಕೈಗೇ ಎಲ್‌ಜಿಬಿಟಿಕ್ಯು + ಸಮುದಾಯದವರ ಭವಿಷ್ಯವನ್ನು ಕೊಟ್ಟಂತಾಗಿದೆ.

ಲೇಖಕಿ: ಹಿರಿಯ ರೆಸಿಡೆಂಟ್ ಫೆಲೊ, ವಿಧಿ ಸೆಂಟರ್ ಫಾರ್ ಲೀಗಲ್ ಲೆಗಸಿ



‘ನಿಸರ್ಗಕ್ಕೆ ವಿರುದ್ಧ ಹೋಗಲು ನ್ಯಾಯಾಲಯವೂ ಒಪ್ಪುವುದಿಲ್ಲ’

• ಎಸ್.ನಟರಾಜ ಶರ್ಮ



ನೈಸರ್ಗಿಕವಾಗಿ ನಡೆಯಬೇಕಾದ ಕ್ರಿಯೆಯ ವಿರುದ್ಧವಾಗಿ ನಡೆದುಕೊಂಡಾಗ ಅಂತಹ ವ್ಯಕ್ತಿಗಳ ಮೇಲೆ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕಾದ ಅವಕಾಶಗಳನ್ನು ನಮ್ಮ ಭಾರತೀಯ ದಂಡ ಸಂಹಿತೆಯಲ್ಲಿ ಈ ಹಿಂದೆ ಕಲ್ಪಿಸಿಕೊಡಲಾಗಿತ್ತು. ಆದರೆ ಇತ್ತೀಚಿನ ಬದಲಾದ ಕಾನೂನಿನ ತಿದ್ದುಪಡಿಗಳಲ್ಲಿ ಮತ್ತು ನ್ಯಾಯಾಲಯದ ಕೆಲವು ತೀರ್ಪುಗಳಲ್ಲಿ, ನೈಸರ್ಗಿಕ ಕ್ರಿಯೆಗೆ ವಿರುದ್ಧವಾದಂತಹ ಬೆಳವಣಿಗೆಗಳನ್ನು ಉತ್ತೇಜಿಸುತ್ತಿರುವುದನ್ನು ಕಾಣಬಹುದಾಗಿದೆ

ಭಾರತ ದೇಶದಲ್ಲಿ ಮದುವೆ ಎಂಬುದು ಒಂದು ಸಂಪ್ರದಾಯ ಮಾತ್ರವಲ್ಲದೆ ಇದು ಒಂದು ಪವಿತ್ರ ಅನುಬಂಧ. ಎರಡು ಕುಟುಂಬಗಳನ್ನು ಬೆಸೆಯುವ ಒಂದು ವಿಜೃಂಭಣೆಯ ಸಂಭ್ರಮ. ಗಂಡು ಮತ್ತು ಹೆಣ್ಣಿನ ಸಮ್ಮಿಲನದಿಂದ ಒಂದು ಕುಟುಂಬದ ವಂಶೋದ್ಧಾರಕನನ್ನು ಕಾಣುವ ಪವಿತ್ರ ಸಂಬಂಧ. ಇತ್ತೀಚಿನ ದಿನಗಳಲ್ಲಿ ತಾಂತ್ರಿಕ ಅಭಿವೃದ್ಧಿ, ಬಹು ರಾಷ್ಟ್ರೀಕರಣ, ಮನುಜನ ದುಡಿಮೆಯ ತುಡಿತ ಹೀಗೆ ಹಲವು ಕಾರಣಗಳಿಂದ ನಮ್ಮ ದೇಶದಲ್ಲಿಯೂ ಸಹ ಇತರ ದೇಶಗಳ ಮಾದರಿಯಲ್ಲಿ ಕೌಟುಂಬಿಕ ವ್ಯವಸ್ಥೆಯನ್ನು ಏರುಪೇರು ಮಾಡುವ ವಿಧಿಗಳು ಹುಟ್ಟಿಕೊಳ್ಳುತ್ತಿವೆ. ಜತೆಗೆ ಪ್ರಕೃತಿಗೆ ವಿರುದ್ಧವಾದ ಕ್ರಿಯೆ ಮತ್ತು ಕಾನೂನಿನ ಪರಿಮಿತಿ ಇಲ್ಲದ ವ್ಯವಸ್ಥೆಯು ಬರುತ್ತಿರುವುದನ್ನು ಕಾಣಬಹುದಾಗಿದೆ. ಇದಕ್ಕೆ ಪೂರಕವಾಗಿ ಬರುತ್ತಿರುವ ನ್ಯಾಯಾಲಯದ ತೀರ್ಪುಗಳು, ನಮ್ಮ ಕೌಟುಂಬಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಾಮದ ದೃಷ್ಟಿಯಿಂದ ನೋಡುವ ಮಟ್ಟಕ್ಕೆ ಇಳಿಯುತ್ತಿರುವುದು ಶೋಚನೀಯ.

ನಾಗರಿಕ ಸಮಾಜದ ಬೆಳವಣಿಗೆ ಮತ್ತು ಅಭಿವೃದ್ಧಿ ಎಂದು ಹೇಳಿ ಹಲವು ಬದಲಾವಣೆಗಳನ್ನು ತರಲಾಗಿದೆ. ಆದರೆ ನೈಸರ್ಗಿಕವಾಗಿ ನಡೆಯಬೇಕಾದ ಕೆಲವು ಕ್ರಿಯೆಗಳನ್ನು ನಾವು, ಅಭಿವೃದ್ಧಿ ಅಥವಾ ಬದಲಾವಣೆ ಎಂದು ಹೇಳಿಕೊಂಡು ಸಮಾಜದಲ್ಲಿ ಮತ್ತು ಸಾಮಾಜಿಕ ದೃಷ್ಟಿಯಲ್ಲಿ ತಪ್ಪು ಮಾಡುತ್ತಿರುವುದು ಎದ್ದು ಕಾಣುತ್ತಿದೆ.

ಸಲಿಂಗ ಮದುವೆ ಮತ್ತು ಸಲಿಂಗ ಕಾಮ ಎನ್ನುವುದು ಇತ್ತೀಚಿನ ದಿನಗಳಲ್ಲಿ ಬಹುದೊಡ್ಡ ಮಟ್ಟದಲ್ಲಿ ಚರ್ಚೆಯಲ್ಲಿರುವ ಮತ್ತು ವಿದೇಶಗಳಿಂದ ಆಮದು ಮಾಡಿಕೊಂಡಿರುವ ವಿಷಯ. ಇತರ ದೇಶಗಳಿಗೆ ನಮ್ಮ ದೇಶವನ್ನು ಹೋಲಿಸಿದರೆ, ಸಾಂಪ್ರದಾಯಿಕವಾಗಿ ಆಗಲಿ ಅಥವಾ ಇಲ್ಲಿನ ಕೌಟುಂಬಿಕ ವ್ಯವಸ್ಥೆಗೆ ಸಂಬಂಧಿಸಿ ಆಗಲಿ, ಬಹಳ ದೊಡ್ಡ ಮಟ್ಟದ ಅಂತರ ಅಥವಾ ವ್ಯತ್ಯಾಸವನ್ನು ಕಾಣಬಹುದಾಗಿದೆ. ಯಾವುದೇ ದೇಶ ಅಭಿವೃದ್ಧಿ ಹೊಂದುವುದು ನೈಸರ್ಗಿಕವಾಗಿ ನಡೆಯಬೇಕಾದ ಕ್ರಿಯೆ. ಅದಕ್ಕೆ ವಿರುದ್ಧವಾಗಿ ಹೋದಾಗ ಸಾಮಾಜಿಕ ವ್ಯವಸ್ಥೆಯೇ ಏರುಪೇರು ಆಗುತ್ತದೆ.

ಸಲಿಂಗ ಮದುವೆಯನ್ನು ಬೆಂಬಲಿಸಲು ನಿಂತಿರುವ ಕೆಲವು ಧ್ವನಿಗಳು ಅದರಿಂದ ಆಗುವ ಅಚಾತುರ್ಯದ ಬಗ್ಗೆ ಅಥವಾ ಅಂತಹ ಬೆಂಬಲದಿಂದ ಸಮಾಜದಲ್ಲಿ ನೈಸರ್ಗಿಕ ಕ್ರಿಯೆಗೆ ಉಂಟಾಗುವಂತಹ ಧಕ್ಕೆಯ ಬಗ್ಗೆ ಗಮನ ನೀಡಿದಂತಿಲ್ಲ. ಇದನ್ನು ಸಮಾಜದಲ್ಲಿ ಅಂಕುಶವಿಲ್ಲದ ಅಭಿವೃದ್ಧಿಯ ತುಡಿತ ಎಂದು ವಿಶ್ಲೇಷಿಸಬಹುದು. ಬದಲಿಗೆ, ನಮಗೆ ದೊರಕದ್ದನ್ನು ಹೊಂದಾಣಿಕೆ ಮಾಡಿಕೊಳ್ಳುವ ವಿಷಯ ಎಂದು ವಿಶ್ಲೇಷಿಸಲು ಸಾಧ್ಯವಿಲ್ಲ.

ಪ್ರತಿಯೊಂದು ಧರ್ಮದಲ್ಲೂ ಇರುವಂತಹ ಸಂಪ್ರದಾಯಕ್ಕೆ ತಕ್ಕಂತೆ ಮದುವೆ ಮತ್ತು ವಿಚ್ಛೇದನವನ್ನು ಕಾನೂನಿನ ಚೌಕಟ್ಟಿನಲ್ಲಿ ತರಲಾಗಿದೆ. ಹಿಂದೂ ವಿವಾಹ ಕಾಯ್ದೆ 1955, ಮುಸ್ಲಿಂ ವಿವಾಹ ಕಾನೂನು, ಕ್ರಿಶ್ಚಿಯನ್ ಪದ್ಧತಿ ಮತ್ತು ವಿಶೇಷ ವಿವಾಹ ಕಾಯ್ದೆಗಳಲ್ಲಿ ಎಲ್ಲಿಯೂ ಸಹ ಏಕ ಲಿಂಗಗಳ ಮದುವೆಯ ಪ್ರಸ್ತಾವನೆಯನ್ನು ಅಥವಾ ಅದಕ್ಕೆ ತತ್ಸಂಬಂಧವಾದ ಮಾಹಿತಿಯನ್ನು ಒದಗಿಸಿರುವುದಿಲ್ಲ. ನೈಸರ್ಗಿಕವಾಗಿ ನಡೆಯಬೇಕಾದ ಕ್ರಿಯೆಯ ವಿರುದ್ಧವಾಗಿ ನಡೆದುಕೊಂಡಾಗ ಅಂತಹ ವ್ಯಕ್ತಿಗಳ ಮೇಲೆ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕಾದ ಅವಕಾಶಗಳನ್ನು ನಮ್ಮ ಭಾರತೀಯ ದಂಡ ಸಂಹಿತೆಯಲ್ಲಿ ಈ ಹಿಂದೆ ಕಲ್ಪಿಸಿಕೊಡಲಾಗಿತ್ತು. ಆದರೆ ಇತ್ತೀಚೆಗೆ ಬದಲಾದ ಕಾನೂನಿನ ತಿದ್ದುಪಡಿಗಳಲ್ಲಿ ಮತ್ತು ನ್ಯಾಯಾಲಯದ ಕೆಲವು ತೀರ್ಪುಗಳಲ್ಲಿ, ನೈಸರ್ಗಿಕ ಕ್ರಿಯೆಗೆ ವಿರುದ್ಧವಾದಂತಹ ಬೆಳವಣಿಗೆಗಳನ್ನು ಉತ್ತೇಜಿಸುತ್ತಿರುವುದನ್ನು ಕಾಣಬಹುದಾಗಿದೆ.

ಒಂದೇ ಲಿಂಗದ ವ್ಯಕ್ತಿಗಳ ನಡುವಿನ ಸಂಬಂಧ ಕುರಿತು ದೊಡ್ಡಮಟ್ಟದ ಚರ್ಚೆಗಳು ಸಹ ನಡೆದಿವೆ. ಇದರ ಮಧ್ಯೆ ನೈಸರ್ಗಿಕ ಕ್ರಿಯೆಗೆ ಪರ್ಯಾಯವಾಗಿ ಬಳಸಬಹುದಾದ ಕೃತಕ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನ ಆಗುತ್ತಿದೆ. ನಾವು ಪ್ರಕೃತಿಗೆ ವಿರುದ್ಧವಾಗಿ ನಡೆಯಬೇಕು ಎಂಬುದನ್ನು ಸಮರ್ಥಿಸುವ ಯತ್ನವಾಗಿ ಇದನ್ನು ಅರ್ಥೈಸಬಹುದು. ಒಂದೇ ಲಿಂಗದ ನಡುವಿನ ಸಂಬಂಧಗಳು ಪ್ರಕೃತಿ ನಿಯಮದ ವಿರುದ್ಧವಾಗಿವೆ ಎಂದು ಈ ಮೇಲೆ ವಿಶ್ಲೇಷಿಸಲಾಗಿದೆ. ಈ ರೀತಿಯಾದಂತಹ ಘಟನೆಗಳು ಮುಂದುವರಿದಲ್ಲಿ ಸಾಮಾಜಿಕವಾಗಿ ಮತ್ತು ಸಮಾಜದಲ್ಲಿ ಏರುಪೇರು ಆಗುವುದು ಖಂಡಿತ. ಈ ವಿಷಯವನ್ನು ವೈದ್ಯಕೀಯ ರಂಗದ ಬೆಳವಣಿಗೆ ಎಂದು ಅರ್ಥೈಸದೆ, ಪ್ರಕೃತಿಗೆ ವಿರುದ್ಧವಾದ ಕಾರ್ಯ ಎಂದು ಭಾವಿಸಿದಾಗ ಮಾತ್ರ ಒಂದೇ ಲಿಂಗದ ನಡುವಿನ ಸಂಬಂಧಗಳು ಮತ್ತು ಮದುವೆ ಸರಿಯಲ್ಲ ಎಂಬ ನಿಲುವಿಗೆ ಬರಲು ಸಾಧ್ಯ.

ವೈದ್ಯಕೀಯ ರಂಗದಲ್ಲೂ ಸಹ ಈ ವಿಷಯಕ್ಕೆ ಸಂಬಂಧಿಸಿದಂತೆ ಪರ ಮತ್ತು ವಿರೋಧದ ಚರ್ಚೆಗಳು ನಡೆಯುತ್ತಿದೆ. ಹಾಗಾಗಿ ವಿರೋಧಿಸುವ ಒಂದು ವರ್ಗ ಒಂದೇ ಲಿಂಗದ ನಡುವಿನ ಮದುವೆ ಅಥವಾ ಕ್ರಿಯೆಗಳು ಮಾನಸಿಕ ಕಾಯಿಲೆ ಎಂಬುದಾಗಿ ವಿಶ್ಲೇಷಿಸಿದೆ. ಇದನ್ನು ಸರಿ ಎಂದು ಪ್ರತಿಪಾದಿಸುವ ಇನ್ನೊಂದು ವರ್ಗವು ಇದು ವೈದ್ಯಕೀಯ ರಂಗದ ಅಭಿವೃದ್ಧಿ ಮತ್ತು ಉತ್ತುಂಗ ಎಂದು ಕೊಂಡಾಡುತ್ತಿದೆ.

ಒಂದೇ ಲಿಂಗದ ಮದುವೆಯನ್ನು ಕಾನೂನಿನ ವ್ಯಾಪ್ತಿಗೆ ತರುವ ದೊಡ್ಡಮಟ್ಟದ ಯತ್ನ ನಡೆಯುತ್ತಿದೆ. ಇದನ್ನು ಕಾನೂನಿನ ವ್ಯಾಪ್ತಿಗೆ ತಂದರೆ, ಸಮಾಜದಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತದೆ. ಪ್ರಚಲಿತದಲ್ಲಿರುವ ಪ್ರತಿಯೊಂದು ವಿಷಯದಲ್ಲೂ ಕಾನೂನಾತ್ಮಕವಾಗಿ ‘ತಾರತಮ್ಯ’ ಎಂಬ ಪದವನ್ನು ಬಹಳ ಆಕರ್ಷಕವಾಗಿ ಬಳಸಲಾಗುತ್ತಿದೆ. ಇಂದು ಒಂದೇ ಲಿಂಗದ ಮದುವೆಗೆ ಕಾನೂನಿನ ಅಡಿಯಲ್ಲಿ ಅವಕಾಶ ಮಾಡಿಕೊಡಿ ಎಂದು ನ್ಯಾಯಾಲಯದಲ್ಲಿ ಕೋರಲು ಇದೇ ಪದವನ್ನು ಬಳಸಿಕೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದ ಹಾಗೆ ನ್ಯಾಯಾಲಯವು ಕಾನೂನು ಮಾನ್ಯತೆಯನ್ನು ನೀಡಲು ನಿರಾಕರಿಸಿದೆ. ಪ್ರಕೃತಿಯ ವಿರುದ್ಧವಾಗಿ ಹೋಗಲು ನ್ಯಾಯಾಲಯಗಳು ಒಪ್ಪುವುದಿಲ್ಲ ಎಂಬುದನ್ನು ನ್ಯಾಯಾಲಯದ ತೀರ್ಪಿನಲ್ಲಿ ಕಾಣಬಹುದಾಗಿದೆ. ನ್ಯಾಯಾಲಯವು ಸಹ ದೂರದೃಷ್ಟಿಯನ್ನು ಇಟ್ಟುಕೊಂಡು ಸಮಾಜದಲ್ಲಿ ಆಗಬಹುದಾದಂತಹ ಕೆಟ್ಟ ಪರಿಣಾಮ ಎಂಬುದನ್ನು ತನ್ನ ತೀರ್ಪಿನಲ್ಲಿ ಉಲ್ಲೇಖಿಸದೇ ಇದ್ದರೂ, ಪ್ರಜ್ಞಾವಂತ ಓದುಗ ಹೀಗೇ ಅರ್ಥಮಾಡಿಕೊಳ್ಳಬಹುದಾದ ತೀರ್ಪು ಇದಾಗಿದೆ.

ಪ್ರಕೃತಿಯು ತನ್ನದೇ ಆದ ಸಾಮರ್ಥ್ಯದೊಂದಿಗೆ ಇಂದು ಭೂಮಿಯ ಮೇಲೆ ಮಾನವನಿಗೆ ಮಾತ್ರವಲ್ಲದೆ ಪ್ರಾಣಿ, ಪಕ್ಷಿ, ಗಿಡ, ಮರ ಇವುಗಳ ನಡುವೆಯೂ ಸಹ ಲಿಂಗಭೇದವನ್ನು ಸೃಷ್ಟಿಸಿದೆ. ಮಾನವನ ಪ್ರಯತ್ನಗಳು, ಅಭಿವೃದ್ಧಿ, ಶೋಧನೆಗಳು ಎಲ್ಲವೂ ಕಾಲಮಿತಿ ಒಳಗೆ ಮತ್ತು ಕಾಲಕ್ಕೆ ತಕ್ಕಂತೆ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತದೆ. ಆದರೆ ಪ್ರಕೃತಿಯ ನಿಯಮ, ಸೃಷ್ಟಿ ಸದಾ ತನ್ನನ್ನು ಕಾಪಾಡಿಕೊಳ್ಳಲು ತಾನು ಶಕ್ತ ಎಂದು ನಿರೂಪಿಸುತ್ತದೆ.

ಲೇಖಕ: ಕರ್ನಾಟಕ ಹೈಕೋರ್ಟ್ ವಕೀಲ

ನಾವು ನೋಡಿದ ಸಿನಿಮಾ

ಹದದ ಒಗ್ಗರಣೆಯ ಪಲ್ಯ

ಟಗರು ಪಲ್ಯ

ನಿರ್ಮಾಣ : ಡಾಲಿ ಧನಂಜಯ
ನಿರ್ದೇಶನ : ಉಮೇಶ್ ಕೆ. ಕೃಪ
ಪಾತ್ರವರ್ಗ : ನಾಗಭೂಷಣ, ಅಮೃತಾ ಪ್ರೇಮ್, ರಂಗಾಯಣ ರಘು, ತಾರಾ ಅನುರಾಧಾ ಮತ್ತಿತರರು

ಮಂಡ್ಯದ ಒಂದೂರಲ್ಲಿ ಗೌಡರ ಮಗಳ ಮದುವೆ ಸಂಭ್ರಮ. ಹುಡುಗ–ಹುಡುಗಿಗೆ ಮದುವೆ ನಿಕ್ಕಿ ಮಾಡುವ ಮೊದಲು ಊರದೇವಿಗೆ ಪೂಜೆ ನೀಡುವ ವಾಡಿಕೆ. ಬೆಳಗಿನ ಜಾವದಲ್ಲಿ ಊರಿನವರೆಲ್ಲ ದಟ್ಟ ಕಾಡಿನ ನಡುವಿನ ನದಿ ತೀರದಲ್ಲಿರುವ ದೇವಿಯ ತಾಣಕ್ಕೆ ಹೊರಡುವುದರಿಂದ ‘ಟಗರು ಪಲ್ಯ’ ಸಿನಿಮಾ ಪ್ರಾರಂಭವಾಗುತ್ತದೆ. ಟಗರು ಸತಾಯಿಸಿ ಸತಾಯಿಸಿ ತಲೆ ಒದರಿ, ಪೂಜೆ ಮುಗಿಯುವ ಹೊತ್ತಿಗೆ ಸಿನಿಮಾವೂ ಮುಗಿದಿರುತ್ತದೆ. ಮುಂಜಾನೆಯಿಂದ ಸಂಜೆಯೊಳಗೆ ನಡೆಯುವ ‘ಪಲ್ಯ’ದ ಸಣ್ಣ ಕಥೆಯನ್ನು ಹದವಾದ ಒಗ್ಗರಣೆಯೊಂದಿಗೆ ತೆರೆಯ ಮೇಲೆ ತರುವ ಯತ್ನದಲ್ಲಿ ಯಶಸ್ವಿಯಾಗಿದ್ದಾರೆ ನಿರ್ದೇಶಕ ಉಮೇಶ್ ಕೆ. ಕೃಪ.

ಹುಡುಗಿಗೆ ಈ ಮದುವೆ ಇಷ್ಟವಿಲ್ಲ; ಮತ್ತೊಬ್ಬ ಹುಡುಗನನ್ನು ನೋಡಿಕೊಂಡಿದ್ದಾಳೆ ಎಂಬುದನ್ನು ನಿರ್ದೇಶಕರು ಮೊದಲ ದೃಶ್ಯದಲ್ಲಿಯೇ ಹೇಳಿಬಿಡುತ್ತಾರೆ. ಹೀಗಾಗಿ ಸಿನಿಮಾ ಶುರುವಾಗಿ 10 ನಿಮಿಷದೊಳಗೆ ಕಥೆಯನ್ನು ಊಹಿಸಿಬಿಡಬಹುದು. ಆದರೆ ನಿರೂಪಣೆ ಬಹಳ ಸಹಜವಾಗಿ, ಒಂದಿಡೀ ಊರನ್ನು ಕಣ್ಣಮುಂದೆ ಕಟ್ಟಿಕೊಡುವಂತಿದೆ. ಇದು ಚಿತ್ರದ ದೊಡ್ಡ ಸಕಾರಾತ್ಮಕ ಅಂಶ. ಊರಿನ ಗೌಡರಾಗಿ, ಮದುವೆ ಹುಡುಗಿಯ ಅಪ್ಪನಾಗಿ ರಂಗಾಯಣ ರಘು ನಟಿಸಿದ್ದಾರೆ. ಪತ್ನಿಯಾಗಿ ತಾರಾ ಜೊತೆಯಾಗಿದ್ದಾರೆ. ನಾಯಕ ನಾಗಭೂಷಣ್ ಗೌಡರ ಅಳಿಯ ‘ಚಿಕ್ಕ’ನಾಗಿ ಇಷ್ಟವಾಗುತ್ತಾರೆ. ಸಾಮಾನ್ಯವಾಗಿ ನಗಿಸುವ ಪಾತ್ರಗಳಲ್ಲಿಯೇ ಕಾಣಿಸಿಕೊಂಡಿದ್ದ ನಾಗಭೂಷಣ್ ಇಲ್ಲಿ ನಗಿಸುವುದಕ್ಕಿಂತ ಹೆಚ್ಚಾಗಿ ಭಾವುಕರಾಗಿ ನಟಿಸಿದ್ದಾರೆ. ಗೌಡರ ಮಗಳಾಗಿ ನಾಯಕಿ ಅಮೃತಾ ಪ್ರೇಮ್ ಕಾಣಿಸಿಕೊಂಡಿದ್ದು, ಮೊದಲ ಸಿನಿಮಾ ಎನ್ನಿಸದಷ್ಟು ಚೆನ್ನಾಗಿ ನಟಿಸಿದ್ದಾರೆ. ಮೊದಲಾರ್ಧದಲ್ಲಿ ಇವರ ಪಾತ್ರಕ್ಕೆ ಅಷ್ಟೊಂದು ಪ್ರಾಮುಖ್ಯ ನೀಡಿಲ್ಲ. ಕ್ಲೈಮ್ಯಾಕ್ಸ್ ವೇಳೆ ಮಗಳ ಮನದೊಳಗಿನ ತಳಮಳದ ಮಾತುಗಳೊಂದಿಗೆ ಕಣ್ಣಂಚಿನಲ್ಲಿ ನೀರು ತರಿಸುವ ನಟನೆ ಮಾಡಿದ್ದಾರೆ.



ರಂಗಾಯಣ ರಘು ಹಾಗೂ ತಾರಾ ಪಾತ್ರಗಳೇ ತಾವಾಗಿ ಆವರಿಸಿಕೊಂಡುಬಿಡುತ್ತಾರೆ. ಪೇಟೆಯ ಹುಡುಗನಾಗಿ ಬರುವ ವಾಸುಕಿ ವೈಭವ್ ಇಷ್ಟವಾಗುತ್ತಾರೆ. ಆದರೆ ಪೇಟೆಯ ಹುಡುಗರನ್ನು ಕುರಿಯ ಹಿಕ್ಕೆಯನ್ನೂ ಗುರುತಿಸಲಾಗದಷ್ಟು ದಡ್ಡರು ಎಂಬಂತೆ ತೋರಿಸಿರುವುದು ಸ್ವಲ್ಪ ಕಿರಿಕಿರಿ ಮೂಡಿಸುತ್ತದೆ. ಬಹುತೇಕ ಎಲ್ಲ ಕಲಾವಿದರು ಅವರವರ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ವಾಸುಕಿ ವೈಭವ್ ಹಿನ್ನೆಲೆ ಸಂಗೀತ ದೃಶ್ಯಗಳಿಗೆ ಸೂಕ್ತವಾಗಿದೆ. ಆದರೆ, ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಜೊತೆಗೆ ಎರಡು ಹಾಡುಗಳು ಈ ಕಥೆಗೆ ಅಗತ್ಯವೂ ಆಗಿರಲಿಲ್ಲ. ಕುಡಿತವನ್ನೇ ಹಾಸ್ಯದ ಪ್ರಮುಖ ಸರಕಾಗಿಸಿಕೊಂಡಿರುವುದು, ಅರ್ಧದಷ್ಟು ಪಾತ್ರಗಳು ‘ಎಣ್ಣೆ’ಯ ನಶೆಯಲ್ಲಿರುವುದು, ಅವವೇ ದೃಶ್ಯಗಳ ಮರುಕಳಿಸುವಿಕೆಯಿಂದ ಮೊದಲಾರ್ಧ ಬಿಗಿ ಕಳೆದುಕೊಳ್ಳುತ್ತದೆ. ಇರುವ ಮಿತಿಯಲ್ಲಿ ದೃಶ್ಯಗಳನ್ನು ವರ್ಣಮಯವಾಗಿಸಲು ಛಾಯಾಗ್ರಾಹಕ ಎಸ್.ಕೆ.ರಾವ್ ಯತ್ನಿಸಿದ್ದಾರೆ. ಆದರೆ ಇಡೀ ಕಥೆ ನಡೆಯುವುದು ಒಂದೇ ಸ್ಥಳದಲ್ಲಿ ಮತ್ತು ತೀರ ಸಹಜವಾಗಿ. ಹೀಗಾಗಿ ಅಲ್ಲಲ್ಲಿ ಚಿತ್ರ ಧಾರಾವಾಹಿ ಅನುಭವ ನೀಡುತ್ತದೆ.

ಅಮೃತ–ಚಿಕ್ಕನ ಪ್ರೇಮವನ್ನು ಇನ್ನಷ್ಟು ಗಾಢವಾಗಿಸಿ, ಅವರ ಹಳೆಯ ನೆನಪುಗಳೊಂದಿಗೆ ಕಥೆ ನಡೆಸುವ ಸ್ಥಳವನ್ನು ಬದಲಿಸಿ, ತಾರಾ ಅವರ ಅನೇಕ ಮಾತುಗಳನ್ನು ದೃಶ್ಯಗಳ ರೂಪದಲ್ಲಿಯೇ ತೋರಿಸಿ ಒಂದಷ್ಟು ದೃಶ್ಯಗಳನ್ನು ವರ್ಣಮಯವಾಗಿಸುವ ಅವಕಾಶವನ್ನು ನಿರ್ದೇಶಕರು ಕೈಚೆಲ್ಲಿದ್ದಾರೆ. ಇಂತಹ ಸಣ್ಣ,ಪುಟ್ಟ ಸಂಗತಿಗಳನ್ನು ಸರಿಪಡಿಸಿದ್ದರೆ, ಇವತ್ತಿಗೆ ಅತ್ಯಗತ್ಯವಾದ ಸಂಬಂಧಗಳ ಮೌಲ್ಯವನ್ನು ಹೇಳಿರುವ ಘಮ್ಮೆನ್ನುವ ಒಗ್ಗರಣೆಯ ಪಲ್ಯವೇ ಆಗುತ್ತಿತ್ತೇನೋ.

-ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5483


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.4.ಜಗದೆಲ್ಲೆಡೆ ವದನವುಳ್ಳವನು (5)
5.ನಾಶವಾಗದ ವರ್ಣ (3)
6.ದ್ರವ ಒಸರುವ ಜಿಹ್ವೆ (3)
8.ತರಗತಿಯಲ್ಲಿರುವ ಸಮೂಹ (2)
11.ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು (3)
12.ಕಮ್ಮಾರನ ಕೈ! (2)
14.ಪ್ರತಿನಿಧಿ ಇಲ್ಲಿದ್ದಾನೆ (3)
17.ನೂಲುವ ರಾಟೆ (3)
18.ಮತ್ತೆ ಉದಯಿಸುವುದು (5)

ಮೇಲಿಂದ ಕೆಳಕ್ಕೆ

1.ನಿರಂತರವಾದುದನ್ನು ಹೀಗೆ ಹೇಳಿ (4)
2.ಆನಂದ ಈ ರೀತಿ ಬಂದಿದೆ (3)
3.ಅತೀ ತೀಕ್ಷ್ಣವಾದುದು (3)
5.ಒಂದನ್ನೊಂದು ಅಗಲದೇ ಇರುವಿಕೆ (5)
7.ಮನುಷ್ಯರನ್ನು ತಿನ್ನುವ ಪ್ರಾಣಿ (5)
9.ಅಮೂಲ್ಯ ವಸ್ತುಗಳನ್ನಿಡುವ ಕಬ್ಬಿಣದ ಪೆಟ್ಟಿಗೆ (3)
10.ರೋಮಾಂಚನ ಎಂದು ಹೀಗೆ ಹೇಳಿ (3)
13.ಬೇಡನಿಲ್ಲಿ ತಿರುಗಿದ್ದಾನಲ್ಲಾ! (4)
15.ಉಲ್ಟಾ ಪಲ್ಟಾ ಆಗಿರುವ ಗೆಜ್ಜೆ (3)
16.ಚರಪು ತಿನ್ನಲು ತೋರಿದ ಉತ್ಸಾಹ! (3)



5482ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತೋಪು
3.ಸಡಗರ
5.ಕಮಲ
7.ವನವಾಸ
9.ಬಸದಿ 10.ಪರಿಧಿ
11.ಗರಿಮುರಿ 13.ವರಸೆ
15.ಯಜುರ್ವೇದ
16.ಗುಟ್ಟು

ಮೇಲಿಂದ ಕೆಳಕ್ಕೆ:
12.ಪುಸ್ತಕ 3.ಸಲಿಲ
4.ಗಡವ 6.ಮಸೀದಿ
8.ಸಮಾಧಿ 9.ಬಡಗ
10.ಪದರ 12.ರಿವಾಜು
13.ವಸ್ತ್ರಾದ 14.ಸೆರಗು

ಸುಡೊಕು 5869

	2	1		5		8	4	
8			3		9			1
	4			1				7
	3	2				7		6
				7			9	
7	9							5
3	1		9				7	
				8		1	6	9
	6	9			1		3	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5868 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಅಕ್ಟೋಬರ್ 28, 2023

ಶ್ರೀಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಪೂರ್ಣಿಮಾ ಗಂ. 25-54 ನಕ್ಷತ್ರ: ರೇವತಿ ಗಂ. 07-31 ನಂತರ ಅಶ್ವಿನಿ ಗಂ. 29-54 **ಯೋಗ:** ವಜ್ರ ಗಂ 22-52 ಕರಣ: ವಿಷ್ಟಿ ಗಂ.15-04, ತುಲಾ ಮಾಸದ 11 ನೇ ದಿನ, ಮಳೆನಕ್ಷತ್ರ: ಸ್ವಾತಿ 1. ರಾಹುಕಾಲ: ಬೆಳಿಗ್ಗೆ 09-00 - 10-30 ಸೂರ್ಯೋದಯ: 06-27 ಸೂರ್ಯಾಸ್ತ: 06-02 ಮುಸ್ಲಿಂ ದಿನಾಂಕ: 11 ರಬಿಯುಸ್ಸಾನಿ **ದಿನ ವಿಶೇಷ:** ಭಾಗಷಃ ಚಂದ್ರಗ್ರಹಣ (ಭಾರತದಲ್ಲಿ ಗೋಚರ), ಶರತ್ ಪೂರ್ಣಿಮಾ, ಮಹರ್ಷಿ ವಾಲ್ಮೀಕಿ ಜನ್ಮದಿನ, ಓಳಿ ಮುಕ್ತಾಯ (ಜೈನ್) ಅದೃಷ್ಟ ಸಂಖ್ಯೆ : 12, 3

ಮೇಷ: ನಿಮ್ಮಿಂದ ನಡೆಯುತ್ತಿರುವ ತಪ್ಪುಗಳ ಬಗ್ಗೆ ಮನವರಿಕೆ ಆಗುವುದು. ಸ್ನೇಹಿತರೊಂದಿಗಿನ ಹರಟೆ ಮನಸ್ಸು ಹಗುರಗೊಳ್ಳುವುದು. ಸ್ನೇಹಿತರಲ್ಲಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವಿರಿ.

ವೃಷಭ: ನಿರಂತರ ಕೆಲಸಗಳಿಂದ ಆಯಾಸ ಹೊಂದಿದ ನಿಮಗೆ ಇಂದು ಬಿಡುವು. ನೂತನ ಯೋಜನೆಗಳಿಗೆ ಹಣಕಾಸಿನ ಕೊರತೆ ಇರುವುದಿಲ್ಲ. ಸಾಧನೆಯಲ್ಲಿ ಮೇಲುಗೈ ನಿಮ್ಮದಾಗಿರುವುದು.

ಮಿಥುನ: ಕೌಟುಂಬಿಕವಾಗಿ ನಿಮ್ಮ ಕುರಿತು ಪ್ರಮುಖ ವಿಷಯವೊಂದು ತಿಳಿದು ಬರಲಿದೆ. ಧರ್ಮಗ್ರಂಥಗಳ ಓದಿನಲ್ಲಿ ಆಸಕ್ತಿ ಹುಟ್ಟಲಿದೆ. ದೇವತಾನುಗ್ರಹ-ದಿಂದ ಆಸ್ಪತ್ರೆ ಓಡಾಟ ನಿಲ್ಲುವುದು.

ಕರ್ಕಾಟಕ: ಪೂರ್ವ ನಿಯೋಜಿತ ಕೆಲಸಗಳನ್ನು ಉತ್ತಮವಾಗಿ ನೆರವೇರಿವು-ದರಿಂದ ನೆಮ್ಮದಿ. ಮನೆಗೆ ನೂತನ ವಸ್ತುಗಳ ಆಗಮನ ಸಂತೋಷ. ಇಂದಿನ ರಾಜಕೀಯ ಸನ್ನಿವೇಷ ನಿಮಗೆ ಅನುಕೂಲವಾಗಿರುವುದು.

ಸಿಂಹ: ಕುಟುಂಬ ಸದಸ್ಯರ ಮನಸ್ತಾಪವನ್ನು ಮಾತುಕತೆಗಳಿಂದ ಸರಿಪಡಿಸಿಕೊ-ಳ್ಳಬಹುದು. ಪ್ರೀತಿ ಪಾತ್ರರಿಂದ ತಾತ್ಕಾಲಿಕವಾಗಿ ದೂರ ಆಗುವ ಸಂಭವವಿದೆ. ದಿನವಿಡಿ ಸಂಯಮದಿಂದ ವರ್ತಿಸಿ.

ಕನ್ಯಾ: ಗುರು-ಹಿರಿಯರು ನಿಮ್ಮ ಮೇಲಿಟ್ಟಿರುವ ನಂಬಿಕೆ ಉಳಿಸಿಕೊಂಡು ಹೋಗುವ ಬಗ್ಗೆ ಗಮನವಿರಲಿ. ಸಾಧ್ಯತೆ ಅರಿತು ವ್ಯವಹಾರದಲ್ಲಿ ಮುಂದುವರೆ ಕೆಲಸಗಳು ನಿರಾತಂಕವಾಗಿ ಸಾಗಲಿದೆ.

ತುಲಾ: ಸಣ್ಣಸಣ್ಣ ಕಾರಣ ಅಥವಾ ಕಾರಣಗಳೇ ಇಲ್ಲದೇ ಅಕ್ಕ-ತಂಗಿಯರಲ್ಲಿ ಕಲಹ. ನಿಮ್ಮ ನಾಯಕತ್ವದ ಗುಣ ಪ್ರದರ್ಶಿಸಲು ವೇದಿಕೆ ಸಿಗಲಿದೆ. ಅನಗತ್ಯ ಚಿಂತೆ ಮೈಮೇಲೆ ಎಳೆದುಕೊಳ್ಳಬೇಡಿ.

ವೃಶ್ಚಿಕ: ಬಟ್ಟೆ ವ್ಯಾಪಾರಿ ರಿಯಾಯಿತಿ ಮಾರಾಟದಂತಹ ತಂತ್ರಗಾರಿಕೆಯನ್ನು ಅಳವಡಿಸಿಕೊಳ್ಳುವುದರಿಂದ ಜನಪ್ರಿಯತೆಯನ್ನು ಜೊತೆಯಲ್ಲಿ ಹಣವನ್ನು ಸಹ ಸಂಪಾದಿಸಬಹುದು. ಮನೆಯಲ್ಲಿ ನೆಮ್ಮದಿಯ ವಾತಾವರಣ ವೃದ್ಧಿಯಾಗಲಿದೆ.


ಧನು: ಎಷ್ಟೇ ಕಷ್ಟಗಳು ಎದುರಾದರೂ ನೀವು ನಿಮ್ಮ ಭವಿಷ್ಯದ ಒಳಿತಿಗಾಗಿ ತೆಗೆದುಕೊಂಡಿರುವ ನಿರ್ಧಾರ ಬದಲಿಸುವುದು ಸರಿಯಲ್ಲ. ವಿದ್ಯಾರ್ಥಿಗಳಿಗೆ ಆಲಸ್ಯವೇ ಗುರಿ ಸಾಧನೆಗೆ ಅಡ್ಡಿ.

ಮಕರ: ನಿಮ್ಮ ಸದುದ್ದೇಶ ನೆರವೇರಿಸಿಕೊಳ್ಳುವುದಕ್ಕೆ ನಡೆಸಿರುವ ಪ್ರಯತ್ನಗಳು ನಿಧಾನವಾಗಿಯಾದರೂ ಸಿದ್ಧಿಸಲಿದೆ. ಆತ್ಮೀಯರೊಂದಿಗೆ ಮನೆಯಲ್ಲಿ ನೆಡೆಯ-ಬೇಕಾಗಿರುವ ಶುಭ ಕಾರ್ಯದ ಬಗ್ಗೆ ಮಾತುಕತೆ ನಡೆಸಿ.

ಕುಂಭ: ನಿಮ್ಮ ಕುಟುಂಬದಲ್ಲಿ ವೈವಾಹಿಕ ಜೀವನದ ನಿಲುವುಗಳೇನು ಎಂಬುದನ್ನು ಸ್ಪಷ್ಟ ಪಡಿಸಬೇಕಾಗುವುದು. ಹಿರಿಯರ ಮಾತಿನಂತೆ ನಿರ್ಧಾರ ಕೈಗೊಳ್ಳುವುದು ಶುಭ. ಸಣ್ಣಮಟ್ಟಿನ ಪ್ರಯಾಣ ಸಂಭವಿಸಲಿದೆ.

ಮೀನ: ಸಂಘ ಸಂಸ್ಥೆಗಳ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ. ಕಚೇರಿಯಲ್ಲಿ ಕೆಲಸ ಕಾರ್ಯಗಳು ಹೆಚ್ಚೆನಿಸುವುದು. ಮಕ್ಕಳ ಬಗ್ಗೆ ಹೆಚ್ಚಿನ ಜವಾಬ್ದಾರಿ ಇರಲಿ.

ಷೇರುಪೇಟೆ ವಹಿವಾಟು 635



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,857
ಇಂದಿನ ಅಂತ್ಯ	19,047
▲	190
ದಿನದ ಕನಿಷ್ಠ	18,926

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹915 (920)
ಸೂರ್ಯಕಾಂತಿ (ರಿಫೈನ್ಡ್)	₹912 (915)
ಪಾಮೋಲಿನ್	₹819 (822)

ವಿನಿಮಯ ದರ

$ ಡಾಲರ್	83.23
£ ಪೌಂಡ್	101.05
€ ಯುರೊ	87.96
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-9003
ಬೆಂಗಳೂರು	₹9500-11500
ಪುತ್ತೂರು	₹4500-7300
ತಿಪಟೂರು	₹8000-8750
ತುರುವೇಕೆರೆ	₹8700-8700

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹10800
ಎಸಿ	₹6440
ಆರ್‌ಪಿ	₹9800
ಆರ್‌ಸಿ	₹5960

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

ಮಾರುತಿ ಲಾಭ ಶೇ 80ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಮಾರುತಿ ಸುಜುಕಿ ಇಂಡಿಯಾದ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 80ರಷ್ಟು ಹೆಚ್ಚಾಗಿ ₹3,716 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭವು ₹2,061 ಕೋಟಿಯಷ್ಟು ಇತ್ತು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಾರಾಟದಿಂದ ಬಂದಿರುವ ವರಮಾನವು ₹28,543 ಕೋಟಿಯಿಂದ ₹35,535 ಕೋಟಿಗೆ ಏರಿಕೆ ಕಂಡಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು 5.52 ಲಕ್ಷ ವಾಹನಗಳನ್ನು ಮಾರಾಟ ಮಾಡಿದ್ದು, ಅದರಲ್ಲಿ ದೇಶದಲ್ಲಿ ಮಾರಾಟ ಮಾಡಿರುವ ವಾಹನಗಳ ಸಂಖ್ಯೆ 4.82 ಲಕ್ಷದಷ್ಟು ಇದೆ. 69,324 ಕಾರುಗಳನ್ನು ರಫ್ತು ಮಾಡಲಾಗಿದೆ ಎಂದು ಮಾಹಿತಿ ನೀಡಿದೆ.

ಮುಂಬೈ ಧಾರಣೆ

ಶೇಂಗಾ 27-10-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	870 (870)
ಪಾಮ್ ವಾರದ ಡೆಲಿವರಿ	817 (820)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,650 (60,650)
ಬೆಳ್ಳಿ ಕೆ.ಜಿ 71,000 (71,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಜ್ಯದಲ್ಲಿ ಮಳೆ ಕೊರತೆ ಪರಿಣಾಮ; ಬೆಳೆ ಹಾನಿ, ಇಳುವರಿ ಕುಂಠಿತ ● ಬೇಡಿಕೆಯಷ್ಟಿಲ್ಲ ಪೂರೈಕೆ

ಶತಕ ಬಾರಿಸುವುದೇ ಈರುಳ್ಳಿ ದರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈರುಳ್ಳಿಗೆ ಬೇಡಿಕೆ ಹೆಚ್ಚಾಗುತ್ತಿರುವ ರೀತಿಯಲ್ಲಿ ಪೂರೈಕೆ ಆಗುತ್ತಿಲ್ಲ. ಹೀಗಾಗಿ ಸಗಟು ಮತ್ತು ಚಿಲ್ಲರೆ ಮಾರಾಟ ದರ ಏರಿಕೆ ಕಾಣುತ್ತಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಸದ್ಯ ಕೆ.ಜಿಗೆ ಗರಿಷ್ಠ ₹70ರಂತೆ ಮಾರಾಟ ಆಗುತ್ತಿದ್ದು, ಪೂರೈಕೆ ಸುಧಾರಿಸದೇ ಇದ್ದರೆ ಕೆ.ಜಿಗೆ ₹100ರ ಗಡಿ ದಾಟುವ ಸಾಧ್ಯತೆ ಇದೆ.

ಮಳೆ ಕೊರತೆಯಿಂದಾಗಿ ಹಲವೆಡೆ ಇಳುವರಿ ತಗ್ಗಿದರೆ, ಇನ್ನೂ ಕೆಲವು ಭಾಗಗಳಲ್ಲಿ ಬೆಳೆ ನಾಶವಾಗಿದೆ. ಆದರೆ ಬೇಡಿಕೆ ಮಾತ್ರ ಹೆಚ್ಚಾಗುತ್ತಿದೆ. ಈ ಕಾರಣಗಳಿಂದಾಗಿ ಈರುಳ್ಳಿ ದರದಲ್ಲಿ ಏರಿಕೆ ಕಾಣುತ್ತಿದೆ ಎಂದು ಎಪಿಎಂಸಿ ಅಧಿಕಾರಿಗಳು, ವ್ಯಾಪಾರಿಗಳು ಹೇಳುತ್ತಿದ್ದಾರೆ.

10 ದಿನಗಳಿಂದಲೂ ಬೆಲೆ ಏರಿಕೆ ಕಾಣುತ್ತಿದೆ. ದೊಡ್ಡ ಗಾತ್ರದ ಈರುಳ್ಳಿಯ ಸಗಟು ದರವು ಶುಕ್ರವಾರ ಕ್ವಿಂಟಲ್‌ಗೆ ₹ 5,800 ರಿಂದ ₹6 ಸಾವಿರದವರೆಗೆ ಆಗಿದೆ ಎಂದು ಯಶವಂತಪುರದಲ್ಲಿ ಸಗಟು ವ್ಯಾಪಾರ ನಡೆಸುವ ಬಾಬುರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

ಬೇಡಿಕೆ ಹೆಚ್ಚಾಗುತ್ತಿದೆ. ಆದರೆ ಅದಕ್ಕೆ ತಕ್ಕಂತೆ ಪೂರೈಕೆ ಆಗದಿರುವುದೇ ಈರುಳ್ಳಿ ಬೆಲೆ ಏರಿಕೆಗೆ ಮುಖ್ಯ ಕಾರಣ ಎನ್ನುತ್ತಾರೆ ಯಶವಂತಪುರದ ಮಹೇಶ್ ಟ್ರೇಡಿಂಗ್ ಆ್ಯಂಡ್ ಕಂಪನಿಯ ವೈಶಾಖ್. ರಾಜ್ಯದಲ್ಲಿಯೂ ಹೊಸ ಬೆಳೆ ನಿರೀಕ್ಷಿತ ಮಟ್ಟದಲ್ಲಿ ಬಂದಿಲ್ಲ. ಮಹಾರಾಷ್ಟ್ರದಿಂದ ಪೂರೈಕೆ ಕಡಿಮೆ ಆಗಿದೆ. ಪೂರೈಕೆ ಸ್ಥಿತಿ ಸುಧಾರಿಸದೇ ಇದ್ದರೆ ದೀಪಾವಳಿ ವೇಳೆಗೆ ಕೆ.ಜಿಗೆ ₹100ನ್ನು ದಾಟುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು.

ಯಶವಂತಪುರ ಎಪಿಎಂಸಿಗೆ ಕಳೆದ ತಿಂಗಳು ದಿನಕ್ಕೆ ಸರಾಸರಿ 70–75 ಸಾವಿರ ಚೀಲ ಈರುಳ್ಳಿ ಬಂದಿತ್ತು. ಆದರೆ ಈ ತಿಂಗಳು ಸರಾಸರಿ 40–50 ಸಾವಿರ ಚೀಲ ಮಾತ್ರ ಬರುತ್ತಿದೆ ಎನ್ನುತ್ತಾರೆ ಸಗಟು ವ್ಯಾಪಾರಿ ಲೋಕಪ್ಪ ಜಿ.

ಯಶವಂತಪುರ ಎಪಿಎಂಸಿಯಲ್ಲಿ- ಕ್ವಿಂಟಲ್‌ಗೆ ₹4800ರಂತೆ 60 ಕ್ವಿಂಟಲ್ ಈರುಳ್ಳಿಯನ್ನು ಶುಕ್ರವಾರ ಮಾರಾಟ ಮಾಡಿದ್ದೇನೆ. ಕಳೆದ 4 ವರ್ಷದಿಂದ ಉತ್ತಮ ಬೆಲೆ ಇರಲಿಲ್ಲ. ಈಗ ಬೆಲೆ ಹೆಚ್ಚಾಗಿರುವುದರಿಂದ ಅನುಕೂಲ ಆಯಿತು ಎನ್ನುತ್ತಾರೆ ಚಿತ್ರದುರ್ಗ ಜಿಲ್ಲೆಯ ರೈತ ಕೊಟ್ರೇಶ್.

ಉಡುಪಿ ಜಿಲ್ಲೆಯಲ್ಲಿ ಈರುಳ್ಳಿಯ ಚಿಲ್ಲರೆ ಮಾರಾಟ ದರವು ಬುಧವಾರ ಕೆ.ಜಿಗೆ ₹45 ಇದ್ದಿದ್ದು ಶುಕ್ರವಾರ ಕೆ.ಜಿಗೆ ₹70ಕ್ಕೆ ಏರಿಕೆ ಕಂಡಿದೆ. ಮಂಗಳೂರಲ್ಲಿ ಚಿಲ್ಲರೆ ದರ ಕೆ.ಜಿಗೆ ₹60ರಿಂದ ₹65ರವರೆಗೆ ಮಾರಾಟ ಆಗುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಡೂರು ಮತ್ತು ತರೀಕೆರೆ ಭಾಗದಲ್ಲಿ ಈರುಳ್ಳಿ ಬೆಳೆಯಲಾಗುತ್ತಿದೆ. 10,950 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿಹೊಂದಲಾಗಿತ್ತು. ಮಳೆ ಕೊರತೆಯಿಂದ 6,214 ಹೆಕ್ಟೇರ್‌ನಲ್ಲಿ ಮಾತ್ರ ಬೆಳೆಯಲು ಸಾಧ್ಯವಾಗಿದೆ. ಇಳುವರಿ ಕೂಡ ಕುಂಠಿತವಾಗಿದ್ದು, ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಗಟು ದರ ಕ್ವಿಂಟಲ್‌ಗೆ ದಪ್ಪ ಈರುಳ್ಳಿ ₹4,000 ಇದೆ.

ತಗ್ಗಿದ ಆವಕ; ಏರಿದ ಧಾರಣೆ

ಹುಬ್ಬಳ್ಳಿ: ಧಾರವಾಡ, ವಿಜಯಪುರ ಸೇರಿದಂತೆ ಬಹುತೇಕ ಜಿಲ್ಲೆಗಳಲ್ಲಿ ಈರುಳ್ಳಿ ದರ ಕೆಜಿಗೆ ₹ 60 ರಿಂದ ₹ 70ಕ್ಕೆ ಏರಿಕೆಯಾಗಿದೆ. ಗದಗ, ಹಾವೇರಿ, ಬಾಗಲಕೋಟೆ, ಹುಬ್ಬಳ್ಳಿ ಸೇರಿ ಬಹುತೇಕ ಕೃಷಿ ಉತ್ಪನ್ನ ಮಾರುಕಟ್ಟೆಗೆ (ಎಪಿಎಂಸಿ) ಈರುಳ್ಳಿಯ ಆವಕದ ಪ್ರಮಾಣ ಕಡಿಮೆಯಾಗಿದೆ.

ಮಳೆ ಕೊರತೆಯಿಂದ ನಿರೀಕ್ಷಿತ ಪ್ರಮಾಣದಲ್ಲಿ ಇಳುವರಿ ಬಂದಿಲ್ಲ. ಎರಡು ವರ್ಷಗಳಿಂದ ಈರುಳ್ಳಿ ದರದಲ್ಲಿ ಹೆಚ್ಚು ವ್ಯತ್ಯಾಸ ಕಂಡು ಬಾರದ ಹಿನ್ನೆಲೆಯಲ್ಲಿ ಬಹುತೇಕ ರೈತರು ಪರ್ಯಾಯ ಬೆಳೆಯ ಮೊರೆ ಹೋಗಿದ್ದಾರೆ. ಹುಬ್ಬಳ್ಳಿಯಲ್ಲಿ 15 ದಿನದ ಹಿಂದೆ ಎಪಿಎಂಸಿ ಮಾರುಕಟ್ಟೆಯಲ್ಲಿ 1 ಕ್ವಿಂಟಲ್‌ಗೆ ಸರಾಸರಿ ₹3 ಸಾವಿರ ಇದ್ದ ಈರುಳ್ಳಿ ದರ ಈಗ ₹6 ಸಾವಿರದ ಗಡಿ ದಾಟಿದೆ.

'ಮುಂಗಾರು ಹಂಗಾಮಿನಲ್ಲಿ ಧಾರವಾಡ ಜಿಲ್ಲೆಯಲ್ಲಿ 6,799 ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯುವ ಗುರಿಯಿತ್ತು. ಮಳೆ ಕೊರತೆಯಿಂದ 6,126 ಹೆಕ್ಟೇರ್ ಪ್ರದೇಶದ ಬೆಳೆ ನಾಶವಾಗಿದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

'ಇದೇ ಪರಿಸ್ಥಿತಿ ಮುಂದುವರಿದರೆ, ಮುಂದಿನ 15 ದಿನಗಳಲ್ಲಿ ಈರುಳ್ಳಿ ಒಂದು ಕ್ವಿಂಟಲ್‌ಗೆ ₹8 ಸಾವಿರದಿಂದ ₹ 9 ಸಾವಿರಕ್ಕೆ ಏರಿಕೆಯಾಗಿ, ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹ 100 ರಿಂದ ₹120ಕ್ಕೆ ಏರಿಕೆಯಾಗಬಹುದು' ಎಂದು ಮಹಾವೀರ ಟ್ರೇಡರ್ಸ್ ಮಾಲೀಕ ಮಹಾವೀರ ಪಾಟೀಲ ಹೇಳಿದರು.

'ಬೆಳಗಾವಿ ಎಪಿಎಂಸಿ ಮಾರುಕಟ್ಟೆಯಲ್ಲಿ ಈರುಳ್ಳಿ ದರ ತಿಂಗಳ ಹಿಂದೆ ಕ್ವಿಂಟಲ್‌ಗೆ ₹ 2,500 ಇತ್ತು. ಈಗ ಸರಾಸರಿ ₹5,500ಕ್ಕೆ ಮಾರಾಟವಾಗಿದೆ. ಪ್ರತಿವರ್ಷ ಈ ಅವಧಿಯಲ್ಲಿ ವಾರಕ್ಕೆ 40 ಸಾವಿರ ಕ್ವಿಂಟಲ್ ಈರುಳ್ಳಿ ಆವಕವಾಗುತ್ತಿತ್ತು. ಈಗ 30 ಸಾವಿರ ಕ್ವಿಂಟಲ್ ಆವಕವಾಗಿದೆ' ಎಂದು ಎಪಿಎಂಸಿ ಅಧಿಕಾರಿಗಳು ತಿಳಿಸಿದರು.

ಮಳೆ ಕೊರತೆ, ಫಸಲು ನಾಶ: ಬಾಗಲಕೋಟೆ ಜಿಲ್ಲೆಯಲ್ಲಿ ಮಳೆ ಕೊರತೆಯಿಂದ ಬೆಳೆ ಹಾಳಾಗಿ ಫಸಲು ಕಡಿಮೆ ಆಗಿರುವುದರಿಂದ ಬೆಲೆ ಹೆಚ್ಚಾಗಿದೆ. ಜಿಲ್ಲೆಯಲ್ಲಿ 21,862 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆದಿದ್ದು, 18,898 ಹೆಕ್ಟೇರ್‌ನಷ್ಟು ಬೆಳೆ ಹಾಳಾಗಿದೆ. ಇದರಿಂದ ರೈತರಿಗೆ ₹236 ಕೋಟಿ ನಷ್ಟವಾಗಿದೆ. ಎಪಿಎಂಸಿಗೆ ಕಳೆದ ವಾರ 2,400 ಚೀಲ ಈರುಳ್ಳಿ ಆವಕವಾಗಿದ್ದು, ಪ್ರತಿ ಕ್ವಿಂಟಲ್‌ಗೆ ₹3,200 ರಿಂದ ₹ 5,500ರವರೆಗೆ ಮಾರಾಟವಾಗುತ್ತಿದೆ.



ಹುಬ್ಬಳ್ಳಿ ಎಪಿಎಂಸಿಯ ಮಾರುಕಟ್ಟೆಯಲ್ಲಿ ಶುಕ್ರವಾರ ಈರುಳ್ಳಿ ಹರಾಜು ಹಾಕುವಾಗ ಪಾಲ್ಗೊಂಡಿದ್ದ ಚಿಲ್ಲರೆ ವ್ಯಾಪಾರಸ್ಥರು –ಪ್ರಜಾವಾಣಿ ಚಿತ್ರ

ಮಳೆ ಕೊರತೆ: ಬಿತ್ತನೆ, ಇಳುವರಿ ಕುಸಿತ

ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದಾಗಿ ಬಿತ್ತನೆ ಪ್ರಮಾಣ ಕುಂಠಿತವಾಗಿದೆ. ಇದರಿಂದಾಗಿ ಇಳುವರಿಯೂ ತಗ್ಗಿದೆ. ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರಿನಲ್ಲಿ 26,823 ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆಯ ಗುರಿ ಹೊಂದಲಾಗಿತ್ತು. ಆದರೆ, ಅಂದಾಜು 18,000 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಈರುಳ್ಳಿ ಬಿತ್ತನೆ ಆಗಿದೆ. ಆಗಸ್ಟ್‌ನಲ್ಲಿ ಏಕಾಏಕಿ ಮಳೆ ಕೈಕೊಟ್ಟಿದ್ದರಿಂದ ಬೆಳೆಗೆ ನೀರಿನ ಕೊರತೆ ಉಂಟಾಗಿ ಬೆಳೆ ಕೈ ಸೇರದಂತಾಯಿತು. ಪ್ರತಿ ಹೆಕ್ಟೇರ್‌ಗೆ ನಿರೀಕ್ಷಿತ ಇಳುವರಿ ದೊರೆತಿಲ್ಲ. ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ ಈರುಳ್ಳಿಗೆ ಶುಕ್ರವಾರ ₹60 ದರ ಇತ್ತು.

ಮಹಾರಾಷ್ಟ್ರದಿಂದ ಬಾರದ ದಾಸ್ತಾನು: ಕಲ್ಯಾಣ ಕರ್ನಾಟಕದ ಬಹುತೇಕ ಜಿಲ್ಲೆಗಳ ಗ್ರಾಹಕರು ಈರುಳ್ಳಿಗಾಗಿ ಮಹಾರಾಷ್ಟ್ರದ ನಾಸಿಕ್, ಸೋಲಾಪುರ ಅವಲಂಬಿಸಿದ್ದು, ಅಲ್ಲಿಂದ ಬೇಡಿಕೆಯಷ್ಟು ಬಾರದ ಕಾರಣ ಕಳೆದ ಎರಡು- ಮೂರು ದಿನಗಳಿಂದ ಈರುಳ್ಳಿ ಬೆಲೆ ದುಪ್ಪಟ್ಟಾಗಿದೆ.

ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಸರಾಸರಿ ಒಂದು ಕೆ.ಜಿಗೆ ₹ 30 ಇದ್ದ ಈರುಳ್ಳಿ ದರ ಇದೀಗ ₹ 60ಕ್ಕೆ ಮಾರಾಟವಾಗುತ್ತಿದೆ. ದೊಡ್ಡ ಗಾತ್ರದ ಈರುಳ್ಳಿ ಬೆಲೆ ಕೆ.ಜಿಗೆ ₹ 80ಕ್ಕೆ ಮಾರಾಟವಾಗುತ್ತಿದೆ. ಕಲಬುರಗಿಯ ಕಣ್ಣಿ ಮಾರ್ಕೆಟ್ ಹಾಗೂ ತಾಜ್ ಸುಲ್ತಾನಪುರ ಮಾರುಕಟ್ಟೆಯಲ್ಲಿ ಬುಧವಾರ ಪ್ರತಿ ಕೆ.ಜಿಗೆ ₹ 30 ರಿಂದ ₹ 40ನಂತೆ ಮಾರಾಟವಾಗಿದ್ದ ಈರುಳ್ಳಿ ಶುಕ್ರವಾರ ಪ್ರತಿ ಕೆ.ಜಿಗೆ ₹ 60ರಿಂದ ₹ 70ರಂತೆ ಮಾರಾಟವಾಗಿದೆ.

ಸುಧಾ, ಮಯೂರ ಓದಿ

ಟಾಟಾ ತೆಕ್ಕೆಗೆ ರಾಜ್ಯದ ವಿಸ್ಟ್ರಾನ್

ನವದೆಹಲಿ (ಪಿಟಿಐ): ಕೋಲಾರದ ನರಸಾಪುರದಲ್ಲಿ ಇರುವ ಐಫೋನ್ ತಯಾರಿಕಾ ಘಟಕವನ್ನು ಟಾಟಾ ಸಮೂಹಕ್ಕೆ ಮಾರಾಟ ಮಾಡಲು ತೈವಾನ್‌ನ ವಿಸ್ಟ್ರಾನ್ ಸಮೂಹವು ಒಪ್ಪಿಗೆ ನೀಡಿದೆ. ಇದರಿಂದಾಗಿ ಐಫೋನ್ ತಯಾರಿಸುವ ಭಾರತದ ಮೊದಲ ಕಂಪನಿ ಎನ್ನುವ ಹೆಗ್ಗಳಿಕೆಗೆ 'ಟಾಟಾ' ಪಾತ್ರವಾಗಲಿದೆ.

ವಿಸ್ಟ್ರಾನ್ ಇನ್ಫೊಕಾಮ್ ಮ್ಯಾನುಫ್ಯಾಕ್ಚರಿಂಗ್ (ಇಂಡಿಯಾ) ಪ್ರವೇಟ್ ಲಿಮಿಟೆಡ್ ಅನ್ನು ಟಾಟಾ ಎಲೆಕ್ಟ್ರಾನಿಕ್ಸ್‌ಗೆ ₹1,040 ಕೋಟಿಗೆ ಮಾರಾಟ ಮಾಡಲು ವಿಸ್ಟ್ರಾನ್ ಆಡಳಿತ ಮಂಡಳಿಯು ಒಪ್ಪಿಗೆ ನೀಡಿದೆ.ಒಂದು ವರ್ಷದ ದೀರ್ಘ ಮಾತುಕತೆಯ ಬಳಿಕ ಖರೀದಿ ಒಪ್ಪಂದಕ್ಕೆ ಬರಲಾಗಿದೆ. ಈ ಘಟಕದಲ್ಲಿ 10 ಸಾವಿರಕ್ಕೂ ಅಧಿಕ ಕೆಲಸಗಾರರಿದ್ದಾರೆ.

ವಿಸ್ಟ್ರಾನ್ ಘಟಕ ಖರೀದಿಸುವ ಒಪ್ಪಂದ ಆಗಿರುವುದಕ್ಕೆ ಎಲೆಕ್ಟ್ರಾನಿಕ್ಸ್ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು 'ಎಕ್ಸ್'ನಲ್ಲಿ ಟಾಟಾ ಕಂಪನಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಎರಡೂವರೆ ವರ್ಷಗಳಲ್ಲಿ ಟಾಟಾ ಕಂಪನಿಯು ದೇಶಿ ಮತ್ತು ಜಾಗತಿಕ ಮಾರುಕಟ್ಟೆಗಳಿಗೆ ಭಾರತವು ಐಫೋನ್‌ಗಳನ್ನು ತಯಾರಿಕೆ ಆರಂಭಿಸಲಿದೆ ಎಂದು ಅವರು ಪೋಸ್ಟ್ ಮಾಡಿದ್ದಾರೆ.



ರಿಲಯನ್ಸ್ ಲಾಭ ಶೇ 27ಹೆಚ್ಚಳ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 27ರಷ್ಟು ಹೆಚ್ಚಾಗಿ ₹17,394 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭ ₹13,656 ಕೋಟಿಯಷ್ಟು ಇತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಾರ್ಯಾಚರಣಾ ವರಮಾನ ₹2.34 ಲಕ್ಷ ಕೋಟಿಯಷ್ಟು ಆಗಿದೆ. ಬಡ್ಡಿದರವು ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಸಾಲ ಬಾಕಿಯ ಕಾರಣದಿಂದಾಗಿ ವೆಚ್ಚವು ಶೇ 26ರಷ್ಟು ಹೆಚ್ಚಾಗಿ ₹5,731 ಕೋಟಿಗೆ ತಲುಪಿದೆ ಎಂದು ಮಾಹಿತಿ ನೀಡಿದೆ.

ರಿಟೇಲ್ ವಹಿವಾಟಿನ ಲಾಭವು ಶೇ 21ರಷ್ಟು ಹೆಚ್ಚಾಗಿ ₹2,790 ಕೋಟಿಗೆ ತಲುಪಿದೆ. ಸಾಲವು ₹3.18 ಲಕ್ಷ ಕೋಟಿಯಿಂದ ₹2.95 ಲಕ್ಷ ಕೋಟಿಗೆ ಇಳಿಕೆ ಕಂಡಿದೆ ಎಂದು ತಿಳಿಸಿದೆ.

ಜಿಯೋ ಲಾಭ ಶೇ 12ರಷ್ಟು ಏರಿಕೆ

ರಿಲಯನ್ಸ್ ಜಿಯೊ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 12ರಷ್ಟು ಏರಿಕೆ ಕಂಡು ₹5,058 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಲಾಭವು ₹4,518 ಕೋಟಿಯಷ್ಟು ಇತ್ತು ಎಂದು ಕಂಪನಿ ತಿಳಿಸಿದೆ. ಕಾರ್ಯಾಚರಣಾ ವರಮಾನ ಶೇ 9.8ರಷ್ಟು ಹೆಚ್ಚಾಗಿ ₹24,750ಕೋಟಿಗೆ ಏರಿಕೆ ಕಂಡಿದೆ.

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)


ದಪ್ಪ	₹4500-5200
ಮಧ್ಯಮ	₹4000-4500
ಸಣ್ಣ	₹3000-4000

635 ಅಂಶ ಏರಿಕೆ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಸತತ ಆರು ದಿನಗಳ ನಕಾರಾತ್ಮಕ ವಹಿವಾಟಿನಿಂದ ದೇಶದ ಷೇರುಪೇಟೆಗಳು ಶುಕ್ರವಾರ ಹೊರಬಂದವು. ವಾಹನ, ಐ.ಟಿ. ಹಣಕಾಸು ಮತ್ತು ಇಂಧನ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ನಡೆಸಿದರು. ಇದರಿಂದಾಗಿ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚು ಏರಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 635 ಅಂಶ ಏರಿಕೆ ಕಂಡು 63,783 ಅಂಶಗಳಿಗೆ ತಲುಪಿತು. ಹೂಡಿಕೆದಾರರ ಸಂಪತ್ತು ₹4.41 ಲಕ್ಷ ಕೋಟಿಯಷ್ಟು ಹೆಚ್ಚಾಗಿ, ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯವು ₹310.45 ಲಕ್ಷ ಕೋಟಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 190 ಅಂಶ ಹೆಚ್ಚಾಗಿ 19,047 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.



ಅಮೆರಿಕದ ಮೂರನೇ ತ್ರೈಮಾಸಿಕದ ಜಿಡಿಪಿ ಅಂಕಿ–ಅಂಶವು ಶೇ 4.9ರಷ್ಟು ಆಗಿದ್ದು, ಎರಡು ವರ್ಷಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಇದು ಮಾರುಕಟ್ಟೆ ನಿರೀಕ್ಷೆಗಿಂತಲೂ (ಶೇ 4.2) ಉತ್ತಮವಾಗಿದೆ. ಹೀಗಾಗಿ ಜಾಗತಿಕ ಷೇರುಪೇಟೆಗಳಲ್ಲಿ ಸಕಾರಾತ್ಮಕ ಚಲನೆ ನಡೆಯಿತು. ಆ ಮೂಲಕ ದೇಶಿ ಷೇರುಪೇಟೆಗಳಲ್ಲಿಯೂ ಸೂಚ್ಯಂಕಗಳು ಚೇತರಿಕೆ ಕಂಡುಕೊಂಡವು ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ಹೇಳಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್ ಷೇರು ಶೇ 1.75ರಷ್ಟು ಹೆಚ್ಚಾಗಿ ಪ್ರತಿ ಷೇರಿನ ಬೆಲೆ ₹2,265ಕ್ಕೆ ಏರಿಕೆ ಕಂಡಿತು. ಬ್ರೆಂಟ್ ಕಚ್ಚಾ ತೈಲ ದರ ಶೇ 3.50ರಷ್ಟು ಹೆಚ್ಚಾಗಿ ಬ್ಯಾರಲ್‌ಗೆ 90.13 ಡಾಲರ್‌ಗೆ ತಲುಪಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹಳತು	43000-48500
ಬೆಂಗಳೂರು	
ಇತರೆ	55000-60000
ಭದ್ರಾವತಿ	
ರಾಶಿ	37199-48000
ಚಿತ್ರದುರ್ಗ	
ಅಪಿ	46219-46629
ಬೆಟ್ಟೆ	36149-36579
ಕೆಂಪುಗೋಟು	30100-30500
ರಾಶಿ	45739-46169
ಹೊನ್ನಾವರ	
ಹಳೆಚಾಲಿ	36000-40500
ಹೊಸನಗರ	
ಚಾಲಿ	32599-34699
ಕೆಂಪುಗೋಟು	24899-36511
ರಾಶಿ	43699-48970
ಕಾರ್ಕಳ	
ಹಳತು	30000-48500
ಕುಮಟ	
ಚಿಪ್ಪು	27899-34599
ಕೋಕ	20109-33339
ಫ್ಯಾಕ್ಟರಿ	12019-25711
ಹಳೆಚಾಲಿ	39569-40229
ಹೊಸಚಾಲಿ	37599-40019
ಪುತ್ತೂರು	
ಕೋಕ	11000-25000
ಹೊಸತು	34000-43000
ಸಾಗರ	
ಸಿಪ್ಪೆಗೋಟು	13756-16510
ಶಿವಮೊಗ್ಗ	
ಗೊರಬಾಳು	26700-38000
ಹೊಸತು	45769-46851
ರಾಶಿ	39611-47909
ಸಿದ್ದಾಪುರ	
ಬಿಳಿಗೋಟು	31899-34899
ಚಾಲಿ	38499-40219
ಕೋಕ	12899-32899
ಕೆಂಪುಗೋಟು	32012-33518
ರಾಶಿ	44239-46309
ತಟ್ಟಿಬೆಟ್ಟೆ	38699-42899
ಶಿರಸಿ	
ಬೆಟ್ಟೆ	38299-45899
ಬಿಳಿಗೋಟು	34809-36110
ಚಾಲಿ	37299-41499
ಕೆಂಪುಗೋಟು	34399-34399
ರಾಶಿ	45199-47799
ಯಲ್ಲಾಪುರ	
ಅಪಿ	65379-65379
ಬಿಳಿಗೋಟು	27699-35900
ಚಾಲಿ	36630-41340
ಕೋಕ	18399-31999
ಕೆಂಪುಗೋಟು	30109-34399
ರಾಶಿ	46809-54119
ತಟ್ಟಿಬೆಟ್ಟೆ	38260-46412

ಹಾಕಿ: ಭಾರತ– ಪಾಕ್ ಪಂದ್ಯ ಡ್ರಾ

ಜೊಹೊರ್, ಮಲೇಷ್ಯಾ (ಪಿಟಿಐ): ಎರಡು ಬಾರಿ ಹಿನ್ನಡೆ ಅನುಭವಿಸಿದರೂ, ಮರುಹೋರಾಟ ನಡೆಸಿದ ಭಾರತ ತಂಡದವರು ಸುಲ್ತಾನ್ ಆಫ್ ಜೊಹೊರ್ ಕಪ್ ಜೂನಿಯರ್ ಪುರುಷರ ಹಾಕಿ ಟೂರ್ನಿಯ ಪಂದ್ಯದಲ್ಲಿ 3–3 ಗೋಲುಗಳಿಂದ ಪಾಕಿಸ್ತಾನ ಜತೆ ಡ್ರಾ ಸಾಧಿಸಿದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಅಮನ್‌ದೀಪ್ ಲಾಕ್ರ (30ನೇ ನಿ.), ಆದಿತ್ಯ ಅರುಣ್ (56) ಮತ್ತು ಉತ್ತಮ್ ಸಿಂಗ್ (59) ಅವರು ಭಾರತದ ಪರ ಗೋಲು ಗಳಿಸಿದರು. ಪಾಕ್ ತಂಡಕ್ಕೆ ಅರ್ಬಾಜ್ ಅಹ್ಮದ್ (31 ಮತ್ತು 58) ಹಾಗೂ ಅಬ್ದುಲ್ ಶಾಹಿದ್ (49) ಚೆಂಡನ್ನು ಗುರಿ ಸೇರಿಸಿದರು.

ಮೊದಲ ಕ್ವಾರ್ಟರ್‌ನಲ್ಲಿ ಜಿದ್ದಾಜಿದ್ದಿನ ಪೈಪೋಟಿ ನಡೆಯಿತಾದರೂ ಗೋಲುಗಳು ಬರಲಿಲ್ಲ. 30ನೇ ನಿಮಿಷದಲ್ಲಿ ಅಮನ್‌ದೀಪ್ ಭಾರತಕ್ಕೆ ಮುನ್ನಡೆ ತಂದಿತ್ತರು. ಆದರೆ ಮುಂದಿನ ನಿಮಿಷದಲ್ಲೇ ಪಾಕ್ ಸಮಬಲದ ಗೋಲು ಗಳಿಸಿತು.

49 ನಿಮಿಷಗಳವರೆಗೂ ಪಂದ್ಯ 1–1 ರಿಂದ ಸಮಬಲದಲ್ಲಿತ್ತು. ಕೊನೆಯ 11 ನಿಮಿಷಗಳಲ್ಲಿ ಎರಡೂ ತಂಡಗಳು ತಲಾ ಎರಡು ಗೋಲುಗಳನ್ನು ಗಳಿಸಿ, ಗೌರವ ಹಂಚಿಕೊಂಡವು.

ಭಾರತ ತಂಡ ಶನಿವಾರ ನಡೆಯಲಿರುವ ಪಂದ್ಯದಲ್ಲಿ ಮಲೇಷ್ಯಾ ವಿರುದ್ಧ ಹಣಾಹಣಿ ನಡೆಸಲಿದೆ.

ಐಟಿಎಫ್ ದಾವಣಗೆರೆ ಓಪನ್ ಟೆನಿಸ್: ರಾಮನಾಥನ್–ಪುರವ್‌ಗೆ ನಿರಾಸೆ

ಡಬಲ್ಸ್‌ನಲ್ಲಿ ಅಗ್ರ ಜೋಡಿಗೆ ಆಘಾತ

● ಜಿ.ಶಿವಕುಮಾರ

ದಾವಣಗೆರೆ: ಐಟಿಎಫ್ ದಾವಣಗೆರೆ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್‌ನಲ್ಲಿ ಶುಕ್ರವಾರ ಅಚ್ಚರಿಯ ಫಲಿತಾಂಶ ಹೊರಬಿತ್ತು. ಅಗ್ರ ಶ್ರೇಯಾಂಕದ ರಾಮಕುಮಾರ್ ರಾಮನಾಥನ್ ಹಾಗೂ ಪುರವ್ ರಾಜಾ, ಎರಡನೇ ಶ್ರೇಯಾಂಕ ಹೊಂದಿದ್ದ ಅಮೆರಿಕದ ನಿಕ್ ಚಾಪೆಲ್ ಮತ್ತು ರಷ್ಯಾದ ಬೊಗ್ದಾನ್ ಬೊಬ್ರೊವ್ ಸೆಮಿಫೈನಲ್‌ನಲ್ಲಿ ಆಘಾತ ಕಂಡರು.

ಡೇವಿಸ್ ಕಪ್‌ನಲ್ಲಿ ಆಡಿದ ಅನುಭವ ಹೊಂದಿರುವ ರಾಮ್ ಹಾಗೂ ಪುರವ್ 6–7, 4–6ರಿಂದ ಮೂರನೇ ಶ್ರೇಯಾಂಕದ ಸಾಯಿ ಕಾರ್ತಿಕ್ ರೆಡ್ಡಿ ಹಾಗೂ ಮನೀಷ್ ಸುರೇಶ್‌ಕುಮಾರ್ ವಿರುದ್ಧ ಪರಾಭವಗೊಂಡರು.

ಮೊದಲ ಸೆಟ್‌ನ ಆರಂಭದಲ್ಲೇ ಗೇಮ್ ಕಳೆದುಕೊಂಡು 0–2ರಿಂದ ಹಿನ್ನಡೆ ಕಂಡ ರಾಮ್–ಪುರವ್, ನಂತರದ ಎರಡು ಗೇಮ್‌ಗಳಲ್ಲಿ ಅಮೋಘ ಆಟ ಆಡಿ 2–2ರಿಂದ ಸಮಬಲ ಸಾಧಿಸಿದರು. ಬಳಿಕ ಉಭಯ ಜೋಡಿಯೂ ತಮ್ಮ ಪಾಲಿನ ಸರ್ವ್ ಉಳಿಸಿಕೊಂಡಿದ್ದರಿಂದ ಸೆಟ್ 'ಟೈ ಬ್ರೇಕರ್'ಗೆ ಸಾಗಿತು. ಈ ಹಂತದಲ್ಲಿ ಹಲವು ತಪ್ಪುಗಳನ್ನು ಮಾಡಿದ ರಾಮ್ ಹಾಗೂ ಪುರವ್ ಸೆಟ್ ಕೈಚೆಲ್ಲಿದರು.

ಈಚೆಗೆ ಮುಗಿದಿದ್ದ ಧಾರವಾಡ ಓಪನ್‌ನಲ್ಲಿ ಫೈನಲ್ ಪ್ರವೇಶಿಸಿದ್ದ ಸಾಯಿ ಕಾರ್ತಿಕ್ ಮತ್ತು ಮನೀಷ್ ಎರಡನೇ ಸೆಟ್‌ನಲ್ಲಿ ಪ್ರಾಬಲ್ಯ ಮೆರೆದರು. ಆರಂಭಿಕ ಹಿನ್ನಡೆಯಿಂದ (1–2) ಎದೆಗುಂದದೆ ಕೆಚ್ಚೆದೆಯ ಹೋರಾಟ ನಡೆಸಿದ ಅವರು 7ನೇ ಗೇಮ್‌ನಲ್ಲಿ ಪುರವ್ ಮಾಡಿದ ಸರ್ವ್ 'ಬ್ರೇಕ್' ಮಾಡಿ, 4–3ರಿಂದ ಮುನ್ನಡೆ ಪಡೆದರು. ನಂತರದ ಮೂರು ಗೇಮ್‌ಗಳ ಪೈಕಿ ಎರಡರಲ್ಲಿ ಸರ್ವ್ ಕಾಪಾಡಿಕೊಂಡು ಗೆಲುವು ದಾಖಲಿಸಿದರು.

ನಾಲ್ಕರ ಘಟ್ಟದ ಇನ್ನೊಂದು ಹಣಾಹಣಿಯಲ್ಲಿ ಚಾಪೆಲ್ ಹಾಗೂ ಬೊಬ್ರೊವ್ 6–4, 3–6, 5–10ರಿಂದ ನಾಲ್ಕನೇ ಶ್ರೇಯಾಂಕದ ವಿಷ್ಣುವರ್ಧನ್ ಹಾಗೂ ಸಿದ್ಧಾಂತ್ ಬಂತಿಯಾ ಎದುರು ಸೋತರು.

ತೀವ್ರ ಪ್ರತಿರೋಧದ ನಡುವೆಯೂ ಮೊದಲ ಸೆಟ್‌ನಲ್ಲಿ ಎದುರಾಳಿಗಳ ಸವಾಲು ಮೀರಿದ ಚಾಪೆಲ್ ಹಾಗೂ ಬೊಬ್ರೊವ್, ಎರಡನೇ ಸೆಟ್‌ನಲ್ಲಿ ಮಂಕಾದರು.



ಸಾಯಿ ಕಾರ್ತಿಕ್ ರೆಡ್ಡಿ ಮತ್ತು ಮನೀಷ್ ಸುರೇಶ್‌ಕುಮಾರ್, ಪಾಯಿಂಟ್ಸ್ ಗಳಿಸಿದಾಗ ಪರಸ್ಪರ ಅಭಿನಂದಿಸಿದರು –ಪ್ರಜಾವಾಣಿ ಚಿತ್ರ

ಮಂಕಾದ ಮಾಧ್ವಿನ್

ಸಿಂಗಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ 'ಮ್ಯಾರಥಾನ್' ಹೋರಾಟ ನಡೆಸಿ ಗಮನ ಸೆಳೆದಿದ್ದ ಮಾಧ್ವಿನ್ ಕಾಮತ್, ಅನುಭವಿ ರಾಮಕುಮಾರ್ ರಾಮನಾಥನ್ ಎದುರಿನ ಕ್ವಾರ್ಟರ್ ಫೈನಲ್‌ನಲ್ಲಿ ಮಂಕಾದರು.

ರಾಮಕುಮಾರ್ 6-2, 6-1ರಿಂದ ಮಾಧ್ವಿನ್ ಎದುರು ನಿರಾಯಾಸ ಗೆಲುವು ದಾಖಲಿಸಿದರು.

ಅಗ್ರ ಶ್ರೇಯಾಂಕದ ಆಟಗಾರ ನಿಕ್ ಚಾಪೆಲ್ 6–1, 3–6, 6–2ರಿಂದ ಸಿದ್ಧಾರ್ಥ್ ರಾವತ್ ಎದುರು ಗೆದ್ದರೆ, ಎರಡನೇ ಶ್ರೇಯಾಂಕದ ಬೊಗ್ದಾನ್ ಬೊಬ್ರೊವ್ 7-5, 6-0ರಿಂದ ಕರಣ್ ಸಿಂಗ್ ಅವರನ್ನು ಸೋಲಿಸಿ ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟರು.

8ನೇ ಶ್ರೇಯಾಂಕದ ನಿಕಿ ಪೂಣಚ್ಚ 6-4, 6-3ರಿಂದ ಮನೀಷ್ ಸುರೇಶ್ ಕುಮಾರ್ ಎದುರು ಗೆದ್ದು ಸೆಮಿಫೈನಲ್ ಪ್ರವೇಶಿಸಿದರು.



ಪಾಕ್‌ಗೆ ಪೆಟ್ಟುಕೊಟ್ಟ ಮರ್ಕರಂ, ಕೇಶವ್, ಶಂಸಿ • ಬಾಬರ್ ಬಳಗದ ಸೆಮಿ ಸಾಧ್ಯತೆ ಕ್ಷೀಣ

ದಕ್ಷಿಣ ಆಫ್ರಿಕಾಕ್ಕೆ ರೋಚಕ ಜಯ

ಚೆನ್ನೈ (ಪಿಟಿಐ): ಈ ಬಾರಿಯ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅತ್ಯಂತ ಹೆಚ್ಚು ರೋಚಕತೆ ಮೂಡಿಸಿದ್ದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಪಾಕಿಸ್ತಾನ ವಿರುದ್ಧ ಜಯಿಸಿತು.

ಇದರೊಂದಿಗೆ ಬಾಬರ್ ಆಜಂ ಬಳಗದ ಸೆಮಿಫೈನಲ್ ಹಾದಿಯು ಮತ್ತಷ್ಟು ಕಠಿಣವಾಯಿತು. ಒಂದು ವಿಕೆಟ್‌ನಿಂದ ಗೆದ್ದ ದಕ್ಷಿಣ ಆಫ್ರಿಕಾ ಅಂಕಪಟ್ಟಿಯಲ್ಲಿ ಮೊದಲ ಸ್ಥಾನಕ್ಕೆ ಜಿಗಿಯಿತು.

ಟೂರ್ನಿಯಲ್ಲಿ ತೆಂಬಾ ಬವುಮಾ ಬಳಗವು ಇಲ್ಲಿಯವರೆಗೆ ಗೆದ್ದಿದ್ದ ನಾಲ್ಕು ಪಂದ್ಯಗಳಲ್ಲಿಯೂ ನೂರು ರನ್‌ಗಳಿಗಿಂತ ಹೆಚ್ಚು ಅಂತರದ ಸುಲಭ ಜಯ ಸಾಧಿಸಿತ್ತು. ಆದರೆ ಇಲ್ಲಿ ಮಾತ್ರ ಜಯ ಸುಲಭವಾಗಿ ಒಲಿಯಲಿಲ್ಲ.

271 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡಕ್ಕೆ ಏಡನ್ ಮರ್ಕರಂ (91; 93ಎ 4X7, 6X3) ಅವರೊಬ್ಬರೇ ದೊಡ್ಡ ಇನಿಂಗ್ಸ್ ಆಡಿದರು. ಇದರಿಂದಾಗಿ ಜಯದ ಆಸೆ ಜೀವಂತವಾಗಿಟ್ಟರು. ಇಡೀ ಟೂರ್ನಿಯಲ್ಲಿ ಅಬ್ಬರಿಸಿದ್ದ ಉಳಿದ ಬ್ಯಾಟರ್‌ಗಳನ್ನು ಕಟ್ಟಿಹಾಕಿದ ಪಾಕ್ ಬೌಲರ್‌ಗಳು ಗೆಲುವಿನ ಅವಕಾಶವನ್ನು ತಮ್ಮತ್ತ ಎಳೆದುಕೊಂಡಿದ್ದರು.

ಆದರೆ ದಕ್ಷಿಣ ಆಫ್ರಿಕಾದ ಬಾಲಂಗೋಚಿ ಬ್ಯಾಟರ್‌ಗಳು ಪಾಕ್ ಆಸೆಗೆ ತಣ್ಣೀರೆರಚಿದರು. 250 ರನ್‌ಗಳಿಗೆ ಎಂಟು ವಿಕೆಟ್‌ಗಳನ್ನು ಕಳೆದುಕೊಂಡಿದ್ದ ತಂಡವನ್ನು ಕಟ್ಟಿಹಾಕುವಲ್ಲಿ ಬೌಲರ್‌ಗಳು ಎಡವಿದರು. ಕೇಶವ ಮಹಾರಾಜ್ (ಅಜೇಯ 7), ಲುಂಗಿ ಗಿಡಿ (4 ರನ್) ಮತ್ತು ತಬ್ರೇಜ್ ಶಂಸಿ (ಔಟಾಗದೆ 4) ಗೆಲುವಿನ ಕಾಣಿಕೆ ನೀಡಿದರು. ಅದರಲ್ಲೂ ಮಹಾರಾಜ್ ಮತ್ತು ಶಂಸಿ ಅವರು ಮುರಿಯದ ಹತ್ತನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 11 ರನ್‌ಗಳು ಮಹತ್ವದ್ದಾಗಿದ್ದವು. ಅವರಿಬ್ಬರೂ ಸೇರಿ ಎದುರಿಸಿದ 15 ಎಸೆತಗಳಲ್ಲಿ ಕೆಲವು ನಾಟಕೀಯ ತಿರುವುಗಳೂ ಇದ್ದವು.



ದಕ್ಷಿಣ ಆಫ್ರಿಕಾ ತಂಡದ ಏಡನ್ ಮರ್ಕರಂ ಅವರ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಹ್ಯಾರಿಸ್ ರವೂಫ್ ಹಾಕಿದ 46ನೇ ಓವರ್‌ನಲ್ಲಿ ಎಲ್‌ಬಿಡಬ್ಲ್ಯುಗಾಗಿ ಸಲ್ಲಿಸಿದ ಮನವಿಯೂ ಪಾಕಿಸ್ತಾನಕ್ಕೆ ಕೈಹಿಡಿಯಲಿಲ್ಲ. ಇದರಿಂದಾಗಿ ಶಂಸಿ ಔಟಾಗಲಿಲ್ಲ. 47ನೇ ಓವರ್‌ನಲ್ಲಿ ಇಬ್ಬರೂ ಎಚ್ಚರಿಕೆಯಿಂದ ಮೂರು ರನ್‌ಗಳನ್ನು ಮಾತ್ರ ಗಳಿಸಿದರು. 48ನೇ ಓವರ್ ಹಾಕಲು ಸ್ಪಿನ್ನರ್ ನವಾಜ್‌ಗೆ ಚೆಂಡು ಕೊಟ್ಟ ನಾಯಕ ಬಾಬರ್ ನಂತರ ಕೈಕೈ ಹಿಸುಕಿಕೊಂಡರು.

ಈ ಓವರ್‌ನ ಎರಡನೇ ಎಸೆತವನ್ನು ಬೌಂಡರಿಗೆ ಕಳಿಸಿದ ಮಹಾರಾಜ್ ಕುಣಿದು ಕುಪ್ಪಳಿಸಿದರು. ಪಾಕ್ ಆಟಗಾರರು ಹತಾಶೆಗೊಂಡರು.

ಎರಡು ಅರ್ಧಶತಕಗಳು: ಪಾಕ್ ತಂಡವು ಹೋರಾಟದ ಮೊತ್ತ ಪೇರಿಸಲು ಬಾಬರ್ ಆಜಂ ಮತ್ತು ಸೌದ್ ಶಕೀಲ್ ಗಳಿಸಿದ ಅರ್ಧಶತಕಗಳು ನೆರವಾದವು.

ಪಾಕಿಸ್ತಾನ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಮೊದಲ ಏಳು ಓವರ್‌ಗಳಲ್ಲಿಯೇ ಎರಡು ವಿಕೆಟ್ ಕಳೆದುಕೊಂಡಿತು. ವೇಗಿ ಮಾರ್ಕೊ ಜಾನ್ಸನ್ ಅವರ ಪರಿಣಾಮಕಾರಿ ದಾಳಿಯಿಂದಾಗಿ ಶಫೀಕ್ ಮತ್ತು ಇಮಾಮ್ ಉಲ್ ಹಕ್ ಅವರು ಪೆವಿಲಿಯನ್ ಸೇರಿದ್ದರು. ಈ ಹಂತದಲ್ಲಿ ನಾಯಕ ಬಾಬರ್ ಮತ್ತು ಮೊಹಮ್ಮದ್ ರಿಜ್ವಾನ್ ಅವರು ಜೊತೆಗೂಡಿ ದೊಡ್ಡ ಇನಿಂಗ್ಸ್ ಆಡುವ ಭರವಸೆ ಮೂಡಿಸಿದ್ದರು. ಆದರೆ, ಗೆರಾಲ್ಡ್ ಕೋಜಿ ಎಸೆತದಲ್ಲಿ ರಿಜ್ವಾನ್ ಔಟಾಗುವುದರೊಂದಿಗೆ ಜೊತೆಯಾಟ ಮುರಿದುಬಿತ್ತು.

ಆಗ ತಾಳ್ಮೆಯಿಂದ ಆಡಿದ ಬಾಬರ್ 65 ಎಸೆತಗಳಲ್ಲಿ 50 ರನ್ ಗಳಿಸಿದರು. ಆದರೆ ಇಫ್ತಿಕಾರ್ ಅಹಮದ್ 21 ರನ್ ಗಳಿಸಿ ಔಟಾದರು. ಈ ಸಂದರ್ಭದಲ್ಲಿ ಕ್ರೀಸ್ ಗೆ ಬಂದ ಶಕೀಲ್ ಆಟಕ್ಕೆ ಕುದುರುವಷ್ಟರಲ್ಲಿ ಬಾಬರ್ ಔಟಾದರು. ಶಕೀಲ್ ಜೊತೆಗೆ ಶಾದಾಬ್ ಖಾನ್ (43 ರನ್) ತಂಡದ ಮೊತ್ತ ಹೆಚ್ಚಲು ಕಾರಣರಾದರು.

ದಕ್ಷಿಣ ಆಫ್ರಿಕಾದ ಬೌಲರ್ ತಬ್ರೇಜ್ ಶಂಸಿ ನಾಲ್ಕು ವಿಕೆಟ್ ಗಳಿಸಿ ಪಾಕ್ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 46.4 ಓವರ್‌ಗಳಲ್ಲಿ 270 (ಬಾಬರ್ ಆಜಂ 50, ಮೊಹಮ್ಮದ್ ರಿಜ್ವಾನ್ 31, ಇಫ್ತಿಕಾರ್ ಅಹಮದ್ 21, ಸೌದ್ ಶಕೀಲ್ 52, ಶಾದಾಬ್ ಖಾನ್ 43, ಮೊಹಮ್ಮದ್ ನವಾಜ್ 24, ಮಾರ್ಕೊ ಜಾನ್ಸೆನ್ 43ಕ್ಕೆ3, ಗೆರಾಲ್ಡ್ ಕೋಜಿ 42ಕ್ಕೆ2, ತಬ್ರೇಜ್ ಶಂಸಿ 60ಕ್ಕೆ4)
ದಕ್ಷಿಣ ಆಫ್ರಿಕಾ: 47.2 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 271 (ತೆಂಬಾ ಬವುಮಾ 28, ಕ್ವಿಂಟನ್ ಡಿ ಕಾಕ್ 24, ರಸಿ ವ್ಯಾನ್ ಡೆರ್ ಡಸೆ 21, ಏಡನ್ ಮರ್ಕರಂ 91, ಡೇವಿಡ್ ಮಿಲ್ಲರ್ 29, ಮಾರ್ಕೊ ಜಾನ್ಸೆನ್ 20, ಕೇಶವ್ ಮಹಾರಾಜ್ ಔಟಾಗದೆ 7, ತಬ್ರೇಜ್ ಶಂಸಿ ಔಟಾಗದೇ 4, ಶಹೀನ್ ಅಫ್ರಿದಿ 45ಕ್ಕೆ3, ಹ್ಯಾರಿಸ್ ರವೂಫ್ 62ಕ್ಕೆ2, ಮೊಹಮ್ಮದ್ ವಸೀಂ ಜೂನಿಯರ್ 50ಕ್ಕೆ2, ಉಸಾಮ ಮೀರ್ 45ಕ್ಕೆ2)
ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 1 ವಿಕೆಟ್ ಜಯ ಮತ್ತು 2 ಅಂಕ.

ಗರ್ಜಿಸಬಲ್ಲರೇ 'ಬಾಂಗ್ಲಾ ಹುಲಿಗಳು'?

ಈಡನ್ ಗಾರ್ಡನ್ಸ್‌ನಲ್ಲಿ ಇಂದು ನೆದರ್ಲೆಂಡ್ಸ್ ವಿರುದ್ಧ ಪಂದ್ಯ

ಕೋಲ್ಕತ್ತ (ಪಿಟಿಐ): ಸೆಮಿಫೈನಲ್ ತಲುಪುವ ಕ್ಷೀಣ ಆಸೆಯನ್ನು ಉಳಿಸಿಕೊಂಡಿರುವ ಬಾಂಗ್ಲಾದೇಶ ತಂಡ ಶನಿವಾರ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ. ಎರಡೂ ತಂಡಗಳು ಐದು ಪಂದ್ಯಗಳಲ್ಲಿ ಒಂದನ್ನು ಮಾತ್ರ ಗೆದ್ದಿದ್ದು ನಿರ್ಗಮನದ ಹಾದಿಯಲ್ಲಿವೆ.

ಇದು ಹಾಲಿ ವಿಶ್ವಕಪ್‌ನಲ್ಲಿ ಕೋಲ್ಕತ್ತದ ಹೆಗ್ಗುರುತಾದ ಈ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೊದಲ ಪಂದ್ಯವೂ ಆಗಿದೆ. ಈ ವಿಶ್ವಕಪ್‌ನಲ್ಲಿ ಐದು ಪಂದ್ಯಗಳಿಗೆ ಈ ಕ್ರೀಡಾಂಗಣ ಆತಿಥ್ಯ ವಹಿಸಲಿದ್ದು, ಇದರಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಪಂದ್ಯವೂ ಒಳಗೊಂಡಿದೆ. ಎರಡನೇ ಸೆಮಿಫೈನಲ್ ಪಂದ್ಯಕ್ಕೂ ಇದೇ ಮೈದಾನ ವೇದಿಕೆಯಾಗಿದೆ.

ಈ ಟೂರ್ನಿಯಲ್ಲಿ ಅಫ್ಗಾನಿಸ್ತಾನ ವಿರುದ್ಧ ಅರ್ಹ ಗೆಲುವಿನೊಡನೆ ಅಭಿಯಾನ ಆರಂಭಿಸಿದ್ದ 'ಬಾಂಗ್ಲಾ ಹುಲಿಗಳ' ಆರ್ಭಟ ನಂತರ ಕ್ಷೀಣವಾಗಿದೆ. ಸ್ಥಿರ ಪ್ರದರ್ಶನ ನೀಡುವಲ್ಲಿ ತಂಡ ಸೋತಿದೆ. ಇನ್ನು ಆ ತಂಡವು ಮುಂದಿನ ಪಂದ್ಯಗಳಲ್ಲಿ ಇಂಗ್ಲೆಂಡ್, ಭಾರತ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಆಡಬೇಕಾಗಿದೆ. ಹೀಗಾಗಿ ಅದರ ಹಾದಿ ದುರ್ಗಮವಾಗಿದೆ.

ಸತತ ನಾಲ್ಕು ಸೋಲುಗಳಿಂದ ತಂಡದೊಳಗಿನ ವಾತಾವರಣ ಕದಡಿದೆ. ನಾಯಕ ಶಕಿಬ್ ಅಲ್ ಹಸನ್ ತವರಿಗೆ ತರಳಿ ಬಾಲ್ಯದ ಕೋಚ್ ನಜ್ಮುಲ್ ಫಾಹಿಂ ಅವರಿಂದ ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರ ಕೇಳಿಕೊಂಡುಬಂದಿದ್ದಾರೆ. ನಾಲ್ಕು ಇನಿಂಗ್ಸ್‌ಗಳಿಂದ ಅವರು 56 ರನ್ ಮಾತ್ರ ಗಳಿಸಿದ್ದಾರೆ. ಆರು ವಿಕೆಟ್‌ಗಳನ್ನು ಪಡೆದಿದ್ದಾರೆ. ಐಪಿಎಲ್‌ನಲ್ಲಿ ತಮ್ಮ ತವರು ಮೈದಾನದಲ್ಲಿ ಅವರು ಎಂದಿನ ಆಲ್‌ರೌಂಡ್ ಆಟ ಪ್ರದರ್ಶಿಸುವರೊ ಎಂಬ ಕುತೂಹಲ ಮೂಡಿದೆ.

ಎಡಗೈ ಬ್ಯಾಟರ್ ನಜ್ಮುಲ್ ಹೊಸೇನ್ ಶಾಂತೊ ಅವರೂ ರನ್ ಬರ ಎದುರಿಸುತ್ತಿದ್ದಾರೆ. ಇದು ತಂಡಕ್ಕೆ ದೊಡ್ಡ ಹಿನ್ನಡೆ. ಏಷ್ಯಾ ಕಪ್‌ನಲ್ಲಿ ಮಿಂಚಿದ್ದ ತೌಹಿದ್ ಹೃದಯ್ ಕತೆ ಬೇರೆಯಲ್ಲ. ಅನುಭವಿ ಬ್ಯಾಟರ್ ಮಹಮೂದುಲ್ಲಾ ಒಂದು ಶತಕ ಗಳಿಸಿದ್ದು ತಂಡಕ್ಕೆ ಚೂರು ನೆಮ್ಮದಿ ಮೂಡಿಸಿದೆ. ಲಿಟ್ಟನ್ ದಾಸ್ ಅವರೂ ಎರಡು ಅರ್ಧ ಶತಕ ಗಳಿಸಿದ್ದಾರೆ. ಬೌಲಿಂಗ್‌ನಲ್ಲೂ ಯಾರೂ ಸ್ಥಿರ ಪ್ರದರ್ಶನ ನೀಡುತ್ತಿಲ್ಲ.

ಈಗ ಅಬ್ಬರಿಸುತ್ತಿರುವ ದಕ್ಷಿಣ ಆಫ್ರಿಕಾಕ್ಕೆ ಧರ್ಮಶಾಲಾದಲ್ಲಿ 'ಶಾಕ್' ನೀಡಿದ್ದ ನೆದರ್ಲೆಂಡ್ಸ್ ನಂತರ ಅಂತಹದ್ದೇ ಸ್ಫೂರ್ತಿಯುತ ಪ್ರದರ್ಶನ ನೀಡಿಲ್ಲ. ಈ ಪಂದ್ಯದ ನಂತರ ಶ್ರೀಲಂಕಾಕ್ಕೆ ಸೋತ ಡಚ್ ಪಡೆ ಕೊನೆಯ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 309 ರನ್‌ಗಳ ಮುಖಭಂಗ ಅನುಭವಿಸಬೇಕಾಯಿತು.

ಗಾಯಗೊಂಡ ಬಾಂಗ್ಲಾಹುಲಿಗಳು ಎಷ್ಟರ ಮಟ್ಟಿಗೆ ಗರ್ಜಿಸಬಹುದೆಂಬುದಷ್ಟೇ ಉಳಿದಿರುವ ಕುತೂಹಲ. ಈ ತಂಡಗಳು ಹಿಂದೆ 2 ಬಾರಿ ಎದುರಾಳಿಗಳಾಗಿದ್ದು ತಲಾ ಒಂದು ಪಂದ್ಯ ಗೆದ್ದಿವೆ.

ಪಂದ್ಯ ಆರಂಭ: ಮಧ್ಯಾಹ್ನ 2.00



ಬಾಂಗ್ಲಾದೇಶ ತಂಡದ ಶೊರೀಫುಲ್ ಇಸ್ಲಾಮ್ ಅವರಿಗೆ ಬೌಲಿಂಗ್ ಕೋಚ್ ಆ್ಯಲನ್ ಡೊನಾಲ್ಡ್ ಮಾರ್ಗದರ್ಶನ ನೀಡಿದರು –ಪಿಟಿಐ ಚಿತ್ರ

'ಸೆಮಿಫೈನಲ್‌ನಲ್ಲಿ ರನೌಟ್ ಆದಾಗಲೇ ನಿವೃತ್ತಿಯಾದೆ'

ಮುಂಬೈ (ಪಿಟಿಐ): ನಾಲ್ಕು ವರ್ಷಗಳ ಹಿಂದೆ ಇಂಗ್ಲೆಂಡ್‌ನ ಮ್ಯಾಂಚೆಸ್ಟರ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾರತ ಕ್ರಿಕೆಟ್ ತಂಡವು ಅನುಭವಿಸಿದ್ದ ಆಘಾತವನ್ನು ಕ್ರಿಕೆಟ್ ಪ್ರೇಮಿಗಳೂ ಮರೆಯಲು ಸಾಧ್ಯವೇ ಇಲ್ಲ.

ಆ ಪಂದ್ಯದಲ್ಲಿ ರನೌಟ್ ಆಗುವುದರ ಜೊತೆಗೆ ತಂಡ ಸೋಲಿನೆಡೆಗೆ ಜಾರಿತ್ತು. ಹನಿಗೂಡಿದ್ದ ಕಂಗಳೊಂದಿಗೆ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದ್ದ ಧೋನಿ ಅಂದೇ ಅಂತರರಾಷ್ಟ್ರೀಯ ಕ್ರಿಕೆಟ್ ನಿವೃತ್ತಿಯಾಗುವ ನಿರ್ಧಾರ ತೆಗೆದುಕೊಂಡಿದ್ದರಂತೆ. ಆದ್ದರಿಂದಲೇ ಅವರು ಅದರ ನಂತರ ಯಾವುದೇ ಪಂದ್ಯದಲ್ಲ ಆಡಲಿಲ್ಲ.

ಈ ಕುರಿತು ಅವರು ಈಚೆಗೆ ಬೆಂಗಳೂರಿನಲ್ಲಿ ಮನಬಿಚ್ಚಿ ಮಾತನಾಡಿದ್ದಾರೆ.

'ರನೌಟ್ ಆಗಿ ಡ್ರೆಸಿಂಗ್ ಕೋಣೆಗೆ ತೆರಳುವಷ್ಟರಲ್ಲಿಯೇ ನನ್ನ ನಿವೃತ್ತಿಯ ನಿರ್ಧಾರ ಮನದಲ್ಲಿ ಗಟ್ಟಿಯಾಗಿತ್ತು. ಇವತ್ತು ಭಾರತ ತಂಡದಲ್ಲಿ ನನ್ನ ಕೊನೆಯ ದಿನವೆಂದು ತೀರ್ಮಾನಿಸಿದ್ದೆ. ಅದಾಗಿ ಒಂದು ವರ್ಷದ ನಂತರ ನಿವೃತ್ತಿ ಪ್ರಕಟಿಸಿದ್ದೆ' ಎಂದು ಧೋನಿ ಹೇಳಿದ್ದಾರೆ.

'ನಿಕಟ ಪೈಪೋಟಿಯ ಪಂದ್ಯಗಳಲ್ಲಿ ಆಡುವಾಗ ನಮ್ಮ ಭಾವನೆಗಳನ್ನು ನಿಯಂತ್ರಿಸುವುದು ಸುಲಭವಲ್ಲ. ಅದರಲ್ಲೂ ಅಂತಹ ಪಂದ್ಯಗಳನ್ನು ಸೋತಾಗ ಇನ್ನೂ ಕಷ್ಟ' ಎಂದಿದ್ದಾರೆ.



ಮಹೇಂದ್ರಸಿಂಗ್ ಧೋನಿ ರನೌಟ್ ಆಗಿದ್ದ ಕ್ಷಣ –ಎಎಫ್‌ಪಿ ಚಿತ್ರ

ಧರ್ಮಶಾಲಾದಲ್ಲಿ ಜಂಪಾ–ಸ್ಯಾಂಟನರ್ ಸ್ಪಿನ್ ಪೈಪೋಟಿಗೆ ವೇದಿಕೆ ಸಿದ್ಧ; ವಾರ್ನರ್ ಮೇಲೆ ಕಣ್ಣು

ಆಸ್ಟ್ರೇಲಿಯಾ–ಕಿವೀಸ್ ಸೆಣಸು

ಬಲಾಬಲ (ಏಕದಿನ ಕ್ರಿಕೆಟ್)
ಪಂದ್ಯ; 141
ಆಸ್ಟ್ರೇಲಿಯಾ ಜಯ; 95
ನ್ಯೂಜಿಲೆಂಡ್ ಜಯ; 39
ಫಲಿತಾಂಶವಿಲ್ಲ; 7



ಆಸ್ಟ್ರೇಲಿಯಾ ತಂಡದ ಸ್ಪಿನ್ನರ್ ಆ್ಯಡಂ ಜಂಪಾ – ಎಎಫ್‌ಪಿ ಚಿತ್ರ

ಧರ್ಮಶಾಲಾ (ಪಿಟಿಐ): ಟ್ರಾನ್ಸ್ ಟಾಸ್ಮನ್ ಪ್ರತಿಸ್ಪರ್ಧಿಗಳಾದ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ತಂಡಗಳು ಶನಿವಾರ ಇಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಸೆಣಸಲಿವೆ.

ಎರಡೂ ಸಾಂಪ್ರದಾಯಿಕ ಎದುರಾಳಿಗಳಾಗಿದ್ದು ರೋಚಕ ಹಣಾಹಣಿಯ ನಿರೀಕ್ಷೆಯಲ್ಲಿ ಅಭಿಮಾನಿಗಳಿದ್ದಾರೆ. ಹೋದ ಸಲದ ರನ್ನರ್ ಅಪ್ ನ್ಯೂಜಿಲೆಂಡ್ ಈ ಸಲವೂ ಉತ್ತಮವಾಗಿ ಆಡುತ್ತಿದೆ. ಆಡಿರುವ ಐದು ಪಂದ್ಯಗಳಲ್ಲಿ ನಾಲ್ಕರಲ್ಲಿ ಗೆದ್ದಿದೆ. ಆರಂಭಿಕ ಪಂದ್ಯದಲ್ಲಿಯೇ ಹಾಲಿ ಚಾಂಪಿಯನ್ ಇಂಗ್ಲೆಂಡ್ ವಿರುದ್ಧ ಜಯಿಸಿತ್ತು. ತನ್ನ ಐದನೇ ಪಂದ್ಯದಲ್ಲಿ ಭಾರತದ ಎದುರು ಮಣಿದಿತ್ತು.

ಕಿವೀಸ್ ಬಳಗದ ನಾಯಕ ಕೇನ್ ವಿಲಿಯಮ್ಸನ್ ಈ ಪಂದ್ಯದಲ್ಲಿಯೂ ಆಡುವುದಿಲ್ಲ. ಆದ್ದರಿಂದ ಟಾಮ್ ಲಥಾಮ್ ತಂಡವನ್ನು ಮುನ್ನಡೆಸಲಿದ್ದಾರೆ. ತಂಡದ ಬ್ಯಾಟಿಂಗ್ ವಿಭಾಗ ಉತ್ತಮವಾಗಿದೆ. ಡೇವೊನ್ ಕಾನ್ವೆ (249 ರನ್), ಬೆಂಗಳೂರು ಮೂಲದ ರಚಿನ್ ರವೀಂದ್ರ (290 ರನ್) ಹಾಗೂ ಡೆರಿಲ್ ಮಿಚೆಲ್ (268 ರನ್) ಅಮೋಘ ಲಯದಲ್ಲಿದ್ದಾರೆ. ಕಾನ್ವೆ ಇಂಗ್ಲೆಂಡ್ ವಿರುದ್ಧ ಶತಕ ಬಾರಿಸಿದ್ದರು. ರಚಿನ್ ಕೂಡ ಅದೇ ಪಂದ್ಯದಲ್ಲಿ ನೂರರ ಗಡಿ ದಾಟಿದ್ದರು.

ಟಾಮ್ ಮತ್ತು ವಿಲ್ ಯಂಗ್ ಲಯಕ್ಕೆ ಮರಳಿದರೆ ತಂಡದ ಬ್ಯಾಟಿಂಗ್ ಮತ್ತಷ್ಟು ಬಲಶಾಲಿಯಾಗುವುದು. ಈ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಬೌಲರ್‌ಗಳಾದ ಮಿಚೆಲ್ ಸ್ಟಾರ್ಕ್, ಜೋಷ್ ಹ್ಯಾಜಲ್‌ವುಡ್, ಸ್ಪಿನ್ನರ್ ಆ್ಯಡಂ ಜಂಪಾ ಅವರ ಮುಂದಿದೆ.

ಬೌಲಿಂಗ್‌ನಲ್ಲಿ ಮ್ಯಾಟ್ ಹೆನ್ರಿ (10 ವಿಕೆಟ್), ಲಾಕಿ ಫರ್ಗ್ಯುಸನ್ (8 ವಿಕೆಟ್) ಮತ್ತು ಟ್ರೆಂಟ್ ಬೌಲ್ಟ್ (6 ವಿಕೆಟ್) ಎದುರಾಳಿ ಪಡೆಯ ಜೊತೆಯಾಟಗಳನ್ನು ಮುರಿಯುವಲ್ಲಿ ಪರಿಣಾಮಕಾರಿಯಾಗಿದ್ದಾರೆ. ಕಿವೀಸ್ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ 12 ವಿಕೆಟ್ ಗಳಿಸಿದ್ದು, ಅವರಿಗಿಂತ ಆಸ್ಟ್ರೇಲಿಯಾದ ಆ್ಯಡಂ ಜಂಪಾ (13) ಒಂದು ವಿಕೆಟ್ ಹೆಚ್ಚು ಗಳಿಸಿದ್ದಾರೆ. ಈ ಪಂದ್ಯದಲ್ಲಿ ಇವರಿಬ್ಬರ ಸತ್ವಪರೀಕ್ಷೆಯೂ ನಡೆಯಲಿದೆ.



ನ್ಯೂಜಿಲೆಂಡ್ ತಂಡದ ನಾಯಕ ಟಾಮ್ ಲಥಾಮ್ –ಎಎಫ್‌ಪಿ ಚಿತ್ರ

ಅದರಲ್ಲೂ ಸ್ಯಾಂಟನರ್ ಅವರಿಗೆ ಆಸ್ಟ್ರೇಲಿಯಾದ ಬ್ಯಾಟರ್‌ಗಳಿಂದ ಕಠಿಣ ಪೈಪೋಟಿ ಎದುರಾಗಬಹುದು. ಟೂರ್ನಿಯ ಮೊದಲೆರಡೂ ಪಂದ್ಯಗಳಲ್ಲಿ ಸೋತಿದ್ದ ಆಸ್ಟ್ರೇಲಿಯಾ ಪುಟಿದೆದ್ದು ಸತತ ಮೂರು ಜಯ ಗಳಿಸಿದೆ. ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ (332 ರನ್) ಎರಡು ಶತಕ ಗಳಿಸಿದ್ದಾರೆ. ಮಿಚೆಲ್ ಮಾರ್ಷ್ ಕೂಡ ಒಂದು ಶತಕ ಹೊಡೆದು ಉತ್ತಮ ಲಯದಲ್ಲಿದ್ದಾರೆ.

ಆದರೆ ಮಾರ್ನಸ್ ಲಾಬುಷೇನ್ ಮತ್ತು ಸ್ಟೀವ್ ಸ್ಮಿತ್ ಅವರು ಅಬ್ಬರಿಸುತ್ತಿಲ್ಲ. ಇದರಿಂದಾಗಿ ಮಧ್ಯಮ ಕ್ರಮಾಂಕ ದುರ್ಬಲವಾಗಿದೆ.

ಅಲ್ಲದೇ ಆಸ್ಟ್ರೇಲಿಯಾ ತಂಡವು ಫೀಲ್ಡಿಂಗ್ ವಿಭಾಗದಲ್ಲಿ ಹೆಚ್ಚು ಸುಧಾರಣೆ ಕಾಣಬೇಕಾದ ಅವಶ್ಯಕತೆ ಇದೆ..

ಉಭಯ ತಂಡಗಳು 2019ರಿಂದ 2022ರವರೆಗೆ ಮುಖಾಮುಖಿಯಾದ ಐದು ಪಂದ್ಯಗಳಲ್ಲಿಯೂ ಆಸ್ಟ್ರೇಲಿಯಾ ಗೆದ್ದಿದೆ. ಆ ಸೋಲುಗಳ ಮುಯ್ಯಿ ತೀರಿಸಿಕೊಳ್ಳಲು ಕಿವೀಸ್‌ಗೆ ಇಲ್ಲಿ ಅವಕಾಶ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 10.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್.

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ದಕ್ಷಿಣ ಆಫ್ರಿಕಾ	6	5	1	0	10	2.032
ಭಾರತ	5	5	0	0	10	1.353
ನ್ಯೂಜಿಲೆಂಡ್	5	4	1	0	8	1.481
ಆಸ್ಟ್ರೇಲಿಯಾ	5	3	2	0	6	1.142
ಶ್ರೀಲಂಕಾ	5	2	3	0	4	-0.205
ಪಾಕಿಸ್ತಾನ	6	2	4	0	4	-0.387
ಅಫ್ಗಾನಿಸ್ತಾನ	5	2	3	0	4	-0.969
ಬಾಂಗ್ಲಾದೇಶ	5	1	4	0	2	-1.253
ಇಂಗ್ಲೆಂಡ್	5	1	4	0	2	-1.634
ನೆದರ್ಲೆಂಡ್ಸ್	5	1	4	0	2	-1.902

ಬ್ಯಾಸ್ಕೆಟ್‌ಬಾಲ್: ಜೈನ್ ಕಾಲೇಜಿಗೆ ಜಯ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಜೈನ್ ಕಾಲೇಜು ತಂಡದವರು ಇಲ್ಲಿ ನಡೆಯುತ್ತಿರುವ 'ಚಾಲೆಂಜರ್ಸ್ ಕಪ್' ಅಂತರರಾಜ್ಯ ಪದವಿ ಕಾಲೇಜು ಬ್ಯಾಸ್ಕೆಟ್ ಬಾಲ್ ಟೂರ್ನಿಯಲ್ಲಿ ಕೊಯಮತ್ತೂರಿನ ಕುಮಾರ ಗುರು ಕಾಲೇಜು ತಂಡದ ವಿರುದ್ಧ ಜಯಗಳಿಸಿದರು.

ಮೈಸೂರು ವಿಶ್ವವಿದ್ಯಾಲಯದ ಬ್ಯಾಸ್ಕೆಟ್‌ಬಾಲ್ ಅಂಗಳದಲ್ಲಿ ಶುಕ್ರವಾರ ನಡೆದ ಲೀಗ್ ಹಂತದ ಪಂದ್ಯದಲ್ಲಿ ಜೈನ್ ಕಾಲೇಜು ತಂಡವು 68–44 ಪಾಯಿಂಟ್‌ಗಳಿಂದ ಕೊಯಮತ್ತೂರು ತಂಡವನ್ನು ಮಣಿಸಿತು. ತಂಡಕ್ಕೆ ಆರೋನ್ 23 ಪಾಯಿಂಟ್ ಗಳಿಸಿದರು.

ಮೈಸೂರಿನ ಮೈಕಾ ಕಾಲೇಜು ತಂಡದವರು ಕ್ಷಿತಿಜ್ (14 ಪಾಯಿಂಟ್) ಅವರ ಮನೋಜ್ಞ ಆಟದ ಬಲದಿಂದ ಬೆಂಗಳೂರಿನ ಕ್ರಿಸ್ತು ಜಯಂತಿ ಕಾಲೇಜು ತಂಡದ ವಿರುದ್ಧ 45–39 ಪಾಯಿಂಟ್‌ಗಳಿಂದ ಜಯಗಳಿಸಿದರು. ಕೊಯಮತ್ತೂರಿನ ಪಿಎಸ್‌ಜಿ ಕಾಲೇಜು ತಂಡದವರು ಬೆಂಗಳೂರಿನ ಸಿಂಧಿ ಕಾಲೇಜು ತಂಡವನ್ನು 72–21 ಪಾಯಿಂಟ್‌ಗಳಿಂದ ಸೋಲಿಸಿದರು.

ತಿರುಚಿನಾಪಳ್ಳಿಯ ಸೇಂಟ್ ಜೋಸೆಫ್ ಕಾಲೇಜು, ಬೆಂಗಳೂರಿನ ಪಿಇಎಸ್ ಕಾಲೇಜು ವಿರುದ್ಧ 69–67 ಪಾಯಿಂಟ್‌ಗಳಿಂದ ಗೆದ್ದಿತು.

ಅರ್ಜುನ್, ಸೇನ್‌ಗೆ ಒಲಿಂಪಿಕ್ ಕೋಟಾ

ನವದೆಹಲಿ (ಪಿಟಿಐ): ಭಾರತದ ಅರ್ಜುನ್ ಬಬುಟಾ ಮತ್ತು ತಿಲೋತ್ತಮಾ ಸೇನ್ ಅವರು ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. ಒಲಿಂಪಿಕ್ ಕೋಟಾ ಸ್ಥಾನವನ್ನೂ ಗಿಟ್ಟಿಸಿಕೊಂಡರು.

ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ವೈಯಕ್ತಿಕ ಬೆಳ್ಳಿಯ ಜೊತೆಗೆ, 24 ವರ್ಷದ ಬಬುಟಾ ಅವರು ದಿವ್ಯಾಂಶ್ ಪನ್ವರ್, ಹೃದಯ್ ಹಝಾರಿಕಾ ಜೊತೆಗೂಡಿ ತಂಡ ಸ್ಪರ್ಧೆಯಲ್ಲಿ ಭಾರತ ಚಿನ್ನ ಗೆಲ್ಲಲು ನೆರವಾದರು. ಭಾರತ 1892.5 ಪಾಯಿಂಟ್ಸ್ ಕಲೆಹಾಕಿತು.

ಬಬುಟಾ ಎಂಟು ಮಂದಿಯಿದ್ದ ಫೈನಲ್‌ನಲ್ಲಿ 251.2 ಸ್ಕೋರ್ ಗಳಿಸಿ ಎರಡನೇ ಸ್ಥಾನ ಪಡೆದರು. 2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದ ಚೀನಾದ ಶೆಂಗ್ ಲಿಹಾವೊ (252.1) ಮೊದಲಿಗರಾದರು. ದಿವ್ಯಾಂಶ್ ಸಹ ಫೈನಲ್‌ಗೆ ಅರ್ಹತೆ ಪಡೆದಿದ್ದರೂ ನಾಲ್ಕನೇ ಸ್ಥಾನ (209.6) ಗಳಿಸಿದರು. ಬಬುಟಾ ಅವರು ಒಲಿಂಪಿಕ್ ಕೋಟಾ ಗಿಟ್ಟಿಸಿದ ಭಾರತ 9ನೇ ಶೂಟರ್ ಎನಿಸಿದರು.

15 ವರ್ಷದ ತಿಲೋತ್ತಮಾ 252.3 ಪಾಯಿಂಟ್ಸ್ ಗಳಿಸಿ ಒಲಿಂಪಿಕ್ ಕೋಟಾ ಗಳಿಸಿದ 10ನೇ ಭಾರತೀಯ ಶೂಟರ್ ಎನಿಸಿದರು. ಅವರಿಗೆ ಚಿನ್ನ ಕೂದಲೆಳೆಯಲ್ಲಿ ಕೈತಪ್ಪಿತು. ಕೊರಿಯಾದ ಕ್ವೊನ್ ಯುನ್‌ಜಿ (252.4) ಅಗ್ರಸ್ಥಾನದೊಡನೆ ಚಿನ್ನ ಗೆದ್ದರು. ಭಾರತದ ರಮಿತಾ ಜಿಂದಾಲ್ (230.6) ಕಂಚಿನ ಪದಕ ಗಳಿಸಿದರು.

ಕೋಟಾ ಆಧಾರದಲ್ಲಿ ಇದುವರೆಗೆ ಭಾರತದ ಏಳು ಮಂದಿ ರೈಫಲ್ ವಿಭಾಗದಲ್ಲಿ, ಇಬ್ಬರು ಶಾಟ್‌ಗನ್ ವಿಭಾಗದಲ್ಲಿ ಮತ್ತು ಒಬ್ಬರು ಮಾತ್ರ ಪಿಸ್ತೂಲ್ ವಿಭಾಗದಲಿ ಒಲಿಂಪಿಕ್ಸ್‌ಗೆ ಆಯ್ಕೆಯಾಗಿದ್ದಾರೆ.

ಸೀನಿಯರ್ ಮತ್ತು ಜೂನಿಯರ್ ಸ್ಕೀಟ್ಸ್ ಮಿಶ್ರ ತಂಡಗಳು ಚಿನ್ನ ಗೆದ್ದುಕೊಂಡವು. ಸೀನಿಯರ್ ವಿಭಾಗದಲ್ಲಿ ಅನಂತ್ ಜೀತ್ ಸಿಂಗ್ ನರೂಕಾ ಮತ್ತು ದರ್ಶನಾ ರಾಥೋಡ್ ಸ್ವರ್ಣ ಪದಕಕ್ಕೆ ಮುತ್ತಿಟ್ಟರೆ, ಜೂನಿಯರ್ ವಿಭಾಗದಲ್ಲಿ ಹರ್ಮೆಹರ್ ಲಾಲಿ ಮತ್ತು ರೈಝಾ ಧಿಲ್ಲೋನ್ ಭಾರತಕ್ಕೆ ಇನ್ನೊಂದು ಚಿನ್ನ ಗೆದ್ದುಕೊಟ್ಟರು.

ಪ್ಯಾರಾ ಏಷ್ಯನ್ ಗೇಮ್ಸ್: ಆರ್ಚರಿಯಲ್ಲಿ ಸಾಧನೆ

ಶೀತಲ್ ದೇವಿಗೆ 'ಚಿನ್ನ ಡಬಲ್'

ಹಾಂಗ್‌ಝೌ (ಪಿಟಿಐ): ಆರ್ಚರಿ ಸ್ಪರ್ಧಿ ಶೀತಲ್ ದೇವಿ ಅವರು ಪ್ಯಾರಾ ಏಷ್ಯನ್ ಕ್ರೀಡಾಕೂಟದ ಒಂದೇ ಆವೃತ್ತಿಯಲ್ಲಿ ಎರಡು ಚಿನ್ನ ಗೆದ್ದ ಭಾರತದ ಮೊದಲ ಮಹಿಳಾ ಕ್ರೀಡಾಪಟು ಎಂಬ ಗೌರವಕ್ಕೆ ಪಾತ್ರರಾದರು.

ಶುಕ್ರವಾರ ನಡೆದ ಮಹಿಳೆಯರ ವೈಯಕ್ತಿಕ ಕಾಂಪೌಂಡ್ ವಿಭಾಗದ ಫೈನಲ್‌ನಲ್ಲಿ ಅವರು 144–142 ರಿಂದ ಸಿಂಗಪುರದ ಅಲೀಮ್ ನೂರ್ ಸಯೀದಾ ವಿರುದ್ಧ ಗೆದ್ದರು. ಇದಕ್ಕೂ ಮುನ್ನ ಅವರು ಮಹಿಳೆಯರ ತಂಡ ವಿಭಾಗದಲ್ಲಿ ಬಂಗಾರ ಜಯಿಸಿದ್ದರು.

ಜಮ್ಮು ಮತ್ತು ಕಾಶ್ಮೀರದ 16 ವರ್ಷದ ಶೀತಲ್ ಅವರಿಗೆ ಎರಡೂ ಕೈಗಳಿಲ್ಲ. ಕಾಲಿನಿಂದಲೇ ಬಿಲ್ಲು–ಬಾಣ ಹಿಡಿದು ಗುರಿ ನಿಖರ ಗುರಿ ಸಾಧಿಸುವಲ್ಲಿ ಯಶಸ್ವಿಯಾದರು. ಮಹಿಳೆಯರ ಡಬಲ್ಸ್‌ನಲ್ಲಿ ಬೆಳ್ಳಿ ಜಯಿಸಿದ್ದ ಅವರು ಈ ಕೂಟದಲ್ಲಿ 'ಹ್ಯಾಟ್ರಿಕ್' ಪದಕಗಳ ಸಾಧನೆಗೆ ಭಾಜನರಾದರು.

ಮುಂದುವರಿದ ಪದಕ ಬೇಟೆ: ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಪದಕ ಬೇಟೆ ಮುಂದುವರಿಸಿದ್ದಾರೆ. ಶುಕ್ರವಾರದ ಸ್ಪರ್ಧೆಗಳ ಅಂತ್ಯಕ್ಕೆ ಭಾರತ ಒಟ್ಟು 99 ಪದಕಗಳನ್ನು ಜಯಿಸಿದೆ. ಒಂದು ದಿನದ ಸ್ಪರ್ಧೆಗಳು ಬಾಕಿಯುಳಿದಿದ್ದು, ಭಾರತ ಆರನೇ ಸ್ಥಾನದಲ್ಲಿದೆ.



ಮಹಿಳೆಯರ ಕಾಂಪೌಂಡ್ ಆರ್ಚರಿಯಲ್ಲಿ ಚಿನ್ನ ಗೆದ್ದ ಶೀತಲ್ ದೇವಿ –ಪಿಟಿಐ ಚಿತ್ರ

ಹಾಲಿ ಪ್ಯಾರಾಲಿಂಪಿಕ್ ಚಾಂಪಿಯನ್ ಪ್ರಮೋದ್ ಭಗತ್, ಸಿಂಗಲ್ಸ್ ಎಸ್‌ಎಲ್3 ವಿಭಾಗದಲ್ಲಿ ಚಿನ್ನ ಗೆದ್ದರು. ಫೈನಲ್‌ನಲ್ಲಿ ಅವರು 22–20, 21–19 ರಿಂದ ಭಾರತದವರೇ ಆದ ನಿತೇಶ್ ಕುಮಾರ್ ಅವರನ್ನು ಮಣಿಸಿದರು.

ಮಹಿಳೆಯರ ಎಸ್‌ಯು5 ವಿಭಾಗದ ಚಿನ್ನದ ಪದಕ ತುಳಸಿಮತಿ ಮುರುಗೇಶನ್ ಅವರಿಗೆ ಒಲಿಯಿತು. ಭಾರತದ ಆಟಗಾರ್ತಿ ಫೈನಲ್‌ನಲ್ಲಿ 21–19, 21–19 ರಿಂದ ಆತಿಥೇಯ ದೇಶದ ಯಾಂಗ್ ಕ್ವಿಯುಕ್ಸಿಯಾ ವಿರುದ್ಧ ಗೆದ್ದರು. ಕೃಷ್ಣನಗಾರ್ ಅವರು ಪುರುಷರ ಎಸ್‌ಎಚ್6 ವಿಭಾಗದ ಫೈನಲ್‌ನಲ್ಲಿ 10–21, 21–8, 11–21 ರಿಂದ ಚು ಮಾನ್ ಕಾಯ್ ಎದುರು ಸೋತು ಬೆಳ್ಳಿ ತಮ್ಮದಾಗಿಸಿಕೊಂಡರು.

₹ 2 ಕೋಟಿ ಬಹುಮಾನ: (ಭುನೇಶ್ವರ ವರದಿ): ಏಷ್ಯನ್ ಗೇಮ್ಸ್‌ನಲ್ಲಿ 1 ಚಿನ್ನ, 2 ಬೆಳ್ಳಿ ಗೆದ್ದ ಬ್ಯಾಡ್ಮಿಂಟನ್ ಆಟಗಾರ ಪ್ರಮೋದ್ ಭಗತ್ ಅವರಿಗೆ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ₹ 2 ಕೋಟಿ ನಗದು ಬಹುಮಾನ ಪ್ರಕಟಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕುಸ್ತಿ: ರೀತಿಕಾ ಚಾರಿತ್ರಿಕ ಸಾಧನೆ

ಟಿರಾನಾ, ಅಲ್ಬೇನಿಯಾ (ಪಿಟಿಐ): ಯುವ ಕುಸ್ತಿಪಟು ರೀತಿಕಾ ಹೂಡಾ ಅವರು 23 ವರ್ಷದೊಳಗಿನವರ ವಿಭಾಗದಲ್ಲಿ ವಿಶ್ವಚಾಂಪಿಯನ್ ಆದ ಭಾರತದ ಮೊದಲ ಮಹಿಳಾ ಕುಸ್ತಿಪಟು ಎನಿಸಿಕೊಂಡರು.

ಶುಕ್ರವಾರ ನಡೆದ 76 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಅವರು 9–2 ರಿಂದ ಅಮೆರಿಕದ ಕೆನೆಡಿ ಅಲೆಕ್ಸಿಸ್ ಬ್ಲೆಡ್ಸ್ ವಿರುದ್ಧ ಗೆದ್ದರು. ಜ್ಯೋತಿ ಬೆರ್ವಾಲ್ ಅವರು ಮಹಿಳೆಯರ 72 ಕೆ.ಜಿ. ವಿಭಾಗದ ಫೈನಲ್ ಪ್ರವೇಶಿಸಿದ್ದು, ಚಿನ್ನ ಅಥವಾ ಬೆಳ್ಳಿ ಖಚಿತಪಡಿಸಿಕೊಂಡಿದ್ದಾರೆ.

23 ವರ್ಷದೊಳಗಿನವರ ಪುರುಷರ ವಿಭಾಗದಲ್ಲಿ ಕಳೆದ ವರ್ಷ ಅಮನ್ ಸೆಹ್ರಾವತ್ (57 ಕೆ.ಜಿ.) ಅವರು ಚಾಂಪಿಯನ್ ಆಗಿದ್ದರು.

ಜಾವೆಲಿನ್ ಥ್ರೋ ಸ್ಪರ್ಧಿಗೆ ಕೆಒಎ ನೆರವು

ಬೆಂಗಳೂರು: ಪ್ರತಿಭಾನ್ವಿತ ಜಾವೆಲಿನ್ ಥ್ರೋ ಸ್ಪರ್ಧಿ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಎಚ್.ಎ. ಸ್ವರೂಪ್ ಅವರಿಗೆ ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ವತಿಯಿಂದ ₹ 20 ಸಾವಿರ ಆರ್ಥಿಕ ನೆರವು ಹಾಗೂ ₹ 1.20 ಲಕ್ಷ ಮೌಲ್ಯದ ಜಾವೆಲಿನ್‌ಅನ್ನು ನೀಡಲಾಯಿತು.

ಕಂಠೀರವ ಕ್ರೀಡಾಂಗಣದ ಕೆಒಎ ಭವನದಲ್ಲಿ ನಡೆದ ಸಮಾರಂಭದಲ್ಲಿ ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್ ಮತ್ತು ಕಾರ್ಯದರ್ಶಿ ಟಿ.ಅನಂತರಾಜು ಅವರು ಚೆಕ್ ಹಾಗೂ ಜಾವೆಲಿನ್ ಹಸ್ತಾಂತರಿಸಿದರು.

18 ವರ್ಷದ ಸ್ವರೂಪ್ ಅವರಿಗೆ ಹರಿಯಾಣದ ಸೋನೀಪತ್‌ನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದ ಕೇಂದ್ರದಲ್ಲಿ ತರಬೇತಿ ಪಡೆಯುವ ವ್ಯವಸ್ಥೆಯನ್ನೂ ಕಲ್ಪಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಸ್ಕೆಟ್‌ಬಾಲ್ ಫೈನಲ್‌ಗೆ ಕರ್ನಾಟಕ ಮಹಿಳಾ ತಂಡ

ಮಡಗಾಂವ್: ಕರ್ನಾಟಕ ಮಹಿಳಾ ಬ್ಯಾಸ್ಕೆಟ್‌ಬಾಲ್ ತಂಡ, 37ನೇ ರಾಷ್ಟ್ರೀಯ ಕ್ರೀಡಾಕೂಟದ ಬ್ಯಾಸ್ಕೆಟ್‌ಬಾಲ್ ಫೈನಲ್ ತಲುಪಿತು. ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ 80–47 ರಿಂದ ಉತ್ತರ ಪ್ರದೇಶ ತಂಡವನ್ನು ಸೋಲಿಸಿತು. ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಕರ್ನಾಟಕ, ಕೇರಳ ತಂಡವನ್ನು ಎದುರಿಸಲಿದೆ.

ಪುರುಷರ ಫಾಸ್ಟ್ 5 ನೆಟ್‌ಬಾಲ್ ಸ್ಪರ್ಧೆಯಲ್ಲಿ ಕರ್ನಾಟಕ ಮತ್ತು ದೆಹಲಿ ತಂಡಗಳು ಕಂಚಿನ ಪದಕ ಜಂಟಿಯಾಗಿ ಪಡೆದವು.

ಚೆಸ್: ಗಮನಸೆಳೆದ ಅರ್ಜುನ್, ನಾರಾಯಣನ್

ಐಲ್ ಆಫ್ ಮ್ಯಾನ್ (ಯು.ಕೆ.), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಮತ್ತೊಮ್ಮೆ ಅಳುಕದೇ ಆಡಿ, ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಸ್ಪೇನ್‌ನ ಆ್ಯಂಟನ್ ಗುಯಿಜಾರೊ ಅವರನ್ನು ಸೋಲಿಸಿದರು. ಭಾರತದ ಇನ್ನೊಬ್ಬ ಆಟಗಾರ ಎಸ್.ಎಲ್. ನಾರಾಯಣನ್, ಉಜ್ಬೇಕ್ ಆಟಗಾರ ಅಬ್ದುಸತ್ತಾರೊವ್ ನಾಡಿರ್ಬೆಕ್ ಅವರ ಜೊತೆ 'ಡ್ರಾ' ಮಾಡಿಕೊಂಡಿದ್ದು ಕಡಿಮೆ ಸಾಧನೆಯೇನೂ ಆಗಿರಲಿಲ್ಲ.

ಕಪ್ಪು ಕಾಯಿಗಳಲ್ಲಿ ಆಡಿದ ಅರ್ಜುನ್ 40ನೇ ನಡೆಯಲ್ಲಿ ಎದುರಾಳಿಯನ್ನು ಚೆಕ್‌ಮೇಟ್ ಮಾಡಿದರು. ಪ್ರಬಲ ಕಣವಾಗಿದ್ದ ಕತಾರ್ ಓಪನ್‌ನಲ್ಲಿ ಇತ್ತೀಚೆಗೆ ಮೂರನೇ ಸ್ಥಾನ ಗಳಿಸಿದ್ದ ಕೇರಳದ ನಾರಾಯಣನ್ 33 ನಡೆಗಳ ನಂತರ ಸತ್ತಾರೋವ್ ಜೊತೆ ಪಾಯಿಂಟ್ ಹಂಚಿಕೊಂಡರು.

ರೌನಕ್ ಸಾಧ್ವಾನಿ ಕೂಡ ಯಶಸ್ಸಿನ ಓಟ ಮುಂದುವರಿಸಿದರು. ಮೊದಲ ಸುತ್ತಿನಲ್ಲಿ ಪ್ರಬಲ ಆಟಗಾರ ಅನಿಸ್ ಗಿರಿ (ಹಾಲೆಂಡ್) ಅವರನ್ನು 'ಡ್ರಾ'ಕ್ಕೆ ಗುರಿಪಡಿಸಿದ್ದ ರೌನಕ್ ಎರಡನೇ ಸುತ್ತಿನಲ್ಲಿ ಹಿಕಾರು ನಕಾಮುರಾ (ಅಮೆರಿಕ) ಜೊತೆಗೂ ಪಾಯಿಂಟ್ ಹಂಚಿಕೊಂಡರು. ನಡೆಗಳ ಪುನರಾವರ್ತನೆಯಿಂದ ಕೇವಲ 25 ನಡೆಗಳಲ್ಲಿ ಪಂದ್ಯ ಡ್ರಾ ಆಯಿತು.

ಮೊದಲ ಸುತ್ತಿನಲ್ಲಿ ಹಾಲೆಂಡ್‌ನ ಇರ್ವಿನ್ ಲಾಮಿ ಎದುರು ಆಘಾತ ಕಂಡಿದ್ದ ವಿದಿತ್ ಸಂತೋಷ್ ಗುಜರಾತಿ, ಈ ಬಾರಿ ಸ್ವದೇಶದ ಅಭಿಜಿತ್ ಗುಪ್ತಾ ಎದುರು ಪರಿಶ್ರಮ ಹಾಕಿ ಜಯಗಳಿಸಿದರು.

ಸೋತ ದಿವ್ಯಾ: ಮಹಿಳಾ ವಿಭಾಗದಲ್ಲಿ ಮಾಜಿ ವಿಶ್ವ ಚಾಂಪಿಯನ್ ತಾನ್ ಝೊಂಗ್‌ಇ ಎಂಡ್‌ಗೇಮ್‌ನಲ್ಲಿ ತಮ್ಮ ಕೌಶಲ ಪ್ರದರ್ಶಿಸಿ ಭಾರತದ ದಿವ್ಯಾ ದೇಶಮುಖ್ ಅವರನ್ನು ಸೋಲಿಸಿದರು. ಬಿ.ಸವಿತಾಶ್ರೀ ಇನ್ನೊಂದು ಪಂದ್ಯದಲ್ಲಿ ಮಾಜಿ ವಿಶ್ವ ಚಾಂಪಿಯನ್ ಆಟಗಾರ್ತಿ ಅಂಟೊನೇಟಾ ಸ್ಟೆಫಾನೋವಾ ಅವರಿಗೆ ಸಾಟಿಯಾಗಲಿಲ್ಲ. ಡಿ.ಹಾರಿಕಾ, ಹಂಗರಿಯ ಥಾಂಗ್ ಟ್ರಾಂಗ್ ಎದುರಿನ ಪಂದ್ಯ ಡ್ರಾ ಮಾಡಿಕೊಂಡರು. ತಾನಿಯಾ ಸಚ್‌ದೇವ್ ಕೂಡ ಜರ್ಮನಿಯ ದಿನಾರಾ ವ್ಯಾಗ್ನರ್ ಜೊತೆ ಡ್ರಾ ಮಾಡಿಕೊಂಡರು.

ಮುಷ್ತಾಕ್ ಅಲಿ ಟ್ರೋಫಿ: ಕರ್ನಾಟಕಕ್ಕೆ ಜಯ

ಡೆಹ್ರಾಡೂನ್: ಕರ್ನಾಟಕ ತಂಡದವರು, ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿ 'ಇ' ಗುಂಪಿನ ಪಂದ್ಯದಲ್ಲಿ ಶುಕ್ರವಾರ ತ್ರಿಪುರಾ ತಂಡವನ್ನು 68 ರನ್‌ಗಳಿಂದ ಸೋಲಿಸಿದರು. ಆದರೂ ನಾಕೌಟ್ ಪ್ರವೇಶಿಸಲು ವಿಫಲರಾದರು.

ಸ್ಕೋರುಗಳು: ಕರ್ನಾಟಕ: 20 ಓವರುಗಳಲ್ಲಿ 7 ವಿಕೆಟ್‌ಗೆ 224 (ದೇವದತ್ತ ಪಡಿಕ್ಕಲ್ 59, ಕೆ.ಎಲ್.ಶ್ರೀಜಿತ್ 67, ಅಭಿನವ್ ಮನೋಹರ್ 40, ಬಿ.ಆರ್. ಶರತ್ 26; ಮಣಿಶಂಕರ್ ಮುರಸಿಂಗ್ 26ಕ್ಕೆ2, ಅಭಿಜಿತ್ ಸರ್ಕಾರ್ 55ಕ್ಕೆ2); ತ್ರಿಪುರಾ: 18.1 ಓವರುಗಳಲ್ಲಿ 156 (ವಿಕ್ರಮ್ ಕುಮಾರ್ ದಾಸ್ 38, ಮಣಿಶಂಕರ್ ಮುರಸಿಂಗ್ 56; ಪ್ರಸಿದ್ಧಕೃಷ್ಣ 31ಕ್ಕೆ2, ಕೃಷ್ಣಪ್ಪ ಗೌತಮ್ 30ಕ್ಕೆ2, ವೈಶಾಖ್ ವಿಜಯಕುಮಾರ್ 29ಕ್ಕೆ2, ಪ್ರವೀಣ್ ದುಬೆ 33ಕ್ಕೆ3)

ಮಹಿಳಾ ಹಾಕಿ: ಸಂಗೀತಾ ಹ್ಯಾಟ್ರಿಕ್

ರಾಂಚಿ (ಪಿಟಿಐ): ಯುವ ಆಟಗಾರ್ತಿ ಸಂಗೀತಾ ಕುಮಾರಿ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ತಂಡದವರು ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಜಯ ಸಾಧಿಸಿದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತ 7–1 ಗೋಲುಗಳಿಂದ ಥಾಯ್ಲೆಂಡ್ ತಂಡವನ್ನು ಮಣಿಸಿತು. 29ನೇ ನಿಮಿಷದಲ್ಲಿ ಮೊದಲ ಗೋಲು ಗಳಿಸಿದ ಸಂಗೀತಾ 45ನೇ ನಿಮಿಷದಲ್ಲಿ ಮತ್ತೆರಡು ಗೋಲು ತಂದಿತ್ತರು. ಇತರ ಗೋಲುಗಳನ್ನು ಮೋನಿಕಾ (7), ಸಲೀಮಾ ಟೇಟೆ (15), ದೀಪಿಕಾ (40) ಮತ್ತು ಲಾಲ್‌ರೆಮ್‌ಸಿಯಾಮಿ (52) ಗಳಿಸಿದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331







ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

REAL ESTATE SELLING

Sites

Arkavathi Layout

ARKAVATHI LAYOUT 7th Block, Jakkur 30x40, north face. Excellent location. Near VIBGYOR School. 9448533097/ 9113867015.

Banashankari

BANASHANKARI 6TH Stage, 4th H'Block, 22x35,West BBMP A'Khata 40" Road Opposite KPTCL Layout, 9845006142, 7892091996

BANASHANKARI 6TH Stage, 2nd Block,20x30, West/Facing Fully Developed Ready to Build House Prime Location: 9900097239

SALE BSK 6th stage 9 Block 30x40 East Facing 66 lakh also 40x60 West Facing 4th Block 1.72cr Negotiable 9945373839, 9620041313

J P Nagar

J.P.NAGAR BDA 3rd Phase near Mini Forest 40x57 North 5,70,00,000/-, 2nd 40x60 North 5,52,00,000/- 9739995042.

SALE BDA JP Nagar 8th phase 2nd Block West facing 60 feet 40x60 also 9th phase 3rd Block East 40x60 good location. 9945373839/ 9620041313

SITE SALE 40x60 W/F, Royal County J.P.Nagar 8th Stage, Opposite Godavari Cafe, Rs 12500/-Sft. 9845227242.

Kanakapura Road

35×45 BHIKASHIPURA, 30×40 Balaji KKP Road Sites for SALE and 50×60 Jayanagar 4th Block Independent Commercial Property for RENT. Call: Shivanna 9448684258

Rajarajeshwari Nagar

40X60 'A'KHATA East Facing Site for Sale attached to BEML 3rd Stage RajarajeshwariNagar. 9448288522

Tumkur Road

40X60 SITE FOR SALE, NORTH FACING, BDA /BBMP TITLES, 8th MILE, HMT Layout Nelagadaranahalli BANGALORE. 8183032277

30X40,S/F,40-FEET ROAD,B-KHATA,RUKMINI Nagar,1km to Metro Station&Tumkur Road Highway. 5000/sqft Negotiable. Contact:7019698028

30X45 FT. @13250/- P/ Sq.Ft. W/F at Ravi Kirloskar L'Out, Adj. Prestige Jindal City, Only genuine buyers. No brokers. Cont. 9900177430.

Vishweshwariah Layout

SALE 30X40 VISHVESWARAIAH LAYOUT 4th Block south facing owner 82 lakh Negotiable 9945373839, 9620041313

"AVAILABLE BDA-SITE Vishveswaraiah Layout 4th-Block 50x80 West 80'feet Road,2nd Block-30x40 East,6th Block 50x80 South,60 feet Road. Contact: 9632788913"

AVAILABLE VISWESAVARAIAH Layout 4th Block 30X40 EF 6000/- Psft Good Location Near 80ft Road: 9901156708

VISHWESHWARAIAH 6TH BLOCK 40x60 NF NEAR KLE LAW COLLEGE GOOD LOCATION 80FT ROAD BACKSIDE: 6360050356

BDA SITE for Sale SMVL, 1st Block, 30x40 South Facing Fully Built- Up Good Location: 9901905999

40X60 SITE Sale Viswesavaraiah Layout 6th Block Direct Owner, 20x30 Ullal Main Road Sale Direct Owner, 30x44 Janabarathi Layout Amma School Opp: 8310003509

BDA SITE for Sale in 2nd Block Vishweshwariah 60ft Road East Facing Call: 9980433004

Yelahanka

18,000 SQFT YELAHANKA Off Airport Rd Suits Resort Home Stay Farm Villa Elder Care home Ayurvedic hospital Bore well 20-HP Water Tank 1000 SqFt House Compound Wall. Secure Gated Community. Serene Interior Location. MVIT Rd Total Environment Stone Hill School, Dravid Padukone Sports Project. Call: 9901161162

Anjanapura

SITE FOR SALE 7TH BLOCK ANJANAPURA 30X40 N/F NEAR BDA COMPLEX, GOOD LOCATION GENUINE BUYERS: 9880776950

SALE BDA Anjanapura 8th Block 40x60 west Facing Near BDA complex 40 Feet Road 9620041313/ 9945373839

Mysore

SITE FOR SALE 100'x80' Northfacing Adipampa Road, Mysore,suitable for complex,hospital, flats. Contact: 7829215486

ಸೈಟುಗಳು ಮಾರಾಟಕ್ಕಿವೆ
ಸೊಂಡೆಕೊಪ್ಪ ರೋಡ್ 20x30
ರೂ. 7.50 ಲಕ್ಷದಿಂದ ಪ್ರಾರಂಭ
ಮಾದನಾಯಕನಹಳ್ಳಿ ಹತ್ತಿರ ನಗರ ಸಭೆ ಖಾತೆ
ಬ್ಯಾಂಕ್ ಲೋನ್ ದೊರೆಯುತ್ತದೆ
ಸಂಪರ್ಕಿಸಿ: 8880660099

GSS:SITES @ Mysore Fully Completed DTCP 'A' Khata,RERA, 90%`Bank Loan, Immediate Regn. off`Hunsur Road, 5Minutes: NH,Yelwala 10Minutes: Ring`Road, Infosys, Vijayanagar, 15Minutes: Palace/ Railway Station. www.gssprojects.in 9845287802/ 8050001571,

Mahalakshmi Layout

FOR SALE 40'x60' Plot, in Mahalakshmipuram Near Nagapura Post office, Rs. 23,000/- per sqft. Contact: 9740394473.

Magadi Road

30X45 WF 40ft Road BEL Layout 1st Stage Magadi Road Near East West College 11000/-: 9916826976

Villas/Bunglows

General

VILLA FOR-SALE: 4.5 BHK VILLA in EAGLETON THE GOLF RESORT, BIDADI, Plot 9600 Sft, Super Built-up Area-4400 Sft, South Facing, Fully Furnished Expected Price-4.50 Crores. Contact: 7022803368, 9611977368

House

Banashankari

SALE 20X30, 30X40 Thripex House's BSK 6th Stage, J.P.Nagar 8th Phase, Anjanapura Fully Furnished Granit Flooring Call:8722777999 9449812176

BSK 3RD Stage, Kathariguppe 40' Road 40x60 Semi-commercial, old 2 unit house 4,56,00,000/- 9739995042

BTM Layout

"30X40 NORTH-FACING 2BHK-House G+2 with Parking, Devarachikkanahalli (near Bommanahalli Metro),for sale 9845500019/ 7019314962 Brokers Excuse"

Basaveshwaranagar

HOUSE FOR Sale 30x40 SF 2 BHK Rs. 1.90L Door East Facing Basaveshwara Nagar: 9916826976

J P Nagar

J.P.NAGAR 3RD Phase near Mini`forest 40x48,`3 BHK 4 unit, 1 BHK 1`Unit`New Vastu`House, Lift, 5`car-parking -6,50,00,000/- -9739995042.

Mathikere

FOR SALE in Mathikere Independent East Facing, Semi Furnished 3 Bedroom Single Floor House 1400 sft on 2037 sft Site. Near Mathikere Bus Stop and JPN Park. Call: 9972535997.

Chandra Layout



Sale 30x40 BDA Site with Architectural and Structurally designed building. 4 spacious 2 BHK units, Ample car parking. Chandra Layout. 3.6 Cr. **9980133336.**

Flat

Basaveshwaranagar

"MAGADI MAIN Road 2BHK Flat Ready to occupy with occupancy certificate A-Katha. Call: 9845286505"

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Kanakapura Road

3-BHK-FLAT SALE 1575-Sqft N/F Full Interiors 70Lakhs Off KANAKAPURA ROAD KONANKUNTE Near Junior Delhi Public School- 9343722162

Commerical

Banashankari

BSK 2ND Stage, excellent Commercial Site 50x80 BDA, 80' Road North West corner 11,20,00,000/- -9739995042

Residential/ Commercial

Banashankari

950 SQ Ft site for sale near Vidyapeeta Circle, Semi-commercial or residential. Call 9611937546

Farm House/ Land/ Resorts

Out-Station

NILGIRIS KTGR Tea Estate For Sale /JV. Coonoor Bunglow @ RS.59 L, 10 Min From Town, Ct. 80079 80076

Agricultural Land Converted

Out-Station

11 Guntas plot, DC converted for sale in Gubbi town behind police station, cleartitle. 9880419865

General

South

AVAILABLE/ WANTED 30x40 30x50,40x60,80x50- Residential Commercial Sites PG- Buildings Basavanagudi Jayanagar J.P.Nagar Chamarajpet Girinagar Hanumanthnagar Kanakapura/ Bannnnarghatta Road For RENT/LEASE/Sale 2-3-4-5 BHK Houses/Flats/ Office Space/Godown Spaces Call-9900399006

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

REAL ESTATE BUYING

Agricultural Land

Yelahanka

BUYING CLEAN, compounded Agricultural or Converted land. Fast closure, full payment. 1-5,Acres.MVIT College road, Chapparakallu rd, Tharahunise Village area only. Call/WhatsApp 9972247220.

Sites

Anjanapura

WANTED BDA sites Anjanapura, Banshabkari 6th stage, Vishweshwaraiah Layout, JPNagar 8 and 9th phase and any BDA katha & Mysore MUDA sites any measurement, Immediate settlement Genuine sellers, Contact: 9902038118: 9449060605: 7338328728.

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

PUBLIC NOTICE
To Place your Classified Ads Contact
9731810277

RENTAL PROPERTIES

Accommodation Available

Commercial

COMMERCIAL SPACE 5000-7000sft FOR RENT Main Road 1st Floor Opp. Upcoming Metro Station Nagwara Main Road. 9353257244

OFF MYSORE Road Near Big Banyan Tree 20,000 Sft Commercial Building on 6 Acres Land. Rent Rs.5 Lakh pm. Call: 9343728200/ 80505-17576.

AVAILABLE FOR RENT, Prime 2400sq.ft Land at Basaveshwar Nagar,Bangalore, on the Main Road. Build-to-Suit opportunity with approx. 5000sq.ft. Contact: apexventures9 @gmil.com

Industrial And Factory

AVAILABLE INDUSTRIAL Shed for Rent 95000 sqft at Soukya Road, Whitefield. Commercial 1750sqft x3 Floors, K.R.Road, Banashankari. Contact: 9341234288/ 9663224353/ 9845417487.

House

FOR RENT: East Facing 3 BHK House, 2nd Floor in 1st Block Jayanagar. Vasthu Compliant Call: 9742344983/ 9886273736

RENT: HANUMANTHNAGAR 2BHK- DH GF, with amenities, Corporation Water. Ready occupation. Contact: Owner: 78925-30410/ 94488-09902

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WEEKEND CORNER

JOB OPPORTUNITIES

Drivers

WANTED DRIVER for Builders office and site visit call: 8310098218. Vijayanagar.

BUSINESS

Business to Business

Business

ANY CENTRAL Government/ New Delhi work done with high level contacts. Vamshadhara Project Services:- 9342247637. Bangalore.

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

PERSONAL

Announcements

ANNOUNCEMENT
I, **D.V. MURAULI,** R/at # 3, Nachiyappan Road, Dharmapuri, Tamil Nadu - 636701, declare that in my daughter's **Ikktha M** 10th Marks card, my name & my wife's name is wrongly mentioned as **D. V. Murauli & M. Sarmila,** Correct name is **V MURALI & M J SHARMILA,** vide affidavit dt. 25-10-2023, before Notary E.V. Earappa, Bengaluru

Change of Name

I, VARUN Ramesh Shettigar S/o Mr Shettigar K.R. R/o Tower 6, 6127, Prestige Tranquility, Budigere Cross, After Shell Petrol Bunk, Bommenahalli Village, Bommenahalli, Bangalore 560049 have changed My name from Varun K.R. to Varun Ramesh Shettigar for all future purpose.

CHANGE OF NAME
I, **LYDIA**, R/at # 50, 12th Cross, Sada Shiva Temple Road, Maruthi Seva Nagar, Bangalore - 560033 have changed my name to **LYDIA PAUL** vide affidavit dated 27-10-2023, before Notary Y. R. Chandrasekar, Bengaluru, Henceforth I shall be called **LYDIA PAUL** only.

CHANGE OF NAME
I, **NADAR BASU PALVANNAN,** R/at # 16/8, 7th A Cross, Jaibharath Nagar, Maruthi Sevanagar, Bengaluru-560033 have changed my name to **KARNA BASU** vide affidavit dated 27-01-2021, before Notary Y. R. Chandrashekar, Bangalore. Henceforth I shall be called **KARNA BASU** only.

I, KARINA Nitin Shah, D/O Nitin Kanji Shah, W/O Tanuj P Batavia, Residing at Flat #305, Prestige Richmond Apartment, No 3, Lalbagh Road, Bangalore 560027 after Marriage have changed my name as Karina Shah Batavia. Sworn before Notary & Advocate Chanchala Lakshmi Bangalore vide Affidavit dated 25.02.2023

Lost

DOCUMENT LOST
I, **D. Jayaram Naidu,** R/at. #31, 4th main, Doctor Layout, Naganathapura, Electronic City post, Bangalore, have lost the **Original Sale Deed of Site bearing No's. 30 & 21 Document No.6719/1994-95, Book-1, Volume-3995, Page's-217-227 Dated: 21-12-1994,** Registered in the name of Purchaser Shri Sudhir G. Gandhi (Karta) Gunvant. M. Gandhi (HUF) Situated at Naganathapura Village, Doctor Layout. Finders please contact: **9008329629** or inform nearby police station.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ವಿಶ್ವ ವಿದ್ಯಾಪೀಠ

A TRULY INDIAN SCHOOL WITH A GLOBAL OUTLOOK

11 years of Excellence in Education


VIKRAMASHILA CAMPUS, YELAHANKA


TAKSHASHILA CAMPUS, YELAHANKA


MAGADHA CAMPUS, VARTHUR

REGISTRATION OPEN FOR AY 2024-25 FROM NURSERY TO CLASS 12 (OFFERING ICSE, CBSE AND IGCSE CURRICULUM)



INTERACTION WITH LIVING LEGENDS ON CAMPUS


Padma Shri Palam Kalyanasundaram


Padma Bhushan Nambi Narayanan


Padma Shri Subbiah Arunan

OUR USP's

- Guru Shishya Parampara
- Bhagavad Gita & Yoga
- Mother on Duty
- World-class facilities
- In-house kitchen & dining facility
- Dasha Prabodha
- Focus on Indian Culture & Tradition
- In-house Transport facility
- Leadership training
- Organic Farming
- Parent Engagement Programme [PEP]
- High Individual Attention
- First School in India to include Neural Science
- Equal focus on Sports activities
- Collaboration with Reva University

ENQUIRY FORM

For more details contact us on
Yelahanka - 7022009731 / 54
Varthur - 7022009757

WEBSITE



ಹೃದಯ ಕಾಪಾಡಿಕೊಳ್ಳಿ 2



ಗ್ಲಾಸಿ ಲುಕ್ ಟ್ರೆಂಡಿ ಮೇಕಪ್

ದೀಪಾ ಹೊಳಿಮಠ

ಗ್ಲಾಸಿ ಲುಕ್ ಇವತ್ತಿನ ಟ್ರೆಂಡ್. ಕಾಲೇಜು ಹುಡುಗಿಯರಿಂದ ಹಿಡಿದು, ಮಧ್ಯವಯಸ್ಸಿನ ಮಹಿಳೆಯರವರೆಗೆ ಎಲ್ಲರಿಗೂ ಇಷ್ಟ ಗ್ಲಾಸಿ ಲುಕ್. ಮೇಕಪ್ ಮಾಡಿಕೊಳ್ಳಬೇಕು, ಆದರೆ ಮೇಕಪ್ ಮಾಡಿದಂತೆ ಕಾಣಬಾರದು ಎನ್ನುವುದು ಬಹುತೇಕರ ಇಂಗಿತ. ದೈನಂದಿನ ಕಚೇರಿಯೇ ಆಗಲಿ, ಕಾನ್ಫರೆನ್ಸ್, ಮೀಟಿಂಗ್ ಇರಲಿ, ಅಥವಾ ವೇದಿಕೆ ಮೇಲಿನ ಕಾರ್ಯಕ್ರಮ, ನೈಟ್ ಪಾರ್ಟಿ.... ಯಾವುದೇ ಇದ್ದರೂ ಮುಖ ತೊಳೆದಿಟ್ಟ ಗ್ಲಾಸಿನಂತೆ ಹೊಳೆಯುತಿರಬೇಕು ಎನ್ನುವವರೇ ಹೆಚ್ಚು. ಈ ಗ್ಲಾಸಿ ಲುಕ್ ಪಡೆಯಲು ಅನುಸರಿಸಬೇಕಿರುವ ಮಾರ್ಗಗಳೇನು? ದೀಪಾ ಹೊಳಿಮಠ ಬರಹ ಇಲ್ಲಿದೆ.

ಹಾಗೆ ನೋಡಿದರೆ ಗ್ಲಾಸಿ ಲುಕ್ ಪಡೆಯುವುದು ಬಹಳ ಸುಲಭ. ಇದು ಯಾವತ್ತೂ ಹಳತಾಗದ, ಎಲ್ಲಾ ಮುಖವರ್ಣಗಳಿಗೂ ಅನ್ವಯವಾಗುವ ನಿತ್ಯನೂತನ ಶೈಲಿ. ನಿಮ್ಮ ತ್ವಚೆ ಯಾವುದೇ ಪ್ರಕಾರದ್ದಾಗಿರಲಿ, ಅದು ಹೊಳೆಯುತಿರಬೇಕು ಎಂದರೆ ನೀವು ಕೆಲ ಸೂಕ್ಷ್ಮ ತಂತ್ರಗಳನ್ನು ಅನುಸರಿಸಬೇಕಾಗುತ್ತದೆ. ಅದಕ್ಕಾಗಿ ಇಲ್ಲಿದೆ ಚಿಕ್ಕ ಮಾಹಿತಿ:

- ಯಾವುದೇ ಮೇಕ್‌ಅಪ್ ನ ಮೊಟ್ಟಮೊದಲ ಹೆಜ್ಜೆ ಎಂದರೆ ಮುಖವನ್ನು ಮೇಕ್‌ಅಪ್ ಗೆ ಅಣಿಗೊಳಿಸುವುದು. ಅದಕ್ಕಾಗಿ, ಮೊದಲು ಮುಖವನ್ನು ಸ್ವಚ್ಛಗೊಳಿಸಿ, ನಂತರ ಫೇಸ್ ಆಯಿಲ್ ನಿಂದ ಮುಖವನ್ನು ಹೈಡ್ರೀಕರಿಸಬೇಕು.
- ಎರಡನೇ ಹೆಜ್ಜೆಯಾಗಿ ನಿಮ್ಮ ಮುಖಕ್ಕೆ ಹೊಂದುವ ಮಾಶ್ಚರೈಸರ್ ಅನ್ನು ಸಮಾನವಾಗಿ ಅಪ್ಲೈ ಮಾಡಿ. ಇಡೀ ದಿನ ಮುಖದಲ್ಲಿನ ಎಣ್ಣೆ, ಜಿಡ್ಡು ಅಥವಾ ಶುಷ್ಕತೆಯನ್ನು ನಿಯಂತ್ರಿಸುವ ಮತ್ತು ಸಮತೋಲನಗೊಳಿಸುವ ಕೆಲಸವನ್ನು ಮಾಶ್ಚರೈಸರ್ ಮಾಡುತ್ತದೆ.
- ನಂತರ ಪ್ರೈಮರ್ ಕಡೆ ಗಮನ ಹರಿಸಿ, ಗ್ಲಾಸಿ ಲುಕ್ ಗಾಗಿ ನಿರ್ದಿಷ್ಟವಾಗಿ, ಕ್ರೀಮಿ ಮತ್ತು ಲಿಕ್ವಿಡ್ ಉತ್ಪನ್ನಗಳನ್ನು ಆಯ್ಕೆ ಮಾಡುವುದು ಸೂಕ್ತ.
- ಇನ್ನು ಒಂದೇ ಕ್ರಮವಾಗಿರದ ಸ್ಕಿನ್ ಟೋನ್ ಹೊಂದಿರುವವರು ಕನ್ಸಿಲರ್ ಸಹಾಯ ಪಡೆಯಬಹುದು.
- ಬ್ಲಶ್ ಬಳಸುವಾಗ ಮೃದುವಾದ, ನೈಸರ್ಗಿಕವಾದ ಕ್ರೀಮಿ ಬ್ಲಶ್ ಬಳಸುವುದನ್ನು ಮರೆಯದಿರಿ.
- ಅನಂತರದ ಹೆಜ್ಜೆಯಾಗಿ ಲಿಕ್ವಿಡ್ ಫೌಂಡೇಶನ್ ಬಳಸಬೇಕು. ಜೊತೆಗೆ ಅಗತ್ಯವಿದ್ದವರು ಲಿಕ್ವಿಡ್ ಹೈಲೈಟರ್ ಕೂಡ ಉಪಯೋಗಿಸಬಹುದು. ಕೆನ್ನೆಯ ಮೂಳೆಗಳು ಮತ್ತು ಹುಬ್ಬು ಮೂಳೆಯ ಪ್ರದೇಶಕ್ಕೆ ಲಿಕ್ವಿಡ್ ಹೈಲೈಟ ರಅತ್ಯಗತ್ಯ. ಇದು ಚರ್ಮಕ್ಕೆ ಕಾಂತಿ ನೀಡುತ್ತದೆ ಮತ್ತು ಚರ್ಮವನ್ನು ಇನ್ನಷ್ಟು ಹೊಳೆಯುವಂತೆ ಮಾಡಲು ಸಹಾಯ ಮಾಡುತ್ತದೆ.
- ಹೊಳೆಯುವ ಗ್ಲಾಸಿ ನೋಟವನ್ನು ಬಯಸುವವರು ಕಣ್ಣಿನ ಮೇಕ್‌ಅಪ್ ಅನ್ನು ಸಾಧ್ಯವಾದಷ್ಟು ಸರಳ ಮತ್ತು ನೈಸರ್ಗಿಕವಾಗಿಟ್ಟುಕೊಳ್ಳುವುದು ಮುಖ್ಯ.
- ಇತ್ತೀಚೆಗೆ ಹೆಚ್ಚು ಜನ ಕಣ್ಣಿನ ರೆಪ್ಪೆಗಳ ಕೆಳಗೆ ವಾಟರ್ ಲೈನ್ ಕೊಡುವ ಮೂಲಕ ಕಣ್ಣಿನ ಹೊಳಪು ಹೆಚ್ಚಿಸುವ ಪ್ರಯತ್ನ ಮಾಡುತ್ತಾರೆ.
- ಗ್ಲಾಸಿ ಲುಕ್ ಪಡೆಯಲು ಹುಬ್ಬು ಮೂಳೆಗಳಿಗೆ ಗ್ಲಾಸಿ ಲಿಕ್ವಿಡ್ ಬಳಸಿ, ಕಣ್ಣ ರೆಪ್ಪೆಗಳಿಗೆ ತೆಳುವಾದ ವ್ಯಾಸಲೀನ್ ಅನ್ನು ಬಳಸುವುದರಿಂದ ಕಣ್ಣಿನ ಹೊಳಪು ಹೆಚ್ಚುವುದು.
- ಕೊನೆಯದಾಗಿ, ನಿಮ್ಮ ಮುಖದ ಹೊಳಪನ್ನು ಪೂರ್ಣಗೊಳಿಸಲು ಲಿಪ್ ಗ್ಲಾಸ್ ಬಳಸಿ. ಲಿಪ್ ಗ್ಲಾಸ್ ಮಾತ್ರ ಸಾಕು ಎನ್ನುವವರು ತಮ್ಮ ನೈಸರ್ಗಿಕ ತುಟಿಯ ಬಣ್ಣಕ್ಕೆ ಹೊಂದುವಂತಹ ಲಿಪ್ ಗ್ಲಾಸ್ ಬಳಸಬಹುದು. ಬೇಕೆಂದರೆ ಲಿಪ್ ಸ್ಟಿಕ್ ಮೇಲೆ ಕೂಡ ಲಿಪ್ ಗ್ಲಾಸ್ ಹಾಕಬಹುದು. ಆಯ್ಕೆ ನಿಮ್ಮದೇ.

ಯಾವುದೇ ಮೇಕಪ್ ನೈಸರ್ಗಿಕವಾಗಿ ಕಾಣಬೇಕು ಎಂದರೆ ಅದು ಒಂದು ದಿನದ ಪ್ರಯತ್ನವಲ್ಲ, ಪ್ರತಿದಿನವೂ ತ್ವಚೆಯ ಆರೋಗ್ಯವನ್ನು ಕಾಪಾಡುವತ್ತ ಗಮನ ಹರಿಸಬೇಕು. ಕ್ಲೆನ್ಸಿಂಗ್, ಟೋನಿಂಗ್ ಹಾಗೂ ಮಾಶ್ಚರೈಸರ್ ಸೂತ್ರವನ್ನು ಅನುಸರಿಸಿ ತ್ವಚೆಯ ತಾಜಾತನವನ್ನು ಕಾಪಾಡಬೇಕು. ನಿತ್ಯದ ಬಳಕೆಗೆ ಸನ್‌ಸ್ಕ್ರೀನ್ ಬಳಸಿ. ಮುಖದ ಮೃದುತ್ವವನ್ನು ಕಾಪಾಡುವಂತಹ ಕ್ರೀಂ ಬಳಸಿ.




ಇಸ್ರೇಲ್ ರಾಯಭಾರಿ- ಕಂಗನಾ ಭೇಟಿ

ನವದೆಹಲಿ: ಬಾಲಿವುಡ್ ನಟಿ ಕಂಗನಾ ರನೌತ್ ದೆಹಲಿಯಲ್ಲಿರುವ ಇಸ್ರೇಲ್ ರಾಯಭಾರಿ ನಾರ್ ಗಿಲೋನ್ ಅವರನ್ನು ಭೇಟಿಯಾಗಿದ್ದಾರೆ. ಇಸ್ರೇಲ್ ಖಂಡಿತವಾಗಿಯೂ ಯುದ್ಧದಲ್ಲಿ ಜಯ ಸಾಧಿಸಲಿದೆ, ಭಯೋತ್ಪಾದಕತೆಯ ವಿರುದ್ಧ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಸ್ರೇಲ್ -ಹಮಾಸ್ ಘರ್ಷಣೆಯ ಬಗ್ಗೆ ಇಸ್ರೇಲ್ ರಾಯಭಾರಿಯೊಂದಿಗೆ ಮಾತುಕತೆ ನಡೆಸಿದ ವಿಡಿಯೊವನ್ನು ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ..

ಕಂಗನಾ ಸದ್ಯ ಮುಂಬರುವ 'ತೇಜಸ್' ಸಿನಿಮಾ ಪ್ರಚಾರದಲ್ಲಿದ್ದಾರೆ.



'ಭಾರತದಲ್ಲಿರುವ ಇಸ್ರೇಲ್ ರಾಯಭಾರಿ ಅಧಿಕಾರಿಯ ಭೇಟಿ ಉತ್ತಮವಾಗಿತ್ತು, ಇಂದು ಇಡೀ ಜಗತ್ತು, ವಿಶೇಷವಾಗಿ ಇಸ್ರೇಲ್ ಭಯೋತ್ಪಾದಕತೆ ವಿರುದ್ಧ ಹೋರಾಡುತ್ತಿದೆ' ಎಂದು ಬರೆದುಕೊಂಡಿದ್ದಾರೆ.

ರಾವಣ ಪ್ರತಿಮೆ ದಹನ: ಕಂಗನಾ ಅವರು ದೆಹಲಿಯಲ್ಲಿ ವಿಜಯ ದಶಮಿಯ ಅಂಗವಾಗಿ ರಾವಣ ಪ್ರತಿಮೆಯನ್ನು ದಹನ ಮಾಡಿದ್ದಾರೆ. ಈ ಬಗ್ಗೆ ಹೇಳಿದ ಅವರು, 'ಇಂದಿನ ಕಾಲದ ಆಧುನಿಕ ರಾವಣನನ್ನು ಮತ್ತು ಹಮಾಸ್‌ನಂತಹ ಉಗ್ರರನ್ನು ಸದೆಬಡಿಯುತ್ತಿರುವ ಜನರನ್ನು ಭೇಟಿಯಾಗಬೇಕು ಎನ್ನಿಸಿತು, ಅದಕ್ಕಾಗಿ ಇಸ್ರೇಲ್ ರಾಯಭಾರಿಯನ್ನು ಭೇಟಿಯಾದೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ಅ.7ರಂದು ಹಮಾಸ್ ಉಗ್ರರು ಇಸ್ರೇಲ್ ಮೇಲೆ ಏಕಾಏಕಿ ದಾಳಿ ನಡೆಸಿ, ಗಾಜಾ ಪಟ್ಟಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದ್ದರು, ಅಂದಿನಿಂದ ಶುರುವಾದ ಯುದ್ಧ ಇವತ್ತಿಗೂ ನಡೆಯುತ್ತಿದೆ. ಈ ಸಂಘರ್ಷದಲ್ಲಿ ಸಾವಿರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ, ಲಕ್ಷಾಂತರ ಜನರು ಮನೆ ಕಳೆದುಕೊಂಡು ನಿರ್ಗತಿಕರಾಗಿ ಜೀವನ ಸಾಗಿಸುತ್ತಿದ್ದಾರೆ.

ಅಮ್ಮನ ಪ್ರೀತಿ ಕಳೆದುಕೊಂಡಂತೆ ಆಯ್ತು: ಜಗ್ಗೇಶ್

ಬೆಂಗಳೂರು: ಹುಲಿ ಉಗುರಿನ ಪದಕ ಧರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಸಭಾ ಸದಸ್ಯರೂ ಆಗಿರುವ ಚಿತ್ರನಟ ಜಗ್ಗೇಶ್ ಅವರು ಸಾಮಾಜಿಕ ಜಾಲತಾಣದಲ್ಲಿ ಭಾವನಾತ್ಮಕ ಬರಹವನ್ನು ಪೋಸ್ಟ್ ಮಾಡಿದ್ದಾರೆ.

ಅರಣ್ಯ ಇಲಾಖೆಯ ಅಧಿಕಾರಿಗಳ ತಂಡವು ಮಲ್ಲೇಶ್ವರದಲ್ಲಿರುವ ಜಗ್ಗೇಶ್ ಅವರ ಮನೆಯಲ್ಲಿ ತಪಾಸಣೆಗಾಗಿ ನಿನ್ನೆ ಸಂಜೆ ತೆರಳಿತ್ತು. ಅವರು ಮನೆಯಲ್ಲಿರಲಿಲ್ಲ. ಜಗ್ಗೇಶ್ ಅವರ ಪತ್ನಿ ಪರಿಮಳಾ ಅವರು ಹುಲಿಯ ಉಗುರುಗಳಿರುವ ಚಿನ್ನದ ಲಾಕೆಟ್ ಅನ್ನು ಅಧಿಕಾರಿಗಳಿಗೆ ಒಪ್ಪಿಸಿದ್ದರು.

ನನಗೆ 61 ವರ್ಷ, ಮುಂದೆ 100 ಆಗಬಹುದು. ನನ್ನ ತಾಯಿ ನನ್ನ ದೇವರು. ನಾನು ಏನು ಕಳೆದುಕೊಂಡರೂ ಸಂಕಟಪಡುವುದಿಲ್ಲ. ಆದರೆ ನನ್ನ ಅಮ್ಮನ ಕಡೆಯ ಪ್ರೀತಿ ಕಳೆದುಕೊಂಡದ್ದು ಶೂನ್ಯ ಆವರಿಸಿದಂತೆ ಆಗಿದೆ. ತಂದೆತಾಯಿಯನ್ನು ಹೃದಯದಲ್ಲಿಇರಿಸಿಕೊಂಡಿದ್ದೇನೆ. ತಂದೆತಾಯಿಯನ್ನು ಅನಾಥಶ್ರಮಕ್ಕೆ ಅಟ್ಟುವ ಈ ಕಾಲದ ಜನರಿಗೆ ಆ ಪ್ರೀತಿಯ ಅರಿವಾಗದು! ದೇವರಿದ್ದಾನೆ ಉತ್ತರಿಸಲು ಕಾಲಬರುತ್ತದೆ. ನಿಮಗೂ ನಮಸ್ಕಾರ ಎಂದು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಜಗ್ಗೇಶ್ ಕೂಡ ಹುಲಿಯ ಉಗುರುಗಳನ್ನು ಒಳಗೊಂಡ ಚಿನ್ನದ ಲಾಕೆಟ್ ಧರಿಸಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಜಗ್ಗೇಶ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ಆಗ್ರಹವೂ ಕೇಳಿಬಂದಿತ್ತು.

ಜಗ್ಗೇಶ್ ಅವರ ಮನೆಯಲ್ಲಿ ನಾವು ತಪಾಸಣೆ ನಡೆಸಿಲ್ಲ. ಅವರ ಪತ್ನಿ ಹುಲಿ ಉಗುರುಗಳಿರುವ ಲಾಕೆಟ್ ಒಪ್ಪಿಸಿದ್ದಾರೆ. 40 ವರ್ಷ ಹಳೆಯದು ಎಂದು ಅವರು ಮಾಹಿತಿ ನೀಡಿದ್ದಾರೆ. ಅದರ ವಯಸ್ಸನ್ನು ಖಚಿತಪಡಿಸಿಕೊಳ್ಳಲು ಡೆಹ್ರಾಡೂನ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಹುಲಿ ಉಗುರು ಎಂದು ಖಚಿತವಾದಲ್ಲಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಡಿಸಿಎಫ್ ರವೀಂದ್ರ ಹೇಳಿದ್ದಾರೆ

ಹುಲಿ ಉಗುರನ್ನು ಒಳಗೊಂಡಿರುವ ಲಾಕೆಟ್ ಧರಿಸಿದ ಆರೋಪದ ಮೇಲೆ ಚಿತ್ರನಟರು, ಸ್ವಾಮೀಜಿಗಳು, ರಾಜಕೀಯ ಮುಖಂಡರ ಮನೆಗಳಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಶೋಧ ಮುಂದುವರೆಸಿದ್ದಾರೆ. ಹುಲಿ ಉಗುರು, ಹಲ್ಲು, ಚರ್ಮ ಬಳಕೆ ಮಾಡುತ್ತಿರುವವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲು ಮುಂದಾಗಿರುವ ಅರಣ್ಯ ಇಲಾಖೆ, ದೂರುಗಳು ಮಾತ್ರವಲ್ಲದೆ, ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಮಾಹಿತಿ ಆಧರಿಸಿ ರಾಜ್ಯದ ವಿವಿಧೆಡೆ ಶೋಧ ಕಾರ್ಯಾಚರಣೆ ನಡೆಸುತ್ತಿದೆ.

ಏನಿದು ಭಾರತದ ಹೊಸ ತಂತ್ರ?

ಲಖನೌ: ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ಐದು ಗೆಲುವುಗಳ ಹುಮ್ಮಸ್ಸಿನಲ್ಲಿರುವ ಟೀಮ್ ಇಂಡಿಯಾ ಈಗ ಮುಂದಿನ ಹಣಾಹಣಿಗೆ ಸಜ್ಜಾಗುತ್ತಿದೆ. ಅಕ್ಟೋಬರ್ 29 ಭಾನುವಾರ ಲಖನೌದಲ್ಲಿ ನಡೆಯಲಿರುವ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡದ ಸವಾಲನ್ನು ಎದುರಿಸಲಿದೆ. ಇದರಂತೆ ಟೀಮ್ ಇಂಡಿಯಾ ಆಟಗಾರರು ಈಗಾಗಲೇ ಲಖನೌಗೆ ಬಂದಿಳಿದಿದ್ದಾರೆ.



ಈ ವೇಳೆ ಗುರುವಾರದಂದು ಟೀಮ್ ಇಂಡಿಯಾ ಆಟಗಾರರು ವಿಚಿತ್ರ ರೀತಿಯಲ್ಲಿ ಬೌಲಿಂಗ್ ಅಭ್ಯಾಸ ಮಾಡಿರುವುದು ಗಮನ ಸೆಳೆದಿತ್ತು. ಈ ಸಂಬಂಧ ವಿಡಿಯೊವನ್ನು ಬಿಸಿಸಿಐ ಬಿಡುಗಡೆಗೊಳಿಸಿದೆ. ಎಲ್ಲರೂ ಬೌಲರ್ ಆಗಲು ಪ್ರಯತ್ನಿಸುತ್ತಿದ್ದಾರೆ. ಲಖನೌದಲ್ಲಿ 'ಲಕ್' (ಅದೃಷ್ಟ) ಪರೀಕ್ಷಿಸುತ್ತಿದ್ದಾರೆ ಎಂಬ ಅಡಿಬರಹವನ್ನು ನೀಡಿದೆ. ಬಲಗೈ ವೇಗಿ ಜಸ್‌ಪ್ರೀತ್ ಬೂಮ್ರಾ, ಎಡಗೈಯಲ್ಲಿ ಸ್ಪಿನ್ ಮತ್ತು ಮಧ್ಯಮ ವೇಗದಲ್ಲಿ ಬೌಲಿಂಗ್ ಅಭ್ಯಾಸ ಮಾಡಿದರು. ಮತ್ತೊಂದೆಡೆ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಬಲಗೈ ಸ್ಪಿನ್ ಬೌಲಿಂಗ್ ಮಾಡಿದರು.

ಈ ವೇಳೆ ತಾವೇನು ಕಮ್ಮಿಯೇನಲ್ಲ ಎಂಬಂತೆ 'ಚೈನಾಮನ್' ಖ್ಯಾತಿಯ ಕುಲದೀಪ್ ಸಹ ಬಲಗೈಯಲ್ಲಿ ಬೌಲಿಂಗ್ ಮಾಡಿದರು. ಇದಕ್ಕೆ ಬಲಗೈ ಬ್ಯಾಟರ್‌ಗಳಾದ ಶುಭಮನ್ ಗಿಲ್ ಹಾಗೂ ಸೂರ್ಯಕುಮಾರ್ ಯಾದವ್ ಸಹ ಕೈಜೋಡಿಸಿದರು. ಮಾಜಿ ನಾಯಕ ವಿರಾಟ್ ಕೊಹ್ಲಿ, ಮಧ್ಯಮ ವೇಗದಲ್ಲಿ ಬೌಲಿಂಗ್ ಮಾಡಿ ಅಭ್ಯಾಸ ನಡೆಸಿದರು. ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಗಾಯಗೊಂಡಾಗ ವಿರಾಟ್ ಅವರೇ ಓವರ್ ಪೂರ್ಣಗೊಳಿಸಿದ್ದರು. ಆಫ್ ಸ್ಪಿನ್ನರ್ ಆರ್. ಅಶ್ವಿನ್, ಮಧ್ಯಮ ವೇಗಿ ಶಾರ್ದೂಲ್ ಠಾಕೂರ್ ಮತ್ತು ಮೊಹಮ್ಮದ್ ಸಿರಾಜ್ ಸಹ ಕಠಿಣ ಅಭ್ಯಾಸ ನಡೆಸಿದರು.

ಆರೋಗ್ಯ

ಹೃದಯ ಕಾಪಾಡಿಕೊಳ್ಳಿ



ಡಾ.ಸುನಿಲ್ ಬೋಹ್ರಾ

ಮಧುಮೇಹಕ್ಕೂ ಮತ್ತು ಹೃದಯರಕ್ತನಾಳದ ಕಾಯಿಲೆಗೂ ನಿಕಟ ಸಂಬಂಧವಿದೆ. ಪರಿಣಾಮಕಾರಿ ಮಧುಮೇಹ ನಿರ್ವಹಣೆಗಾಗಿ, ಗ್ಲೂಕೋಸ್ ಮಟ್ಟವನ್ನು ನಿಯಮಿತವಾಗಿ ಪರಿಶೀಲಿಸಿಕೊಳ್ಳುವುದು ಅತ್ಯಗತ್ಯ. ಇದಕ್ಕೆ ನೀವು ಕಂಟಿನ್ಯುಯಸ್ ಗ್ಲೂಕೋಸ್ ಮಾನಿಟರಿಂಗ್ (CGM) ನಂತಹ ಸಾಧನಗಳನ್ನು ಬಳಸಬಹುದು. ಟೈಮ್ ಇನ್ ರೇಂಜ್ (TIR) ನಂತಹ ಉಪಯುಕ್ತ ಮೆಟ್ರಿಕ್‌ಗಳನ್ನು ಹೊಂದಿದ್ದು, ಇದು ದಿನದಲ್ಲಿ ವ್ಯಕ್ತಿಯ ಗ್ಲೂಕೋಸ್ ಮಟ್ಟಗಳು ನಿರ್ದಿಷ್ಟಪಡಿಸಿದ ವ್ಯಾಪ್ತಿಯಲ್ಲಿ ಉಳಿಯುವ ಅವಧಿಯನ್ನು ಸೂಚಿಸುತ್ತದೆ. ವ್ಯಕ್ತಿಯೊಬ್ಬರು ನಿರ್ದಿಷ್ಟಪಡಿಸಿದ ವ್ಯಾಪ್ತಿಯಲ್ಲಿ ಹೆಚ್ಚು ಸಮಯವನ್ನು ಕಳೆಯುವಾಗ, ಹೃದಯರಕ್ತನಾಳದ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುವ ಅಪಾಯವು ಕಡಿಮೆಯಾಗುತ್ತದೆ. ವಾಸ್ತವವಾಗಿ, TIR ನ 10% ರಷ್ಟು ಹೆಚ್ಚಳವು ವ್ಯಕ್ತಿಯೊಬ್ಬರ ಶೀರ್ಷಧಮನಿ ಅಪಧಮನಿಗಳು ಅಸಹಜವಾಗಿ ದಪ್ಪವಾಗುವ ಅಪಾಯವನ್ನು 6.4% ರಷ್ಟು ಕಡಿಮೆ ಮಾಡುತ್ತದೆ. ಆದ್ದರಿಂದ, ಹೃದಯರಕ್ತನಾಳದ ಕಾಯಿಲೆಯು ಹತ್ತಿರಕ್ಕೆ ಬರದಿರಲು TIR ಅನ್ನು ಹೆಚ್ಚಿಸಿಕೊಳ್ಳುವುದು ಬಹು ಮುಖ್ಯವಾಗಿದೆ.

ಭಾರತದಲ್ಲಿ, ಮಧುಮೇಹದಿಂದ ಬಳಲುತ್ತಿರುವ ಜನರು ಹೃದಯ ಸಂಬಂಧಿ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಕಿರಿಯ ವಯಸ್ಸಿನವರಲ್ಲಿ ಈ ಸಮಸ್ಯೆ ಹೆಚ್ಚಳವಾಗುತ್ತಿದೆ.



ಮಧುಮೇಹವು ಅಧಿಕ ರಕ್ತದೊತ್ತಡ, ಕೆಟ್ಟ ಕೊಲೆಸ್ಟ್ರಾಲ್ ಮತ್ತು ಹೆಚ್ಚಿನ ಟ್ರೈಗ್ಲಿಸರೈಡ್‌ಗಳಂತಹ ಹೃದಯರಕ್ತನಾಳದ ಕಾಯಿಲೆಯ ಅಪಾಯಕಾರಿ ಅಂಶಗಳ ಹೆಚ್ಚಳಕ್ಕೆ ಕಾರಣವಾಗಬಹುದು.

ಗ್ಲೂಕೋಸ್ ಮಟ್ಟದ ಏರಿಳಿತಗಳನ್ನು ತಪ್ಪಿಸಲು ಜನರು ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳುವುದು ಮತ್ತು ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸುವುದು ಬಹಳ ಮುಖ್ಯ. ಹೃದಯದ-ಆರೋಗ್ಯಕ್ಕೆ ಸೂಕ್ತವಾದ ಆಹಾರಕ್ರಮ, ನಿಯಮಿತ ವ್ಯಾಯಾಮ ಮತ್ತು CGM ನಂತಹ ನಿಯಮಿತ ಗ್ಲೂಕೋಸ್ ಮಾನಿಟರಿಂಗ್ ಸಾಧನಗಳ ಬಳಕೆಯನ್ನು ಅಳವಡಿಸಿಕೊಳ್ಳುವುದು, ನೀವು ಅನುಸರಿಸಬಹುದಾದ ಕೆಲವು ಪ್ರಮುಖ ಕ್ರಮಗಳಾಗಿವೆ.

ಮಧುಮೇಹದಿಂದ ಬಳಲುತ್ತಿರುವ ಜನರು ತಮ್ಮ ಆರೋಗ್ಯದ ಮೇಲೆ ಒಂದು ಕಣ್ಣಿಡಲು ಅನುಸರಿಸಬಹುದಾದ 5 ಸರಳ ಹಂತಗಳು ಇಲ್ಲಿವೆ:

1 **ನಿಯಮಿತ ತಪಾಸಣೆ:** ಫ್ರೀಸ್ಟೈಲ್ ಲಿಬ್ರೆ ನಂತಹ CGM ಉಪಕರಣಗಳ ಮೂಲಕ ನೈಜ-ಸಮಯದ ಟ್ರ್ಯಾಕಿಂಗ್, ರಕ್ತದಲ್ಲಿನ ಸಕ್ಕರೆಯ ಯಾವುದೇ ರೀತಿಯ ಏರಿಕೆ ಅಥವಾ ಇಳಿಕೆಗಳ ಮೇಲೆ ಕಣ್ಣಿಡಲು ನಿಮಗೆ ಸಹಾಯ ಮಾಡುತ್ತದೆ. ದಿನಕ್ಕೆ ಕನಿಷ್ಠ 17 ಗಂಟೆಗಳ ಕಾಲ ಸೂಕ್ತವಾದ ಗ್ಲೂಕೋಸ್ ವ್ಯಾಪ್ತಿಯಲ್ಲಿ (70 - 180 mg/dl) ಇರಲು ಶ್ರಮಿಸುವುದು ಮುಖ್ಯವಾಗಿದೆ.

2 **ಸೂಕ್ತ ಆಹಾರ ಸೇವನೆ:** ಸಾಮಾನ್ಯವಾಗಿ ಬೆಣ್ಣೆ, ಕೆಂಪು ಮಾಂಸ ಮತ್ತು ಪೂರ್ಣ-ಕೊಬ್ಬಿನ ಹಾಲಿನ ಉತ್ಪನ್ನಗಳ ಸೇವನೆ ಸೀಮಿತವಾಗಿರಲಿ. ಕರಿದ ಮತ್ತು ಸಂಸ್ಕರಿಸಿದ ಆಹಾರಗಳ ಬಳಕೆಯೂ ಕಡಿಮೆಯಾಗಲಿ. ಪ್ರೋಟೀನ್‌ಗಳು, ಧಾನ್ಯಗಳು, ವರ್ಣರಂಜಿತ ತರಕಾರಿಗಳು ಮತ್ತು ಬೀಜಗಳು ಮತ್ತು ಕಾಳುಗಳಂತಹ ಆರೋಗ್ಯಕರ ಕೊಬ್ಬುಗಳು ಸಮೃದ್ಧವಾಗಿರುವ ಊಟದ ಪದ್ಧತಿಯನ್ನು ರೂಢಿಸಿಕೊಳ್ಳಿ.

3 **ನಿಯಮಿತ ವ್ಯಾಯಾಮ:** ಹೃದ್ರೋಗದ ಅಪಾಯವನ್ನು ಕಡಿಮೆ ಮಾಡಲು, ವ್ಯಾಯಾಮದ ಮೂಲಕ ಬೊಜ್ಜು, ಅಧಿಕ ರಕ್ತದೊತ್ತಡ ಮತ್ತು ಹೆಚ್ಚಿನ ಕೊಲೆಸ್ಟ್ರಾಲ್ ಮಟ್ಟಗಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಿದೆ. ನಿಯಮಿತ ದೈಹಿಕ ಚಟುವಟಿಕೆಯು ಮಧುಮೇಹ ನಿರ್ವಹಣೆಗೆ ಸಹಾಯ ಮಾಡುತ್ತದೆ.

ಕುಳಿತುಕೊಳ್ಳುವ ಸಮಯವನ್ನು ಕಡಿಮೆ ಮಾಡಲು ಮತ್ತು ಪ್ರತಿ ವಾರ ಕನಿಷ್ಠ 150 ನಿಮಿಷಗಳ ಮಧ್ಯಮ-ತೀವ್ರತೆಯ ದೈಹಿಕ ಚಟುವಟಿಕೆಯಲ್ಲಿ, ಉದಾಹರಣೆಗೆ ಚುರುಕಾದ ನಡಿಗೆ ಅಥವಾ ಸೈಕ್ಲಿಂಗ್ ಮುಂತಾದವುಗಳಲ್ಲಿ ಆಗಾಗ ತೊಡಗಿಸಿಕೊಳ್ಳಿ

4 **ಧೂಮಪಾನ, ಮದ್ಯಪಾನ ಬೇಡ:** ಧೂಮಪಾನವು ನಿಮ್ಮ ರಕ್ತನಾಳಗಳ ಒಳಪದರಗಳಿಗೆ ಹಾನಿಯುಂಟುಮಾಡುತ್ತದೆ, ಮಧುಮೇಹದಿಂದ ನಿಮ್ಮ ಅಪಧಮನಿಗಳ ಕಿರಿದಾಗುವಿಕೆಯು ತ್ವರಿತಗೊಳ್ಳುತ್ತದೆ. ಹೃದಯರೋಗದ ಅಪಾಯವನ್ನು ಹೆಚ್ಚಿಸುತ್ತದೆ. ನೀವು ಮಧುಮೇಹಿಯಾಗಿದ್ದು ಧೂಮಪಾನ ಮಾಡುತ್ತಿದ್ದರೆ, ಹೃದಯರೋಗದ ಪರಿಣಾಮಗಳ ಈ ಅಪಾಯವು ಮತ್ತಷ್ಟು ಹೆಚ್ಚಾಗುತ್ತದೆ.

ಆಲ್ಕೋಹಾಲ್ ಸೇವನೆಯನ್ನು ಕಡಿಮೆ ಮಾಡಬೇಕು. ನಿಮ್ಮ ಮಧುಮೇಹ ಔಷಧಿಗಳ ಪರಿಣಾಮವನ್ನು ಹಾಳುಮಾಡುತ್ತದೆ ಮತ್ತು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಅತಿಯಾದ ಮದ್ಯಪಾನವು ರಕ್ತದೊತ್ತಡವನ್ನು ಹೆಚ್ಚಿಸುತ್ತದೆ, ಹೃದಯ ಸ್ನಾಯುಗಳನ್ನು ದುರ್ಬಲಗೊಳಿಸುತ್ತದೆ.

5 **ಒತ್ತಡ ನಿರ್ವಹಣೆ:** ನೀವು ಒತ್ತಡಕ್ಕೆ ಒಳಗಾದಾಗ, ನಿಮ್ಮ ದೇಹವು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಹೆಚ್ಚಿಸಬಹುದಾದ ಒತ್ತಡದ ಹಾರ್ಮೋನುಗಳನ್ನು ಉತ್ಪಾದಿಸುತ್ತದೆ ಮತ್ತು ಅದು ಇನ್ಸುಲಿನ್‌ಗೆ ಪ್ರತಿರೋಧ ಉಂಟುಮಾಡುತ್ತದೆ. ಕಾಲಾನಂತರದಲ್ಲಿ, ಇದು ನಿಮ್ಮ ರಕ್ತದೊತ್ತಡವನ್ನು ಹೆಚ್ಚಿಸುತ್ತದೆ. ನಿಮ್ಮ ಒತ್ತಡ ನಿರ್ವಹಣೆಗೆ, ಸಂಗೀತವನ್ನು ಆಲಿಸುವುದು, ಯೋಗ ಅಥವಾ ನೃತ್ಯಗಳಂತಹ ಮೋಜಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸಿ. ನಿಮ್ಮ ಪ್ರೀತಿಪಾತ್ರರೊಂದಿಗೆ ಸಮಯ ಕಳೆಯುವುದು ಅಥವಾ ವೃತ್ತಿಪರರೊಂದಿಗೆ ನಿಮಗೆ ಏನಾಗುತ್ತಿದೆ ಎಂಬುದರ ಕುರಿತು ಚರ್ಚಿಸುವುದು ಒಳಿತು.

ಮಧುಮೇಹಿಗಳು ಹೈಪರ್‌ಗ್ಲೈಸ್ಮಿಯಾ ಅಥವಾ ಹೈಪೊಗ್ಲಿಸಿಮಿಯಾದ ಲಕ್ಷಣಗಳ ಬಗ್ಗೆ ಜಾಗರೂಕರಾಗಿರಬೇಕು ಮತ್ತು ತಕ್ಷಣವೇ ಅವುಗಳಿಗೆ ಪರಿಹಾರ ಪಡೆಯಲು ಕಾಳಜಿ ವಹಿಸಬೇಕು. ಆರೋಗ್ಯಕರ ಜೀವನಶೈಲಿಯ ಆಯ್ಕೆಗಳಿಂದ, ಉತ್ತಮ ಆರೋಗ್ಯ ಫಲಿತಾಂಶಗಳ ಪ್ರಯೋಜನ ಪಡೆಯಬಹುದು ಮತ್ತು ಉತ್ತಮ ಗುಣಮಟ್ಟದ ಜೀವನವನ್ನು ಆನಂದಿಸಬಹುದು.

ಲೇಖಕರು, ಫೋರ್ಟಿಸ್ ಆಸ್ಪತ್ರೆಯ ತಜ್ಞವೈದ್ಯರು

ವಾಸ್ತು ಸಲಹೆ

ನಿಮ್ಮ ಮನೆಯಲ್ಲಿ ಈ ವಸ್ತುಗಳಿವೆಯೇ? ಜೋಪಾನ

ಮನೆಯಲ್ಲಿ ಎಂತಹ ವಸ್ತುಗಳನ್ನು ಇಡಬೇಕು, ಏನನ್ನೆಲ್ಲಾ ಇಡಬಾರದು ಎನ್ನುವ ಬಗ್ಗೆ ಇಲ್ಲಿವೆ ಕೆಲವು ವಾಸ್ತು ಟಿಪ್ಸ್

ಈ ಕೆಲವು ವಸ್ತುಗಳು ಮನೆಯಲ್ಲಿದ್ದರೆ ಮನೆಗೆ ನಕಾರಾತ್ಮಕ ಶಕ್ತಿಯನ್ನು ಆಹ್ವಾನಿಸುತ್ತವೆ ಎನ್ನುವುದು ಬಹುದಿನದ ನಂಬಿಕೆ. ಅಂಥ ವಸ್ತುಗಳು ಯಾವುವು?

ಮುರಿದ ವಸ್ತುಗಳು: ಯಾವುದೇ ಕಾರಣಕ್ಕೂ ಮನೆಯಲ್ಲಿ ಮುರಿದ ವಸ್ತುಗಳನ್ನು ಇಡಬಾರದು. ಮುರಿದ ದೇವರ ಮೂರ್ತಿಗಳು, ಮುರಿದ ಗಡಿಯಾರ, ಮುರಿದ ಬೊಂಬೆ ಅಥವಾ ಆಟಿಕೆಗಳು, ಒಡೆದ ಕನ್ನಡಿ, ಒಡೆದ ಪಾತ್ರೆಗಳು, ಕುರ್ಚಿ, ಟೇಬಲ್‌ಗಳನ್ನು ಮನೆಯಲ್ಲಿ ಇಡುವುದು ಫೆಂಗ್ ಶುಯಿ ನಂಬಿಕೆಗಳ ಪ್ರಕಾರ ಮನೆಗೆ ನಕಾರಾತ್ಮಕ ಶಕ್ತಿಯನ್ನು ಆಹ್ವಾನಿಸಿದಂತೆ.

- **ವ್ಯಗ್ರ ಪ್ರಾಣಿಯ ಚಿತ್ರ:** ಹುಲಿ, ಸಿಂಹ, ಚಿರತೆಯಂತಹ ವ್ಯಗ್ರ ಪ್ರಾಣಿಗಳ ಚಿತ್ರಗಳನ್ನು ಅಥವಾ ಬೊಂಬೆಗಳನ್ನು ಅಥವಾ ಪೇಂಟಿಂಗ್‌ಗಳನ್ನು ಮನೆಯಲ್ಲಿ ಹಾಕಬೇಡಿ ಎನ್ನುತ್ತದೆ ವಾಸ್ತುಶಾಸ್ತ್ರ. ಬಹಳ ಜನ ಜಿಂಕೆಯ ತಲೆಯನ್ನು ಹೋಲುವ ಅಲಂಕಾರಿಕ ವಸ್ತುವನ್ನು ಗೋಡೆಗೆ ತೂಗು ಹಾಕುವುದಿದೆ. ಇದು ಶ್ರೀಮಂತಿಕೆಯ ಪ್ರತೀಕವಲ್ಲ, ಬದಲಾಗಿ ನಿಮ್ಮ ಮನೆಯಲ್ಲಿ ನಕಾರಾತ್ಮಕ ಶಕ್ತಿಯನ್ನು ತುಂಬುವ ಪರಿಕರ.
- ಗೋಡೆಗೆ ಹಡಗು ಮುಳುಗುವ ದೃಶ್ಯ, ಯುದ್ಧದ ವಿನಾಶದ ದೃಶ್ಯಗಳು, ಹೆಣ್ಣು ಮಕ್ಕಳು ಅಳುವ ದೃಶ್ಯ- ಇಂಥ ಕಲಾಕೃತಿಗಳನ್ನು ತೂಗುಹಾಕಬೇಡಿ.
- ರಾಕಿಂಗ್ ಚೇರ್ ಕೂಡ ಒಳ್ಳೆಯದಲ್ಲ ಎನ್ನುತ್ತದೆ ವಾಸ್ತುಶಾಸ್ತ್ರ. ಭೂತದ ಸಿನಿಮಾಗಳಲ್ಲಿ ರಾಕಿಂಗ್ ಚೇರ್ ತಾನೇ ತಾನಾಗಿ ತೂಗಿಕೊಳ್ಳುವುದನ್ನು ನೋಡಿರಬಹುದು. ರಾತ್ರಿಯ ಹೊತ್ತು, ಕಿಟಕಿಯಿಂದ ಬರುವ ಗಾಳಿಗೆ ರಾಕಿಂಗ್ ಚೇರ್ ತಾನೇ ತೂಗಿಕೊಳ್ಳಬಹುದು. ಇದರಲ್ಲಿ ದುಷ್ಟ ಶಕ್ತಿಗಳು ಒಕ್ಕರಿಸಿಕೊಳ್ಳುವ ಸಾಧ್ಯತೆ ಹೆಚ್ಚು.
- ಮನೆಯ ಒಳಗೆ ಯಾವುದೇ ರೀತಿಯ ಮುಳ್ಳಿನ ಗಿಡಗಳನ್ನು ಇಡಬಾರದು.
- ಮನೆಯ ಹಿರಿಯರು ಎಂದರೆ ದೇವರ ಸಮಾನ ಎನ್ನುವ ನಂಬಿಕೆ ಅನೇಕರಿಗಿದೆ. ಇದೇ ಕಾರಣಕ್ಕೆ ಅಗಲಿದ ಹಿರಿಯರ ಚಿತ್ರಗಳನ್ನು ಕೆಲವರು ದೇವರ ಕೋಣೆಯಲ್ಲಿ ಇಡುವ ಅಭ್ಯಾಸ ಮಾಡಿಕೊಂಡಿರುತ್ತಾರೆ. ಆದರೆ ವಾಸ್ತುಪ್ರಕಾರ . ಅಗಲಿದ ಹಿರಿಯರ ಫೋಟೋಗಳನ್ನು ದೇವರ ಕೋಣೆಯಲ್ಲಿ ಇಡಬಾರದು.
- ವಾಸ್ತು ಎಂಬುದು ಮೂಢನಂಬಿಕೆಯಲ್ಲ, ಅದೊಂದು ದಿಕ್ಕುಗಳ ವಿಜ್ಞಾನ. ಅದು ಕೇವಲ ವಸ್ತುಗಳಿಗೆ ಮಾತ್ರ ಅನ್ವಯಿಸದೇ ಜನರಿಗೂ, ಅವರ ಬದುಕಿಗೂ, ಮನಸಿಗೂ ಅನ್ವಯಿಸುತ್ತದೆ.

ರಕ್ತ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಕಾಂಡಕೋಶಗಳ ಪಾತ್ರ: ಭರವಸೆಯ ಬೆಳ್ಳಿ ರೇಖೆ

ಭಾರತದಲ್ಲಿ ಪ್ರತಿವರ್ಷ 1,00,000 ಕ್ಕೂ ಅಧಿಕ ಜನರಲ್ಲಿ ರಕ್ತ ಕ್ಯಾನ್ಸರ್ ಅಥವಾ ಥಲಸ್ಸೇಮಿಯಾ ಅಥವಾ ಅಪ್ಲಾಸ್ಟಿಕ್ ಅನೀಮಿಯಾದಂತಹ ರೋಗಗಳು ಪತ್ತೆಯಾಗುತ್ತಿವೆ. ಪ್ರತಿವರ್ಷ 70,000 ಕ್ಕೂ ಹೆಚ್ಚು ಜನರು ಈ ರೋಗಕ್ಕೆ ಬಲಿಯಾಗುತ್ತಿದ್ದಾರೆ. ಭಾರತದಲ್ಲಿ ಪ್ರತಿವರ್ಷ ಪತ್ತೆಯಾಗುವ ಕ್ಯಾನ್ಸರ್ ರೋಗದಲ್ಲಿ ರಕ್ತದ ಕ್ಯಾನ್ಸರ್ ರೋಗಿಗಳ ಸಂಖ್ಯೆ ಶೇ.8 ರಷ್ಟಿರುತ್ತದೆ. ಅಂದರೆ ಶೇ.8 ರಷ್ಟು ರಕ್ತದ ಕ್ಯಾನ್ಸರ್ ಗೆ ತುತ್ತಾಗುವ ಹೊಸ ರೋಗಿಗಳು ಪತ್ತೆಯಾಗುತ್ತಿದ್ದಾರೆ. ಸಕಾಲಕ್ಕೆ ರೋಗಪತ್ತೆ ಪರೀಕ್ಷೆಗೆ ಒಳಗಾದಲ್ಲಿ ರೋಗ ನಿಯಂತ್ರಣ ಸಾಧ್ಯ.

ರಕ್ತ ಕ್ಯಾನ್ಸರ್ ಮತ್ತು ಇದಕ್ಕೆ ಸಂಬಂಧಿತ ಹಿಮೋಗ್ಲೋಬಿನೋಪತಿಗಳಿಗೆ ಸ್ಟೆಮ್ ಸೆಲ್ ಕಸಿ ಏಕೈಕ ಚಿಕಿತ್ಸಾ ವಿಧಾನವಾಗಿದೆ. ಇದು ನೊಬೆಲ್ ಪ್ರಶಸ್ತಿ ಪುರಸ್ಕೃತ ಇ.ಡೊನಾಲ್ ಥಾಮಸ್ ಮತ್ತು ಫ್ರೆಡ್ ಹಚಿನ್ಸನ್ ಕ್ಯಾನ್ಸರ್ ರೀಸರ್ಚ್ ಸೆಂಟರ್ ನ ತಂಡ ಸಂಶೋಧಿಸಿರುವ ಚಿಕಿತ್ಸಾ ವಿಧಾನವಾಗಿದೆ. ಸ್ಟೆಮ್ ಸೆಲ್ ಅಥವಾ ಕಾಂಡಕೋಶಗಳ ಕಸಿ ಆರಂಭಿಸಿದರು. ಇದಕ್ಕಾಗಿ ಕಾಂಡಕೋಶ ದಾನಿಗಳನ್ನು ಪತ್ತೆ ಮಾಡಲು ಆರಂಭಿಸಿದರು.

ಭಾರತದಲ್ಲಿ ಮುಂಬೈನ ಟಾಟಾ ಸ್ಮಾರಕ ಆಸ್ಪತ್ರೆಯಲ್ಲಿ 1983 ರಲ್ಲಿ ಮೊದಲ ಸ್ಟೆಮ್ ಸೆಲ್ ಕಸಿ ಪ್ರಕ್ರಿಯೆ ನಡೆದಿತ್ತು. ಈಗ ಹಲವಾರು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಸ್ಟೆಮ್ ಸೆಲ್ ಕಸಿ ಕೇಂದ್ರಗಳನ್ನು ಆರಂಭಿಸಿವೆ.



ಯಶಸ್ವಿ ರಕ್ತದ ಕಾಂಡಕೋಶ ಕಸಿ ಮಾಡುವಿಕೆಗೆ HLA-ಹೊಂದಾಣಿಕೆ (Human Leukocyte Antigen) ಇರುವ ದಾನಿಯಿಂದ ರಕ್ತದ ಕಾಂಡಕೋಶಗಳ ಅಗತ್ಯವಿರುತ್ತದೆ. ದಾನಿಯಿಂದ ರಕ್ತದ ಕಾಂಡಕೋಶಗಳನ್ನು ಪಡೆದು ಕಸಿ ಪ್ರಕ್ರಿಯೆಯಿಂದ ರೋಗಿಗೆ ಹಾಕಲಾಗುತ್ತದೆ.ಿವು ರಕ್ತ ಪ್ರವಾಹದಲ್ಲಿ ದೇಹಕ್ಕೆ ಸೇರಿಕೊಳ್ಳಲು ಅನುವು ಆಗುತ್ತದೆ. ಇವು ಮೂಳೆ ಮಜ್ಜೆಗೆ ದಾರಿ ಮಾಡಿಕೊಡುತ್ತವೆ. ಈ ಹೊಸ ರಕ್ತದ ಕಾಂಡಕೋಶಗಳು ಸಂಖ್ಯೆಯಲ್ಲಿ ಹೆಚ್ಚಾಗುತ್ತವೆ ಮತ್ತು ಕೆಂಪುರಕ್ತ ಕಣಗಳು, ಬಿಳಿ ರಕ್ತಕಣಗಳು ಹಾಗೂ ಪ್ಲೇಟ್ಲೇಟ್ ಗಳನ್ನು ಉತ್ಪಾದಿಸಿ ರೋಗಿಯಲ್ಲಿರುವ ರೋಗಗ್ರಸ್ತ ಜೀವಕೋಶಗಳನ್ನು ಬದಲಾಯಿಸುತ್ತವೆ.

ಆರಂಭಿಕ ಹಂತದಲ್ಲಿ ಮೂಳೆ ಮಜ್ಜೆಯ ಕಾಂಡಕೋಶವನ್ನು ಕಸಿ ಮಾಡಲು ಬಳಸಲಾಗುತ್ತಿತ್ತು. ಆದರೆ, ನಿರಂತರವಾಗಿ ನಡೆಯುತ್ತಿರುವ ಸಂಶೋಧನೆಗಳಿಂದಾಗಿ ಬಾಹ್ಯವಾಗಿ ರಕ್ತದಿಂದ ಕಾಂಡಕೋಶಗಳನ್ನು ಸಹ ಸಂಗ್ರಹಿಸಬಹುದಾಗಿದೆ ಎಂಬುದನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ. ಈ ಕಾಂಡಕೋಶ ದಾನಿಯ ಅಂಗಾಂಶದ ಪ್ರಕಾರ (HLA) ವನ್ನು ರೋಗಿಗೆ ಹೊಂದಾಣಿಕೆಯಾಗುತ್ತದೆಯೇ ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ. ಟೈಪಿಂಗ್ ಅಥವಾ ಪರೀಕ್ಷೆ ಸಂದರ್ಭದಲ್ಲಿ ಪರೀಕ್ಷಿಸಲಾಗುವ ಪ್ರಮುಖ ಗುರುತುಗಳೆಂದರೆ ಹ್ಯೂಮನ್ ಲ್ಯುಕೋಸೈಟ್ ಆ್ಯಂಟಿಜೆನ್ (HLA) ಗುಣಲಕ್ಷಣಗಳನ್ನು ಹೊಂದಿರಬೇಕು. ಇವುಜೀವಕೋಶಗಳ ಮೇಲ್ಮೈ ರಚನೆಗಳಾಗಿದ್ದು, ಫಾರಿನ್ ಮಟೀರಿಯಲ್ ಎಂಬುದನ್ನು ದೇಹಕ್ಕೆ ಸೂಚನೆ ನೀಡುತ್ತವೆ.

ಕೇವಲ ಶೇ.30 ರಷ್ಟು ರೋಗಿಗಳಿಗೆ ಮಾತ್ರ ಕುಟುಂಬ ಸದಸ್ಯ ದಾನಿಗಳು ಕಸಿಗೆ ಹೊಂದಿಕೆಯಾಗುತ್ತಿದ್ದಾರೆ. ವಿಶ್ವದಾದ್ಯಂತ 41 ಮಿಲಿಯನ್ ಗೂ ಅಧಿಕ ಸಂಬಂಧಿಗಳಲ್ಲದ ಕಾಂಡಕೋಶ ದಾನಿಗಳು ನೋಂದಣಿ ಮಾಡಿಸಿಕೊಂಡಿದ್ದಾರೆ. ಭಾರತದಲ್ಲಿ ನೋಂದಣಿ ಮಾಡಿಸಿಕೊಂಡಿರುವವರ ಪ್ರಮಾಣ ಕೇವಲ ಶೇ.0.04 ರಷ್ಟು. ಕಾಂಡಕೋಶ ದಾನಿಗಳ ಸಂಖ್ಯೆ ಹೆಚ್ಚಾಗಬೇಕಾಗಿದೆ.

ಕಾಂಡಕೋಶವನ್ನು ದಾನ ಮಾಡಿದರೆ ಆ ವ್ಯಕ್ತಿಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಮತ್ತು



ನೋವಿನಿಂದ ಕೂಡಿರುತ್ತದೆ. ಸುಧಾರಿಸಿಕೊಳ್ಳಲು ಸಾಕಷ್ಟು ಸಮಯ ಬೇಕಾಗುತ್ತದೆ ಎಂಬ ತಪ್ಪು ಕಲ್ಪನೆ ಇದೆ. PBSC ಗಳನ್ನು ದಾನ ಮಾಡುವ ಪ್ರಕ್ರಿಯೆಯು ರಕ್ತದ ಪ್ಲೇಟ್ಲೇಟ್ ಗಳನ್ನು ದಾನ ಮಾಡುವಷ್ಟೇ ಸರಳವಾಗಿದೆ. 3-4 ಗಂಟೆಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಆಸ್ಪತ್ರೆಗೆ ದಾಖಲಾಗುವ ಅಗತ್ಯವಿರುವುದಿಲ್ಲ.

ಕಾಂಡಕೋಶ ದಾನಕ್ಕೆ ದಾನಿಯು ಯಾವುದೇ ವೆಚ್ಚವನ್ನು ಭರಿಸಬೇಕಿಲ್ಲ. DKMS-BMST ಯಂತಹ ನೋಂದಣಿಯಂತಹ ನೋಂದಣಿಯಲ್ಲಿ ಸಂಭಾವ್ಯ ಕಾಂಡಕೋಶ ದಾನಿಯಾಗಿ ನೋಂದಾಯಿಸಬಹುದಾಗಿದೆ. ರಕ್ತದ ಕಾಂಡಕೋಶಗಳನ್ನು ದಾನ ಮಾಡುವುದು ಸಂಪೂರ್ಣವಾಗಿ ಸ್ವಯಂಪ್ರೇರಿತವಾಗಿರುತ್ತದೆ.

ಹೆಚ್ಚಿನ ಸಂಖ್ಯೆಗಳಲ್ಲಿ ದಾನಿಗಳಿಲ್ಲದೆ ಕಸಿ ಅಗತ್ಯವಿರುವ ರೋಗಿಗೆ ಹೊಂದಾಣಿಕೆಯ ರಕ್ತದ ಕಾಂಡಕೋಶ ದಾನಿಯನ್ನು ಪಡೆಯುವುದು ಕಷ್ಟಕರವಾಗಿದೆ. 18-55 ವರ್ಷ ವಯಸ್ಸಿನ ಮತ್ತು ಸಾಮಾನ್ಯವಾಗಿ ಉತ್ತಮ ಆರೋಗ್ಯ ಹೊಂದಿರುವ ಯಾರು ಬೇಕಾದರೂ ತಮ್ಮ ಸ್ವ್ಯಾಬ್ ಮಾದರಿಗಳನ್ನು ಕಾಂಡಕೋಶ ನೋಂದಣಿಗೆ ನೀಡಿ, ಸಂಭಾವ್ಯ ಜೀವರಕ್ಷಕರಾಗಿ ನೋಂದಾಯಿಸಿಕೊಳ್ಳಬಹುದಾಗಿದೆ.

ಪ್ಯಾಟ್ರಿಕ್ ಪೌಲ್, ಸಿಇಒ,
ಡಿಕೆಎಂಎಸ್-ಬಿಎಂಎಸ್ ಟಿ ಫೌಂಡೇಶನ್ ಇಂಡಿಯಾ

ವಿನಯ್ ಗರ್ವ ಭಂಗ ಮಾಡಿದ ಮೈಕಲ್, ತನಿಷಾ



ವೇಣುಗೋಪಾಲ ಕೆ.

ಬೆಂಗಳೂರು: ಬಿಗ್‌ಬಾಸ್ ಕನ್ನಡ 10ನೇ ಆವೃತ್ತಿಯ ಮೂರನೇ ವಾರ ಮನೆ ರೋಚಕತೆ ಪಡೆದುಕೊಂಡಿದೆ. ಟಾಸ್ಕ್‌ಗಳಲ್ಲಿ ಸ್ಪರ್ಧಿಗಳು ಉತ್ಸಾಹದಿಂದ ಭಾಗವಹಿಸು-ತ್ತಿದ್ದಾರೆ. ಕಳಪೆ ಎನ್ನಲಾಗುತ್ತಿದ್ದ ತಂಡ ಸಹ ಈ ಬಾರಿ ಗೆಲುವಿನ ಪತಾಕೆ ಹಾರಿಸಿದೆ.

ಹೌದು, ಮೂರನೇ ವಾರವೂ ಟಾಸ್ಕ್‌ಗಳಿಗಾಗಿ ಬಿಗ್‌ಬಾಸ್ ಎರಡು ಹೊಸ ತಂಡಗಳ ರಚನೆಗೆ ಸೂಚಿಸಿದ್ದರು. ಅದರನ್ವಯ ಈ ಬಾರಿ ಮಹಿಳಾ ನಾಯಕಿಯರಿಗೆ ಮಣೆ ಹಾಕಲಾಯ್ತು. ಹೆಚ್ಚು ಸದಸ್ಯರ ಬೆಂಬಲ ಪಡೆದ ನಮ್ರತಾ ಮತ್ತು ತನಿಷಾ ಕ್ರಮವಾಗಿ ಉಗ್ರಂ ಮತ್ತು ಭಜರಂಗಿ ತಂಡಗಳ ನಾಯಕಿಯರಾದರು.

ಆದರೆ, ತಂಡಗಳಿಗೆ ಸದಸ್ಯರ ಆಯ್ಕೆ ವೇಳೆ ಮನೆಯಲ್ಲಿ ಅತ್ಯಂತ ಬಲಶಾಲಿಗಳು ಎಂದು ಬಿಂಬಿತವಾಗಿದ್ದ ಕಳೆದ ಬಾರಿಯ ನಾಯಕರಾದ ವಿನಯ್ ಮತ್ತು ಕಾರ್ತಿಕ್ ನಮ್ರತಾ ತಂಡ ಸೇರಿಕೊಂಡರು. ಇತ್ತ, ತನಿಷಾ ನೇತೃತ್ವದ ಭಜರಂಗಿ ತಂಡದಲ್ಲಿ ಮೈಕಲ್ ರೀತಿಯ ಕಟ್ಟಾಳು ಇದ್ದರೂ ಉಳಿದ ಸದಸ್ಯರು ಅಷ್ಟಾಗಿ ಸಮರ್ಥರಿಲ್ಲದ ಕಾರಣ ತನಿಷಾ ತಂಡವು ದುರ್ಬಲವೆಂಬಂತೆ ಬಿಂಬಿತವಾಗಿತ್ತು. ಇದಕ್ಕೆ ತಕ್ಕಂತೆ ಮೊದಲೆರಡು ಟಾಸ್ಕ್‌ಗಳಲ್ಲಿ ನಮ್ರತಾ ತಂಡ ಗೆದ್ದು ಬೀಗಿತು. ಗೆಲುವಿನ ಸಂಭ್ರಮದಲ್ಲಿದ್ದ ವಿನಯ್ ಮತ್ತು ಕಾರ್ತಿಕ್ ಎದುರಾಳಿ ತಂಡವನ್ನು ವಿಧ ವಿಧವಾಗಿ ಹೀಯಾಳಿಸಿದ್ದರು.

ಬದಲಾದ ಆಟ.. ವಿನಯ್ ಗರ್ವ ಭಂಗ

ಹೌದು, ಬಲಿಷ್ಠ ತಂಡ ಎಂದು ಮೆರೆಯುತ್ತಿದ್ದ ಉಗ್ರಂ ತಂಡದ ಸೊಕ್ಕಡಗಿಸುವಲ್ಲಿ ಬಿಗ್‌ಬಾಸ್ ಕೊಟ್ಟ ಮೂರನೇ ಟಾಸ್ಕ್ ಕಾರಣವಾಯಿತು. ಈ ಟಾಸ್ಕ್‌ನಲ್ಲಿ ನಾಯಕಿಯರಿಗೆ ಮಾತ್ರ ಪಾಲ್ಗೊಳ್ಳಲು ಅವಕಾಶವಿತ್ತು. ಎರಡು ಡ್ರಮ್‌ಗಳನ್ನು ಆಟಕ್ಕೆ ನೀಡಲಾಗಿತ್ತು. ಒಂದು ಡ್ರಮ್ ಮೇಲೆ ನಿಂತು ಮತ್ತೊಂದು ಡ್ರಮ್ ಮೇಲೆ ನೆಗೆಯುತ್ತಾ ಎದುರಾಳಿ ಸ್ಪರ್ಧಿಯನ್ನು ಹಿಡಿಯುವ ನಿಯಮ ಇದರಲ್ಲಿತ್ತು. ಮೂರು ಸುತ್ತಿನ ಈ ಟಾಸ್ಕ್‌ನ ಮೊದಲೆರಡು ಸುತ್ತುಗಳನ್ನು ಗೆದ್ದ ತನಿಷಾ ಭಜರಂಗಿ ತಂಡಕ್ಕೆ ಗೆಲುವಿನ ರುಚಿ ತೋರಿಸಿದರು.

ಇದರಿಂದ ಹುಮ್ಮಸ್ಸು ಪಡೆದ ತಂಡದ ಸದಸ್ಯರು ಉಳಿದೆರಡು ಟಾಸ್ಕ್‌ಗಳಲ್ಲಿ ಗೆಲುವಿನ ಪತಾಕೆ ಹಾರಿಸಿದರು. ಮೂರನೇ ಟಾಸ್ಕ್ ಗೆದ್ದಿದ್ದರಿಂದ ತಂಡದಿಂದ ಹೊರಗುಳಿದಿದ್ದ ಮೈಕಲ್ ಅವರನ್ನು ವಾಪಸ್ ಕರೆಸಿಕೊಳ್ಳುವ ಅವಕಾಶ ಭಜರಂಗಿ ತಂಡಕ್ಕೆ ಸಿಕ್ಕಿತು. ಇದು ಟಾಸ್ಕ್‌ಗಳ ದಿಕ್ಕನ್ನೇ ಬದಲಿಸಿತು.

ನಾಲ್ಕನೇ ಟಾಸ್ಕ್‌ನಲ್ಲಿ ಉಭಯ ತಂಡಗಳ ತಲಾ ಒಬ್ಬ ಸದಸ್ಯ ಹಗ್ಗ ಕಟ್ಟಿದ ಬಕೆಟ್ ಅನ್ನು ಹಿಡಿದು ನಿಲ್ಲಬೇಕು. ಉಳಿದ ತಂಡಗಳ ಸದಸ್ಯರೆಲ್ಲ ಸ್ವಿಮಿಂಗ್ ಪೂಲ್‌ನಲ್ಲಿದ್ದ ಭಾರದ ವಸ್ತುಗಳನ್ನು ತಂದು ಬಕೆಟ್‌ಗೆ ಎಸೆಯುವ ನಿಯಮವಿತ್ತು. ಮೊದಲು ಬಕೆಟ್ ಕೈಬಿಟ್ಟವರು ಸೋಲುತ್ತಾರೆ ಎಂದು ತಿಳಿಸಲಾಗಿತ್ತು. ಭಜರಂಗಿಯಿಂದ ಮೈಕಲ್ ಮತ್ತು ಉಗ್ರಂ ತಂಡದಿಂದ ವಿನಯ್ ಬಕೆಟ್ ಹಿಡಿದು ನಿಂತರು. ಇದರಲ್ಲೂ ಭಜರಂಗಿ ತಂಡ ಅತ್ಯಂತ ರೋಚಕವಾಗಿ ಆಡಿತು. ವಿನಯ್ ನಿಯಮ ಉಲ್ಲಂಘಿಸಿದ್ದನ್ನು ಎತ್ತಿ ತೋರಿಸಿದ ಭಜರಂಗಿ ತಂಡದ ಉಸ್ತುವಾರಿ ತನಿಷಾ ಗೆಲುವನ್ನು ತಂದುಕೊಟ್ಟರು. ಉಗ್ರಂ ತಂಡದ ಉಸ್ತುವಾರಿ ಸಿರಿ ಸಹ ತನಿಷಾ ವಾದಕ್ಕೆ ಮನ್ನಣೆ ನೀಡಿದರು.

ಬಳಿಕ, ಕಾಲಿನಲ್ಲಿ ಪಿರಮಿಡ್ ನಿರ್ಮಿಸುವ ಆಟದಲ್ಲೂ ತನಿಷಾ ನಿಯಮವನ್ನು ಗಟ್ಟಿಯಾಗಿ ಹಿಡಿದುನಿಂತರು. ವಿಚಲಿತನಾದ ಕಾರ್ತಿಕ್ ಆಟದಲ್ಲಿ ಸೋಲುಂಡರು. ಅತ್ಯಂತ ಕರಾರುವಾಕ್ ಆಗಿ ಆಡಿದ ಮೈಕಲ್ ಭಜರಂಗಿ ಗೆಲುವು ತಂದಿತ್ತರು.


ಈಗ 3-2ರಿಂದ ವಾರದ ಟಾಸ್ಕ್‌ಗಳ ಸರಣಿ ಗೆದ್ದ ಭಜರಂಗಿ ತಂಡದ ಸದಸ್ಯರು ಮುಂದಿನ ವಾರದ ಕ್ಯಾಪ್ಟನ್ಸಿ ಟಾಸ್ಕ್‌ಗೆ ಅರ್ಹತೆ ಪಡೆಯುವುದರ ಜೊತೆಗೆ ವಿನಯ್ ಮತ್ತು ಕಾರ್ತಿಕ್ ಅವರನ್ನೊಳಗೊಂಡ ಉಗ್ರಂ ತಂಡದ ಗರ್ವ ಭಂಗ ಮಾಡಿದ್ದಾರೆ.

ಸಾಂಪ್ರದಾಯಿಕ ನೋಟದ ಉತ್ತಮ ಸ್ಮಾರ್ಟ್‌ವಾಚ್

ವಿಶ್ವನಾಥ ಎಸ್.

ಧರಿಸಬಲ್ಲ ಸಾಧನಗಳ (ಆಡಿಯೊ ಮತ್ತು ಸ್ಮಾರ್ಟ್‌ವಾಚ್) ವಿಭಾಗದಲ್ಲಿ ಬೌಲ್ಟ್ ಕಂಪನಿಯು ಉತ್ತಮ ಬೆಳವಣಿಗೆ ಸಾಧಿಸುತ್ತಿದೆ. ಇಂಟರ್‌ನ್ಯಾಷನಲ್ ಡೇಟಾ ಕಾರ್ಪೊರೇಷನ್‌ನ ಈಚಿನ ವರದಿಯ ಪ್ರಕಾರ, 2023ರ ಮೊದಲ ತ್ರೈಮಾಸಿಕದಲ್ಲಿ ಧರಿಸಬಲ್ಲ ಸಾಧನಗಳ (ಆಡಿಯೊ ಮತ್ತು ಸ್ಮಾರ್ಟ್‌ವಾಚ್) ವಿಭಾಗದಲ್ಲಿ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಬ್ರ್ಯಾಂಡ್ ಆಗಿ 'ಬೌಲ್ಟ್ ಆಡಿಯೊ' ಹೊರಹೊಮ್ಮಿದೆ. ಕಂಪನಿಯು ಈಚೆಗೆ ಬಿಡುಗಡೆ ಮಾಡಿರುವ 'ಬೌಲ್ಟ್ ಸ್ಟೆರ್ಲಿಂಗ್ ಪ್ರೊ' ಸ್ಮಾರ್ಟ್‌ವಾಚ್, ಸಾಂಪ್ರದಾಯಿಕ ನೋಟದೊಂದಿಗೆ ಸ್ಮಾರ್ಟ್ ವೈಶಿಷ್ಟ್ಯಗಳನ್ನು ಹೊಂದಿದೆ. ರೌಂಡ್ ಡಯಲ್, ಬೆಲ್ಟ್ ಬದಲಿಗೆ ಚೈನ್... ಹೀಗೆ ತಕ್ಷಣಕ್ಕೆ ಇದೊಂದು ಸಾಂಪ್ರದಾಯಿಕ ವಾಚ್ ರೀತಿಯಲ್ಲೇ ಕಾಣಿಸುತ್ತದೆ. ಆದರೆ, ಬ್ಲುಟೂತ್ ಕಾಲಿಂಗ್, ಫಿಟ್‌ನೆಸ್ ಟ್ರ್ಯಾಕರ್, ಸ್ಪೋರ್ಟ್ಸ್ ಮೋಡ್ ವೈಶಿಷ್ಟ್ಯಗಳಿಂದಾಗಿ ಗಮನ ಸೆಳೆಯುತ್ತದೆ.

1.43 ಇಂಚು ಅಮೊಎಲ್‌ಇಡಿ ಡಿಸ್‌ಪ್ಲೇ ಹೊಂದಿದ್ದು, 466X466 ಪಿಕ್ಸಲ್ ರೆಸಲ್ಯೂಷನ್ ಒಳಗೊಂಡಿದೆ.800 ನಿಟ್ಸ್ ಬ್ರೈಟ್‌ನೆಸ್ ಇದ್ದು, ಬಿಸಿಲಿನಲ್ಲಿಯೂ ಡಿಸ್‌ಪ್ಲೆ ಸ್ಪಷ್ಟವಾಗಿ ಕಾಣಿಸುತ್ತದೆ. ಮಲ್ಟಿ ಫಂಕ್ಷನ್ ಬಟನ್, ಸ್ಪೋರ್ಟ್ಸ್ ಮೋಡ್ ಬಟನ್ ಹೀಗೆ ಎರಡು ಬಟನ್‌ಗಳಿವೆ. ನೀರು ಮತ್ತು ಧೂಳಿನಿಂದ ರಕ್ಷಣೆಗೆ ಐಪಿ 68 ರೇಟಿಂಗ್ಸ್ ನೀಡಲಾಗಿದೆ.



ಬೌಲ್ಟ್ ಸ್ಟೆರ್ಲಿಂಗ್ ಪ್ರೊ ಸ್ಮಾರ್ಟ್‌ವಾಚ್

ಬೌಲ್ಟ್ ಟ್ರ್ಯಾಕ್ ಆ್ಯಪ್: ಮೊಬೈಲ್ ಜೊತೆ ಸುಲಭವಾಗಿ ಸಂಪರ್ಕ ಸಾಧಿಸಲು ಬ್ಲುಟೂತ್ 5.3 ಆವೃತ್ತಿಯನ್ನು ಹೊಂದಿದೆ. ಪ್ಲೇ ಸ್ಟೋರ್‌ನಿಂದ 'ಬೌಲ್ಟ್ ಟ್ರ್ಯಾಕ್' ಆ್ಯಪ್ (BoultTrack) ಡೌನ್‌ಲೋಡ್ ಮಾಡಿಕೊಳ್ಳಬೇಕು. ಮೊಬೈಲ್‌ನಲ್ಲಿ ಬ್ಲುಟೂತ್ ಆನ್ ಮಾಡಿ ಸರ್ಚ್ ಕೊಟ್ಟರೆ 'ಬೌಲ್ಟ್ ವಾಚ್ ಆರ್‌ಇ' ಹೆಸರು ಕಾಣಿಸುತ್ತದೆ; ಅದರ ಮೇಲೆ ಕ್ಲಿಕ್ ಮಾಡಿದರೆ ಮೊಬೈಲ್ ಜೊತೆ ವಾಚ್ ಸಂಪರ್ಕಕ್ಕೆ ಬರುತ್ತದೆ.

ವಾಚ್ ಮೂಲಕವೇ ಕಾಲ್ ಮಾಡುವ ಮತ್ತು ರಿಸೀವ್ ಮಾಡುವುದು ಸರಿಯಾಗಿ ಕೆಲಸ ಮಾಡುತ್ತದೆ. ಕಾಂಟ್ಯಾಕ್ಟ್ ಸಿಂಕ್ ಮಾಡಿಕೊಳ್ಳುವುದಷ್ಟೇ ಅಲ್ಲದೆ ಲಿಸ್ಟ್‌ನಲ್ಲಿ ಇಲ್ಲದ ನಂಬರ್ ಅನ್ನು ಡಯಲ್ ಮಾಡಬಹುದು. ಇನ್‌ಬಿಲ್ಟ್ ಮೈಕ್ರೊಫೋನ್ ಮತ್ತು ಸ್ಪೀಕರ್ ಇದ್ದು, ಫೋನ್‌ನ ಎರಡೂ ತುದಿಯಲ್ಲಿ ಇರುವವರಿಗೆ ಧ್ವನಿಯು ಸ್ಪಷ್ಟವಾಗಿ ಕೇಳಿಸುತ್ತದೆ.


ವಾಯ್ಸ್ ಅಸಿಸ್ಟಂಟ್ಸ್: ಸಿರಿ, ಗೂಗಲ್ ಅಸಿಸ್ಟಂಟ್ ಅಥವಾ ಇನ್ಯಾವುದೇ ವಾಯ್ಸ್ ಅಸಿಸ್ಟಂಟ್ ಮೂಲಕವೇ ವಾಚ್ ಅನ್ನು ನಿಯಂತ್ರಿಸಬಹುದು. ಕಾಲ್ ಮಾಡುವುದು, ರಿಮೈಂಡರ್ ಇಡುವುದು, ಮೆಸೇಜ್ ಕಳುಹಿಸುವುದು ಇತ್ಯಾದಿ. ಹೃದಯದ ಬಡಿತದ ಮಾಹಿತಿ ನೀಡುವ, ಎಷ್ಟು ಹೊತ್ತು ನಿದ್ದೆ ಮಾಡಿದ್ದೀರಿ ಎಂದು ಹೇಳುವ, ಒಂದೇ ಕಡೆ ಹೆಚ್ಚು ಹೊತ್ತು ಕೂತಿದ್ದೀರಿ, ಇದೀಗ ನಡೆಯುವ ಸಮಯ ಎಂದು ಎಚ್ಚರಿಸುವ, ಆಗಾಗ್ಗೆ ನೀರು ಕುಡಿಯಲು ನೆನಪಿಸುವಂತೆ ವಾಚ್‌ನಲ್ಲಿ ಸೆಟ್ಟಿಂಗ್ಸ್ ಮಾಡಿಟ್ಟುಕೊಳ್ಳಬಹುದು. ಅಲ್ಲದೆ, ಮ್ಯೂಸಿಕ್, ಮೆಸೇಜ್, ಫೈಂಡ್ ವಾಚ್, ಲೋ ಬ್ಯಾಟರಿ ರಿಮೈಂಡರ್, ಇನ್‌ಕಮಿಂಗ್ ಕಾಲ್ ರಿಮೈಂಡರ್, ಪವರ್ ಆನ್/ಆಫ್, ಪವರ್ ಸೇವಿಂಗ್, ಡುನಾಟ್ ಡಿಸ್ಟರ್ಬ್‌ನಂತಹ ಅಗತ್ಯ ವೈಶಿಷ್ಟ್ಯಗಳನ್ನೂ ಒಳಗೊಂಡಿದೆ.

ಚೈನ್ ಹೊಂದಿಸುವ ಸಾಧನ: ನಿಮ್ಮ ಕೈಯಳತೆಗೆ ಚೈನನ್ನು ಹೊಂದಿಸಲು ಒಂದು ಸಾಧನ ನೀಡಲಾಗಿದೆ. ಅದರ ಮೂಲಕ ಚೈನ್‌ನ ಲಿಂಕ್ ತಪ್ಪಿಸಿ ಅಳತೆಗಿಂತ ಹೆಚ್ಚಿಗೆ ಇರುವ ಕೊಂಡಿಯನ್ನು ಪ್ರತ್ಯೇಕಿಸಬೇಕು. ಆದರೆ ಈ ಕೆಲಸವು ಸಂಯಮ ಮತ್ತು ಸಮಯ ಎರಡನ್ನೂ ಬೇಡುತ್ತದೆ. ಚೈನ್ ಹೊಂದಿಸುವ ಸಾಧನ ಒಂದೇ ಇದ್ದರೆ ಸಾಲದು. ಚೈನ್ ಲಿಂಕ್ ತಪ್ಪಿಸಲು ಪಿನ್ ತೆಗೆಯುವಾಗ ಕಟಿಂಗ್‌ಪ್ಲಯರ್ ಅಥವಾ ಗಟ್ಟಿಮುಟ್ಟಾಗಿರುವ ಚಿಮುಟ ಬೇಕಾಗುತ್ತದೆ. ಹಾಗೆ ಲಿಂಕ್ ತಪ್ಪಿಸಿದ ಬಳಿಕ ಮತ್ತೆ ಚೈನ್ ಅನ್ನು ಸೇರಿಸುವುದು ಸಹ ಸುಲಭವದ ಕೆಲಸವೇನಲ್ಲ.


ಸ್ಪೋರ್ಟ್ ಮೋಡ್‌ಗೆಂದೇ ಪ್ರತ್ಯೇಕವಾದ ಬಟನ್ ನೀಡಲಾಗಿದೆ. ರನ್ನಿಂಗ್, ರಾಕ್ ಕ್ಲೈಂಬಿಗ್, ಸ್ಕಿಪ್ಪಿಂಗ್ ಹೀಗೆ 100ಕ್ಕೂ ಅಧಿಕ ಸ್ಪೋರ್ಟ್ಸ್ ಮೋಡ್‌ಗಳು ಇದರಲ್ಲಿವೆ. ಆಂಡ್ರಾಯ್ಡ್ 5.0 ಅಥವಾ ಐಒಎಸ್ 9.0 ಅಥವಾ ಅದಕ್ಕಿಂತ ಹೆಚ್ಚಿನ ಆವೃತ್ತಿಯಲ್ಲಿ ಈ ಸ್ಮಾರ್ಟ್‌ವಾಚ್ ಕೆಲಸ ಮಾಡುತ್ತದೆ. ಫೋನ್ ಇರುವಲ್ಲಿಂದ 10 ಮೀಟರ್ ವ್ಯಾಪ್ತಿಯಲ್ಲಿ ಇದನ್ನು ಬಳಸಬಹುದು. ಒಟ್ಟಿನಲ್ಲಿ ಗುಣಮಟ್ಟ, ಆಡಿಯೊ ಕ್ಲಾರಿಟಿಯ ದೃಷ್ಟಿಯಿಂದ ಉತ್ತಮ ಸ್ಮಾರ್ಟ್‌ವಾಚ್ ಇದಾಗಿದೆ. ಕಂಪನಿಯ ಜಾಲತಾಣದಲ್ಲಿ ಎಂಆರ್‌ಪಿ ₹7,999 ಇದೆ. ಆದರೆ ₹2,099ಕ್ಕೆ ಕಂಪನಿ ನೀಡುತ್ತಿದೆ.


LOYAL WORLD GROUP
WWW.LOYALWORLDGROUP.CO.IN
ದೀಪಾವಳಿ ಹಬ್ಬದ ಶುಭಾಶಯಗಳು
ಅದ್ಧೂರಿಯ
ಶುಭಾರಂಭ
ಈ ಸೂಪರ್ ಸ್ಟೋರ್‌ನಲ್ಲಿ ನಿಮ್ಮ ದಿನ ನಿತ್ಯದ
ಅಗತ್ಯಗಳನ್ನು ಒಂದೇ ಸೂರಿನಡಿಯಲ್ಲಿ ಪಡೆಯಿರಿ
ಲಾಯಲ್ ವರ್ಲ್ಡ್® ಮಾರ್ಕೆಟ್
world of goodness
GROUND FLOOR, PHOENIX MALL OF ASIA, HEBBAL, BENGALURU.
TIME AND DATE - 11:00 AM , SATURDAY , 28TH OCTOBER.

ಮದುವೆಯ ವಿಡಿಯೊ ಬಿಡುಗಡೆ ಮಾಡಿದ ರಣವೀರ್–ದೀಪಿಕಾ



ಎಎಫ್‌ಪಿ ಚಿತ್ರಗಳು



ಪವಿತ್ರಾ ಭಟ್

ಮುಂಬೈ: ಹಿಂದಿಯಲ್ಲಿ ಹೆಚ್ಚು ಜನಪ್ರಿಯತೆ ಪಡೆದಿರುವ ಕಾಫಿ ವಿತ್ ಕರಣ್ ಕಾರ್ಯಕ್ರಮದ ಎಂಟನೇ ಆವೃತ್ತಿ ಆರಂಭವಾಗಿದೆ. ಇದಕ್ಕೆ ಮೊದಲ ಅತಿಥಿಗಳಾಗಿ ಬಾಲಿವುಡ್‌ನ ಸ್ಟಾರ್ ಜೋಡಿ ದೀಪಿಕಾ ಪಡುಕೋಣೆ ಮತ್ತು ರಣವೀರ್ ಸಿಂಗ್ ಭಾಗವಹಿಸಿದ್ದಾರೆ.

ರಣವೀರ್ –ದೀಪಿಕಾ ಮದುವೆಯಾಗಿ ಐದು ವರ್ಷಗಳೇ ಕಳೆಯುತ್ತಿದೆ. (2018ರ ನವೆಂಬರ್ 14 ರಂದು ವಿವಾಹವಾಗಿದ್ದರು) ಇದೀಗ ಕಾಫಿ ವಿತ್ ಕರಣ್ ಕಾರ್ಯಕ್ರಮದಲ್ಲಿ ಮದುವೆಯ ವಿಶೇಷ ವಿಡಿಯೊವೊಂದನ್ನು ಬಿಡುಗಡೆ ಮಾಡಿದ್ದಾರೆ. ರಣವೀರ್ –ದೀಪಿಕಾ ಮದುವೆಯ ಮಧುರ ಕ್ಷಣಗಳ ವಿಡಿಯೊವನ್ನು The Wedding Filmer ಇನ್‌ಸ್ಟಾಗ್ರಾಮ್ ಖಾತೆ ಹಂಚಿಕೊಂಡಿದೆ.

ಕಾರ್ಯಕ್ರಮದಲ್ಲಿ ದೀಪಿಕಾ ಹಾಗೂ ರಣವೀರ್ ಬದುಕಿನಲ್ಲಿ ಎದುರಿಸಿದ ಸವಾಲುಗಳ ಬಗ್ಗೆ ಹಾಗೂ ಮದುವೆಯಾದ ನಂತರದ ಜೀವನದ ಬಗ್ಗೆ ಹಂಚಿಕೊಂಡಿದ್ದಾರೆ. ದೀಪಿಕಾ ಸದ್ಯ 'ಫೈಟರ್' ಸಿನಿಮಾದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ.

ಮದುವೆ ಶಾಸ್ತ್ರದ ಸಂದರ್ಭದಲ್ಲಿ ದೀಪಿಕಾಳ ಆನಂದಭಾಷ್ಪವನ್ನು ಕಿರುಬೆರಳಿನಿಂದ ಒರೆಸಿದ ರಣವೀರ್, ಬಾಯಲ್ಲಿಟ್ಟುಕೊಂಡು ಚಪ್ಪರಿಸಿದ್ದು, ತನ್ನ ಬದುಕಿನಲ್ಲಿ ದೀಪಿಕಾ ಎಷ್ಟು ಮುಖ್ಯ ಎಂಬುದನ್ನು ಸಭೆಗೆ ತಿಳಿಸಿದ ಪರಿ, ದೀಪಿಕಾ ತಂದೆ ಪ್ರಕಾಶ್ ಪಡುಕೋಣೆ ಅವರ ಅನಿಸಿಕೆ ಹಾಗೂ ನೂತನ ದಂಪತಿಗೆ ಶುಭಾಶಯ ಇದೆ.

ಅದರಲ್ಲೂ, ದೀಪಿಕಾ ಮತ್ತು ರಣವೀರ್ ಅವರಿಗೆ ಸವ್ಯಸಾಚಿ ಮಾಡಿರುವ ವಸ್ತ್ರ ವಿನ್ಯಾಸ, ತರಹೇವಾರಿ ಆಭರಣ, ಪಂಜಾಬಿ ಮತ್ತು ದಕ್ಷಿಣ ಭಾರತ ಶೈಲಿಯ ಉಡುಗೆ ತೊಡುಗೆ ವೈಭವೋಪೇತ ವಿವಾಹಕ್ಕೆ ಸಾಕ್ಷಿಯಾಗಿದೆ. ಮುಖ್ಯ ಮಂಟಪದ ಹಿಂಭಾಗದಲ್ಲಿನ ಹಿಮ ಪರ್ವತ, ಸರೋವರಗಳ ಸೊಬಗು ಈ ವಿಡಿಯೊದಲ್ಲಿದೆ.

ಸಿನಿಮಾ ಕ್ಷೇತ್ರಕ್ಕೆ ಬಂದು 13 ವರ್ಷಗಳು ಪೂರೈಸಿದ ಸಂದರ್ಭವನ್ನು ಇನ್ನಷ್ಟು ಸ್ಮರಣೀಯವಾಗಿಸಲು ವಿವಾಹದ ವಿಡಿಯೊವನ್ನು ಹಂಚಿಕೊಂಡಿರುವುದಾಗಿ ದೀಪಿಕಾ ಮತ್ತು ರಣವೀರ್ ಹೇಳಿದ್ದಾರೆ.

ತಿಂಡಿ– ಊಟ: ಪತ್ರಕರ್ತರಲ್ಲಿ ಕ್ಷಮೆ ಕೋರಿದ ತೆಲುಗು ನಟಿ ಸುಮಾ



ಬೆಂಗಳೂರು: ತೆಲುಗಿನ ಜನಪ್ರಿಯ ನಿರೂಪಕಿ ಹಾಗೂ ನಟಿ ಸುಮಾ ಅವರು ಪತ್ರಕರ್ತರ ಬಗ್ಗೆ ಆಡಿದ ಮಾತಿಗೆ ಖಂಡನೆ ವ್ಯಕ್ತವಾದ ಹಿನ್ನೆಲೆಯಲ್ಲಿ ಸಾಮಾಜಿಕ ಮಾಧ್ಯಮಗಳ ಮೂಲಕ ಕ್ಷಮೆ ಕೇಳಿದ್ದಾರೆ.

ಈ ಬಗ್ಗೆ ವಿಡಿಯೊ ಮೂಲಕ ಪತ್ರಕರ್ತರಲ್ಲಿ ಸುಮಾ ಕ್ಷಮೆ ಕೋರಿದ್ದಾರೆ.

ಯುವ ನಟ ವೈಷ್ಣವ್ ತೇಜ್ ಹಾಗೂ ನಟಿ ಶ್ರೀಲೀಲಾ ನಟಿಸಿರುವ 'ಆದಿಕೇಶವ' ಸಿನಿಮಾದ ಆಡಿಯೋ ಲಾಂಚ್ ಕಾರ್ಯಕ್ರಮದ ವೇಳೆ ಈ ಘಟನೆ ನಡೆದಿದೆ. ಸುಮಾ ಅವರು, ಕಾರ್ಯಕ್ರಮ ತಡವಾಗುತ್ತಿರುವ ಬಗ್ಗೆ ಮಾತನಾಡುತ್ತಾ ಅವರು (ಪತ್ರಕರ್ತರು) ಸ್ನ್ಯಾಕ್ಸ್ ಅನ್ನು ಊಟದ ರೀತಿ ತಿನ್ನುತ್ತಿದ್ದಾರೆ, ಅವರು ತಿನ್ನುವುದು ಮುಗಿದ ಬಳಿಕ ಕಾರ್ಯಕ್ರಮ ಪ್ರಾರಂಭ ಮಾಡೋಣ ಎಂದು ಹೇಳಿದ್ದರು.

ಸುಮಾ ಮಾತಿಗೆ ಪತ್ರಕರ್ತರು ಆಕ್ಷೇಪ ವ್ಯಕ್ತಪಡಿಸಿದರು. ನಂತರ ಸುಮಾ ಅವರು ತಮಾಷೆಯಾಗಿ ಹೇಳಿದ್ದು ಎಂದರು. ವಿಡಿಯೊ ಮೂಲಕ ಅವರು ಪತ್ರಕರ್ತರಲ್ಲಿ ಕ್ಷಮೆ ಕೋರಿದ್ದಾರೆ.

'ಮಾಧ್ಯಮ ಮಿತ್ರರಿಗೆ ನಮಸ್ಕಾರ, ಕಾರ್ಯಕ್ರಮವೊಂದರಲ್ಲಿ ನಾನು ಆಡಿದ ಮಾತುಗಳು ನಿಮಗೆ ಬೇಸರ ತಂದಿದೆ ಎಂಬುದು ನನಗೆ ಅರ್ಥವಾಗಿದೆ. ಹಾಗಾಗಿ ಮತ್ತೊಮ್ಮೆ ಕ್ಷಮೆ ಕೇಳುತ್ತಿದ್ದೇನೆ. ಹಲವು ವರ್ಷಗಳಿಂದ ನಾನು ಹಾಗೂ ನೀವು ಒಟ್ಟಿಗೆ ಈ ಪಯಣದಲ್ಲಿ ಸಾಗುತ್ತಾ ಬಂದಿದ್ದೇವೆ, ನೀವೆಷ್ಟು ಕಷ್ಟಪಟ್ಟು ಕೆಲಸ ಮಾಡುತ್ತೀರೆಂದು ನನಗೆ ಗೊತ್ತು. ನನ್ನ, ನಿಮ್ಮ ಕುಟುಂಬದ ಸದಸ್ಯೆ ಎಂದುಕೊಂಡು ಕ್ಷಮಿಸುತ್ತೀರೆಂದು ನಂಬಿದ್ದೀನಿ' ಎಂದು ವಿಡಿಯೊದಲ್ಲಿ ಹೇಳಿದ್ದಾರೆ.

ಸುಮಾ ಮೂಲತ: ಮಲಯಾಳಂ ಮೂಲದವರು. ಇವರು 1996ರಿಂದ ತೆಲುಗು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಸದ್ಯ ನಿರೂಪಕಿಯಾಗಿ ಜನಪ್ರಿಯತೆ ಪಡೆದುಕೊಂಡಿದ್ದಾರೆ.

'ಸುಬ್ರಹ್ಮಣ್ಯ'ನಾದ ರವಿಶಂಕರ್ ಪುತ್ರ



ಅದ್ವೇಶ್



2004ರಲ್ಲಿ ಮಾಲಾಶ್ರೀ ಅಭಿನಯದ 'ದುರ್ಗಿ' ಚಿತ್ರವನ್ನು ನಿರ್ದೇಶಿಸಿದ್ದ ಜನಪ್ರಿಯ ಖಳನಟ ರವಿಶಂಕರ್, ತಮ್ಮ ಪುತ್ರನಿಗಾಗಿ 20 ವರ್ಷಗಳ ಬಳಿಕ ಮತ್ತೆ ನಿರ್ದೇಶನಕ್ಕಿಳಿಯುತ್ತಿದ್ದಾರೆ ಎಂದು ಈ ಹಿಂದೆ 'ಪ್ರಜಾವಾಣಿ' ಬರೆದಿತ್ತು. ರವಿಶಂಕರ್ ಪುತ್ರ ಅದ್ವೇಶ್ ನಾಯಕನಾಗಿ ಸ್ಯಾಂಡಲ್‌ವುಡ್‌ಗೆ ಪ್ರವೇಶಿಸುತ್ತಿರುವ ಚಿತ್ರಕ್ಕೆ 'ಸುಬ್ರಹ್ಮಣ್ಯ' ಎಂದು ಹೆಸರಿಡಲಾಗಿದ್ದು, ಇತ್ತೀಚೆಗಷ್ಟೇ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಗೊಂಡಿದೆ.

'ನನ್ನ ಮಾತೃಭಾಷೆ ತೆಲುಗಾದರೂ ಮಗನನ್ನು ಕನ್ನಡದಿಂದಲೇ ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದೇನೆ. ತೆಲುಗು ಸೇರಿ ಬೇರೆ ಭಾಷೆಗಳಿಗೆ ಸಿನಿಮಾ ಡಬ್ ಆಗುತ್ತಿದೆ. ನನಗೆ ಚಿತ್ರರಂಗದಲ್ಲಿ ಮರುಜೀವ ನೀಡಿದ್ದು, ಜನ ಇಂದಿಗೂ ನನ್ನನ್ನು ಗುರುತಿಸುವುದು 'ಕೆಂಪೇಗೌಡ' ಚಿತ್ರದ 'ಆಮುರ್ಗಂ' ಪಾತ್ರದಿಂದ. ಸುಬ್ರಹ್ಮಣ್ಯ ಸ್ವಾಮಿ ಕೃಪೆಯಿಂದ ಇವತ್ತು ನಾನು ಇಲ್ಲಿದ್ದೇನೆ. ಕಥೆಗೂ ಅದಕ್ಕಿಂತ ಉತ್ತಮ ಶೀರ್ಷಿಕೆ ಇರಲಿಲ್ಲ' ಎನ್ನುತ್ತಾರೆ ರವಿಶಂಕರ್.

'ಅದ್ವೇಶ್ ನಾಲ್ಕು ವರ್ಷ ಅಮೆರಿಕದಲ್ಲಿ ನಟನೆ, ಸಿನಿಮಾ ತರಬೇತಿ ಮುಗಿಸಿ ಬಂದಿದ್ದಾನೆ. ಈಗಾಗಲೇ ಕೆಲವಷ್ಟು ಕಿರುಚಿತ್ರ, ಜಾಹೀರಾತುಗಳನ್ನು ನಿರ್ದೇಶಿಸಿದ್ದಾನೆ. ನನ್ನ ಪುತ್ರ ಎಂಬ ಕಾರಣಕ್ಕೆ ಚಿತ್ರರಂಗಕ್ಕೆ ಕರೆತರುತ್ತಿಲ್ಲ. ಅವನಿಗೆ ಆಸಕ್ತಿ ಇದೆ. ನಮ್ಮ ತಂದೆಯಿಂದ ಹಿಡಿದು ಅಣ್ಣ, ಅಣ್ಣನ ಮಗ...ನಮ್ಮ ಮನೆಯಲ್ಲಿ ಎಲ್ಲರಿಗೂ ಸಿನಿಮಾದಲ್ಲಿ ಆಸಕ್ತಿ. ಸಕ್ರಾಂತಿಯಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಮುಂದಿನ ತಿಂಗಳು ಚಿತ್ರದ ಟೀಸರ್ ಬಿಡುಗಡೆ ಮಾಡುತ್ತೇವೆ' ಎಂದು ರವಿಶಂಕರ್ ತಿಳಿಸಿದ್ದಾರೆ.

ಎಸ್.ಜಿ ಮೂವೀ ಮೇಕರ್ಸ್ ಬ್ಯಾನರ್‌ನಡಿ ತಿರುಮಲ ರೆಡ್ಡಿ ಮತ್ತು ಅನಿಲ್ ಕಡಿಯಾಲ ಚಿತ್ರಕ್ಕೆ ಬಂಡವಾಳ ಹಾಕಿದ್ದಾರೆ. ಲವ್ ಜೊತೆಗೆ ಮಿಸ್ಟರಿ ಹೊಂದಿರುವ ಕಥೆಯನ್ನು ರವಿಶಂಕರ್ ಅವರೇ ರಚಿಸಿ ನಿರ್ದೇಶಿಸುತ್ತಿದ್ದಾರೆ. ಮೈಸೂರು, ಬೆಂಗಳೂರಿನ ಸುತ್ತಮುತ್ತ 75 ದಿನಗಳ ಕಾಲ ಚಿತ್ರೀಕರಣ ನಡೆಸಲು ತಂಡ ಯೋಜನೆ ಹಾಕಿಕೊಂಡಿದೆ. 'ಅರ್ಜುನ್ ರೆಡ್ಡಿ' ಸಿನಿಮಾ ಖ್ಯಾತಿಯ ರಾಜ್ ತೋಟ ಕ್ಯಾಮೆರಾ ಹಿಡಿದಿದ್ದು, ರವಿ ಬಸ್ರೂರ್ ಸಂಗೀತ, ವಿಜಯ್ ಎಂ. ಕುಮಾರ್ ಸಂಕಲನ, ಮಾಸ್ತಿ ಸಂಭಾಷಣೆ ಸುಬ್ರಹ್ಮಣ್ಯ ಸಿನಿಮಾಕ್ಕಿದೆ.

ಬೆಂಗಳೂರು ಪ್ಯಾಲೇಸ್‌ನಲ್ಲಿ 'ದಿ ಜ್ಯುವೆಲರಿ ಶೋ'





ಭಾರತದ ಹೆಸರಾಂತ ಬ್ರ್ಯಾಂಡ್‌ಗಳ ವಿಶೇಷ ಆಭರಣ ಪ್ರದರ್ಶನ 'ದಿ ಜ್ಯುವೆಲರಿ ಶೋ', ನವೆಂಬರ್ 3 ರಿಂದ 5 ರವರೆಗೆ (ಶುಕ್ರವಾರ – ಭಾನುವಾರ) 'ಬೆಂಗಳೂರು ಅರಮನೆ'(ವಸಂತನಗರ) ಆವರಣದಲ್ಲಿ ಆಯೋಜಿಸಲಾಗಿದೆ.

ದೇಶದ 90 ಪ್ರತಿಷ್ಠಿತ ಪ್ರಶಸ್ತಿ ವಿಜೇತ ಆಭರಣಕಾರರು ಮತ್ತು ವಿನ್ಯಾಸಕರಿಂದ ತಯಾರಿಸಲ್ಪಟ್ಟ ವಿಶಿಷ್ಟ ಆಭರಣಗಳ ಪ್ರದರ್ಶನ, ಮಾರಾಟ ಇದಾಗಿದೆ. ಒಂದೇ ಚಾವಣಿಯಡಿ ನಡೆಯಲಿರುವ ಈ ಜ್ಯುವೆಲರಿ ಶೋನಲ್ಲಿ ಕಲಾತ್ಮಕ ಹಾಗೂ ವಿಶಿಷ್ಟ ಆಭರಣಗಳ ಮಾರಾಟದ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ವಿವಿಧ ರಾಜ್ಯಗಳ ಕುಶಲಕರ್ಮಿಗಳಿಂದ ತಯಾರಿಸಲ್ಪಟ್ಟ ಪ್ರದರ್ಶನ ಇದಾಗಿದ್ದು, ದೀಪಾವಳಿ ಹಬ್ಬ, ವಿವಾಹ ಹಾಗೂ ಇತರ ಸಮಾರಂಭಗಳ ಆಭರಣಗಳನ್ನು ಇಲ್ಲಿ ಕಾಣಬಹುದಾಗಿದೆ.

ಬೆಂಗಳೂರು ಸುತ್ತಮುತ್ತಲಿನ ಜನರಿಗೆ ಅಮೂಲ್ಯ ಆಭರಣಗಳನ್ನು ನೋಡುವ ಅವಕಾಶ ಇದಾಗಿದೆ. ಆಧುನಿಕ ಮತ್ತು ಭವಿಷ್ಯದ ವಿನ್ಯಾಸಗಳ ಬಗ್ಗೆ ತಿಳಿಯಲು ಇದೊಂದು ವೇದಿಕೆ.

ನಟಿ ನಿಶ್ವಿಕಾ ಉದ್ಘಾಟನೆ: ನ.3 ರಂದು ಮಧ್ಯಾಹ್ನ 12.30ಕ್ಕೆ ನಟಿ ನಿಶ್ವಿಕಾ ನಾಯ್ಡು ಅವರು ಬೆಂಗಳೂರು ಅರಮನೆ ಆವರಣದಲ್ಲಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಎಲ್ಲ ವರ್ಗದ ಜನರಿಗೆ ಅನುಕೂಲ ಹಾಗೂ ಇಷ್ಟವಾಗುವಂತ ಆಭರಣಗಳ ಪ್ರದರ್ಶನ ಇದಾಗಿದ್ದು, ಪ್ರದರ್ಶನ ಮತ್ತು ಮಾರಾಟ ಸಮಯವನ್ನು ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ನಿಗದಿಪಡಿಸಲಾಗಿದೆ. ಎಲ್ಲ ವರ್ಗದವರ ಕೈಗೆಟುವ ಬೆಲೆಯಲ್ಲಿ ಚಿನ್ನ, ಬೆಳ್ಳಿ ಮತ್ತು ವಜ್ರಾಭರಣಗಳು ದೊರೆಯಲಿವೆ. BIS ಹಾಲ್‌ಮಾರ್ಕ್ ಚಿನ್ನಾಭರಣಗಳು, ಅಂತರರಾಷ್ಟ್ರೀಯ ದರ್ಜೆಯ GIA ಹಾಗೂ IGI ಡೈಮಂಡ್ ಆಭರಣಗಳು ಮಾತ್ರ ಇಲ್ಲಿ ಇರಲಿವೆ ಎಂದು ಆಯೋಜಕರಾದ ಜಗದೀಶ್ ಮತ್ತು ಹೇಮಲತಾ ಜಗದೀಶ್ ಹೇಳಿದ್ದಾರೆ.

ಬ್ರ್ಯಾಂಡ್ ಅಂಬಾಸಿಡರ್ ನಿಶ್ವಿಕಾ ನಾಯ್ಡು ಅವರು ಮಾತನಾಡಿ, 'ಪ್ರಶಸ್ತಿ ವಿಜೇತ ವಿನ್ಯಾಸಕಾರರ ವಿನೂತನ ಆಭರಣಗಳು ಒಂದೇ ಕಡೆ ಸಿಗುತ್ತಿರುವುದು ಆಭರಣ ಪ್ರಿಯರಲ್ಲಿ ರೋಮಾಂಚನ ಉಂಟುಮಾಡಲಿದೆ. ತಮ್ಮ ಆರ್ಥಿಕ ಶಕ್ತಿಗೆ ತಕ್ಕಂತ ಒಡವೆಗಳು ಶೋನಲ್ಲಿ ದೊರೆಯುತ್ತಿರುವುದು ಕೂಡ ಅವರಿಗೆ ಸಂತಸ ತರಲಿದೆ. ಈ ಪ್ರದರ್ಶನವು ಆಭರಣ ಖರೀದಿಸಲು ಬಯಸುವ ಸ್ತ್ರೀ–ಪುರುಷರನ್ನು ತೃಪ್ತಿಪಡಿಸುವ ಭರವಸೆ ನೀಡುತ್ತದೆ' ಎಂದಿದ್ದಾರೆ. 3 ದಿನದ ಕಾರ್ಯಕ್ರಮ ಆಗಿರುವುದರಿಂದ ಸಾರ್ವಜನಿಕರು ಪ್ರದರ್ಶನದ ಗರಿಷ್ಠ ಪ್ರಯೋಜನ ಪಡೆಯಬೇಕು ಎಂಬುದು ಆಯೋಜಕರ ಆಶಯ.

ಭಾಗವಹಿಸುತ್ತಿರುವ ಪ್ರಮುಖ ಬ್ರ್ಯಾಂಡ್‌ಗಳು: ಆಭೂಷಣ್, ಅರ್ಜುನಾ ವಾರ, ಗಜರಾಜ್, ಖೀಯ, ಎಂಪಿ ಸ್ವರ್ಣ ಮಹಲ್, ನವ್‌ರತನ್, ನೀಲ್‌ಕಂಠ್, ನಿಖಾರ್, ನಿರ್ಮಲ್ ಜ್ಯುವೆಲರ್ಸ್, ಪಿಕೆಬಿ, ಪಿಎಂಜೆ, ಪ್ರಕಾಶ್ ಜ್ಯುವೆಲರ್ಸ್, ರಾಜ್ ಡೈಮಂಡ್ಸ್, ಸಿಂಹಾ ಜ್ಯುವೆಲರ್ಸ್, ಶ್ರೀವಾರಿ, ಶ್ರೀ ಗಣೇಶ್ ಡೈಮಂಡ್ಸ್, ವಾರಾ ಶ್ರೀ, ಆಮ್ರಪಾಲಿ, ಅನನ್ಯಾ ಜ್ಯುವೆಲ್ಸ್ ಸನ್‌ರೈಸ್ ಆಭರಣ್, ಅನಂದ್ ಜ್ಯುವೆಲ್ಸ್, ಔರಾ ಜ್ಯುವೆಲ್ಸ್, ಡೈಮ್ಸ್, ಡಿಆರ್‌ಎನ್ ಜ್ಯುವೆಲ್ಸ್, ಇವೊಲ್ ಜ್ಯುವೆಲ್ಸ್, ಕಲಶ, ಜ್ಯುವೆಲ್ ಫೋಲಿಯೋ, ಕರಿಶ್ಮಾ ಬೈ ರಷ್ಮಿ ಇಡಿಸಿ, ಮಹೇಂದ್ರ ಡೈಮಂಡ್ಸ್, ಎನ್‌ಎಸ್ ಜ್ಯುವೆಲ್ಸ್, ಪ್ರವೀಣ್ ಜ್ಯುವೆಲ್ಸ್, ಸಂಕೇಶ್ ಸುರಾನ, ಸೆಂಕೊ ಗೋಲ್ಡ್, ತತ್ವಮ್, ತ್ಯಾನಿ, ವಿಟ್ರಾಗ್ ಜ್ಯುವೆಲರ್ಸ್, ವಿವಾಂತ್, ವಂಡರ್ ಡೈಮಂಡ್ಸ್, ಮೈ ಸಿಲ್ವರ್, ರೂಪಂ ಸಿಲ್ವರ್, ಶಿವಾನಿ, ಡಿವೈನ್ ಜೆಮ್ಸ್, ಮದನ್ ಜೆಮ್ಸ್, ಸ್ಟೈಲ್ ಔರಾ, ಥಾರ್ ಆರ್ಟ್ಸ್.

ಹೊರ ರಾಜ್ಯಗಳ ಆಕರ್ಷಣೆ: ಅರ್‌ಹಾಂ (ಕೊಲ್ಕತ), ಬ್ಯೂಟಿ ಜೆಮ್ಸ್, ಜೈಪುರ್ ಎಂಪೋರಿಯಂ, ಕೆಜಿಎನ್ ಸಿಲ್ವರ್ ಹೌಸ್, ಮಂಗಲ್ ಜೆಮ್ಸ್, ನಾಗೊರೀಸ್, ಸುನಿಲ್ ಜ್ಯುವೆಲರ್ಸ್, ಎಂಜಿ ಬೀಡ್ಸ್ ರಾಯಲ್ ಜ್ಯುವೆಲ್ಸ್ ಬನೆತಿ ಎಕ್ಸ್‌ಪೋರ್ಟ್ಸ್ (ಜೈಪುರ್), ಔರಾ, ಶ್ರೀ ಪರಮನಿ, ಶ್ರೀಹರಿ ಡಯಾಜೆಮ್ಸ್, ಶ್ರೀಯಾನ್ಸ್ (ನವದೆಹಲಿ), ಡಯಾಮಾರ್ನ್, ಮೆಹ್ತಾ ಬ್ರದರ್ಸ್, ಜ್ವಿವಾ (ಮುಂಬೈ), ಬಿಎನ್‌ಆರ್ ಗೋಲ್ಡ್ ಮತ್ತು ಡೈಮಂಡ್ಸ್ (ವಿಜಯವಾಡ), ವೇಗಶ್ರೀ (ತೆಲಂಗಾಣ) ಶ್ರೀ ಕುಮರನ್ ತಂಗಮಾಳಿಗೈ (ಹೊಸೂರು), ಎತ್ನಿಕ್ ಜ್ಯುವೆಲ್ಸ್, ಬಾಲಾಜಿ ಪರ್ಲ್ಸ್, ಜ್ಯುವೆಲ್ಸ್ ಕ್ರಿಯೇಷನ್ಸ್ (ಚೆನ್ನೈ), ಸ್ವಾಸ್ತ, ನಿತ್ಯಾಸ್ (ವಿಶಾಖಪಟ್ಟಣಂ), ಕುಂದನ್‌ಕಾಲಿ (ಮೀರತ್)

- ನವೆಂಬರ್ 3ರಿಂದ 5 ರವರೆಗೆ (ಮೂರು ದಿನ)
- ಸ್ಥಳ: ಬೆಂಗಳೂರು ಅರಮನೆ, ವಸಂತನಗರ
- ಉದ್ಘಾಟನೆ: ಮಧ್ಯಾಹ್ನ 12.30
- 90 ಖ್ಯಾತ ಜ್ಯುವೆಲರ್ಸ್, 1.0 ಲಕ್ಷ ವಿವಿಧ ವಿನ್ಯಾಸ

ರಕ್ತ ಕಾಣಿಸದ 'ಸೈಕಿಕ್'



ಕ್ರೈಂ, ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಸೈಕಿಕ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸರ್ದಾರ್ ಸತ್ಯ, ಹಂಸಾ ಪ್ರತಾಪ್ ಮುಖ್ಯಭೂಮಿಕೆಯಲ್ಲಿರುವ ಚಿತ್ರಕ್ಕೆ 'ಎ' ಸಿನಿಮಾದ ಸಂಕಲನಕಾರ ಪುಷ್ಕರ್ ಗಿರಿಗೌಡ ಆ್ಯಕ್ಷನ್–ಕಟ್ ಹೇಳಿದ್ದಾರೆ. ಸಿಲ್ಕ್ ಸಿನಿಮಾ ಅಡಿಯಲ್ಲಿ ಚೇತನ್ ಮಂಜುನಾಥ್ ಹಾಗೂ 'ಎ' ಸಿನಿಮಾ ಖ್ಯಾತಿಯ ಸಿಲ್ಕ್ ಮಂಜು ಚಿತ್ರವನ್ನು ನಿರ್ಮಿಸಿದ್ದಾರೆ.

'ಸಾಮಾನ್ಯವಾಗಿ ಕ್ರೈಂ-ಥ್ರಿಲ್ಲರ್-ಇನ್ವೆಸ್ಟಿಗೇಶನ್ ಸಿನಿಮಾಗಳಲ್ಲಿ ರಕ್ತಸಿಕ್ತ ದೃಶ್ಯಗಳನ್ನು ವೈಭವೀಕರಿಸುತ್ತಾರೆ. ಆದರೆ ಈ ಸಿನಿಮಾದಲ್ಲಿ ಅದರ ಹೊರತಾಗಿ ಕ್ರೌರ್ಯವನ್ನು ಪರೋಕ್ಷವಾಗಿ ಮನದಟ್ಟು ಮಾಡುವ ರೀತಿಯಲ್ಲಿ ದೃಶ್ಯ ಸಂಯೋಜನೆ ಮಾಡಿದ್ದೇವೆ. ವ್ಯಕ್ತಿಯೊಬ್ಬ ಸೈಕ್ ಆಗಿ ಸರಣಿ ಕೊಲೆಗಳನ್ನು ಮಾಡುತ್ತಾನೆ. ಅದರ ಹಿಂದೆ ಕಥೆ ಸಾಗುತ್ತದೆ' ಎಂದರು ನಿರ್ದೇಶಕರು.

''ತಮಿಳಿನ 'ವಿಡುದಲೈ' ಚಿತ್ರ ನನಗೆ ಚಿತ್ರೋದ್ಯಮದಲ್ಲಿ ಮರುಜೀವ ನೀಡಿತು. ಇದೀಗ 'ವಿಡುದಲೈ–2'ರಲ್ಲಿ ನಟಿಸುತ್ತಿರುತ್ತೇವೆ. 'ಸೈಕಿಕ್' ಕನ್ನಡದಲ್ಲಿ ಮತ್ತೆ ಅವಕಾಶ ನೀಡಿರುವ ಚಿತ್ರ. ಮೂರು ರೀತಿಯ ಲವ್ ಸ್ಟೋರಿಗಳನ್ನು ಇಲ್ಲಿ ಹೇಳಿದ್ದೇವೆ. ಚಿತ್ರದ ಹಲವಾರು ಮುಖ್ಯ ಅಂಶಗಳನ್ನು ಟೀಸರ್‌ನಲ್ಲಿ ಬಿಟ್ಟುಕೊಟ್ಟಿಲ್ಲ. ಮುಂದೆ ಟ್ರೇಲರ್‌ನಲ್ಲಿ ಅದನ್ನು ಹೇಳುತ್ತೇವೆ'' ಎಂದು ಸರ್ದಾರ್ ಸತ್ಯ ಹೇಳಿದರು. ರಮೇಶ್ ಭಟ್, ಅರವಿಂದ್ (ರಥಸಪ್ತಮಿ), ಕೈಲಾಸ್ ದೇವ್, ನಿಖಿತಾ ದೋರ್ತೋಡಿ ಮುಖ್ಯ ಭೂಮಿಕೆಯಲ್ಲಿರುವ ಸಿನಿಮಾಕ್ಕೆ ಎಂ.ಎಸ್.ತ್ಯಾಗರಾಜ್ ಸಂಗೀತ, ಸಿನಿಟೆಕ್ ಸೂರಿ ಅವರ ಕ್ಯಾಮೆರಾ ಕೆಲಸ, ವೈ.ಎಸ್.ಶ್ರೀಧರ್ ಸಂಕಲನವಿದೆ.